ನಮ್ಮ ದನಿ

(ಸಂಪ್ರದಾಯ ಶಿಲ್ಪಗಳ ಯಶೋಗಾಥೆ)

ಕನಕಾಮೂರ್ತಿ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಬೆಂಗಳೂರು

ನಮ್ಮ ದನಿ

(ಸಂಪ್ರದಾಯ ಶಿಲ್ಪಕಲಾವಿದರ ಯಶೋಗಾಥೆ)

ಶ್ರೀಮತಿ ಕನಕಾಮೂರ್ತಿ

ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ, ಕನ್ನಡಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ನಮ್ಮ ದನಿ

(ಸಂಪ್ರದಾಯ ಶಿಲ್ಪಕಲಾವಿದರ ಯಶೋಗಾಥೆ)

NAMMA DANI

(Sampradhaya Shilpakalavidara Yashogathe)

ಲೇಖಕರು

ಶ್ರೀಮತಿ ಕನಕಾಮೂರ್ತಿ, ಬೆಂಗಳೂರು

ಪ್ರಕಾಶಕರು

ಶ್ರೀಮತಿ ಪದ್ಮಜ ಕುಮಾರಿ. ಎನ್

ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ಪ್ರಥಮ ಮುದ್ರಣ : **2008**

ಪುಟ : viii + 96

ಬೆಲೆ : ೭೫/-

ಮುದ್ರಕರು

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA

An ISO 9001-2000

Phone : 26613123, 26618752

e-mail : lakshmimudra@yahoo.com

ಅಧ್ಯಕ್ಷರು ನುಡಿ

ಕರ್ನಾಟಕ ಶಿಲ್ಪಕಲಾಅಕಾಡೆಮಿಯು ಶಿಲ್ಪಕಲೆಗೆ ಹಾಗೂ ಶಿಲ್ಪಿಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಕಳೆದ ೧೨ ವರ್ಷಗಳಿಂದಲೂ ಪ್ರಕಟಿಸುತ್ತಾ ಬಂದಿದ್ದು ಅನೇಕ ಉತ್ತಮ ಗ್ರಂಥಗಳು ಹೊರಬಂದಿವೆ. ಸಂಪ್ರದಾಯ ಶಿಲ್ಪಕಲೆಗೂ ಮತ್ತು ಸಮಕಾಲೀನ ಶಿಲ್ಪಕಲೆಗೂ ಸಂಬಂಧಿಸಿದ ಪುಸ್ತಕ ಯೋಜನೆಯಲ್ಲಿ ಇದೀಗ ಶಿಲ್ಪಕಲಾವಿದರಾದ ಬಸವಣ್ಣ ಶಿಲ್ಪಿ, ನವ್ಯ ಶಿಲ್ಪಿಗಳಾದ ಪುಷ್ಪಮಾನ ಮತ್ತು ಆರ್.ಎಸ್. ನಾಯ್ಡು ಇವರ ಬಗ್ಗೆ ಪುಸ್ತಕಗಳು ಬರುತ್ತಿವೆ. ಇದರಲ್ಲಿ ಕರ್ನಾಟಕ ಶಿಲ್ಪಶೈಲಿಗಳ ವಿಶೇಷತೆಗಳನ್ನು ಕುರಿತಾದ ಎಂಟು ಪುಸ್ತಕಗಳು ಡಾ|| ಎಚ್.ಎಸ್. ಗೋಪಾಲರಾವ್ ಇವರ ಸಂಪಾದಕತ್ವದಲ್ಲಿ ಬರುತ್ತಿದ್ದು ಅಚ್ಚಿಗೆ ಸಿದ್ಧತೆಯಲ್ಲಿದೆ. ಸಮಕಾಲೀನ ಶಿಲ್ಪಕಲೆಯ ಇಂದಿನ ಬೆಳವಣಿಗೆಗಳ ಬಗ್ಗೆ ಕೆ.ವಿ. ಸುಬ್ರಮಣ್ಯಂ ಇವರು ಬರೆದಿದ್ದಾರೆ. ಸಾಂಪ್ರದಾಯ ಶಿಲ್ಪಕಲೆಯ ಇಂದಿನ ಸವಾಲುಗಳ ಬಗ್ಗೆ "ನಮ್ಮದನಿ" ಈ ಪುಸ್ತಕವನ್ನು ಶ್ರೀಮತಿ ಕನಕಾಮೂರ್ತಿಯವರು ಬರೆದಿದ್ದು ಈಗ ಹೊರಬರುತ್ತಿದೆ.

ಈ ಪುಸ್ತಕದಲ್ಲಿ ಸಾಂಪ್ರದಾಯಿಕ ಶಿಲ್ಪಕಲೆಯ ಇಂದಿನ ಸ್ಥಿತಿಗತಿಗಳ ಬಗ್ಗೆ ಶೈಲಿಗಳ ಮನೋಭಾವದ ಬಗ್ಗೆ, ಅಳಿವು-ಉಳಿವುಗಳ ಬಗ್ಗೆ ವಿವರವಾಗಿ ಅಭ್ಯಸಿಸಿ ತಮ್ಮ ವಿಮರ್ಶಾತ್ಮಕ ನಿಲುವನ್ನು ವಿವರಿಸಿದ್ದಾರೆ. ಸಂಪ್ರದಾಯ ಶಿಲ್ಪಕಲೆ ಗುರು-ಶಿಷ್ಯಪರಂಪರೆಯಿಂದ ಹಾಗೂ ವಂಶಪಾರಂಪರ್ಯವಾಗಿ ಬೆಳೆದು ಇಲ್ಲಿಯತನಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದು, ಇಂದಿನ ವೈಜ್ಞಾನಿಕ ಪ್ರಗತಿಯಿಂದ, ಜಾಗತೀಕರಣದಿಂದ, ಅನ್ಯಸಂಸ್ಕೃತಿಗಳ ಪ್ರಭಾವದಿಂದ ಜೀವನ ಜಂಜಾಟಗಳಿಂದ, ಕೆಲಸದ ಒತ್ತಡಗಳಿಂದ ಸಂಪ್ರದಾಯದ ಒಲವು ತುಸು ಕಡಿಮೆಯಾಗಿದೆ. ಶ್ರದ್ಧಾಭಕ್ತಿಗಳು ಸಡಿಲಗೊಂಡಿವೆ. ಇಂತಹ ಸಂದಿಗ್ಧ ಕಾಲದಲ್ಲಿ, ಇದನ್ನರಿತ ಪ್ರಜ್ಞಾವಂತರು ಶಿಲ್ಪಿಗಳು ನಶಿಸುತ್ತಿರುವ ಸಾಂಪ್ರದಾಯಿಕ ಶಿಲ್ಪದ ಮೌಲ್ಯಗಳಿಗೆ ಚೇತನ ನೀಡಲು ದುಡಿದ ಹಲವಾರು ಶಿಲ್ಪಿಗಳು ಪ್ರಜ್ಞಾವಂತರಿದ್ದು, ಅವರಲ್ಲಿ ದೇವಲಕುಂಡ ವಾದಿರಾಜರ ಕೊಡುಗೆ ಅಪಾರ. ಇವರು ಸಾಂಪ್ರದಾಯಿಕ ಶಿಲ್ಪದ ಮಹತ್ವದ ಬಗ್ಗೆ, ಶಿಲ್ಪಶೈಲಿಗಳ ವಿಶೇಷತೆಗಳ ಬಗ್ಗೆ ತನ್ನ ಶಿಷ್ಯರಿಗೆ ಅರಿವು ಮೂಡಿಸುವುದರ ಮೂಲಕ ಅನೇಕ ಶಿಷ್ಯರನ್ನು ರೂಪಿಸಿದ್ದಾರೆ. ಇಂದು ಕರ್ನಾಟಕದಾದ್ಯಂತ ಇವರ ಪ್ರಭಾವ ಪ್ರಸರಿಸಿದೆ. ಸಂಪ್ರದಾಯ ಶಿಲ್ಪಕ್ಕೆ ಚೈತನ್ಯ ಸಿಕ್ಕಿದಂತಾಗಿದೆ. ಕರ್ನಾಟಕ ಶಿಲ್ಪ ಶೈಲಿಗಳಲ್ಲಿನ ಚಾಲುಕ್ಯ-ಹೊಯ್ಸಳ ಶೈಲಿಗಳ ಶಿಲ್ಪರಚನೆಗಳು ಮತ್ತೆ ಮರು ಸೃಷ್ಟಿಯೊಂದಿಗೆ ಹೊಸ ಸಂಯೋಜನೆಗಳನ್ನು ಹೊಂದಿಸಿಕೊಂಡು ಇಂದು ಶಿಲ್ಪಸೃಷ್ಟಿಯಲ್ಲಿ ತೊಡಗಿದ್ದಾರೆ. ಈ ಸಾಂಪ್ರದಾಯಿಕ ನೆಲೆ ನವ್ಯದೊಂದಿಗೆ ಬೆರೆತು ಅದಕ್ಕೆ ವಿಸ್ತಾರತೆ ಸಿಕ್ಕಿದೆ. ಹೊಸ ಮಾಧ್ಯಮಗಳು, ಹೊಸಸಾಧನ-ಸಲಕರಣೆಗಳು ಸಿಕ್ಕಿ ಅನುಕೂಲತೆ ಹೆಚ್ಚಾಗಿದೆ. ಅಲಂಕಾರಿಕ ಶಿಲ್ಪಗಳು ಹಾಗೂ ಸೃಜನಶೀಲ ಶಿಲ್ಪಗಳು, ಮ್ಯೂರಲ್‌ಗಳು, ಪರಿಸರಕ್ಕೆ ಒಪ್ಪುವ ಶಿಲ್ಪಗಳ ಬೇಡಿಕೆ ಹೆಚ್ಚಾಗಿದೆ. ಶಿಲ್ಪಿಗಳ ಜೀವನ ಉತ್ತಮಗೊಂಡಿದೆ. ಶಿಲ್ಪಿಗಳು ಗಣನೀಯವಾಗಿ ಬೆಳೆದಿದ್ದಾರೆ. ಈ ಎಲ್ಲಾ ಆಶಯಗಳನ್ನು ಕನಕಾಮೂರ್ತಿಯವರು ಕಲಾತ್ಮಕವಾಗಿ ವಿವರಿಸಿ ಬರೆದಿದ್ದು, ಸಾಂಪ್ರದಾಯಿಕ ಶಿಲ್ಪಕಲೆ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದರ ಬಗ್ಗೆ ವಿವರಿಸಿದ್ದಾರೆ.

ಈ ಪುಸ್ತಕದಿಂದ ಯುವಶಿಲ್ಪಿಗಳಿಗೆ ಹಾಗೂ ಕಲಾಸಕ್ತರಿಗೆ ಸೂಕ್ತ ಮಾರ್ಗದರ್ಶನ ಸಿಗುವುದೆಂದು ನನ್ನ ನಂಬಿಕೆ ಹಾಗೂ ಸಮಕಾಲೀನ ಜೀವನದಲ್ಲಿ ಸಂಪ್ರಾದಯದ ನೆಲೆ - ಇದರ ಬಗ್ಗೆ ಅರಿವಾಗುವುದು. ಈ ಗ್ರಂಥವನ್ನು ಹೊರತರಲು ಸಹಕರಿಸಿದ ಶಿಲ್ಪಕಲಾ ಅಕಾಡೆಮಿಯ ಎಲ್ಲಾ ಸದಸ್ಯರಿಗೂ ಮತ್ತು ಪ್ರಕಟಿಸಲು ಸಹಕರಿಸಿದ ರಿಜಿಸ್ಟ್ರಾರ್ ಪದ್ಮಜಕುಮಾರಿ ಎಸ್., ಹಾಗೂ ಸಿಬ್ಬಂದಿ ವರ್ಗದವರಿಗೂ, ಸೌಜನ್ಯ ತಾಳ್ಮೆಗಳಿಂದ ಡಿ.ಟಿ.ಪಿ. ಕಾರ್ಯವನ್ನು ನಡೆಸಿಕೊಟ್ಟು ಫ್ರೆಂಡ್ಸ್ ಕಾಮ್-ಟೆಕ್‌ನ ಸಿಂಬ್ಬಂದಿ ವರ್ಗದವರಿಗೂ, ಅಂದವಾಗಿ ಮುದ್ರಿಸಿದ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ್‌ಕುಮಾರ್ ಅವರಿಗೂ ವಂದನೆಗಳು.

– *ವೆಂಕಟಾಚಲಪತಿ*



ದತ್ತಾತ್ರೇಯ ಶಿಲಾಶಿಲ್ಪ - ಡಿ. ವಾದಿರಾಜ್

ಲೇಖಕಿಯ ಮಾತು



ಆಸಕ್ತಿಯಿಂದ ಶಿಲ್ಪಕಲಾಕ್ಷೇತ್ರಕ್ಕೆ ಕಾಲಿಟ್ಟ ನನಗೆ ದಾರಿದೀಪವಾದವರು ನನ್ನ ಗುರುಗಳಾದ ನಾಡಿನ ಖ್ಯಾತ ಶಿಲ್ಪಿ ಶ್ರೀ ದೇವಲಕುಂದವಾದಿರಾಜರು ಹಾಗೂ ನಮ್ಮ ನಾಡಿನ ಹಿರಿಯ ವಿದ್ವಾಂಸರಾದ ಪ್ರೊ. ಎಸ್.ಕೆ. ರಾಮಚಂದ್ರರಾಯರು. ಇವರಿಬ್ಬರೂ ಭೇಟಿಯಾಗುತ್ತಿದ್ದ ಸಂದರ್ಭಗಳಲ್ಲಿ ಅವರ ಮಾತು, ಚಿಂತನೆ ಎಲ್ಲವೂ ಶಿಲ್ಪಕ್ಷೇತ್ರಕ್ಕೆ ಸಂಬಂಧಿಸಿದಂತೆ, ಶಿಲ್ಪಕಲೆಯ ಪರಿಸ್ಥಿತಿಯ ಬಗ್ಗೆಯೇ ನಡೆಯುತ್ತಿತ್ತು. ಅವರಿಬ್ಬರ ಮಾತುಗಳಲ್ಲಿ ಅಡಗಿರುತ್ತಿದ್ದ ಅವರ ಪ್ರತಿಭೆ, ಅನುಭವಗಳು, ಆಲೋಚನೆಗಳು ನನ್ನನ್ನು ಬೆರಗುಗೊಳಿಸುತ್ತಿತ್ತು. ಇಂತಹ ಹತ್ತಾರು ವರ್ಷಗಳ ಅನುಭವವೇ ನನ್ನ ಈ ಬರವಣಿಗೆಗೆ ಸ್ಫೂರ್ತಿಯ ಸೆಲೆ. ನಮ್ಮಿಂದ ದೂರವಾದರೂ ಅವರಿಬ್ಬರ ನೆನಪು ನನ್ನಲ್ಲಿ ಸದಾ ಹಸಿರು. ಅವರಿಬ್ಬರಿಗೂ ನನ್ನ ಮೊದಲ ನಮನಗಳು.

ಕರ್ನಾಟಕ ಶಿಲ್ಪಕಲಾ ಅಕಾಡಮಿಯ ಅಧ್ಯಕ್ಷರೂ, ಸಹೃದಯ ಶಿಲ್ಪಕಲಾವಿದರೂ ಆದ ಶ್ರೀ ವೆಂಕಟಾಚಲಪತಿಯವರು, "ಸಂಪ್ರದಾಯ ಶಿಲ್ಪಕಲಾವಿದರ" ಬಗ್ಗೆ ಬರೆಯಲು ಕೇಳಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ನನಗೆ ಮಾರ್ಗದರ್ಶನ ಮಾಡಿದ ಹಿರಯರಿಬ್ಬರ ಎಷ್ಟೋ ಅಭಿಪ್ರಾಯಗಳಿಗೂ, ನಾನು ಪಡೆದ ಅನುಭವಗಳಿಗೂ, ಪುಸ್ತಕ ರೂಪಕೊಡಲು ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ.

'ಶಿಲ್ಪಕ್ಷೇತ್ರ' ಒಂದು ಸ್ವತಂತ್ರ ಉದ್ಯಮದ ಉದ್ಯಾನವನ. ಅದರಲ್ಲಿ ನಮ್ಮ ನಾಡಿನ ಸಂಪ್ರದಾಯ ಶಿಲ್ಪಿಗಳು ಅರಳುತ್ತಾ, ಕನ್ನಡದ ಸಂಸ್ಕೃತಿಯ ಮುಡಿಗೆ ಅಪಾರ ಸಂಖ್ಯೆಯಲ್ಲಿ ಕಲಾಪುಷ್ಪಗಳನ್ನು ಮುಡಿಸುತ್ತಿದ್ದಾರೆ. ಅವರ ಅನುಭವ, ಅಭಿಪ್ರಾಯಗಳೂ ಅಷ್ಟೇ ಅಮೂಲ್ಯವಾದವು. ಅವರೆಲ್ಲ ನನ್ನೊಡನೆ ಹಂಚಿಕೊಂಡ ಅವರ ಅನುಭವಗಳ ಫಲವೇ ಈ 'ನಮ್ಮ ದನಿ' ಯಾಗಿದೆ. ನನ್ನ ಶಿಲ್ಪ ಬಂಧುಗಳಿಗೆ ಈ ಮೂಲಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

'ನಮ್ಮ ದನಿ'ಯ ಬೆಳವಣಿಗೆಗೆ ಒತ್ತಾಸೆಯಾಗಿ ನಿಂತ ನನ್ನ ಗುರುರಗಳಾದ ಹಿರಿಯ ನಿಘಂಟು ತಜ್ಞರಾದ ಶಬ್ದ ಸಾಗರ ಪ್ರೊ. ಜಿ. ವೆಂಕಟಸುಬ್ಬಯ್ಯನವರು, ನನಗೆ ನಿರಂತರ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ ಹಾಗೂ ನನ್ನ ಮಿತ್ರ, ಅಂತರ ರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದರಾದ ಶ್ರೀ ಎಚ್.ಎಸ್. ಸುರೇಶ್ ನೀಡಿದ ಸಲಹೆಗಳು 'ನಮ್ಮ ದನಿ'ಗೆ, ಹೆಚ್ಚಿನ ಮೌಲ್ಯ ಬರುವಂತೆಮಾಡಿದೆ. ಇವರಿಬ್ಬರಿಗೂ ನನ್ನ ಮನಸ್ಸಿನಾಳದಿಂದ ಹೇಳುವ ಕೃತಜ್ಞತೆಗಳಿಗೆ ಮಾತಿನರೂಪ ಕೊಡಲು ಸಾಧ್ಯವೆ?

ಚಿಂತನೆ, ಪ್ರಯೋಗಶೀಲತೆ ಶಾಸ್ತ್ರೀಯ ಕಲೆಗಳ ಅಧ್ಯಯನದ ಜೀವಾಳ. ಇದರಿಂದ ಕಲೆಯಲ್ಲಿ 'ಜೀವಂತಿಕೆ' ಮೂಡುವುದೆಂದು ತೋರಿಸಿಕೊಟ್ಟ ಜಾಣ್ಮೆ ನನ್ನ ಮಗಳು ಸುಮತಿಯದು. ಶಾಸ್ತ್ರೀಯ ಸಂಗೀತ ಅಧ್ಯಯನದಲ್ಲಿ ನಿರತಳಾಗಿರುವ ಅವಳು, ಇದನ್ನು ನನಗೆ ಪರಿಚಯಿಸಿ, ಅಧ್ಯಯನದ ರುಚಿ ತೋರಿಸಿರುವ ನಿರಂತರ ಪ್ರೇರಣೆ. ಅವಳನ್ನು ನೆನೆಯದಿರಲೆ ?

ಸ್ನೇಹ ಒಂದು ಮಧುರವಾದ ಅನುಭವ. ಶಿಲ್ಪಕ್ಷೇತ್ರಗಳ ಸಂದರ್ಶನಕ್ಕೆ ಹೋದಾಗಲೆಲ್ಲ, ನನ್ನೊಡನೆ ಬಂದು, ಅಧ್ಯಯನಕ್ಕೆ ಒತ್ತಾಸೆ ನೀಡಿದ, ನಲವತ್ತು ವರ್ಷಗಳಿಗೂ ಹೆಚ್ಚಿನ ಕಾಲದ ಗೆಳತಿಯರಾದ ಸುಲೋಚನ, ಪುಷ್ಪ, ಸರಸ್ವತಿ, ರುಕ್ಮಿಣಿ ಹಾಗೂ ನನ್ನ ಸೋದರಿಯರಾದ ಪದ್ಮ, ಶ್ರೀಮತಿ, ಪತಿ ಶ್ರೀ ನಾರಾಯಣ ಮೂರ್ತಿ ಅವರೆಲ್ಲರನ್ನೂ ನೆನೆಯದಿದ್ದರೆ ನನ್ನ ಕೆಲಸ ಅಪೂರ್ಣ. ಅವರೆಲ್ಲರಿಗೂ ನನ್ನ ಸ್ನೇಹಪೂರ್ವಕ ನಮನಗಳು.

'ನಮ್ಮ ದನಿ'ಗೆ ಕಾರಣರಾದ ಶಿಲ್ಪಕಲಾ ಅಕಾಡಮಿಯ ರಿಜಿಸ್ಟಾರ್ ಆಗಿರುವ ಶ್ರೀಮತಿ ಪದ್ಮಜಕುಮಾರಿ, ಹಾಗೂ ಅಧ್ಯಕ್ಷರಾದ ಶ್ರೀ ವೆಂಕಟಾಚಲಪತಿಯವರಿಗೆ ನಾನು ಚಿರಋಣಿ.

'ನಮ್ಮ ದನಿ'ಯನ್ನು ಮನವಿಟ್ಟು ಕೇಳುವ ಸಹೃದಯರೆಲ್ಲರಿಗೂ ನಮಸ್ಕಾರಗಳು.

ಕನಕಾಮೂರ್ತಿ



ಚಾಲುಕ್ಯ ಶೈಲಿಯಲ್ಲಿ ಹನುಮಾನ್ - ಡಿ. ವಾದಿರಾಜ್

ಪ್ರಸ್ತಾವನೆ

ತಂಪಾದ ಗಾಳಿಯ ಜೊತೆಗೆ ಅಂದು ಶಿಲ್ಪಕಲಾ ಕೇಂದ್ರ ಪ್ರವೇಶಿಸುತ್ತಿದ್ದಂತೆ ಉಳಿ, ಸುತ್ತಿಗೆಗಳ ನಿನಾದ ಕೇಳಿ ಬರುತ್ತಿತ್ತು. ದಾರಿಯ ಎರಡು ಕಡೆಗಳಲ್ಲೂ ಅರ್ಧಕೆತ್ತಿದ ಶಿಲ್ಪಗಳನ್ನು, ಬೆಳೆಯುತ್ತಿರುವ ಚಿಕ್ಕ ಚಿಕ್ಕ ಗಿಡಗಳಿಗೆ ಒರಗಿಸಿ ನಿಲ್ಲಿಸಿತ್ತು. ಮುಂದೆ ಸಾಗುತ್ತಿದ್ದಂತೆ ಎದುರಿಗೆ ಅಭಯ ವರದ ಹಸ್ತಗಳಿಂದ ಸ್ವಾಗತಿಸುವ "ಮೂಲಾಧಾರ ಶಕ್ತಿ"ಯ ಚೋಳ ಶಿಲ್ಪ. ಯಾವುದೋ ಬೇರೆಯೇ ಲೋಕವನ್ನು ಪ್ರವೇಶಿಸಿದ ಅನುಭವ. ಅದೇ "ಕೆನರಾ ಬ್ಯಾಂಕ್ ಪ್ರಾಯೋಜಿತ ಕೆ.ಪಿ.ಜೆ. ಪ್ರಭು ಕರಕುಶಲ ತರಬೇತಿ ಸಂಸ್ಥೆ" (ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿರುವ ಬಿಡದಿಯಲ್ಲಿ ಯುವ ಶಿಲ್ಪಿಗಳು ಬೆಳೆಯುತ್ತಿರುವ ತಾಣ.) ಕರ್ನಾಟಕದ ಪ್ರಾಚೀನ ಶಿಲ್ಪ ಶೈಲಿಗಳನ್ನು ಬೆಳೆಸುತ್ತಿರುವ ಸ್ಥಳ. ಮಹಾಶಿಲ್ಪಿ ಶ್ರೀ ದೇವಲಕುಂದ ವಾದಿರಾಜರು ಕಂಡ, ಕನಸು, ನನಸಾದ ತಾಣ.

ಒಳಗೆ ಪ್ರವೇಶಿಸುತ್ತಿದ್ದಂತೆ ನನ್ನ ಗುರು ವಾದಿರಾಜ ಶ್ರೀ ಎದುರಿಗಿದ್ದಂತೆ ಬಾಸ, ನಂತರ ಬಂಧು ಶ್ರೀ ಜಿ.ಎಲ್. ಭಟ್, ಆತ್ಮೀಯವಾಗಿ ಬರಮಾಡಿಕೊಂಡರು. ನಿರ್ದೇಶಕರ ಕೊಠಡಿಯಲ್ಲಿ ದೊಡ್ಡ ದೊಡ್ಡ ಛಾಯಾಚಿತ್ರಗಳು, ಅಲ್ಲಿಯೇ ರಚಿಸಿದ ಶಿಲ್ಪಗಳ ಛಾಯಾ ಚಿತ್ರಗಳು ಮನಸೆಳೆದವು. ಈ ಕೇಂದ್ರವನ್ನು ಅಧ್ಯಯನದ ದೃಷ್ಟಿಯಿಂದ ನೋಡಲು ಈ ಹಿಂದೆಯೇ ಅನೇಕ ಸಾರಿ ಅಲ್ಲಿ ಹೋಗಿದ್ದೇನೆ. ಪ್ರತಿ ಸಾರಿಯೂ ಏನೋ ವಿಶೇಷತೆಯ ಅನುಭವವಾಗುತ್ತದೆ. ಅಲ್ಲಿಗೆ ಭೇಟಿಕೊಟ್ಟ ಎಷ್ಟೋದಿನಗಳ ವರೆಗೆ, ಯಾವುದೋ ಲೋಕದ ಪ್ರಭಾವ ಬಿದ್ದಂತೆ, ನನ್ನ ಕೆಲಸಗಳಲ್ಲೂ ಹೊಸ ಚೈತನ್ಯ ತುಂಬಿಕೊಂಡಂತೆ ಭಾಸವಾಗುತ್ತಿತ್ತು.



ಬಿಡದಿಯ ಕರಕುಶಲ ತರಬೇತಿ ಕೇಂದ್ರ





ಮೊದಲಿಗೆ ರೇಖಾಚಿತ್ರ ಅಭ್ಯಾಸ ಮಾಡುತ್ತಿದ್ದ ತರಗತಿಗೆ ಹೋದೆವು. ಬೋರ್ಡಿನ ಮೇಲೆ, ಅಳತೆ ಪ್ರಮಾಣಗಳನ್ನು ಸೂಚಿಸುವ ರೇಖಾಚಿತ್ರವನ್ನು ಜಿ.ಎಲ್. ಭಟ್ ಬರೆದಿದ್ದರು. ವಿದ್ಯಾರ್ಥಿಗಳು ಅದರ ಅನುಕರಣ ಮಾಡುತ್ತಾ ಅಭ್ಯಾಸ ಮಾಡುತ್ತಿದ್ದರು. ರೇಖಾಚಿತ್ರದ ಅಭ್ಯಾಸವೇ ಅಲ್ಲಿಯ ಕಲಿಕೆಯ ವೈಶಿಷ್ಟ್ಯ, ಹಾಗೂ ಶಿಕ್ಷಣದ ಮೊದಲ ಹೆಜ್ಜೆ. ಹಲವಾರು ರೇಖಾ ಚಿತ್ರಗಳನ್ನು ಬಿಡಿಸಿದ್ದ ಅವರ ಪುಸ್ತಕಗಳನ್ನು ನೋಡಿದಾಗ ಆಶ್ಚರ್ಯವಾಯಿತು, ನಮ್ಮ ಸಂಗೀತಗಾರರು ಬೆಳಗ್ಗೆ ಬೇಗ ಎದ್ದು ಸರಳೆ, ಜಂಟಿಗಳ ಅಕಾರಗಳ ಅಭ್ಯಾಸ ಮಾಡಿದಂತೆ.

ಅಲ್ಲಿಂದ ಹೊರಗೆ ಬಂದಾಗ ಕೆಲವರು ಮರದ ಕೆಳಗೆ ಶಿಲಾಶಿಲ್ಪದ ರಚನೆಯಲ್ಲಿ ತೊಡಗಿದ್ದರು. ಅದೊಂದು ಚಾಲುಕ್ಯ ಶೈಲಿಯ ಶಿಲ್ಪ. ಬಾದಾಮಿಯ ಪರವಾಸುದೇವನ ರೇಖಾಚಿತ್ರ, ಛಾಯಾಚಿತ್ರ ಪಕ್ಕದಲ್ಲಿತ್ತು. ೩ ಅಡಿ ವಿಗ್ರಹ, ಇಬ್ಬರು ಮೂವರು ಜೊತೆಗೂಡಿ ಮಾಡುತ್ತಿದ್ದರು.

ಹೆಜ್ಜೆ ಹೆಜ್ಜೆಗೂ ಮೂಲ ಶಿಲ್ಪದ ರೂಪುರೇಷೆಗಳಲ್ಲನ್ನು ಗಮನಿಸುತ್ತಾ, ಅದನ್ನು ತಮ್ಮ ಶಿಲ್ಪದಲ್ಲಿ ಮೂಡಿಸುತ್ತಿದ್ದರೆ, ಅದರ ಕಣ್ಣುಗಳು ಎಷ್ಟು ಚುರುಕಾಗಿ ಕೆಲಸ ಮಾಡುತ್ತಿದ್ದರೆಂಬುದು ತಿಳಿಯುತ್ತಿತ್ತು. ಕೈಗಳೂ ಸಹ ರೇಖೆಗಳನ್ನು ಬರೆದಂತೆಯೇ ಚೀರ್ಣಿಗಳಲ್ಲಿ ಆಕಾರವನ್ನು ಮೂಡಿಸುತ್ತಿದ್ದವು. ಹೀಗೆ ರೂಪ ಕೊಡುತ್ತಿರುವಾಗ ಕ್ಷಣಕ್ಷಣಕ್ಕೂ ಶಿಲ್ಪದಲ್ಲಿ ಆಗುವ ಬದಲಾವಣೆಯನ್ನು ನೋಡುವುದೇ ಚೆಂದ. ಅದರ ಮುಖಗಳಲ್ಲಂತೂ ಸಂಸೃಪ್ತಭಾವನೆ ಎದ್ದು ತೋರುತ್ತಿತ್ತು. ಕಲಿಯುವ ಉತ್ಸಾಹ ಪುಟಿದೇಳುತ್ತಿತ್ತು.

ಮುಂದೆ ಮರದ ಕೆತ್ತನೆಯ ವಿಭಾಗಕ್ಕೆ ಹೋದಾಗ ಹತ್ತಾರು ಯುವ ಶಿಲ್ಪಿಗಳು ಬೇರೆ ಬೇರೆ ಕುಳಿತು ಒಂದು ಅಡಿ ಶಿವನಿ ಮರದಲ್ಲಿ ಹೊಯ್ಸಳರ ಮದನಿಕೆಯರನ್ನು ರೂಪಿಸುತ್ತಿದ್ದರು. ಈ ವಿಭಾಗವಂತೂ ನನಗೆ ತುಂಬಾ ಇಷ್ಟವಾಯಿತು. ಸಾಮಾನ್ಯವಾಗಿ ನನಗೆ ಮರಕ್ಕಿಂತ ಕಲ್ಲೇ ಇಷ್ಟ. ಇದರ ಬಗ್ಗೆ ನನಗೂ ಜಿ.ಎಲ್. ಭಟ್‌ರಿಗೂ ಹಲವು ಬಾರಿ ಚರ್ಚೆನಡೆಯುತ್ತಿತ್ತು. ಈ ಬಾರಿ ನಾನೇ ಸೋತೆ ಎನ್ನಿಸುತ್ತಿತ್ತು. ಇದರ ಕಾರಣ ಆ ಶಿಲ್ಪಿಗಳ ಕೈ



ಕನಕಾಮೂರ್ತಿಯವರ ಸರಸ್ವತಿ ರೇಖಾಚಿತ್ರ

ಚಳಕ. ವಿಗ್ರಹದ ಅಳತೆ ಆಕಾರಗಳಲ್ಲಾಗಲೀ, ಕುಸುರಿ ಕೆಲಸವಾಗಲೀ ಎಲ್ಲೂ ಅಸಮತೋಲನ ಕಾಣುತ್ತಿರಲಿಲ್ಲ. ಶುದ್ಧವಾದ ಅನುಕರಣೆ ನಡೆದಿತ್ತು. ಶುದ್ಧ ಶಾಸ್ತ್ರೀಯ ಕಲೆಗಳ (ಸಂಗೀತ, ನೃತ್ಯ, ಶಿಲ್ಪ) ಅಧ್ಯಯನವನ್ನು ಅನುಕರಣೆ ಮಾಡಿದಾಗಲೇ ಪದೇ ಪದೇ ಅಭ್ಯಾಸ ಮಾಡಿದಾಗಲೇ ತಳಪಾಯ ಭದ್ರವಾದೀತು. ಹಾಗಾಗಿ ಹೊಯ್ಸಳರ ಮದನಿಕೆಯರು ಬೇಲೂರು ಬಿಟ್ಟು ಬೆಂಗಳೂರಿಗೆ ಬಂದಿದ್ದಾರೆ ಎನಿಸಿತು.

ಹಾಗೆಯೇ ಅಲ್ಲಿ ಕಂಚು, ಲೋಹದ ಉಬ್ಬುತಗ್ಗಿನಿಂದ ಶಿಲ್ಪ ರಚಿಸುವ ಕೆಲಸ, ಸುಡಾವೆ ಮಣ್ಣಿನ ಕೆಲಸದ ವಿಭಾಗಗಳನ್ನೂ ನೋಡಿದೆ. ಕಲೆಯಾಗಲೀ ಕುಶಲ ಕಲೆಯಾಗಲೀ ನಮ್ಮ ಈ ವಿಭಾಗದಲ್ಲಿ ಶಿಲ್ಪಿ ಸೋಮಶೇಖರ್ ಕೆಲಸ ಮಾಡುತ್ತಿದ್ದರು. ಶೈಲಿಗಳಲ್ಲೇ ಅಭ್ಯಾಸ ನಡೆಯುತ್ತಿದ್ದುದನ್ನು ನೋಡಿ ಸಂತೋಷವಾಯಿತು. ಇಂತಹ ಕಠಿಣವಾದ ಅಭ್ಯಾಸದಿಂದ, ಅಧ್ಯಯನದಿಂದ ಶಿಲ್ಪಿ ಏನನ್ನಾದರೂ ಸಾಧಿಸಬಹುದು. ಇಲ್ಲಿಂದ ತರಬೇತಿ ಪಡೆದು ಹೊರಬಂದ ಎಷ್ಟೋ ವಿದ್ಯಾರ್ಥಿಗಳು ಸ್ವಯಂ ಉದ್ಯೋಗದಲ್ಲಿ ನಿರತರಾಗಿ, ಸಮಾಜದ ಎಲ್ಲ ಅವಶ್ಯಕತೆಗಳಿಗೂ ಸ್ಪಂದಿಸುತ್ತಾ, ಶಿಲ್ಪಕಲೆಯ ಬೆಳವಣಿಗೆ ಒಳ್ಳೆಯ ದಾರಿಯಲ್ಲಿ ನಡೆಯುತ್ತಿದೆ ಎಂದು ಸಾರಿ ಸಾರಿ ಹೇಳುತ್ತಿದ್ದಾರೆ, ತೋರಿಸುತ್ತಿದ್ದಾರೆ. ಇಂತಹ ತರಬೇತಿ ಕೇಂದ್ರದ ರೂವಾರಿಗೂ, ಅದನ್ನು ಪಾಲಿಸಿ, ಪೋಷಿಸಿಕೊಂಡು ಬರುತ್ತಿರುವ ಕೆನರಾ ಬ್ಯಾಂಕ್‌ಗೂ ಕೋಟಿ ನಮನಗಳನ್ನು ಮನದಾಳದಿಂದ ಸಲ್ಲಿಸಿದೆ.



ಸ್ವಾತಂತ್ರ್ಯ ಪೂರ್ವದ ಕಲಾ ಇತಿಹಾಸದಲ್ಲಿ ಶಿಲ್ಪಿಗಳು ಹೇಗಿದ್ದಿರಬಹುದು?

ಕರ್ನಾಟಕದ ಶಿಲ್ಪಕಲೆ ಜಗದ್ವಿಖ್ಯಾತವಾದುದು. ಕದಂಬ, ಗಂಗ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಚೋಳ ಶೈಲಿಗಳ ದೇವಾಲಯಗಳು ನಾಡಿನ ತುಂಬಾ ರೂಪುಗೊಂಡು, ವಿಶ್ವವನ್ನೇ ಬೆರಗುಗೊಳಿಸಿವೆ. ಶತ ಶತಮಾನಗಳಿಂದಲೂ ಶಿಲ್ಪಕಲೆ ಬೆಳೆಯುತ್ತಾ ಬಂದು, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳರಕಾಲದಲ್ಲಿ ಉನ್ನತಿಯನ್ನು ಸಾಧಿಸಿ "ಶಿಲ್ಪಗಳ ಸುವರ್ಣಯುಗ"ವಾಗಿತ್ತೆಂದರೆ ಅತಿಶಯೋಕ್ತಿ ಆಗಲಾರದು. ಕರ್ನಾಟಕದಲ್ಲೇ ದೊರೆಯುವ ಹಲವಾರು ರೀತಿಯ ಕಲ್ಲುಗಳಿಂದ ವಿವಿಧ ಶೈಲಿಗಳ ಆವಿಷ್ಕಾರವಾಗಿ, ಆಯಾ ಕಾಲದ ರಾಜ ಮನೆತನಗಳಿಂದಲೇ ಅವುಗಳನ್ನು ಗುರುತಿಸುತ್ತಾರೆ. ಹೀಗೆ ಕದಂಬರಿಂದ ಹಿಡಿದು ವಿಜಯನಗರದ ಶೈಲಿಗಳ ಹುಟ್ಟು. ರಾಜರು ತಮ್ಮ ವಿಜಯೋತ್ಸವದ ನೆನಪಿಗಾಗಿ ಅಥವಾ ತಮ್ಮ ಇಷ್ಟದೇವತೆಗಾಗಿ ಬರೀ ದೇವಾಲಯಗಳನ್ನಲ್ಲ 'ಕಲಾ ಭಂಡಾರ'ಗಳನ್ನೇ ಸೃಷ್ಟಿಸಲು ಶಿಲ್ಪಿಗಳಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಇದಲ್ಲದೆ ಸಾಮಾಜಿಕ ಧಾರ್ಮಿಕ ಅವಶ್ಯಕತೆಗಳಿಗಾಗಿ ಹಳ್ಳಿ ಹಳ್ಳಿಯಲ್ಲೂ ಕೂಡ ದೇವಾಲಯಗಳ ನಿರ್ಮಾಣ ಕಾರ್ಯನಡೆಯುತ್ತಿತ್ತು.

ಭಾರತದಲ್ಲಿ ಎಷ್ಟೊಂದು ದೇವಾಲಯಗಳ ನಿರ್ಮಾಣವಾಗಿದೆ! ದೇವಾಲಯಗಳೂ ಎನ್ನುವುದಕ್ಕಿಂತ 'ಸಂಸ್ಕೃತಿ ಅಥವಾ ಕಲಾ ಭಂಡಾರಗಳೆಂದೇ' ಕರೆಯಬಹುದು. ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಶಿಲ್ಪ ರಚನಾ ಕಾರ್ಯಗಳು ನಡೆದಿರಬಹುದಾದರೆ ಎಷ್ಟೊಂದು ಸಾವಿರ ಮಂದಿ ಶಿಲ್ಪಿಗಳಿದ್ದಿರಬಹುದು. ಭಾರತ ವ್ಯವಸಾಯಿಗಳ ದೇಶ ಎನ್ನುವುದಕ್ಕಿಂತ 'ಶಿಲ್ಪಿಗಳ ದೇಶ' ಎಂದು ಕರೆಯಬಹುದೇನೋ! ಅನ್ನುವಷ್ಟರ ಮಟ್ಟಿಗೆ ಶಿಲ್ಪವೇ ಉದ್ದಿಮೆಯಾಗಿದ್ದಿರಬಹುದೆ? ದೇಶವೂ ಸುಭಿಕ್ಷವಾಗಿದ್ದಾಗ, ರಾಜಾಶ್ರಯಗಳಲ್ಲಿ ಈ ಕಲೆಯ ಅಧ್ಯಯನ, ಪ್ರಯೋಗ ನಡೆದಿರಬಹುದು. ಬೆಳವಣಿಗೆಗೂ ಹೆಚ್ಚಿನ



ಡಿ. ವಾದಿರಾಜ್ ಬ್ರಹ್ಮ - ಗಟ್ಟಕಲ್ಲು

ಪ್ರೋತ್ಸಾಹ ದೊರೆತು, ಬಹುಶಃ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಅಧ್ಯಯನ ನಡೆದಿರಬಹುದು. ಒಂದು ದೇವಾಲಯದ ರಚನೆಯೆಂದರೆ ಸುಲಭವಾದ ಕೆಲಸವಲ್ಲ. ಅದಕ್ಕೆ ಹಿಡಿಯುವ ಸಮಯವೂ ಸ್ವಲ್ಪವಲ್ಲ. ವರ್ಷಾನುಗಟ್ಟಲೆ, ನೂರಾರು ಶಿಲ್ಪಿಗಳು ಕೆಲಸ ಮಾಡಿದರೇನೇ ಬಾದಾಮಿ ಪಟ್ಟದ ಕಲ್ಲುಗಳಂತಹ ಗುಹಾಂತರ ದೇವಾಲಯಗಳು, ಬೇಲೂರು ಹಳೇ ಬೀಡಿನಂಥ ಸುಂದರ ದೇವಾಲಯಗಳು, ಅಚ್ಚರಿ ಮೂಡಿಸುವ ಎಲ್ಲೋರ ಗುಹಾಂತರ ದೇವಾಲಯಗಳು, ಪ್ರಪಂಚದ ಅತಿದೊಡ್ಡದಾದ ಏಕಶಿಲಾಮೂರ್ತಿ ಗೊಮ್ಮಟನಂತಹ ವಿಗ್ರಹವನ್ನಾಗಲೀ ರಚಿಸಲು ಸಾಧ್ಯ. ಅಂತಹ ಕೆಲಸಗಳನ್ನು ಶಿಲ್ಪಿಗಳು ಆತುರದಲ್ಲಿ ಮಾಡದೆ, ಅದೊಂದು ತಪಸ್ಸು ಎಂಬಂತೆ ಮಾಡುತ್ತಿದ್ದರು. ಹಾಗೆಂದ ಮೇಲೆ ಅಲ್ಲಿ ಶಿಲ್ಪಿಗಳು, ವಾಸ್ತುಶಿಲ್ಪಿಗಳು, ಮೂರ್ತಿಗಳನ್ನು ರೂಪಿಸುವ ಶಿಲ್ಪಿಗಳು, ಅಲಂಕಾರ ಹೂಬಳ್ಳಿಗಳನ್ನೂ ಮಾಡುವ ಚತುರ ಶಿಲ್ಪಿಗಳು, ಎಲ್ಲರೂ ಅವರವರ ಕ್ಷೇತ್ರದಲ್ಲಿ ನುರಿತವರೇ. ಕಿರಿಯರೂ, ಆಸಕ್ತರೂ ಸೇರಿ, ಒಂದು ವ್ಯವಸ್ಥಿತವಾದ ಗುಂಪಿನಿಂದ ಈ ದೇವಾಲಯಗಳನ್ನು ಕಟ್ಟುವ ಕಾರ್ಯ ನಡೆಯುತ್ತಿತ್ತು. ಈ ಶಿಲ್ಪಿ ಸಮೂಹಕ್ಕೆ ಜಾತಿ ಧರ್ಮಗಳ ಬೇಧವಿರಲಿಲ್ಲ ಎಂಬುದಕ್ಕೆ ಅವರು ಎಲ್ಲಾ ಧರ್ಮಗಳಿಗೂ ದೇವಾಲಯಗಳನ್ನು ರಚಿಸಿಕೊಟ್ಟಿರುವುದೇ ಸಾಕ್ಷಿ.

ರಾಜರ ಆಶ್ರಯದಲ್ಲಿ ನಾಡಿನಿಂದ ನಾಡಿಗೆ ಇಂತಹ ಶಿಲ್ಪಿಗಳ ಸಮೂಹ ಹೋಗಿ ಬರುತ್ತಿತ್ತು. ರಾಜರ ಹಾಗೂ ಜನರ ಆಶಯಗಳನ್ನು ಪೂರೈಸುತ್ತಿದ್ದರು. ಎಂತಹ ಸಮೃದ್ಧಕಾಲವದು!

ಭಾರತದಲ್ಲಿ ವಿಧ ವಿಧವಾದ ಶಿಲೆಗಳ ಗಣಿಗಳಿವೆ. ಆಯಾಕಲ್ಲುಗಳಿಗೆ ತಕ್ಕಂತೆ ಶಿಲ್ಪಗಳನ್ನು ವಿವಿಧ ಶೈಲಿಗಳನ್ನು ರೂಪಿಸಿ, ದೇವಾಲಯಗಳನ್ನೂ ಕಟ್ಟಿದ್ದಾರೆ. ಕರ್ನಾಟಕದಲ್ಲೇ ಐದಾರು ರೀತಿಯ ಕಲ್ಲುಗಳು ದೊರೆಯುತ್ತವೆ. ಬಳಪದಕಲ್ಲು, ಕೆಂಪು ಹರಳುಗಲ್ಲು, ಪದರಗಳುಳ್ಳ ಸ್ಲೇಟಿಗೆ ಬಳಸುವ ಕಲ್ಲುಗಳಿಂದಲೇ, ಕಲಾಭಂಡಾರಗಳನ್ನೇ ಸೃಷ್ಟಿಮಾಡಿ, ಸಂಪ್ರದಾಯ ಶಿಲ್ಪದಲ್ಲಿ ಸೃಜನ ಶೀಲತೆ ಮತ್ತು ಕ್ರಿಯಾಶೀಲತೆಯಿಲ್ಲ ಎಂಬ ಅಪವಾದಕ್ಕೆ ಹೊರತಾಗಿದ್ದಾರೆ. ಇಂತಹ ಶಿಲ್ಪ ಸಮುದಾಯವನ್ನು 'ಓಡಾಡುವ ವಿಶ್ವವಿದ್ಯಾಲಯ'ಗಳೆಂದರೆ ತಪ್ಪಾಗಲಾರದು. ಶಿಲ್ಪಿಗಳಿಗೆ ಬೇಕಾಗುವ ಶಾಸ್ತ್ರಗ್ರಂಥಗಳ ರಚನೆಯೂ ಸಾಕಷ್ಟು ಆಗಿತ್ತು, ಹಾಗಾಗಿ ಕಲಿಸುವ ಗುರುಗಳು, ಶಾಸ್ತ್ರದ ಪಠ್ಯ, ನಿರ್ದೇಶನ ಮಾಡುವ ಪರಿಣಿತರೂ ಇದ್ದಮೇಲೆ ಕಲಿಯುವ ಉತ್ಸಾಹೀ ಕಿರಿಯರಿರುವುದಿಲ್ಲವೇ? ಎಂತಹ ಸುಂದರ ವಾತಾವರಣ! ಕಲಾಕೃತಿಗಳನ್ನು ರಚಿಸುತ್ತಾ, ಶಿಲ್ಪ ಕಲೆಗೆ ಸಮನಾದುದು



ಬೇರೊಂದಿಲ್ಲ ಎಂದು ಎತ್ತಿ ಸಾರಿದ್ದಾರೆ.

ರಾಜಾಶ್ರಯಗಳಲ್ಲದೆ, ಸಮಾಜದ ಇತರರಿಗೂ ಕಲೆಯ ಅವಶ್ಯಕತೆಯಿತ್ತಲ್ಲವೆ? ನುರಿತ ಶಿಲ್ಪಿಗಳ ಸಮೂಹದಂತೆ ಇವರಿಂದ ಪ್ರೇರಿತರಾಗಿಯೋ ಸಮಾಜದ ಅವಶ್ಯಕತೆಗಾಗಿಯೋ, ಶುದ್ಧ ಸಂಪ್ರದಾಯದ ಜೊತೆ ಜೊತೆಯಲ್ಲೇ ಸಾಮಾನ್ಯರಿಗೂ ಬೇಕಾಗುವಂತಹ, ಮನೆಗಳಲ್ಲಿ ಇಡಬಹುದಾದ ಬೆಳ್ಳಿ ವಿಗ್ರಹಗಳು, ಅಲಂಕಾರದ ವಸ್ತುಗಳನ್ನು ತಯಾರು ಮಾಡುವ ಗುಂಪೊಂದು ಬೆಳೆಯುತ್ತಿತ್ತು. ಆಯಾಯ ಪ್ರಾಂತದ ಕೆಲವು ವಿಶಿಷ್ಟ ದೇವತೆಗಳು, ಭೂತಗಳು (ಭೂತಾರಾದನೆ, ದಕ್ಷಿಣಕನ್ನಡ ಜಿಲ್ಲೆಯ ಒಂದು ಆರಾಧನೆ, ಅದಕ್ಕೆ ದೊಡ್ಡ ದೊಡ್ಡ ಮರದ ಶಿಲ್ಪಿಗಳನ್ನು ಮಾಡುತ್ತಾರೆ.) ಹೀಗೆ ಹತ್ತು ಹಲವು ಶಿಲ್ಪಗಳ ರಚನೆಯಾಗಿರುವುದಕ್ಕೆ ಪುರಾವೆಯಿದೆ. ಇತರ ಎಲ್ಲ ಸಂಪ್ರದಾಯ ಕಲೆಗಳಂತೆ ಜತೆ ಜತೆಯಲ್ಲೇ ಈ ಜನಪ್ರಿಯ ಕಲೆಗಳೂ ಹುಟ್ಟಿದ್ದರಲ್ಲಿ ಆಶ್ಚರ್ಯವಿಲ್ಲ. ಯಾವ ಕಟ್ಟುಪಾಡುಗಳಿಗೂ ಒಳಪಡದೆ, ಕೇವಲ ಭಾವನೆಗಳಿಗೆ ಪ್ರಾಶಸ್ತ್ಯ ಕೊಟ್ಟು ರಚಿಸಿದ ಈ ಶಿಲ್ಪಗಳು ಕೂಡ ಅಷ್ಟೇ ಪ್ರಭಾವ ಶಾಲಿಯಾಗಿ ಕಾಣುತ್ತವೆ.

ಉತ್ತರ ಕನ್ನಡ ಜಿಲ್ಲೆಯ ಸಣ್ಣ ಸಣ್ಣ ಕಂಚಿನ ಪ್ರತಿಮೆಗಳು ಮೈಲಾರ ಲಿಂಗ, ಕುದುರೆ ಏರಿ ಬರುವ ಶಿವ, ದಕ್ಷಿಣ ಕನ್ನಡದ ಬೃಹದಾಕಾರದ ಮರದ ಶಿಲ್ಪಗಳು, ಹಾಗೂ ಪ್ರತಿ ಮನೆಯಲ್ಲೂ ಪೂಜೆಗಾಗಿ ಬಯಸಿ, ಬಳಸುವ ಕಂಚು ಮತ್ತು ಹಿತ್ತಾಳೆ ದೇವರ ಪ್ರತಿಮೆಗಳು, ಅಲಂಕಾರಕ್ಕಾಗಿ ಬಳಸುವ ಪಶು, ಪಕ್ಷಿ ಪ್ರಾಣಿಗಳು, ಆಟಿಕೆಗಳು ಹೀಗೆ ವಿವಿಧ ರೀತಿಯ ಶಿಲ್ಪಗಳ ತಯಾರಿಕೆ ನಡದೇ ಇತ್ತು. ಶಿಲ್ಪಕಲೆ ಕೇವಲ ರಾಜಾಸ್ಥಾನ, ದೇವಸ್ಥಾನಗಳಿಗೆ ಮಾತ್ರ ಸೀಮಿತವಾಗಿರದೆ ಜನ ಜೀವನದ ಹಾಸುಹೊಕ್ಕಾಗಿ ಬೆಳೆಯುತ್ತ ಬಂದಿತು. ಸಮೂಹದ ಕೆಲಸದ ಜೊತೆಗೆ ವ್ಯಕ್ತಿಗತವಾದ ಕೆಲಸವಾಗಿಯೂ ಬೆಳೆಯುತ್ತ ಒಂದು ಪಾರಂಪರಿಕ ಕಲೆಯಾಗಿ ಮಾರ್ಪಟ್ಟಿದ್ದರಲ್ಲಿ ಆಶ್ಚರ್ಯವಿಲ್ಲ.

ಕೆಲವು ಪ್ರದೇಶಗಳಲ್ಲಿ ಗುಡಿಗಾರ, ಬಡಿಗೇರ, ಪತ್ತಾರ್, ಪಂಚಾಳ ಎಂಬ ಹೆಸರುಗಳು ಇಂದಿಗೂ ಕೂಡ ಮನೆತನದ ಕಸುಬು ಸೂಚಿಸುವ ಹೆಸರುಗಳಾಗಿಯೂ ಬಳಸುತ್ತಾರೆ.

ಸಂಗೀತ ನೃತ್ಯ ಕಲೆಗಳೂ ಶತಮಾನಗಳಿಂದಲೂ ನಡೆದು ಬಂದರೂ, ಪುರಾವೆಗಳು ಮಾತ್ರ ಇತ್ತೀಚಿನ ಶತಮಾನದಲ್ಲಿ ಸಿಗುತ್ತವೆ. ಆದರೆ ಶಿಲ್ಪಕಲೆ ಕ್ರಿಸ್ತ ಪೂರ್ವಕ್ಕೂ ಮುಂಚಿನಿಂದ ಬೆಳದು ಬಂದ ಎಲ್ಲ ಪುರಾವೆಗಳೂ ದೊರೆತು, ದಾಖಲೆಗಳಾಗಿ ಇತಿಹಾಸ ಸಂಶೋಧಕರ ಸ್ಫೂರ್ತಿಯ ಕಲೆಯಾಯಿತು, ಜನಮನಗಳ ಭಾವನೆಗೆ, ಸಂಸ್ಕೃತಿಗೆ, ಆಚರಣೆಗಳಿಗೆ ದಾಖಲೆಯಾಗಿ ಒಂದು ಜೀವಂತ ಕಲೆಯಾಗಿ ಹರಿದು ಬರುತ್ತಿರುವ ಕಲೆ.

ಹೀಗೆ ಇಂದಿನವರೆಗೂ ಶಿಲ್ಪಕಲೆ ನಿರಂತರ ಪ್ರವಾಹವಾಗಿ ಹರಿಯುತ್ತಿದೆ. ಈ ನಿರಂತರ ಬೆಳವಣಿಗೆಗೆ ಆಗಾಗ ಅಡ್ಡಿ ಆತಂಕಗಳು ಇದ್ದದ್ದೇ, ಅದರಲ್ಲೂ ಭಾರತದ ಸ್ವಾತಂತ್ರ್ಯ ಸಂಗ್ರಾಮ ಇಡೀ ದೇಶವನ್ನೇ ಅಲ್ಲಾಡಿಸಿತು. ಅಸ್ತವ್ಯಸ್ತವಾದ ಜನಜೀವನ, ದೇಶಕ್ಕಾಗಿ ಹೋರಾಡಿ ಮಡಿವ ಜನತೆ, ದೇಶವೇ ಹತ್ತಿ ಉರಿಯುತ್ತಿದ್ದಾಗ ಧರ್ಮವಾಗಲೀ, ಭಕ್ತಿಯಾಗಲೀ ಯಾರಿಗೆ ಬೇಕಿತ್ತು? ದೇಶ ಭಕ್ತಿಯೊಂದೇ ತಾರಕ ಮಂತ್ರವಾಗಿತ್ತು. ಇಂತಹ ಸಮಯದಲ್ಲಿ ಬದುಕಿಗಾಗಿಯೇ ವೃತ್ತಿಗಳನ್ನು ಅವಲಂಬಿಸಿದ್ದ ಮನೆತನಗಳು, ವಿಧಿಯಿಲ್ಲದೆ ವ್ಯಕ್ತಿಗತವಾಗಿಯಾದರೂ ಇಂತಹ ಕಸುಬುಗಳನ್ನು ಮಾಡಬೇಕಿತ್ತು. ಗುರು-ಶಿಷ್ಯ ಪರಂಪರೆಗಿಂತ, 'ವಂಶಪಾರಂಪರ್ಯ' ವೃತ್ತಿಗಳಾಗಿ ಹೆಚ್ಚಿನ ಪ್ರಾಮುಖ್ಯತೆ ಪಡೆದವು. ಹಾಗಾಗಿ ಶಿಲ್ಪಕಲೆಯನ್ನೇ ಆದರಿಸದ ವಂಶಗಳೂ ಗ್ರಾಮಗಳೂ ಇದ್ದವು.

ಕರ್ನಾಟಕದ ಶಿವಾರಪಟ್ಣ, ನಾಗಮಂಗಲ, ಮೈಸೂರು, ದೇವನಹಳ್ಳಿ, ಗಂಧದ ನೆಲೆವೀಡಾದ ಸೊರಬ, ಸಾಗರ, ಉತ್ತರ ಕರ್ನಾಟಕದ ಸುರಪುರ, ಕೊಡೆಕಲ್, ಗಾಜಿರಕೋಟ್ ಮುಂತಾದ ಕಡೆಗಳಲ್ಲಿ ತಮ್ಮ ಮನೆತನದ ವೃತ್ತಿಯನ್ನು ಕಳೆದುಕೊಳ್ಳದೆ, "ತಂದೆಯಿಂದ ಮಗನಿಗೆಂಬ" ವಂಶಪಾರಂಪರ್ಯದ ಉದ್ಯೋಗವಾಗಿ ಅಲ್ಲಿಯ ಕಲೆಗಳು ಯಾವ ತೊಂದರೆಗೂ ಸಿಗದೆ ಮುಂದುವರೆಯುತ್ತಲೇ ಇತ್ತು. ಸ್ವಾತಂತ್ರ್ಯಾನಂತರವೂ ಈ ಗ್ರಾಮಗಳು, ಕಲಾವಿದರೂ ಹಾಗೆಯೇ ಉಳಿದರು. ಇಂತಹ ಮನೆಗಳಿಂದ ನಮ್ಮ ಹಲವಾರು ಶಿಲ್ಪಶೈಲಿಯ 'ಕಲೆಗಳು' ಉಳಿದವೆಂದರೆ ತಪ್ಪಾಗಲಾರದು.

ರಾಜಾಶ್ರಯ, ಸಾರ್ವಜನಿಕರ ಧಾರ್ಮಿಕ ಅವಶ್ಯಕತೆ ಹಾಗೂ ಅಲಂಕಾರಿಕ, ಬಳಕೆಯವಸ್ತುಗಳಲ್ಲಿ, ಎಲ್ಲ ಸ್ತರಗಳಲ್ಲೂ 'ಭಾರತೀಯತೆ' ಎದ್ದು ಕಾಣುತ್ತಿತ್ತು. ದಿನ ನಿತ್ಯ ಬಳಸುವ ತಟ್ಟೆ, ಚೊಂಬು, ಬಿಂದಿಗೆ ಮತ್ತು ಪೂಜಾ ಪರಿಕರಗಳು, ನೇಯ್ಗೆ, ಕುಂಬಾರಿಕೆ ಎಲ್ಲೆಲ್ಲೂ ಆಕರ್ಷಕ ವಿನ್ಯಾಸಗಳಿದ್ದು, ಪ್ರಪಂಚದ ಯಾವ ಮೂಲೆಯಲ್ಲಿದ್ದರೂ 'ಇದು ಭಾರತೀಯ ಕಲೆ' ಎಂದು ನಿಖರವಾಗಿ ಗುರುತಿಸುವಂತಿತ್ತು. ಈಗಲೂ ನಮ್ಮ ಸಂಪ್ರದಾಯ ಕಲಾವಿದರು, ಸಂಗೀತ, ನೃತ್ಯ, ಶಿಲ್ಪ, ನೇಯ್ಗೆ ಎಲ್ಲದರಲ್ಲೂ 'ಭಾರತೀಯತೆ'ಯನ್ನು ಉಳಿಸಿಕೊಂಡು ಬಂದಿರುವುದು ಭಾರತದ ಭವ್ಯ ಸಂಸ್ಕೃತಿಗೆ ಕೊಟ್ಟಿರುವ ಅತ್ಯಮೂಲ್ಯಕೊಡುಗೆ.

ಇಂತಹ ದಿನ ನಿತ್ಯದ ಬಳಕೆಯ ಅನೇಕ ಕರಕುಶಲ ವಸ್ತುಗಳು, ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಾಗೂ ಶಿಕ್ಷಣ ಹಣ ಮಾಡುವ ಮನೋಭಾವ ಬೆಳೆಸಿಕೊಂಡ ಕೆಲವು ಕಲಾವಿದರಿಂದಾಗಿ ಕ್ರಮೇಣ ತಮ್ಮಲ್ಲಿದ್ದ ಉತ್ತಮ ಗುಣಮಟ್ಟವನ್ನು



ಸಿ. ಪರಮೇಶ್ವರಾಚಾರ್ಯರ ಶ್ರೀ ಪಂಚವಕ್ತೇಶ್ವರ ಮೂರ್ತಿ (ವಿಶ್ವಕರ್ಮ)

ಕ್ರಮೇಣ ಕಳೆದುಕೊಳ್ಳುತ್ತಾ ಬಂದವು. ಶಿಲ್ಪ ಕಲೆ ಕೂಡ ಇದಕ್ಕೆ ಹೊರತಾಗಿರಲಿಲ್ಲ.

ಬದಲಾದ ಚಿತ್ರ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕಲೆಗಳ ಪುನರುದ್ಧಾರದ ಕೆಲಸ ಪ್ರಾರಂಭವಾಯಿತು. ಭಾರತ ಸರ್ಕಾರ ದೇಶದ ಸರ್ವತೋಮುಖ ಬೆಳವಣಿಗೆಗೆ ಗಮನ ಕೊಡಲು ಪ್ರಾರಂಭಿಸಿದ್ದು ಸಹಜವೇ. ಅದಕ್ಕಾಗಿ ಸರ್ಕಾರವೇ ಪ್ರತಿಯೊಂದು ರಾಜ್ಯದಲ್ಲೂ ಕರಕುಶಲ ಮಂಡಲಿಯನ್ನು ಸ್ಥಾಪಿಸಿ, ಕಲೆಗಳ ಉಳಿವುಗಳಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿತು. ಇಂತಹ ಯೋಜನೆಗಳ ರೂವಾರಿಯೇ ಶ್ರೀಮತಿ ಕಮಲಾದೇವಿ ಛಟ್ಟೋಪಾಧ್ಯಾಯ. ಇವರು ರಾಷ್ಟ್ರೀಯ ಕರಕುಶಲ ಮಂಡಲಿಯ ಮುಖ್ಯಸ್ಥೆಯಾಗಿ ಹಲವಾರು ಉತ್ತಮ ಯೋಜನೆಗಳನ್ನು ರೂಪಿಸಿ ಕುಶಲಕಲೆಯ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದರು.

ಮುಖ್ಯವಾಗಿ ನಶಿಸಿ ಹೋಗುತ್ತಿದ್ದ ಕಲೆಗಳನ್ನು ಗುರುತಿಸುವುದು, ಅದಕ್ಕಾಗಿ ದೇಶದ ಹಳ್ಳಿ ಹಳ್ಳಿಗೂ ಭೇಟಿಕೊಟ್ಟು, ಎಲ್ಲೆಲ್ಲಿ ಸಂಪ್ರದಾಯ ಕಲೆಗಳು ಉಳಿದಿವೆ, ಎಷ್ಟು ಜನ ಕಲಾವಿದರಿದ್ದಾರೆ, ಅವರ ಬದುಕಿನ ಸ್ಥಿತಿಯೇನು, ಅವರ ಅಗತ್ಯ ನಾಡಿಗೆ ಎಷ್ಟು ಮುಖ್ಯ ಎಂಬುದನ್ನು ಎಲ್ಲರಿಗೂ ಮನದಟ್ಟು ಮಾಡಿ, ಕರಕುಶಲ ಮಂಡಲಿಯಿಂದ ಇವರಿಗೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡಲು ಪ್ರಾರಂಭಿಸಿದರು. ಈ ಕರಕುಶಲಕಲೆಗಳ ಗುಂಪಿಗೇ ಶಿಲ್ಪಕಲೆಯನ್ನೂ ಸೇರಿಸಲಾಯಿತು. ಇಂತಹ ಸ್ಥಿತಿಯಲ್ಲೂ ಶಿಲ್ಪಕಲೆಗೆ ಎಂದು ಪ್ರತ್ಯೇಕ ಸ್ಥಾನ ಕೊಡದಿದ್ದುದು ಗಮನಿಸಬೇಕಾದ ಅಂಶ.

ಶಿಲ್ಪ ಕಲೆಯನ್ನು ಕುಶಲಕಲೆಗಳ ಗುಂಪಿಗೆ ಸೇರಿಸಲು ಸಾಧ್ಯವಿಲ್ಲ. ನೇಯ್ಗೆ, ಲೋಹದ ಪೂಜಾ ಪರಿಕರಗಳು, ಛಾಪೆ ನೇಯುವುದು, ಕುಂಬಾರಿಕೆ ಇವೆಲ್ಲ ಕರಕುಶಲ ಮಂಡಲಿಯಿಂದ ನೆರವು ಪಡೆಯುತ್ತಿರುವ ವ್ಯಾಪಾರೋದ್ಯಮವಾದ ಕಲೆಗಳು. ಈ ಉದ್ಯಮಗಳನ್ನು ಸುಲಭವಾಗಿ ಕಲಿತು, ಹತ್ತಾರು ಜನಗಳು ಮಾಡುವಂತಹುದು.

ಶಿಲ್ಪಕಲೆಗೆ ಇಂತಹ ಯಾವ ಸೌಲಭ್ಯವೂ ಇಲ್ಲ. ಕಲ್ಲಾಗಲೀ, ಮರವಾಗಲೀ ಪ್ರತಿಯೊಂದು ಶಿಲ್ಪವನ್ನೂ ಒಂದೊಂದೇ ಮಾಡಬೇಕಾಗುತ್ತದೆ. ಕಂಚಿನಲ್ಲಾದರೂ, ಅಚ್ಚು ತೆಗೆದು ನೂರಾರು ಕೃತಿಗಳನ್ನು ಮಾಡುವ ವಿಧಾನವಿದೆ, ಎರಕ ಹೊಯ್ಯುವ ಕಾರಣದಿಂದ. ಎಲ್ಲ ಕಂಚುವಿಗ್ರಹಗಳಿಗೂ ಅಚ್ಚು ತೆಗೆಯುವುದು ಅಷ್ಟು ಸುಲಭವೂ ಅಲ್ಲ. ಹೀಗಾಗಿ ಶಿಲ್ಪಕಲೆ, ಕಲೆಯಾಗಿಯೇ ಪುನರುದ್ಧಾರ ಪಡೆಯ ಬೇಕಾಯಿತು.

ಒಂದು ಅಮೂಲ್ಯ ಕಲೆಯಾಗಿಯೇ ಬೆಳೆಯ ಬೇಕಾಗಿರುವ ಶಿಲ್ಪಕಲೆಗೆ ಇಂದಿಗೂ ಎಂತಹ ವಾತಾವರಣ ಬೇಕು ಎಂಬುದರ ಬಗ್ಗೆ ಗಂಭೀರ ಚಿಂತನೆಯಾಗುತ್ತಿಲ್ಲ. ಶಿಲೆ ಮತ್ತು ಮರಗಳ ಸಂಗ್ರಹ ಇಂದಿಗೂ ಬಹಳ ತ್ರಾಸದಾಯಕವಾದ ಕೆಲಸ ಮತ್ತು ದಿನೇ ದಿನೇ ಅವುಗಳ ಬೆಲೆ ಗಗನಕ್ಕೇರುತ್ತಿದೆ. ಈ ಬವಣೆಯಿಂದ ತಪ್ಪಿಸಿಕೊಳ್ಳಲು, ಸರಕಾರದಿಂದ ಕಲಾವಿದರಿಗಾಗಿ ಸ್ವಲ್ಪ ರಿಯಾಯಿತಿ ದರದಲ್ಲಿ ಕೊಡಿಸಬೇಕೆಂದು ಸರ್ಕಾರಕ್ಕೆ ಮಾಡಿದ ಮನವಿಗಳೆಲ್ಲ ಎಲ್ಲಿ ಹೋದವೋ ತಿಳಿಯುತ್ತಿಲ್ಲ. ಈ ಸಮಸ್ಯೆಯನ್ನು ಕಲಾವಿದರೇ ಪರಿಹರಿಸಿಕೊಳ್ಳಬೇಕಾಗಿದೆ. ಇಷ್ಟು ತಾಪತ್ರೆಯಗಳ ನಡುವೆಯೂ ಹಿಂದಿನಿಂದ ಬಂದ ಕಲಾಗ್ರಾಮಗಳಾದ ಶಿವಾರಪಟ್ಟಣ, ನಾಗಮಂಗಲ, ಮೈಸೂರು, ಸಾಗರ, ಸೊರಬ ಮುಂತಾದ ಕೆಲವೇ ಕಡೆಗಳಲ್ಲಿ ವಂಶ ಪಾರಂಪರ್ಯವಾಗಿ ಕಲಿತು, ವೃತ್ತಿಯನ್ನಾಗಿಸಿಕೊಂಡ ಶಿಲ್ಪಿಗಳೇ ಅದರ ಉಳಿವು ಹಾಗೂ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇಂತಹ ಕಲಾಗ್ರಾಮಗಳಲ್ಲಿ ಮನೆತನದ ಶಿಲ್ಪ ಕಲೆಯಾಗಿ, ಗುರು ಶಿಷ್ಯಪರಂಪರೆಯಲ್ಲಿ ಮುಂದುವರೆಯುತ್ತಾ, ಕಲೆಯನ್ನು ಜೀವಂತವಾಗಿರಿಸಿ, ಅದನ್ನು ಉಳಿಸಿ, ಬೆಳೆಸಿ, ನಾಡಿಗೆ ಕೀರ್ತಿ ತಂದ ಹೆಗ್ಗಳಿಕೆ ಈ ಗ್ರಾಮಗಳದ್ದು. ಅದರಂತೆ ಉತ್ತರ ಕರ್ನಾಟಕದಲ್ಲಿ ಸುರಪುರದ ಅನೇಕ ಹಳ್ಳಿಗಳಲ್ಲಿ ಕಂಚು ಎರಕದ ಕಲೆ ಇಂದಿಗೂ ಜೀವಂತ ಕಲೆಗಳಾಗಿ ಬೆಳೆಯುತ್ತಿದೆ. ಇಷ್ಟೆಲ್ಲ ಸಮಸ್ಯೆಗಳನ್ನು ಎದುರಿಸಿ, ಉಳಿದು ಬಂದಿರುವ ಈ ಕುಲ ಕಸುಬುಗಳು ಉದ್ಯಮದ ಕಲೆಗಳಾಗಿ ಬೆಳೆಯುತ್ತ, ಹಿಂದಿನ ಭವ್ಯತೆಯನ್ನು ಕಳೆದು ಕೊಳ್ಳುತ್ತಿರುವುದು ನೋವಿನ ಸಂಗತಿ. ಇದಕ್ಕೆ ಕಾರಣ ಬರೀ ಶಿಲ್ಪಿಗಳು ಮಾತ್ರವಲ್ಲ, ಅಗ್ಗವಾಗಿ ವಿಗ್ರಹಗಳನ್ನು ಕೊಳ್ಳಲು ಬರುವ ಗ್ರಾಹಕರೂ ಸಹ ಕಾರಣರಾಗುತ್ತಾರೆಂಬುದು ಕಠೋರ ಸತ್ಯ.

ಶಿಲ್ಪಕಲೆಯನ್ನು ಕಲಿಯುವುದು ಸುಲಭವೇನಲ್ಲ ಕ್ರಮಬದ್ಧವಾಗಿ ಅದನ್ನು ಕಲಿಯಲು ಶತಮಾನಗಳ ಹಿಂದೆಯೇ ಎಷ್ಟೋ ಶಾಸ್ತ್ರಗಳ ರಚನೆಗಳಾಗಿದ್ದವು. ಆಯಾ ಪ್ರಾಂತ್ಯಗಳಲ್ಲಿ 'ಶಿಲ್ಪ ಶಾಸ್ತ್ರ'ಗಳ ಅನುಷ್ಠಾನ, ಅಧ್ಯಯನಗಳನ್ನು ನಡೆಸುತ್ತಿದ್ದರು. ಇದರಿಂದ ಕಲಿಕೆ ಸುಲಭವಾದರೂ, ಈ ಶಾಸ್ತ್ರಗಳೆಲ್ಲವೂ ವ್ಯಾಕರಣದಂತೆ ಎಂಬುದನ್ನು ಎಷ್ಟೋ ವೇಳೆ ಮರೆತಂತೆ ಕಾಣುತ್ತದೆ.

ಚಾಲುಕ್ಯ, ಹೊಯ್ಸಳ, ವಿಜಯ ನಗರದ ಕಾಲದಲ್ಲಿ ಶಿಲ್ಪ ಶಾಸ್ತ್ರವನ್ನು ಆಧಾರಿಸಿ ಜೊತೆಗೆ ಶಿಲ್ಪಿಯ ಅಭಿರುಚಿಯನ್ನೂ ಸೇರಿಸುವಂತಹ ಉತ್ತಮ ಶಿಲ್ಪಗಳ ರಚನೆಯಾದವು. ಅನಂತರದ ಕಾಲದಲ್ಲಿ ರಾಜಾಶ್ರಯಗಳಿದ್ದರೂ ಸೌಂದರ್ಯಕ್ಕಿಂತ ವ್ಯಾಕರಣ

ಅಥವಾ ಶಾಸ್ತ್ರಗಳೇ ಪ್ರಾಬಲ್ಯ ಬಂದಂತೆ ಕಾಣುತ್ತದೆ. ಸೌಂದರ್ಯ, ಲಾಲಿತ್ಯ, ಭಾವನೆಗಳು ಗೌಣವಾದುವು. ಒಟ್ಟಾರೆ ಆಭರಣ ಅಲಂಕರಣ, ಆಯುಧಗಳಿಂದ ಪ್ರತಿಮೆ ಸಿದ್ಧವಾದರೂ ಅದರಲ್ಲಿ ಮನಸೆಳೆಯುವ ಅಂಶ ಕಡಿಮೆಯಾಗುತ್ತಾ ಬಂದಿತು.

ಸ್ವಾತಂತ್ರ್ಯಾನಂತರ ಶಿಲ್ಪಿಗಳಿಗೆ ಸೌಕರ್ಯಗಳ ಕೊರತೆಯಿಂದ ಬದುಕು ಭಾರವಾಗಿ, ಎಷ್ಟೋ ಮನೆತನಗಳು ಬೇರೆ ಬೇರೆ ವೃತ್ತಿಗಳನ್ನು ಅನುಸರಿಸಿ, ವಂಶಪಾರಂಪರ್ಯವಾಗಿ ಬಂದ ಈ ಶಿಲ್ಪಕಲೆ, ತನ್ನ ಎಲ್ಲ ಭವ್ಯತೆಯನ್ನೂ ಕಳೆದುಕೊಳ್ಳ ಬೇಕಾಯಿತು. ಎಲ್ಲೋ ಬೆರಳೆಣಿಕೆಯಷ್ಟು ಶಿಲ್ಪಿಗಳು ಕಲೆಯನ್ನು ಉಳಿಸಿಕೊಂಡು ಬಂದರು. ಆದರೆ ಹಳ್ಳಿ ಹಳ್ಳಿಗಳಲ್ಲಿ ಇಂದು ಕೇವಲ ಧಾರ್ಮಿಕ ಅಗತ್ಯಗಳಿಗಾಗಿ ಶಿಲ್ಪಕಲೆ ಉಳಿದು ಬಂದಿತೆಂದೇ ಹೇಳಬೇಕು.

"ಧಾರ್ಮಿಕ ಅಗತ್ಯಗಳಿಗಾಗಿ ಶಿಲ್ಪ" ಎಂದೇ ನಾವು ಈಗಿನ ಸಂಪ್ರದಾಯ ಶಿಲ್ಪಗಳನ್ನು ಗುರುತಿಸಬೇಕಾಗಿದೆ. ಎಷ್ಟೋ ದೇವಾಲಯಗಳನ್ನೂ ಇಂದಿಗೂ ಕಟ್ಟುತ್ತಿದ್ದಾರೆ, ಆದರೆ ಅವು ಕೇವಲ ಧಾರ್ಮಿಕ ಅವಶ್ಯಕತೆಗೆ ಮಾತ್ರ ಸೀಮಿತವಾಗಿದೆ. ಜನಸಾಮಾನ್ಯರಲ್ಲಿ ಇಂತಹ ಕಲೆಗಳ ಬಗ್ಗೆ ವಿಭಿನ್ನ ರೀತಿಯ ಅಭಿರುಚಿಯನ್ನೂ ಕಾಣಬಹುದು ಧಾರ್ಮಿಕ ದೃಷ್ಟಿಯೇ ಪ್ರಧಾನವಾಗಿರುವ ಈ ನಾಡಿನಲ್ಲಿ ಶಿವಾರಪಟ್ಟಣ, ನಾಗಮಂಗಲದಂತಹ ಕಲಾಗ್ರಾಮಗಳು ತಮ್ಮದೇ ಆದ ರೀತಿಯಲ್ಲಿ ಈ ಸಂಪ್ರದಾಯ ಕಲೆಗಳನ್ನು ಬೆಳೆಸುತ್ತಾ ಇದ್ದಾರೆಂಬುದೇ ಒಂದು ಹೆಮ್ಮೆಯ ಸಂಗತಿ.

ಸರಳೀಕರಿಸಿದ ಹೊಯ್ಸಳ ಶೈಲಿಯ ರೇಖಾಚಿತ್ರ ಮತ್ತು ಮರದ ಶಿಲ್ಪ





ಕಲಾಗ್ರಾಮಗಳು - ಶಿವಾರಪಟ್ಟಣ



ಶಿವಾರಪಟ್ಟಣದ ಒಂದು ದೃಶ್ಯ

ಶಿವಾರಪಟ್ಟಣ ಎಲ್ಲ ಪ್ರಾಕಾರಗಳಿಂದ ಶಿಲೆ, ಮರ, ಕಂಚು ಹಿತ್ತಾಳೆಯ ಶಿಲ್ಪಗಳಿಗೂ ಪೂಜಾ ಪರಿಕರಗಳ ತಯಾರಿಕೆಗೂ ಹೆಸರಾದ ಗ್ರಾಮ. ಇದು ಕೋಲಾರ ಜಿಲ್ಲೆಯ ಮಾಲೂರಿನಲ್ಲಿದೆ. ದೇಶದಲ್ಲಿ ಏನೆಲ್ಲ ತೊಂದರೆಗಳು ಬಂದರೂ, ಯಾವ ಬದಲಾವಣೆಗೂ ಪಕ್ಕಾಗದ ಈ ಗ್ರಾಮ ತನ್ನ ತನವನ್ನು ಉಳಿಸಿಕೊಂಡು ಬಂದಿದೆ. ಇಲ್ಲಿಯ ಕಲಾವಿದರು ಎಂತಹ ಸಮಸ್ಯೆಗಳನ್ನಾದರೂ ಎದುರಿಸಿ, ಇರುವುದರಲ್ಲೇ ಸಂತೃಪ್ತ ಜೀವನ ನಡೆಸುವವರು. ಜೀವನ ಮಾರ್ಗಕ್ಕೆ ಕಲೆಯನ್ನೇ ಆದರಿಸಿ ಬದುಕುತ್ತಿದ್ದರೂ ತಮಗೆ ಬಂದ ಅವಕಾಶಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಾ ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ಉಳಿಸಿ, ಬೆಳೆಸುತ್ತಿದ್ದಾರೆ, ತಮ್ಮದೇ ಆದ ಶೈಲಿಗಳಲ್ಲಿ ಕೆಲಸ ಮಾಡುವ ಈ ಶಿಲ್ಪಿಗಳಿಗೆ ಬೇಲೂರು ಹಳೇ ಬೀಡಿನ ಹೊಯ್ಸಳ ಶೈಲಿ ಬಹಳ ಅಚ್ಚುಮೆಚ್ಚು. ಈ ಶೈಲಿಯ ಅಲಂಕಾರಣಗಳನ್ನು ಪುನರ್ ರಚಿಸಲು ಇವರಿಗೆ ಬಹಳ ಆಸಕ್ತಿ. ಅಷ್ಟೇ ಚತುರತೆಯಿಂದ ಕುಸುರಿ ಕೆಲಸ ಮಾಡುವ ನೈಪುಣ್ಯ ಇವರಿಗಿದೆ. ಕರ್ನಾಟಕದ ಹೆಚ್ಚಿನ ದೇವಾಲಯಗಳಲ್ಲಿ ಈ ಗ್ರಾಮದವರು ರಚಿಸಿದ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಿಗಳು ಶಿಲಾಸಂಗ್ರಹದಿಂದ ಹಿಡಿದು, ಮೂರ್ತಿ ಪ್ರತಿಷ್ಠಾಪನದ ಕಾರ್ಯದವರೆಗೂ ಬೇಕಾದ ಎಲ್ಲಾ ವಿಧಿ ವಿಧಾನಗಳನ್ನು ಕಲಿತು, ಶುದ್ಧವಾಗಿ ಆಚರಿಸುತ್ತಾರೆ. ಧ್ಯಾನಶ್ಲೋಕ, ಶಾಸ್ತ್ರಗಳ ಕಂಠಪಾಠ ಮಾಡಿರುವ ಇವರು ಶಾಸ್ತ್ರದ ಆಧಾರದ ಮೇಲೆ ಶಿಲ್ಪ ರಚಿಸುವ ಕೈಂಕರ್ಯ ಕೈಗೊಂಡಿದ್ದಾರೆ. ಸಮಾಜದ ಎಲ್ಲ ವರ್ಗದ ಜನರ ಧಾರ್ಮಿಕ ಅಗತ್ಯಗಳಿಗಾಗಿ ಬೇಕಾಗುವ ಈ ವಿದ್ಯೆಯನ್ನು ಆಚರಿಸಿಕೊಂಡು ಬಂದಿರುವುದು ನಿಜವಾಗಿಯೂ ಮೆಚ್ಚುವಂತಹ ವಿಷಯ.

ಸ್ವಾತಂತ್ರ್ಯ ನಂತರದ ಈ ಅರವತ್ತು ವರ್ಷಗಳಲ್ಲಿ ದೇಶದಲ್ಲಿ ಸಹಜವಾಗಿ ಬದಲಾವಣೆಗಳಾಗಿವೆ. ಕಲೆಯ ಬಗ್ಗೆ ಜನರ ದೃಷ್ಟಿಯೂ ಬದಲಾಗಿದೆ. ಪಾಶ್ಚಾತ್ಯ ಪ್ರಭಾವದಿಂದ ಕ್ರಿಯಾಶೀಲ ಕಲೆಗಳ ಬಗ್ಗೆ

ಕಲಾವಿದರೂ ವಿಮರ್ಶಕರೂ ಚಿಂತಿಸುತ್ತಿದ್ದಾರೆ. ಆದರೆ ಸಂಪ್ರದಾಯ ಕಲೆಗಳನ್ನು ಪಾಶ್ಚಾತ್ಯ ದೃಷ್ಟಿಕೋನಗಳಿಂದ ವಿಮರ್ಶಿಸಲು ಸಾಧ್ಯವೆ? ಸಂಪ್ರದಾಯಕಲೆಗಳನ್ನು ಬೇರೆಯಾಗಿಯೇ ಪರಿಗಣಿಸುವ ಕಾಲ ಈಗ ಬಂದಿದೆ. ಇದಕ್ಕೆ ಶಿಲ್ಪಿಯ ಮನೋಭಾವವೇ ಕಾರಣ. ಬೇರೆ ಎಲ್ಲಾ ಪ್ರಾಕಾರಗಳ ಕಲಾವಿದರಿಗಿದ್ದಂತೆ ಕಲಾಪ್ರಪಂಚದಲ್ಲಿ ನಡೆಯುತ್ತಿರುವ ಬದಲಾವಣೆಗಳು ಇವರನ್ನೂ ಕಲಕಿವೆ. ಆದರೆ ಸಮಾಜಕ್ಕೆ ಬದ್ಧರಾಗಿರುವ ಈ ಕಲಾವಿದರು ತಮ್ಮ ಅಭಿರುಚಿ, ಆಸಕ್ತಿಗಳನ್ನು ಸಮಾಜದ ಅವಶ್ಯಕತೆಗಳಿಗೆ ಪರಿವರ್ತನಗೊಳ್ಳಲೇ ಬೇಕಾಗಿದೆ. ಈ ಸಂಪ್ರದಾಯ ಕಲೆಯ ಮಹತ್ವ ತಿಳಿದ ಶಿಲ್ಪಿಗಳು ಬೇರೆಯವರು ಅದನ್ನು ಕುಶಲಕಲೆಯಾಗಿ ಪರಿಗಣಿಸುತ್ತಿರುವ ಬಗ್ಗೆ ಅರಿವಿದೆ, ದುಃಖವಿದೆ. ಇದನ್ನು ಗುರುತಿಸಬೇಕಾದವರು ಯಾರು? ಶಿಲ್ಪಿಗಳಿಗೆ ಹೊಸ ಆಲೋಚನೆ, ಹೊಸ ದೃಷ್ಟಿ ಕೋನಗಳ ಅರಿವಿದ್ದರೂ, ಸಮಾಜಕ್ಕೆ ಅಂದರೆ ತಮ್ಮಲ್ಲಿ ಬರುವ ಗ್ರಾಹಕರ ಅಭಿರುಚಿಗೆ ಬದ್ಧರಾಗಲೇ ಬೇಕಾಗುತ್ತದೆ. ಇಲ್ಲಿ ಹಣ ಮತ್ತು ಸಮಯಗಳೂ ಮುಖ್ಯವಾಗುತ್ತದೆ. ಇದು ಅವರ ಜೀವನದ ಪ್ರಶ್ನೆಯಾಗಿರುವುದರಿಂದ ಬೇರೆ ಆಲೋಚನೆಗಳಿಗೆ ಅಲ್ಲಿ ಅವಕಾಶವೇ ಇಲ್ಲ.

ಕಲ್ಲಿನ ಕಥೆ

ಕಲ್ಲು ಗಡಸು ಮಾಧ್ಯಮ. ಎಷ್ಟೇ ಮೃದು ಎಂದರೂ ಕೆಲಸ ಮಾಡಿದವರಿಗೇ ಗೊತ್ತು ಅದನ್ನು ಬಳಸುವ ರೀತಿ. ಇದು ಮೃದುವಾದ ಕಲ್ಲಿನಿಂದ ಹಿಡಿದು ಬಹಳ ಗಡುಸು ಕಲ್ಲಿನವರೆಗೆ ಬಳಪದ ಕಲ್ಲಿನಲ್ಲಿ ವೈವಿಧ್ಯತೆಯಿದೆ. ಜಾಣ್ಮೆಯಿಂದ ಕಲ್ಲನ್ನು ಬಳಸಿ, ತಾಳಿಕೆ ಬಾಳಿಕೆಗಳಿಗೆ ಹೆಚ್ಚು ಗಮನ ಕೊಟ್ಟಾಗ ಸಹಜವಾಗಿ ವಸ್ತ್ರಾಭರಣಗಳಿಂದ ಒತ್ತು ಕೊಡಬೇಕಾಗುತ್ತದೆ (Reinforcement), ಅಂತಹ ಜಾಣ್ಮೆ ಏಕೆ ಮಾಡಿದ್ದಾರೆಂದು ಯೋಚಿಸಬೇಕಲ್ಲವೆ ? ಬೇಡಿಕೆಗೆ ಅನುಗುಣವಾಗಿ ಗ್ರಾಹಕರ ಅಭಿರುಚಿಗೆ, ಅವಶ್ಯಕತೆಗೆ ತಕ್ಕಂತೆ ಕಲ್ಲನ್ನು ಆರಿಸಿ, ವಿಗ್ರಹಗಳನ್ನು ರಚಿಸುವ ಜಾಣ್ಮೆ ಈ ಶಿಲ್ಪಿಗಳಿಗೆ ಒಲಿದಿದೆ.



ಎಷ್ಟು ದೊಡ್ಡ ಬಂಡೆಯನ್ನಾದರೂ ಕಡೆಯಬಲ್ಲ ಶಿವಾರಪಟ್ಟಣದ ಶಿಲ್ಪಿಗಳು

ದೇವಾಲಯದ ಬೇಡಿಕೆಯಾದರೂ ಹೇಗಿರುತ್ತದೆ? ಶಿವ ಎಂದರೆ ಲಿಂಗರೂಪಿ, ಇದರಲ್ಲಿ ಯಾವ ರೀತಿಯ ಕಲೆಯ ಅಭಿವ್ಯಕ್ತಿಗೂ ಅವಕಾಶವೇ ಇಲ್ಲ, ಇದನ್ನೂ ಮಾಡಬೇಕಾಗುತ್ತದೆ. ಇದರಲ್ಲಿ ಪೀಠದಿಂದ ಹಿಡಿದು ಮೇಲೆ ಕಾಣುವ ಲಿಂಗದವರೆಗೂ ಬರೀ ಲೆಖ್ಖಾಚಾರವೇ ಮುಖ್ಯ. ವಿಷ್ಣು ಎಂದರೆ ಶಂಖ, ಚಕ್ರ, ಪದ್ಮ ಗದಾಧಾರಿ (ಅದರಲ್ಲಿ ೧೬ ಅವತಾರಗಳಿವೆ), ಲಕ್ಷ್ಮಿ, ಸರಸ್ವತಿ, ಹೀಗೆ ದೇವತೆಗಳ ವರ್ಣನೆಗೆ ಅನುಗುಣವಾಗಿ ಶಿಲ್ಪರಚಿಸಬೇಕು. ಇಂತಹ ಬೇಡಿಕೆಗಳಲ್ಲಿ ಕೇವಲ ವರ್ಣನೆಗೆ ಪ್ರಾಮುಖ್ಯತೆ, ಸೌಂದರ್ಯಕ್ಕಂತೂ ಖಂಡಿತ ಇರುವುದಿಲ್ಲ, ಭಕ್ತಿ ಭಾವನೆಯೇ ಮುಖ್ಯವಾಗಿ, ಕೊಡುವ ಹಣವೂ ಕಡಿಮೆಯಾದಾಗ ಸೌಂದರ್ಯ ಪ್ರಜ್ಞೆಗೆ ಅವಕಾಶ ಕಡಿಮೆ, ಅವರಿಗೆ ಎಲ್ಲವೂ ಭವ್ಯವಾಗಿಯೇ ಕಾಣಬೇಕಲ್ಲವೆ? ಭಕ್ತಾದಿಗಳಿಂದ ಹಣ ಸಂಗ್ರಹಿಸಿ, ಎಷ್ಟು ಕಡಿಮೆ ವೆಚ್ಚದಲ್ಲಾದರೆ ಅಷ್ಟು ಕಡಿಮೆ ವೆಚ್ಚದಲ್ಲಿ ವಿಗ್ರಹ ಮಾಡಿಸುವ ತವಕ. 'ದೇವರ ಸೇವೆ ಮಾಡಬೇಕು' ಎಂದು ಬೋಧಿಸುವ ಭಕ್ತರಿಗೇನು ಕಡಿಮೆಯಿಲ್ಲ. ಅಂದ ಮೇಲೆ ಶಿಲ್ಪಿ ಉಪವಾಸವಿರಬೇಕೆ? ಈ ಭಕ್ತಾದಿಗಳಿಗೆ ಕಲ್ಲು ಸಂಗ್ರಹಣೆಯ ಬಗ್ಗೆಯಾಗಲೀ, ಶಿಲ್ಪಿ ರಚಿಸಲು ಬೇಕಾಗುವ ಆಯುಧಗಳ ಬಗ್ಗೆಯಾಗಲೀ ಯಾವ ತಿಳುವಳಿಕೆಯೂ ಇರುವುದಿಲ್ಲ. ಅದನ್ನು ತಿಳಿದುಕೊಳ್ಳಬೇಕೆಂಬ ಅವಶ್ಯಕತೆಯೂ ಇಲ್ಲ. ಹೀಗಾಗಿ ಈ ಎಲ್ಲ ಸಮಸ್ಯೆಗಳನ್ನೂ ಎದುರಿಸಿ, ಶಿಲ್ಪ ರಚಿಸಿ, ಅದನ್ನು ಮಾರಾಟಮಾಡಿ, ಅದರಿಂದಲೇ ಬದುಕುಸಾಗಿಸುವ ಈ ಶಿಲ್ಪಿಗಳ ಕಷ್ಟವನ್ನು ಕೇಳುವವರು ಯಾರು?

ಕಲ್ಲು ಸಂಗ್ರಹ

ಇದಂತೂ ಬಹಳ ತ್ರಾಸವಾದ ಕೆಲಸ. ಗಣಿಗಳ ಬಳಿಹೋಗಿ, ಕಲ್ಲು ತೆಗೆಯುವವರಬಳಿ ವ್ಯವಹಾರ ಕುದುರಿಸಿ, ಅಲ್ಲಿಂದ ತಾವು ಕೆಲಸ ಮಾಡುವ ಜಾಗಕ್ಕೆ ಸಾಗಿಸಲು, ಲಾರಿ, ಅದರ ಬಾಡಿಗೆ, ಸರ್ಕಾರದ ಅನುಮತಿ, ಒಂದೇ ಎರಡೇ, ಇಂತಹ ಹಲವಾರು ಸಮಸ್ಯೆಗಳನ್ನು ಪ್ರತಿ ಹಂತದಲ್ಲೂ ಎದುರಿಸಿ, ಕಲ್ಲುತಂದು, ಅದನ್ನು ಸ್ವಲ್ಪವೂ ಪೋಲಾಗದಂತೆ ಉಪಯೋಗಿಸುವ ಜಾಣ್ಮೆ ಬೇಕು. ಹೀಗೆ ಕಲ್ಲು ಸಂಗ್ರಹದ ಬಗ್ಗೆ ಇರುವ ಎಲ್ಲ ಸಮಸ್ಯೆಗಳಿಗೂ ಸರಕಾರಕ್ಕೆ ಮನವಿ ಮಾಡಿಕೊಂಡಿರುವ ರಾಶಿ ರಾಶಿ ಬೇಡಿಕೆಗಳಿದ್ದರೂ, ಯಾವ ಇಲಾಖೆಯೂ ಇದಕ್ಕೆ ಗಮನ ಕೊಡಲು ಮುಂದೆ ಬರುತ್ತಿಲ್ಲ. "ಹೇಗೋ ಕಲ್ಲು ತರುತ್ತಾರೆ, ಕೆಲಸ ಮಾಡುತ್ತಾರೆ" ಅದರ ಗೊಡವೆ ನಮಗೇಕೆ? ಎಂದು ಸರಕಾರ, ಸಾರ್ವಜನಿಕರು ಕಣ್ಣುಮುಚ್ಚಿಕುಳಿತಿರುವುದು ಶಿಲ್ಪಿಗಳ ದೌರ್ಭಾಗ್ಯ.

ಆಯುಧ ಮತ್ತು ಪರಿಕರಗಳು

ಇವುಗಳನ್ನು ಶಿಲ್ಪಿ ತಾನೇ ತಯಾರಿಸಿಕೊಳ್ಳಬೇಕು. ಅಂಗಡಿಗಳಲ್ಲಿ ದೊರೆಯುವ ಕಂಬಿಗಳನ್ನು ತಂದು ತಮಗೆ ಬೇಕಾದ ರೀತಿ ಆಯುಧಗಳನ್ನು ತಯಾರಿಸಿಕೊಳ್ಳುವ "ಕಮ್ಮಾರಿಕೆ" ಕೂಡ ಇವರಿಗೆ ಸಿದ್ಧಿಯಾಗಿದೆ. ಎಷ್ಟು ದೊಡ್ಡ ಕಲ್ಲನ್ನಾದರೂ, ಯಂತ್ರಗಳ ಸಹಾಯವಿಲ್ಲದೆ, ಬೇಕಾಗುವ ಅಳತೆಗೆ ತುಂಡು ಮಾಡುವ ಚತುರತೆ ಈ ಶಿಲ್ಪಿಗಳಿಗಿದೆ. ಸಮಸ್ಯೆಗಳ ಸರಮಾಲೆಯೇ ಪಕ್ಕದಲ್ಲಿದ್ದರೂ, ಏನೂ ಕೊರತೆಯಿಲ್ಲವೇನೋ ಎನ್ನುವ ರೀತಿಯಲ್ಲಿ ಈ ಶಿಲ್ಪಿಗಳು ಕೆಲಸ ಮಾಡುತ್ತಿರುತ್ತಾರೆ. ಇವರ 'ವಿದ್ಯೆ' ಎಂದರೆ ಬರೀ ಶಿಲ್ಪಕಲೆ. ಅಕ್ಷರ ವಿದ್ಯೆಗೆ ಅಷ್ಟೊಂದು ಗಮನಕೊಡದ ಇವರಲ್ಲಿ ಕೆಲವರು ಆಸಕ್ತಿಯಿಂದ ಓದಿ ಡಿಗ್ರಿ, diplomaಗಳನ್ನು ಪಡೆದು ಬಂದಿದ್ದರೂ, ದಿನ ನಿತ್ಯದ ಇವರ ಕಾರ್ಯಕ್ಕೆ ಈ ಯಾವ ವಿದ್ಯೆಗಳ ಪ್ರಭಾವವೂ ಆಗಿಲ್ಲ.

ಶಿಲ್ಪಿಗಳ ಅಗ್ರಹಾರವೇ ಶಿವಾರಪಟ್ಟಣದಲ್ಲಿದೆ. ಒಂದು ರಸ್ತೆಯ ಎರಡೂ ಕಡೆಗಳ ಮನೆಗಳ ಮುಂದಿನ ಜಾಗವೇ ಇವರು ಕೆಲಸ ಮಾಡುವ ಸ್ಥಳ. ಕೆಲವರು ಕೆಲಸ ಮಾಡಲು ಜಾಗಗಳನ್ನು ಕೊಂಡು, ಕಾರ್ಯಾಗಾರ ಮಾಡಿಕೊಂಡಿದ್ದಾರೆ. ವ್ಯಾಪಾರೀ ಮನೋಭಾವವನ್ನೇ ಮುಖ್ಯವಾಗಿಟ್ಟುಕೊಂಡು, ಸಮಾಜದ ಅವಶ್ಯಕತೆಗಳಿಗೆಂದೇ ಕೆಲಸ ಮಾಡುತ್ತಿರುವ ಇವರಿಗೆ ಬದುಕುವ ಮಾರ್ಗವೂ ಅದೆ. ಸ್ಪರ್ಧಾತ್ಮಕ ಮನೋಭಾವ ಸಹಜವಾಗಿ ಬಂದು ಇಲ್ಲಿ ಶಿಲ್ಪಕಲೆ ಬರೀ ವ್ಯಾಪಾರವಾಗಿದೆ. ಆದರೂ ಉಳಿದು ಬೆಳೆಯುತ್ತಲೂ ಇದೆ. ನಮ್ಮ ಜನಗಳು ಕೂಡ ಅವರ ಯಾವ ಸಮಸ್ಯೆಗಳನ್ನೂ ಅರ್ಥಮಾಡಿಕೊಳ್ಳದೆ, ಪೂಜೆಗೆಂದು ಪ್ರತಿಮೆಗಳನ್ನು ಸುಲಭ ಬೆಲೆಯಲ್ಲಿ ಕೊಂಡುಕೊಳ್ಳಲು ಬರುತ್ತಾರೆ. ಹೀಗಾಗಿಯೂ ಶಿಲ್ಪಿಗಳು ಬದುಕ ಬೇಕಾಗಿದೆ. ಸಮಾಜದಲ್ಲಿ ತಮ್ಮನ್ನು "ಕಲಾವಿದ" ಎಂದು ಗುರುತಿಸುವುದಿಲ್ಲ ಎಂಬ ಕೊರಗು, ಸರ್ಕಾರವಾಗಲೀ, ಸರ್ಕಾರದಿಂದ ರಚಿತವಾದ ಅಕಾಡಮಿಯಾಗಲೀ ಸೂಕ್ತ ಅವಕಾಶಗಳನ್ನು ಕೊಡುತ್ತಿಲ್ಲ ಎಂಬ ವ್ಯಥೆ.

ಒಂದಂತೂ ನಿಜ. ಜನಗಳಿಗಾಗಿಯೇ ಕೆಲಸ ಮಾಡುತ್ತಿರುವ ಸಂಪ್ರದಾಯ ಶಿಲ್ಪಿಗಳ ಹಲವಾರು ಸಮಸ್ಯೆಗಳು ಇಂದಿಗೂ ಇದೆ. ಇದಕ್ಕೆ ಪರಿಹಾರವೇ ಇಲ್ಲವೆ? ಎಂಬ ಪ್ರಶ್ನೆಗೆ ಉತ್ತರ - ಪರಿಹಾರ ಇದೆ, ಆದೂ ಶಿಲ್ಪಿಗಳ ಕೈಯಲ್ಲೇ ಇದೆ. ಜನಗಳಿಗಾಗಿಯೇ ಕೆಲಸ ಮಾಡಬೇಕಾದರೂ, ಅವರವರ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವ ಶಿಲ್ಪಿಗಳು "ಕಲಾದೃಷ್ಟಿ, ಸೌಂದರ್ಯಪ್ರಜ್ಞೆ" ಬೆಳೆಸಿಕೊಳ್ಳಲು ದಿನದ ಸ್ವಲ್ಪ ಭಾಗವನ್ನಾದರೂ ಮುಡುಪಾಗಿಟ್ಟು, ಮಾಡುವ ಶಿಲ್ಪದಲ್ಲೇ ಇದೆಲ್ಲ ಬೆರಸಿ,





ನಾಗಮಂಗಲದ ಶ್ರೀ ಶ್ರೀನಿವಾಸಾಚಾರ್ಯರ ಶಕುನ ಶಾರದೆ

ಆಕರ್ಷಕವಾಗಿ ಮಾಡುವಂತಾದರೆ ಬರುವ ಗ್ರಾಹಕರು ಅದನ್ನೇ ಕೊಳ್ಳಲು ಪ್ರಾರಂಭಿಸುತ್ತಾರೆ. ಇದರಿಂದ ಗ್ರಾಹಕರ ಅಭಿರುಚಿಯನ್ನು ಬೆಳೆಸಬಹುದು, ತಮ್ಮ ಶಿಲ್ಪಗಳ ಬೆಲೆಯನ್ನೂ ಏರಿಸಿಕೊಳ್ಳಬಹುದು. ಜನರ ದೃಷ್ಟಿಯನ್ನು ಬದಲಾಯಿಸಲು ಶಿಲ್ಪಿಗೆ ಮಾತ್ರ ಸಾಧ್ಯ. ಮತ್ತು ಅವರದೇ ಜವಾಬ್ದಾರಿ. ಶಿಲ್ಪಿಗಳು ಒಟ್ಟುಗೂಡಿ ಸಂಘವನ್ನು ರಚಿಸಿಕೊಂಡು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸನ್ನಾಹ ಮಾಡುವುದು ಒಳಿತು. ಸ್ಪರ್ಧಾತ್ಮಕ ಮನೋಭಾವವನ್ನು ಬಿಟ್ಟು ಸಮಾಜದಲ್ಲಿ ಅಭಿರುಚಿಯನ್ನು ಬೆಳೆಸಿದಾಗ, ಈ ಶಿಲ್ಪಿ ಸಮುದಾಯ ಮಾನ್ಯತೆ ಪಡೆಯುವುದರಲ್ಲಿ ಅನುಮಾನವಿಲ್ಲ. ಸಂಪ್ರದಾಯ ಶಿಲ್ಪಕ್ಕೆಂದೇ ಅಕಾಡಮಿಯಲ್ಲಿ, ಕೇಂದ್ರ ಸರ್ಕಾರದ ಕರ ಕುಶಲ ಮಂಡಲಿಯಲ್ಲಿ ವಿಶೇಷ ಅವಕಾಶಗಳಿವೆ. ಅದನ್ನು ಬಳಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಇವರ ಕೈಯಲ್ಲೇ ಇದೆ. ಈ ಶಿಲ್ಪಿಗಳಲ್ಲಿ ಶಕ್ತಿಯಿಲ್ಲವೆಂದಲ್ಲ. ಎಂತಹ ಕಲ್ಲಿನಲ್ಲಿ ಹೇಗೆ ಕೆಲಸ ಮಾಡಬೇಕೆಂಬ ಜಾಣ್ಮೆಯಿದೆ. ಯಾವ ಅಳತೆಯ ಪ್ರತಿಮೆಯನ್ನಾದರೂ ಮಾಡುವ ಕುಶಲತೆಯಿದೆ. ವಿಶೇಷವಾದ ಶಿಲ್ಪಗಳನ್ನು ಮಾಡುವ ಅವಕಾಶ ಸಿಕ್ಕಾಗ ಪುರಾತನ ಶಿಲ್ಪಗಳನ್ನು ಕೂಲಂಕುಶವಾಗಿ ಗಮನಿಸಿ, ಪ್ರತಿಕೃತಿ ಮಾಡಿದರೂ ತಪ್ಪಿಲ್ಲ, ಆಗ ಊರಿಗೆ ಊರೇ ನಿಜವಾದ ಅರ್ಥದಲ್ಲಿ 'ಕಲಾಗ್ರಾಮ'ವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನೂ ಆಕರ್ಷಿಸಬಹುದು. ಶಿಲೆಯಲ್ಲದೆ ಕಂಚಿನ ಪ್ರತಿಮೆ ಮಾಡುವುದು, ಕವಚಗಳನ್ನೂ ಮಾಡುವುದು, ರಥ ನಿರ್ಮಾಣ, ಮರದ ಕೆತ್ತನೆ ದೇವಾಲಯಗಳನ್ನು ಕಟ್ಟುವುದು ಎಲ್ಲಾ ಕಲೆಗಳೂ ಇವರಿಗೆ ಕರತಲಾಮಲಕವಾಗಿದೆ. ಸಂಪ್ರದಾಯ ಶೈಲಿಗಳನ್ನು ಅನುಸರಿಸಿ ಕೆಲಸ ಮಾಡಲು ಪ್ರಾರಂಭಿಸಿದರೆ ನಾಡು ಧನ್ಯ.

ನಾಗಮಂಗಲ

ನಾಗಮಂಗಲ, ಬೈರಮಂಗಲಗಳು ಬೆಂಗಳೂರಿನ ಸಮೀಪವೇ ಇದೆ. ನಾಮಗಂಗಲದಲ್ಲಿ ಸುಮಾರು ವರ್ಷಗಳ ಹಿಂದೆ ಬಹಳ ಜನ ಶಿಲ್ಪಿಗಳಿದ್ದು, ಕಲಾಗ್ರಾಮವೆಂದೇ ಗುರುತಿಸಲ್ಪಟ್ಟಿತ್ತು. ಕ್ರಮೇಣ ಕೆಲಸಗಾರರು ಬೆಂಗಳೂರು, ಮೈಸೂರುಗಳಿಗೆ ವಲಸೆ ಹೋಗಿದ್ದುದರಿಂದ ಈಗ ಬೆರಳೆಣಿಕೆಯಷ್ಟು ಮಾತ್ರ ಕೆಲಸಗಾರರಿದ್ದಾರೆ, ಬರೀ ಧಾರ್ಮಿಕ ಅವಶ್ಯಕತೆಗಳಲ್ಲಿ ತೊಡಗಿರುವ ಇವರಿಗೆ ಹೆಚ್ಚಿನ ನಿರೀಕ್ಷೆಗಳೂ ಇಲ್ಲ ದೇವರು ಕೊಟ್ಟಿರುವುದರಲ್ಲಿ ನಮಗೆ ತೃಪ್ತಿಯಿದೆ, ಸ್ವತಂತ್ರವಾಗಿ ಕೆಲಸ ಮಾಡುವುದೇ ನಮಗೆ ಇಷ್ಟ ಎಂದು, ನಾನು ನಾಗಮಂಗಲವನ್ನು ನೋಡಿ ಬರೋಣ ಎಂದು ಹೋದಾಗ ಅಲ್ಲಿಯ ಶಿಲ್ಪಿಯೊಬ್ಬರು ಹೇಳಿದರು. ಅಲ್ಲಿಯ ಶ್ರೀ ವರದಾಚಾರ್ಯ ಎಂಬುವರನ್ನು ಗುರುತಿಸಿ, ಅಕಾಡಮಿ ಅವರಿಗೆ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ನಾಗಮಂಗಲ ಬಿಟ್ಟು ಬೆಂಗಳೂರಿಗೆ ಬಂದು ನೆಲೆಸಿದ ದಿವಂಗತ ಶ್ರೀ ಎನ್.ಪಿ. ಶ್ರೀನಿವಾಸಾಚಾರ್ಯರನ್ನು ಅಕಾಡಮಿಯ ಅಧ್ಯಕ್ಷರಾಗಿ, ಪರಮಗುರು ಪ್ರಶಸ್ತಿ ಪಡೆದಿರುವ ಶ್ರೀ ನೀಲಕಂಠಾಚಾರ್ಯರನ್ನೂ 'ನಮ್ಮೂರಿನವರು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಮೈಸೂರಿನಲ್ಲೂ ಎಲ್ಲ ಮಾಧ್ಯಮಗಳಲ್ಲೂ ಕೆಲಸ ಮಾಡುವ ಸಂಪ್ರದಾಯ ಶಿಲ್ಪಿಗಳಿದ್ದಾರೆ. ಅಲ್ಲಿಯ ಸುತ್ತ ಮುತ್ತಲ ಹಳ್ಳಿಗಳ

ಧಾರ್ಮಿಕ ಬೇಡಿಕೆಗಳಿಗೆ ಕೆಲಸ ಮಾಡುವ ಇವರು. ಮೈಸೂರಿನ ಜನಪ್ರಿಯ ಶೈಲಿಯೆಂದು ಗುರುತಿಸಲ್ಪಡುವ ಶೈಲಿಯಲ್ಲಿ ಕೆಲಸ ಮಾಡುತ್ತಾರೆ. ಇವರೆಲ್ಲರಿಗೂ ಶ್ರೀ ಸಿದ್ದಲಿಂಗಸ್ವಾಮಿಗಳೇ ಆದರ್ಶ.

ಉತ್ತರ ಕರ್ನಾಟಕ ಗುಲ್ಬರ್ಗಾದ ಜಾನಪದ ಕಂಚಿನ ಎರಕ ಹಾಗೂ ಮರದ ಕೆತ್ತನೆ ಕಲೆ

ಗುಲ್ಬರ್ಗಾದ ಹಾಗು ಗಾಜರ್ ಕೋಟ್, ಸುರಪುರ ಸುತ್ತ ಮುತ್ತ ಕೆಲವು ಎರಕದ ಕೆಲಸ ಮಾಡುವ ಶಿಲ್ಪಿಗಳು ಈಗಲೂ ಇದ್ದಾರೆ. ಈ ಕಲಾವಿದರು ಬಹಳಷ್ಟು ಪರಿಣಿತರು. ಎರಕವಾದ ಮೇಲೆ ಅವರುಗಳು ಎಂದಿಗೂ ಕೆಲಸ ಮಾಡುವುದಿಲ್ಲ. ಶಾಸ್ತ್ರ ಗ್ರಂಥಗಳ ಪ್ರಕಾರ ಎರಕ ಮಾಡಿದ ಪ್ರತಿಮೆಯ ಮೇಲೆ ಉಗುರಿನ ಗುರುತು ಸಹ ಆಗಬಾರದು. ಆದರೆ ಇತ್ತೀಚಿನ ದಿನಗಳಲ್ಲಿ ನಮ್ಮ ಮೈಸೂರು ಬೆಂಗಳೂರುಗಳಲ್ಲಿ ಎರಕವಾದ ಮೇಲೆ 'ನಕಾಶಿ' ಮಾಡುವುದೇ ಒಂದು ವಿಶೇಷವಾಗಿದೆ. ಎರಕ ಹೊಯ್ಯುವಾಗ ಇದರಿಂದ ಸುಲಭವಾದರೂ, ಎಷ್ಟೋಬಾರಿ ಮೂಲಕೃತಿಗೆ ಚ್ಯುತಿ ಬರುವ ಸಂದರ್ಭಗಳು ಬಂದು ಸಮಸ್ಯೆಗಳು ಎದುರಾಗಬಹುದು. ಆದರೆ ಉತ್ತರ ಕನ್ನಡದ ಈ ಹಳ್ಳಿಗಳಲ್ಲಿ ಜಾನಪದ ಶೈಲಿಯ ಪ್ರತಿಮೆಗಳು, ಸಂಪ್ರದಾಯಶೈಲಿಯ ದೇವರ ಪ್ರತಿಮೆಗಳು, ಅದರಲ್ಲೂ ದೊಡ್ಡ ದೊಡ್ಡ ಪ್ರಮಾಣದ ಟೊಳ್ಳು ಪ್ರತಿಮೆಗಳನ್ನು ಮಾಡುವ ವಿಶೇಷ ಕಲೆ ಇವರಿಗೆ ಕರಗತವಾಗಿದೆ. ಹಾಗಾಗಿ ಈ ಭಾಗದ ಜನರು ತಯಾರಿಸುವ ವಿಶೇಷವಾಗಿ ಜಾನಪದ ಶೈಲಿಯ ಪೂಜಾಪರಿಕರಗಳಲ್ಲಿ, ವಿಗ್ರಹಗಳಲ್ಲಿ ಒಂದು ಜೀವಂತಿಕೆಯಿದೆ. ಜೊತೆಗೆ ಕಲಾವಿದರ ಸ್ವಂತಿಕೆಯೂ ಸೇರಿ ಈ ಎರಕದ ಕಲೆ ಉನ್ನತಮಟ್ಟದಲ್ಲಿಯೇ ಇದೆಯೆಂಬುದು ಸಂತೋಷದ ವಿಷಯ.

ಇಂತಹ ವಿಶೇಷ ಕಲೆಯನ್ನು ಗುರುತಿಸಿ, ಅದನ್ನು ಕಲಿತು, ಕೆಲವು ಆಸಕ್ತರಿಗೂ ಕಲಿಸಿ, ಅದರ ಪ್ರಚಾರ ಮಾಡಿದ ಕೀರ್ತಿ ಗುಲ್ಬರ್ಗದ ಸಂಪ್ರದಾಯ ಚಿತ್ರಕಲಾವಿದ, ರಾಷ್ಟ್ರೀಯ ಖ್ಯಾತಿ ಪಡೆದ ಶ್ರೀ ವಿಜಯಹಾಗರ ಗುಂಡಿಗೆಯವರದು. ಕಲಾವಿದ ಶ್ರೀ ಪುಷ್ಪರಾಜ್ ಬೇತಾಲ್ ಎಂಬುವರು ದೆಹಲಿಯಿಂದ ಬಂದಿದ್ದರು. ಈ ಭಾಗದ ಎರಕದ ಕಲೆಯ ಅಧ್ಯಯನ ಮಾಡಲು ಒಂದು ಅಧ್ಯಯನ ನಡೆಯಿತು, ನಾಡೋಜ ನಾಗಣ್ಣ ಬಡಿಗೇರರ ಪುತ್ರ ಮಾನಯ್ಯ ಬಡಿಗೇರ್ ಅವರು ಸೇರಿ ಅನೇಕ ಚಿತ್ರ ಕಲಾವಿದರಿಗೆ ಈ ಎರಕದ ಕಲೆ ಕಲಿಸಿ, ಅವರನ್ನು ಕಂಚು ಶಿಲ್ಪ ಮಾಡುವ ಶಿಲ್ಪಿಯನ್ನಾಗಿಸಿದುದೂ ವಿಜಯ್ ಅವರ ಕೊಡುಗೆ.

ಈ ಶೈಲಿಯ ಜೊತೆ ಪಾಶ್ಚಿಮಾತ್ಯ ಕೋರ್ ಕಟ್ಟುವ ಪದ್ಧತಿ ಅಳವಡಿಸಿ ಎರಕ ಮಾಡುವ ಪದ್ಧತಿ ಸಂಪ್ರದಾಯದೊಂದಿಗೆ ಹೊಸತನವನ್ನು ಅಳವಡಿಸಿಕೊಂಡು ನಾನು ೫ ಇಂಚು ಎತ್ತರದ (ಸಣ್ಣ ಪ್ರಮಾಣದ) ಸರ್. ಎಂ. ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಮಾಡಿ, ಫೈಬರ್‌ಗ್ಲಾಸ್‌ನಿಂದ ಪ್ರತಿಕೃತಿಗಳನ್ನು ತೆಗೆಯುತ್ತಿದ್ದೆ, ವಿಜಯ್ ಅವರು ಅದನ್ನು ಕಂಚಿನಲ್ಲಿ ಎರಕ ಮಾಡಿಕೊಟ್ಟಿದ್ದಾರೆ.





ಭೀಮಣ್ಣ ಕಂಬಾರರವರ ಕಂಚಿನಶಿಲ್ಪ

ಎರಕ ಮಾಡಿರುವುದು ಎಷ್ಟು ಚೆನ್ನಾಗಿದೆಯೆಂದರೆ ಮೂಲ ಶಿಲ್ಪಕ್ಕೆ ಸ್ವಲ್ಪವೂ ಚ್ಯುತಿ ಬಂದಿಲ್ಲ, ಅದೂ ಟೊಳ್ಳು ಎರಕ ಮತ್ತು ರೂಪ ಶಿಲ್ಪ, ಅಂದ ಮೇಲೆ ಈ ಎರಕದ ಕೆಲಸ ಎಷ್ಟು ಪರಿಪೂರ್ಣ ವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಯಾದಗೀರ ಗಾಜರಕೋಟೆಯ ಸುಪ್ರಸಿದ್ಧ ಕಲಾವಿದ ಶ್ರೀ ಭೀಮಣ್ಣ ಕಂಬಾರರನ್ನೂ ಶ್ರೀ ಅವಣ್ಣೆಪ್ಪ ಪತ್ತಾರರನ್ನೂ ನೆನೆಯಬಹುದು.

ಹರಕಟ್ಟಿ ಎಂಬಲ್ಲಿ ಈ ಎರಕದ ಕೆಲಸ ಬಹಳ ಉತ್ತಮವಾಗಿತ್ತು, ರಂಗಂಪೇಟೆಯೆಂಬಲ್ಲೂ ಇತ್ತು. ಈಗ ಇರುವ ಒಂದೇ ಒಂದು ಜಾಗ ಗಾಜರ್‌ಕೋಟ್ ಎಂದು ವಿಜಯ ಅವರು ತಾವು ಅಧ್ಯಯನ ಮಾಡಿದ ಆಧಾರದ ಮೇಲೆ ತಿಳಿಸಿದರು.

ಈ ಭಾಗದ ಇನ್ನೊಂದು ಆಕರ್ಷಕ ಕಲೆಯೆಂದರೆ ಮರದ ಶಿಲ್ಪ. ಮರದ ಕೆತ್ತನೆಯೊಂದರೆ ಅಲಂಕಾರಿಕ ಕೆತ್ತನೆ, ಪಶು, ಪಕ್ಷಿ, ಪ್ರಾಣಿಗಳನ್ನು ಹೂಬಳ್ಳಿಗಳನ್ನೂ ಒಳಗೊಂಡಂತೆ ಬಾಗಿಲುಗಳು, ಪಾಲಕಿಗಳು ರಥಗಳು, ಕೆಲವೊಮ್ಮೆ ಬರೀ ಜೋಡಣೆಯಲ್ಲೇ ಮಾಡುವ ಕೆಲಸಗಳು. ನಾಡೋಜ ನಾಗಣ್ಣ ಶಿಲ್ಪಿಯವರ ಕಾರ್ಯಾಗಾರದಲ್ಲಿ ನಿತ್ಯವೂ ಹಲವಾರು ಶಿಲ್ಪಿಗಳು ಮರದ ಕೆತ್ತನೆ ಮಾಡುತ್ತಾ ಆ ಪ್ರದೇಶದ ಬೇಡಿಕೆಗಳನ್ನು ಪೂರೈಸುವುದರಲ್ಲಿ ನಿರತರಾಗಿರುತ್ತಾರೆ. ಇವರ ಕಾರ್ಯಾಗಾರದಲ್ಲೂ 'ನಿತ್ಯ ಶಿಲ್ಪ ಶಿಬಿರ' ನಡೆಯುತ್ತಿರುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು. ಇವೆಲ್ಲ ಕಲಾಗ್ರಾಮಗಳು ಸ್ವಾತಂತ್ರ್ಯಪೂರ್ವದಿಂದಲೂ ಇದ್ದು ಈಗಲೂ ಅದೇ ಕಾಯಕದಲ್ಲಿರುವ ಗ್ರಾಮಗಳು.

ಶಿವಮೊಗ್ಗ

ಮತ್ತೊಂದು ಹೆಸರಾಂತ ಮರದಕೆತ್ತನೆಯ ನಾಡು, ಅದರಲ್ಲೂ ಶ್ರೀಗಂಧ, ಕರಿ ಮರ ಎಂದು ಕರೆಯುವ ಬೀಟೆ ಮರ ಬಳಸುತ್ತಾರೆ. 'ಗಂಧದ ನಾಡಿದು ಮೈಸೂರು' ಎನ್ನುವ ಶ್ರೀಗಂಧದ ತವರು ಶಿವಮೊಗ್ಗದ ಸೊರಬ, ಸಾಗರ ಮುಂತಾದ ಗ್ರಾಮಗಳು. ಈ ಭಾಗದಲ್ಲಿ ಶ್ರೀಗಂದಧ ಮರಗಳು ವಿಪುಲವಾಗಿ ದೊರೆಯುತ್ತಿದ್ದುದರಿಂದ, ಗಂಧದ ಕೆತ್ತನೆಯೇ ಈ ಭಾಗದ ಜನರ ಬಹಳ ದೊಡ್ಡ ಉದ್ಯಮ. ಶ್ರೀಗಂಧದ ಸುವಾಸನೆಯಿಂದ ಅದರಲ್ಲಿ ಏನು ಮಾಡಿದರೂ ಚೆಂದ, ಕುಸುರಿ ಕೆಲಸಗಳಿಗೆ ಹೇಳಿಮಾಡಿಸಿದಂತಹ, ತಿಳಿಹಳದಿ ಬಣ್ಣದ ಈ ಮರ, ಬಂಗಾರದಂತೆ ಅವರನ್ನು ಸುತ್ತುವರೆದಿರುವ ದಟ್ಟವಾದ ಅರಣ್ಯ ಅಲ್ಲಿಯ ಹೂ ಬಳ್ಳಿ, ಪ್ರಾಣಿಗಳು. ಇವೇ ಕೆತ್ತನೆಯ ವಸ್ತುಗಳು. ಹಿಂದಿನ ದೇವಾಲಯಗಳು ಶಿಲ್ಪಗಳಿದ್ದರೂ, ಅದನ್ನು ಹೆಚ್ಚಾಗಿ ಅನುಸರಿಸಿಲ್ಲ. ಈ ಗಂಧದ ಕೆತ್ತನೆ ಮಾಡುವವರನ್ನು ಗುಡಿಗಾರರೆನ್ನುತ್ತಾರೆ. ಇವರು ಗುಡಿ ಗೋಪುರಗಳನ್ನೂ ಕಟ್ಟಬಲ್ಲವರು, ರಥ ಪಾಲಕಿಗಳನ್ನು ಮಾಡಬಲ್ಲರು, ಜೋಡಣೆಯಲ್ಲಿ ಮರದ ಶಿಲ್ಪಗಳನ್ನು ಮಾಡಿ, ಅದನ್ನು ಬಣ್ಣಗಳಿಂದ ಅಲಂಕರಿಸುವ ಕಲೆಯನ್ನೂ ಬಲ್ಲವರು ಇವರು.

ಗುಡಿಗಾರರ ಇನ್ನೊಂದು ವಿಶೇಷವಾದ ಮಾಧ್ಯಮ ದಂತ. ಈ ಶ್ರೀ ಹಿರಣ್ಯಪ್ಪ, ಶ್ರೀ ಗಣಪತಪ್ಪ, ಶ್ರೀ ವೆಂಕಟಪ್ಪ, ಶ್ರೀ ಶಾಂತಪ್ಪ, ಎಂಬ ಕಲಾವಿದರು ಮೈಸೂರು ಮಹಾರಾಜರ ಪ್ರೀತಿ ಆದರಗಳಿಗೆ ಪಾತ್ರರಾಗಿ, ಅರಮನೆಗೆ ಹಲವಾರು ಉತ್ತಮ ಕೃತಿಗಳನ್ನು ಮಾಡಿಕೊಟ್ಟಿದ್ದರು. ಶ್ರೀಗಂಧದ ಮರವನ್ನು ಸಣ್ಣ ಸಣ್ಣ ಎಳೆಗಳನ್ನಾಗಿ ಸೀಳಿ ಚಾಮರಗಳನ್ನು ಮಾಡಿದ ಅಪ್ರತಿಮ ಕಲಾವಿದ ಶ್ರೀ ಹಿರಣ್ಯಪ್ಪನವರು. ಆ ಪ್ರದೇಶದಲ್ಲೇ ಬಹಳ ಹೆಸರು ಮಾಡಿದ, ಇವರ ಕೀರ್ತಿ ಅರಮನೆಗೂ ತಲುಪಿತು, ಇವರು ಅನುಭವಿಸದ ರಾಜ ವೈಭವ ವಿಲ್ಲ. ಇಂತಹ ಕಲಾವಿದರು ಹಿಂದೆ ಹುಟ್ಟಿಲ್ಲ, ಮುಂದೆಯೂ ಹುಟ್ಟುವುದಿಲ್ಲ ಎಂದು ಅಲ್ಲಿಯವರೆಲ್ಲ ಹೇಳುತ್ತಿರುತ್ತಾರೆ.

ಇನ್ನು ಶ್ರೀ ರಾಮಚಂದ್ರಾಪುರ ಮಠದ ದಂತ ಮತ್ತು ಶ್ರೀ ಗಂಧದ ಮರದಿಂದ ಮಾಡಿದ ಮಂಟಪ ಮಾಡಿದವರು ಗುಡಿಗಾರರಲ್ಲಿ ಹೆಸರಾಂತ ಕಲಾವಿದರು. ಆ ಮಂಟಪವನ್ನು ಕಣ್ಣಾರೆ ನೋಡುವ ಅವಕಾಶ ಈ ಇಪ್ಪತ್ತೈದು ವರ್ಷಗಳ ಹಿಂದೆ ಸಿಕ್ಕಿತ್ತು, ಸಾರ್ವಜನಿಕರ ವೀಕ್ಷಣೆಗಾಗಿಯೇ ಮಂಟಪವನ್ನೇ ಪ್ರದರ್ಶನ ಮಾಡಿದ್ದರು. ಆಗ ಜನತಂಡೋಪ ತಂಡಗಳಲ್ಲಿ ಹೋಗಿ ನೋಡಿದರು. ನಾವೂ ಸುಮಾರು ಹದಿನೈದು ಜನ, ವಾದಿರಾಜರ ಜೊತೆಯಲ್ಲಿ ಹೋಗಿದ್ದೆವು. ಬರೀ ನೋಡವುದಕ್ಕೆ ಎಷ್ಟೊಂದು 'ದೊಡ್ಡ ಕ್ಯೂ' ಜೊತೆಗೆ ರಕ್ಷಣೆಗಾಗಿ ನಿಂತಿದ್ದ ಪೋಲಿಸ್ ತಂಡ. ಒಂದು ಕಲಾಕೃತಿಗೆ ಇಷ್ಟು ಬೆಲೆಯೇ ಅನ್ನಿಸಿತು. ಒಳಗೆ ಮಂಟಪ ಹೋಗಿ ನೋಡಿದಾಗ ನಿಜವಾಗಿಯೂ ಅದನ್ನು ನೋಡಿದ ಕಣ್ಣುಗಳೇ ಸಾರ್ಥಕ ಎನ್ನಿಸಿತು. ಅಷ್ಟೊಂದು ಸೂಕ್ಷ್ಮಕೆತ್ತನೆ ಸುತ್ತ ಪಟ್ಟಿಕೆಗಳಲ್ಲಿ ಕಥೆಗಳು, ದೇವತೆಗಳು, ಅದಕ್ಕೆ ಹೊಂದುವಂತಹ ಹೂಬಳ್ಳಿಗಳು. ಅದು ಒಂದು ಮಠಕ್ಕೇ ಮಾತ್ರ ಸೇರದೆ, ಯಾವುದಾದರೂ ಮ್ಯೂಸಿಯಂನಲ್ಲಿಟ್ಟಿದ್ದರೆ ಅದರ ಕೀರ್ತಿ ಪ್ರಪಂಚಕ್ಕೆ ಹಬ್ಬುತ್ತಿತ್ತು.

ಇನ್ನು ರಾಜಧಾನಿ ಮೈಸೂರಿನಲ್ಲಿ ಶಿಲ್ಪಕಲೆಗಳು ಪ್ರಚಲಿತವಾಗೇ ಇದ್ದವು. ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ಹೆಸರು ಕೇಳದವರಿಲ್ಲ. ಜಯ ಚಾಮರಾಜೇಂದ್ರ ಒಡೆಯರ ಆಸ್ಥಾನದಲ್ಲಿ ಅವರಿಗೆ ಬಹಳ ಗೌರವ, ಅವರವೇ ಅದ 'ಮೈಸೂರು ಜನಪ್ರಿಯ' ಶೈಲಿಯನ್ನು ಮೈಸೂರಿನ ಎಲ್ಲ ಶಿಲ್ಪಿಗಳೂ ಇಂದಿಗೂ ಅನುಸರಿಸುತ್ತಾರೆ.

ಹೀಗೆ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲೂ ಇನ್ನೂ ಶಿಲ್ಪಿಗಳು ಇದ್ದಾರೆ. ಆದರೆ ಸಂಪ್ರದಾಯ ಶಿಲ್ಪಿಗಳೆಂದು ಹೇಳಿಕೊಂಡು ಅವರು ಮಾಡುವುದು ಮೈಸೂರಿನ ಜನಪ್ರಿಯ ಶೈಲಿಯ ಸಂಪ್ರದಾಯದಲ್ಲಿ. ಎಲ್ಲಿಯವರೆಗೆ ಜನರಲ್ಲಿ 'ಭಕ್ತಿ' ಹಾಗೂ ಹಣ ಇರುತ್ತದೆಯೋ ಅಲ್ಲಿಯ ವರೆಗೆ ಶಿಲ್ಪಿಗಳಿಗೆ ಕೆಲಸ ಇದ್ದೇ ಇರುತ್ತದೆ. ಆದರೆ ತಮ್ಮ ಶಿಲ್ಪಕಲೆಯಿಂದ ನಾಡಿನ ಸಂಸ್ಕೃತಿಯನ್ನು ಉತ್ತಮ ರೀತಿಯಲ್ಲಿ ಬೆಳೆಸುವ ಜವಾಬ್ದಾರಿ ಶಿಲ್ಪಿಗಳದೇ.

ಸ್ವಾತಂತ್ರ್ಯ ಪೂರ್ವ ಮತ್ತು ಅನಂತರದ ದಿನಗಳಲ್ಲಿ 'ಶಿಲ್ಪಕಲೆ' ಬೆಳೆಯುತ್ತಾ ಇದೆ. ವಂಶಪಾರಂಪರ್ಯವಾಗಿ ಇಲ್ಲವೆ ಗುರು-ಶಿಷ್ಯರ ಪರಂಪರೆಯಲ್ಲಿ. ಆದರೆ ಹೊಸತನ ಜೀವಂತಿಕೆ ಎಂದೆಲ್ಲ ಯೋಚಿಸಿದಾಗ ಇಂತಹ ಬದಲಾವಣೆ ಯಾವಾಗ ಎನ್ನಿಸುವುದು ಸಹಜ. ಸಂಗೀತ, ನೃತ್ಯಗಳು ಧಾರ್ಮಿಕ ದೃಷ್ಟಿಯಿಂದಲೇ ಬೆಳೆದು ಬಂದದ್ದು. ಅಲ್ಲೂ ವಂಶದ, ಗುರು-ಶಿಷ್ಯ ಪರಂಪರೆಯ ರೀತಿಯಲ್ಲೇ ಅಭ್ಯಾಸಗಳು ನಡೆದರೂ ಇಂದು ಆ ಕಲೆಗಳು ಜಗತ್‌ಪ್ರಸಿದ್ಧವಾಗಿವೆಯೆಂದರೆ ಅದರ ರಹಸ್ಯವೇನು, ಶಿಲ್ಪಕಲೆಗೆ ಆ ಅವಕಾಶ ಯಾಕಿಲ್ಲ ಎಂಬ ಕೊರಗು ಎಲ್ಲ ಶಿಲ್ಪಿಗಳಿಗೂ ಇದೆ. ಹಲವಾರು ಶಿಲ್ಪಿಗಳು ಈ ದಿಕ್ಕಿನಲ್ಲಿ ಯೋಚಿಸಿ, ಕಾರ್ಯ ಪ್ರವೃತ್ತರಾದರೆ, ಮುಂದೊಂದು ದಿನ ಶಿಲ್ಪಕ್ಕೂ ಉತ್ತಮ ಬೆಲೆ ಸಿಕ್ಕೀತು.

ಸಂಗೀತ, ನೃತ್ಯಗಳು ಶಾಸ್ತ್ರದ ಚೌಕಟ್ಟನ್ನು ಬಹುಮಟ್ಟಿಗೆ ಮೀರುವುದಿಲ್ಲ. ಅದೇ ರಾಗ, ಅದೇ ತಾಳ, ಆದರೆ ಎಷ್ಟೊಂದು ವೈವಿಧ್ಯತೆ. ಆ ರಾಗ ತಾಳಗಳ ಪರಿಚಯ ಜನಗಳಿಗೆ ಇರುವುದೇ ? ಒಂದು ರಾಗದ ಹೆಸರು ಹೇಳಿದರೆ, ಅದರ ಸ್ವರೂಪ ಇಂತಹುದೇ. ಎಂದು ಸಂಗೀತ ಬಲ್ಲವರಿಗೆ ತಿಳಿದಿರುತ್ತದೆ. ಅವರು ಹಾಡುವ ಸಾಹಿತ್ಯ ರಚನೆಗಳೂ, ಅದರ ಅರ್ಥಕೂಡ ಆಸಕ್ತ ಜನಗಳಿಗೆ ತಿಳಿದದ್ದೇ. ಆದರೂ ಅವರು ಹಾಡಲು ಪ್ರಾರಂಭಿಸಿದರೆ, 'ಅಯ್ಯೋ ಅದೇ ರಾಗ' ಎಂದು ಯಾರೂ ಉದ್ಗಾರ ತೆಗೆಯುವುದಿಲ್ಲ. ಆ ಚೌಕಟ್ಟಿನಲ್ಲಿ ಕಲಾವಿದ ಹೇಗೆ ಹಾಡುತ್ತಾರೆ? ಕೇಳುಗರ ಮನಸ್ಸಿನ ಮೇಲೆ ಯಾವ ಪರಿಣಾಮ ವಾಗುತ್ತದೆ ಎಂಬುದೇ 'ಕಲೆ'. ಹಿಂದೂಸ್ಥಾನಿ ಪದ್ಧತಿಯ ಸಂಗೀತದಲ್ಲಂತೂ, ಸಾಹಿತ್ಯ ಕೂಡ ಗೌಣ, ಅಷ್ಟೇ ಏಕೆ ಯಾವಪದ್ಧತಿಯಾದರೂ ಸರಿ ವಾದ್ಯ ಸಂಗೀತದಲ್ಲಿ ಯಾವ ಸಾಹಿತ್ಯವನ್ನು ಗುರುತಿಸಬಹುದು ? ಆದರೂ ಅದನ್ನು ಕೇಳಿ, ಆನಂದಿಸಿ, ಯಾವುದೋ ಲೋಕದಲ್ಲಿದ್ದ ಅನುಭವ





ನಾಗೇಂದ್ರ ಸ್ಥಪತಿ – ದಕ್ಷಿಣಾಮೂರ್ತಿ



ಸಿ. ಪರಮೇಶ್ವರಾಚಾರ್ಯರ ಲಕ್ಷ್ಮೀ ವರಹ ರೇಖಾಚಿತ್ರ

ಪಡೆಯುವುದಿಲ್ಲವೆ ? ಕಲಾವಿದರ, ಸಹೃದಯರ ಒಂದು ಮೇಳವೇ ಈ 'ಕಲೆ'ಯ ಸಾರ್ಥಕತೆ, ಹೀಗೆ ಸಂಗೀತ, ನೃತ್ಯಗಾರರು ಎಲ್ಲರನ್ನೂ ಮೋಡಿ ಮಾಡುತ್ತಿರುವುದು, ಆ ಕಲೆಯ ಅನುಭವ ಎಷ್ಟೋ ದಿನಗಳ ವರೆಗೆ ಪರಿಣಾಮ ಬೀರುವುದು, ಮತ್ತೆ ಮತ್ತೆ ಅದೇ ಅನುಭವ ಬೇಕೆನಿಸುವುದು, ಇದೆಲ್ಲ ಏನು? ಶಾಸ್ತ್ರೀಯ ಚೌಕಟ್ಟಿನೊಳಗೆ ಕಲಾವಿದರು ತಮ್ಮ ಅನುಭವದಿಂದ, ಕಲ್ಪನಾ ಶಕ್ತಿಯಿಂದ ಮೂಡಿಸುವ ಅನುಭವ, ಅದನ್ನು ಮಾತಿನಲ್ಲೂ ಹೇಳಲು ಸಾಧ್ಯವಿಲ್ಲ, ಅಂತಹ ಒಂದು ಅನುಭವ ಹಾಗೆ ಯಾವ ಬಂಧನಗಳಿಗೂ ಸಿಕ್ಕದೆ, ಶಾಸ್ತ್ರದ ಚೌಕಟ್ಟಿನಿಂದ ಗಾಯಕರು ನಿರ್ಮಿಸುವ 'ಸುಂದರ ಲೋಕ' ಜಗತ್ತನ್ನೇ ತಣಿಸಿದೆ.

ಅಂತಹ ಅನುಭವ ಕೊಡುವ ಶಿಲ್ಪ ನಮ್ಮದೇಕಾಗ ಬಾರದು? ಶಾಸ್ತ್ರದ ಚೌಕಟ್ಟಿನಿಂದ ನಿರ್ಮಿತವಾದ ಪ್ರತಿಮೆಯಿದೆ, ಅಲಂಕಾರ, ಆಭರಣಗಳಿವೆ, ಸುಂದರವಾದ, ಭಾವನಾಪ್ರದವಾದ ಒಂದು ಅಭಿವ್ಯಕ್ತಿ ಬಂದರೆ ಸಾಕು. ಶಿಲ್ಪದಲ್ಲಿ ಮಾತಿಲ್ಲ, ಗಾಯನವಿಲ್ಲ, ಚಲನೆಯಿಲ್ಲ, ಬರೀ ನಿಶ್ಯಬ್ಧ. ಆ ನಿಶ್ಯಬ್ಧದಲ್ಲಿ ನೋಡುವವರ ಮನಸ್ಸಿನಲ್ಲಿ ಭಾವನೆಗಳನ್ನು ಪ್ರಚೋದಿಸುವ ಶಕ್ತಿ ಆ ಶಿಲ್ಪಕ್ಕಿರಬೇಕು. ಹಿಂದಿನ ಶಿಲ್ಪಗಳಲ್ಲಿ ಅಂದರೆ, ಉದಾಹರಣೆಗೆ ಸೋಮನಾಥಪುರದ 'ವೇಣುಗೋಪಾಲ'ನನ್ನು ನೋಡುತ್ತಿದ್ದರೆ, ಆ ನಿಶ್ಯಬ್ಧದಲ್ಲೂ ನಾವು ಕೊಳಲುಗಾನವನ್ನು ಅನುಭವಿಸಬಹುದು. ಜಗತ್ಪ್ರಸಿದ್ಧ ಗೊಮ್ಮಟೇಶ್ವರನ ಮುಂದೆ ನಿಂತಾಗ 'ವೈರಾಗ್ಯ'ದ ಅನುಭವ, ಎಲ್ಲವೂ ನಶ್ವರ ಎನ್ನುವ ಭಾವನೆ ಕಾಡದಿರದು. ನಮ್ಮ ಬೇಲೂರು ಬಾಲಿಕೆಯರನ್ನು ನೋಡಿದಾಗ ಸುಂದರ ಭಾವನೆಗಳು, ಕಾಮನೆಗಳು ಕಾಡದೆ ಇರದು. ಈ ನಮ್ಮ ಹಿಂದಿನ ಶಿಲ್ಪಗಳಲ್ಲಿ ಎಲ್ಲವನ್ನೂ ಸಾಧಿಸಿದ್ದರು ಹಿಂದಿನ ಶಿಲ್ಪಿಗಳು. ಅವರು ಬರೀ ಶಿಲ್ಪ ಕಡೆಯುವ ಯಂತ್ರಗಳಾಗಿರಲಿಲ್ಲ. ಶಾಸ್ತ್ರಗಳನ್ನು ಹೇಳುವಂತೆ ಅವರು ಕವಿಗಳಾಗಿದ್ದರು, ಗಾಯಕರಾಗಿದ್ದರು, ನೃತ್ಯಗಾರರಾಗಿದ್ದರು, ಸಾಹಿತ್ಯವನ್ನು ಬಲ್ಲವರಾಗಿದ್ದರು ಎಲ್ಲಕ್ಕಿಂತ ಹೆಚ್ಚಾಗಿ ಸಹೃದಯರಾಗಿದ್ದರು, ಇಂತಹ ದಿನಗಳು ಮರಳಿ ಬಂದಿತೇ?

ವಿಶ್ವವನ್ನೇ ಮೋಡಿ ಮಾಡಿದ್ದ ಕರ್ನಾಟಕದ ಶಿಲ್ಪಕಲೆಯ ಅಧ್ಯಯನದ ಬಗ್ಗೆ ಹೆಚ್ಚಿನ ಗಮನಕೊಡದಿರುವುದು ವಿಷಾದನೀಯ. ಶಿಲ್ಪಕಲೆ ಬರೀ ವಂಶದ ಕಲೆಯಾಗಿ, ಬೆಳೆದರೆ ಪ್ರಯೋಜನವಿಲ್ಲ.

ಹೇಳುವುದಿಲ್ಲವೆ? "ಪಂಡಿತಪುತ್ರಃ ಶುದ್ಧಶುಂಠಃ" ಎಂದು. ಯಾವ ಮನೆತನದಲ್ಲಾದರೂ ಒಬ್ಬ ಪ್ರಭಾವಶಾಲಿ ಪುರುಷನ ಜನನವಾದರೆ ಅದೇ ಮುಂದುವರೆಯುತ್ತೆಂಬ ನಂಬಿಕೆಯಿಲ್ಲ. ಆದ್ದರಿಂದ 'ಗುರು-ಶಿಷ್ಯ' ಪರಂಪರೆ ಉತ್ತಮವಾದದ್ದು, ಅದಕ್ಕೂ ನಾಣ್ನುಡಿ ಇದೆಯಲ್ಲ "ಗುರುವನ್ನು ಮೀರಿಸಿದ ಶಿಷ್ಯ" ಎಂದು. ಶಿಲ್ಪ ಕ್ಷೇತ್ರಕ್ಕೂ ಆಸಕ್ತರ ಪ್ರವೇಶವಾಗಲೇ ಬೇಕು, ವಿದ್ಯಾವಂತರೂ ಇರಬೇಕು. ಇದಕ್ಕಾಗಿ ಏನು ಮಾಡಬೇಕು ಎಂಬುದರ ಕಡೆಗೆ ಯೋಚಿಸ ಬೇಕಾದುದು ಸಮಾಜದ ಎಲ್ಲ ಪ್ರಜ್ಞಾವಂತರ ಕೆಲಸ. ಈಗಿನ ಕಾಲದಲ್ಲಂತೂ ಶಿಲ್ಪಕಲೆ ಕಲಿಯುವುದ ದುಬಾರಿಯೇ. 'ಶಿಲ್ಪ ಕಲೆ'ಯ ಅಧ್ಯಯನ ಇನ್ನೂ ಪ್ರಾರಂಭದ ಸ್ಥಿತಿಯಲ್ಲಿದೆ. ಅದಕ್ಕಾಗಿ ಸುಸಜ್ಜಿತ ವ್ಯವಸ್ಥೆಗಳಾಗ ಬೇಕಿದೆ.

ಶಾಸ್ತ್ರೀಯ ಕಲೆಗಳಿಗೆ ಒಂದು ಶಾಸ್ತ್ರದ ಚೌಕಟ್ಟಿದೆ. ವ್ಯಕ್ತಿಯ ಆಳವಾದ ಅಧ್ಯಯನ, ಅದರಿಂದ ಗಳಿಸಿಕೊಳ್ಳುವ ಸ್ವಾತಿಕೆಯಿಂದ, ಜಾಣ್ಮೆಯಿಂದ, ಕ್ರಿಯಾ ಶೀಲ ಕಲೆಗಳಾಗಿ ಬೆಳೆದಿವೆ. ಶಾಸ್ತ್ರವೆಂಬುದು ಎಲ್ಲ ಕಲೆಗಳಿಗೂ, ಎಲ್ಲ ಕಾಲಕ್ಕೂ ವ್ಯಾಕರಣವಿದ್ದಂತೆ.

ಸಂಪ್ರದಾಯ ಎಂದರೆ ಯಾವುದೇ ಕಲಾತ್ಮಕ ಕ್ರಿಯೆಯನ್ನು ಹಲವಾರು ವರ್ಷಗಳಿಂದ ರೂಢಿಸಿಕೊಂಡು ಬಂದರೆ ಅದು ಸಂಪ್ರದಾಯ ಎನಿಸಿಕೊಳ್ಳುತ್ತದೆ. ಈ ಕಲಾತ್ಮಕ ಕ್ರಿಯೆಯನ್ನು ಅದರ ಲಕ್ಷಣಗಳಿಂದ ಇದು ಇಂತಹುದೇ ನಾಡಿನ ಕಲೆ ಎಂದೂ ಗುರುತಿಸಬಹುದು. ಆ ನಾಡಿನ ಜನರ ಮನೋಭಾವ, ಅಲ್ಲಿ ದೊರೆಯುವ ಅವಕಾಶ ಮತ್ತು ಆಚರಣೆಗಳು ಅವರದೇ ಆದ ಕಟ್ಟು ಪಾಡುಗಳು ಆ ಕ್ರಿಯೆಯನ್ನು ನಿರ್ಧಿಷ್ಟಗೊಳಿಸುತ್ತದೆ. ಈ ಸಂಪ್ರದಾಯ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದ ಬಹುದು. ಆದರೆ ಶಾಸ್ತ್ರಗಳು ಅನುಭವದಿಂದ ರೂಪಿತಗೊಂಡಿರು ವುದಿಲ್ಲದೆ, ಅನೂಜಾನವಾಗಿ ಅನು ಸರಿಸುತ್ತಾ ಬಂದಿರುವ ವ್ಯಾಕರಣಗಳು, ಅದು ಬದಲಾಗುವುದಿಲ್ಲ. ಅದರ ಚೌಕಟ್ಟಿನಲ್ಲಿ ಎಂತಹ ಸೃಜನಾತ್ಮಕ ಕಲ್ಪನೆಗಳನ್ನಾದರೂ ಮಾಡುವ ಸ್ವಾತಂತ್ರ ಕಲಾವಿದರಿಗೆ ಇದ್ದೇ ಇದೆ.

ಎಲ್ಲ ಕಲೆಗಳಿಗಿದ್ದಂತೆ, 'ಶಿಲ್ಪ ಕಲೆ'ಗೂ ಶಾಸ್ತ್ರಗಳ ಅಡಿಪಾಯವಿದೆ. ಹಿಂದಿನಿಂದಲೂ ಧಾರ್ಮಿಕ ಅವಶ್ಯಕತೆಗಾಗಿ ಮಾಡಿಕೊಂಡು ಬರುತ್ತಿರುವ ಶಿಲ್ಪಕಲೆಕೂಡ ಒಂದು ಸಂಪ್ರದಾಯವಾಗಿದೆ. ಇಲ್ಲಿ ಶಾಸ್ತ್ರದ ಚೌಕಟ್ಟಿದೆ. ಪ್ರತಿಮಾ ಲಕ್ಷಣಗಳಿವೆ, ಸಾವಿರಾರು ವರ್ಷಗಳಿಂದ ಜನರ ಮನಸ್ಸಿನಲ್ಲಿರುವ ಪ್ರತಿಮೆಗಳಿಗೆ ಸ್ಪಂದಿಸಬೇಕಾದ ಬಂಧನವಿದೆ. ಭಾರತಾದ್ಯಂತ (ಈಗ ಪ್ರಪಂಚದಾದ್ಯಂತ) ಶಿವ, ಶಕ್ತಿ, ಗಣೇಶ ವಿಷ್ಣು ಎಂದರೆ ಎಲ್ಲರಿಗೂ ಒಂದು ಚಿತ್ರ ಕಣ್ಮುಂದೆ ಬರುತ್ತದೆ. 'ಶಿವ' ಎಂದರೆ ಲಿಂಗರೂಪಿಯಾದರೂ ಆಗಬಹುದು, ಇಲ್ಲವೆ ಢಮರು, ತ್ರಿಶೂಲ ಹಿಡಿದು, ಜಟಾಮಕುಟ, ಸರ್ಪಭೂಷಣನಾದರೂ ಆಗಬಹುದು. ಇದು ಎಲ್ಲರೂ ಒಪ್ಪಿಕೊಂಡಿರುವ ಶಿವನ ವರ್ಣನೆ. 'ಕಲ್ಯಾಣಿ' ರಾಗ ಎಂದಂತೆ. ಈ ವರ್ಣನೆ ನೀಡುವುದನ್ನು 'ಧ್ಯಾನ ಶ್ಲೋಕ' ಎಂದು ಶಾಸ್ತ್ರಗಳು ಹೇಳುತ್ತವೆ. ಶಿಲ್ಪಿಗೂ ಧ್ಯಾನಶ್ಲೋಕದ ಅರಿವಿರಬೇಕು, ಭಕ್ತನಿಗೂ ಇರಬೇಕು. ಇದು ಹಿಂದಿನಿಂದಲೂ ನಡೆದು ಬಂದಿರುವ ನಂಬಿಕೆ. ಹಾಗೆಯೇ ನಮ್ಮ ಪುರಾಣ, ಪುಣ್ಯ ಕಥೆಗಳಲ್ಲಿ ಬರುವ ಎಲ್ಲ ದೇವತೆಗಳ ಚಿತ್ರ ನಮ್ಮ ನಾಡಿನ ಜನರಿಗಿರುತ್ತದೆ. ಜನರಿಗೆ ಶಿಲ್ಪಿಯ ಮನಸ್ಸಿನಲ್ಲಿ ಯಾವ 'ರೂಪದ ಕಲ್ಪನೆ'ಯಿದೆಯೆಂದು ತಿಳಿಯುವುದು ಕಷ್ಟವಿಲ್ಲ. ಆದರೆ ಆ ರೂಪವನ್ನು ಎಷ್ಟು ಸಮರ್ಥವಾಗಿ, ಅದರ ಅವಶ್ಯಕತೆಯನ್ನು ಪೂರೈಸುವ ಎಲ್ಲ ಭಾವನೆಗಳು ಅದರಲ್ಲಿದೆಯೇ ಎಂಬುದೇ ಮುಖ್ಯ. ಆ ಭಾವನೆಗಳನ್ನು ಮೂಡುವಂತೆ ಮಾಡುವುದೇ ಕಲೆ. ಇದೇ ಶಿಲ್ಪದ ಸೌಂದರ್ಯ.

ಭಾರತೀಯ ಶಿಲ್ಪಗಳ ಸೌಂದರ್ಯ ರೂಪಗಳಲ್ಲೂ ವೈಶಿಷ್ಟವಿದೆ. ಮನುಷ್ಯನ ರೂಪದಂತಿದ್ದರೂ, ಒಂದು ಶೈಲೀಕೃತ ರೂಪವನ್ನು ಭಾರತೀಯ ಶಿಲ್ಪಿಗಳು ತಮ್ಮ ಧ್ಯಾನದಿಂದ ಕಂಡುಕೊಂಡಿದ್ದಾರೆ. ಅದರ ಆಕಾರ, ಅಂದಗಳು ಒಂದು ದೈವೀಕ ಭಾವನೆಯನ್ನು ಮನಸ್ಸಿನಲ್ಲಿ ಮೂಡುವಂತೆ ಮಾಡುತ್ತವೆ. ಈ "ಅತಿಮಾನವ" ಆಕಾರವೇ ಭಾರತೀಯ ಶಿಲ್ಪಗಳ ಜೀವಾಳ. ಯಾವುದೇ ಶಿಲ್ಪವಾದರೂ ಈ ಆಕಾರದಿಂದ ಮತ್ತು ಒಂದು ಅಲಂಕರಣ ಆಭರಣಗಳಿಂದ ಮಾನವ ರೂಪಕ್ಕಿಂತ ಭಿನ್ನವಾದ ಒಂದು ಆಕರ್ಷಕ ರೂಪ ಹೊಂದಿರುವುದೇ ಈ ದೈವ ಶಿಲ್ಪಗಳ ವೈಶಿಷ್ಟ.

ಭಾರತೀಯ ಶಿಲ್ಪಗಳಲ್ಲಿ ನಾವು ಪ್ರತಿಯೊಂದು ಹಂತದಲ್ಲೂ ಪ್ರಕೃತಿಯನ್ನು ಅನುಕರಣ ಮಾಡಿರುವುದನ್ನು ಗಮನಿಸಬಹುದು. ಮಾನವ ಶರೀರವನ್ನು ಅನುಕರಿಸಿದರೂ, ಎಲ್ಲೂ ಮಾಂಸಪುಷ್ಠಿಯುಳ್ಳ ಆಕಾರವನ್ನು ತೋರಿಸುವುದಿಲ್ಲ. ಹಾಗೆಂದಾಗ ಶರೀರದ ರಚನೆಯ ಕಡೆಗೆ ಗಮನವಿಲ್ಲ ಎಂದಲ್ಲ (Anotomy) ಮಾಂಸಮೂಳೆಗಳನ್ನೊಳಗೊಂಡ ಒಂದು ಸುಂದರವಾದ ಭಾಗು, ನೇರ ರೇಖೆಗಳಿಂದ ಆಕಾರವನ್ನು ರಚಿಸುತ್ತಾರೆ, ನಮ್ಮ ಗಿಡ, ಮರಗಳಲ್ಲಿ, ಪಶುಪಕ್ಷಿಗಳಲ್ಲಿ ಮನುಷ್ಯ ಶರೀರದಲ್ಲಿ ಸಹ, ಬಾಗು, ಸರಳ, ಗೋಲಾಕಾರದ ರೇಖೆಗಳಿಂದ ಕೂಡಿರುವುದನ್ನು ಗಮನಿಸಬಹುದು. ಶಿಲ್ಪರಚನೆಯಲ್ಲಿ ಈ ಅಂಶ ಕೂಡಿರುವುದನ್ನು ಗಮನಿಸಬಹುದು. ಶಿಲ್ಪರಚನೆಯಲ್ಲಿ ಈ ಅಂಶ ಬಹಳ ಮುಖ್ಯವಾದುದು. ಭಾರತೀಯ ಕಲೆಗಳ ಜೀವಾಳವೇ ಇದು. ಇಲ್ಲಿ ಅನುಕರಣ ಮಾತ್ರವಲ್ಲ, ಪುನರಾವರ್ತನೆಯೂ ಆಗುತ್ತದೆ.

ಇದಕ್ಕೆ ಪ್ರೊ|| ಎಸ್.ಕೆ. ರಾಮಚಂದ್ರರಾಯರು ಹೀಗೆ ಬರೆಯುತ್ತಾರೆ, "ಆಧುನಿಕ ಕಲೆಗೆ ಮಾರು ಹೋಗಿರುವ ಕಲಾ ವಿಮರ್ಶಕರು, ನಮ್ಮ ಸಂಪ್ರದಾಯ ಕಲೆಗಳನ್ನು ಅನುಕರಣೆಯಿಂದ ಕೂಡಿದ ಹಾಗೂ ಕಲ್ಪನೆಯಿಲ್ಲದ ಕುಶಲ ಕಲೆಗಳೆಂದು ಹೇಳುತ್ತಾರೆ. ಅನುಕರಣೆಯಿರುವುದರಲ್ಲಿ ಅನುಮಾನವೇ ಇಲ್ಲ, ಹಾಗೂ ಅದು ತಪ್ಪೂ ಅಲ್ಲ, ಅನುಕರಣೆ ಎಲ್ಲ ಸ್ತರಗಳಲ್ಲೂ ಇದೆ. ಪ್ರಕೃತಿಯಲ್ಲಿದೆ. ಚರಿತ್ರೆ ಕೂಡ ಪುನರುಕ್ತಿಯಾಗುತ್ತಿರುತ್ತದೆ. ದೇಹದ ಚಟುವಟಿಕೆಗಳು, ಅಭ್ಯಾಸಗಳು, ಸಂಪ್ರದಾಯಗಳು ಕೂಡ ಪುನರುಕ್ತಿಯಾಗುತ್ತಿರುತ್ತವೆ. ಮಕ್ಕಳು ಹೆತ್ತವರನ್ನು ಅನುಸರಿಸುತ್ತಾರೆ, ವಿದ್ಯಾರ್ಥಿಗಳು ಗುರುಗಳನ್ನು ಅನುಸರಿಸುತ್ತಾರೆ. ತಿಳಿದೋ ತಿಳಿಯದೆಯೋ ಹಿಂದುಳಿದ ಜನಾಂಗದವರು ಮುಂದುವರೆದ ಜನಾಂಗವನ್ನು ಅನುಸರಿಸುತ್ತಾರೆ. ಇದೆಲ್ಲ ಜೀವನದ ನಿಯಮವೇ ಆಗಿರುವಾಗ, ಕಲೆಗೆ ಈ ನಿಯಮ ಏಕೆ ಅನ್ವಯಿಸಬಾರದು ?"

ಹಿಂದಿನ ಭವ್ಯತೆ ಪಡೆಯುವುದು ಕೇವಲ ಅನುಕರಣ, ಅಭ್ಯಾಸಗಳಿಂದ ಮಾತ್ರ ಸಾಧ್ಯ ಎಂದು ಸಂಗೀತ ನೃತ್ಯ ಕ್ಷೇತ್ರಗಳು ಸಾಬೀತು ಪಡಿಸಿರುವಾಗ, ಶಿಲ್ಪಕ್ಷೇತ್ರಕ್ಕೂ ಅದನ್ನು ಅನ್ವಯಿಸಿ ಸಾಧಿಸಬಹುದು. ಆದರೆ, ಈಗ ಅಂತಹ ಅಧ್ಯಯನದ ಕೊರತೆ ನಮ್ಮ ನಾಡಿನಲ್ಲಿದೆ

ಶಿಲ್ಪಕಲೆಯ ಅಧ್ಯನಕ್ಕಿರುವ ಶಾಲೆಗಳೇ ವಿರಳ. ಕೆಲವೇ ಶಾಲೆಗಳನ್ನು ಶಿಲ್ಪಿಗಳೇ ನಡೆಸುತ್ತಿದ್ದಾರೆ. ಆದರೆ ಅವುಗಳಿಗೆ ಸರ್ಕಾರದಿಂದ ಸಹಾಯ ಲಭಿಸಬಹುದೇ ? ಅವುಗಳ ಬೆಳವಣಿಗೆಗೆ ಸಾರ್ವಜನಿಕರಿಂದಲೂ ಸಹಾಯ ದೊರೆಯುವಂತೆ ಮಾಡಬೇಕಾಗಿದೆ. ಹಾಗೆಯೇ ಶಿಲ್ಪಕಲೆಯನ್ನು ಸರಿಯಾಗಿ ಕಲಿಸುವ ಶಿಲ್ಪಗುರುಗಳ ಒಂದು ಪಡೆಯೂ ಸಿದ್ಧವಾಗಬೇಕು.

ಶ್ರೀ ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ಶ್ರೀ 'ಜಗದ್ಗುರು ಶೈವ ಶಿಲ್ಪ ಶ್ರೀ ಬ್ರಹ್ಮಕುಲಂ' ಎಂದು ಪ್ರಸಿದ್ಧವಾಗಿದ್ದ ಮೈಸೂರಿನ ಶಿಲ್ಪಶಾಲೆ ತನ್ನ ಪ್ರಭಾವವನ್ನು ಇನ್ನೂ ಉಳಿಸಿಕೊಂಡು ಬಂದಿದೆ. ಈಗ ಶಾಲೆಯಲ್ಲಿ ಕಲಿತವರೂ ಕಲಿಯದವರೂ, ಶ್ರೀ ಸ್ವಾಮಿಗಳು ಪ್ರಚಾರಕ್ಕೆ ತಂದ "ಮೈಸೂರು ಶೈಲಿ" ಎಂದು ಜನಪ್ರಿಯವಾಗಿರುವ ಶೈಲಿಯನ್ನೇ ಅನುಸರಿಸುತ್ತಾ ಬಂದಿದ್ದಾರೆ.

ಶ್ರೀ ಸ್ವಾಮಿಗಳದು ಗುರು-ಕುಲ ಮಾದರಿಯ ಅಧ್ಯಯನ ಕೇಂದ್ರವಾಗಿತ್ತು. ಅದರಲ್ಲಿ ಬಹಳ ಶಿಲ್ಪಿಗಳು ರೂಪುಗೊಂಡಿದ್ದಾರೆ. ವಾಸ್ತುಶಿಲ್ಪ, ಪ್ರತಿಮಾಶಿಲ್ಪಗಳೆರಡರಲ್ಲೂ ಶ್ರೀ ಸ್ವಾಮಿಗಳಿಗೆ ಅಪಾರ ಪರಿಶ್ರಮವಿತ್ತು, ಜೊತೆಗೆ ಕನ್ನಡ ಮತ್ತು ಸಂಸ್ಕೃತದಲ್ಲಿಯೂ ಪಾಂಡಿತ್ಯವಿತ್ತು. ರಾಜಾಶ್ರಯ ದೊರೆತ ಮೇಲೆ ಶ್ರೀ ಸ್ವಾಮಿಗಳ ಕೀರ್ತಿ ಎಲ್ಲೆಡೆಯೂ ಹರಡಿತ್ತು. ಯಾಜುಷಾಥರ್ವಣ, ಶಿಲ್ಪ ವಿದ್ಯಾರಹಸ್ಯೋಪನಿಷತ್ ಎರಡನ್ನೂ ಕನ್ನಡಕ್ಕೆ ಭಾಷಾಂತರಿಸಿ ಎಲ್ಲರಿಗೂ ದೊರೆಯುವಂತೆ ಶ್ರೀ ಮಠದ ವತಿಯಿಂದ ತಾವೇ ಪ್ರಕಟಿಸಿ ಮಹದೋಪಕಾರ ಮಾಡಿದ್ದಾರೆ. "ಶಿಲ್ಪಸಾರ" ಎಂಬ ಕೃತಿಯಲ್ಲಿ ಪರಂಪರಾನುಗತವಾದ ಶಿಲ್ಪದ ಮಹತ್ವವನ್ನೂ, ಅದರ ಉದ್ದೇಶವನ್ನೂ ತಿಳಿಗನ್ನಡದಲ್ಲಿ ಬಹಳ ಸುಲಭವಾಗಿ ಹೇಳಿದ್ದಾರೆ. ಈ ಬಗ್ಗೆ ಶ್ರೀ ತಿಪ್ಪೇಸ್ವಾಮಿಯವರು ತಮ್ಮ ಶಿಲ್ಪಸಂಕುಲದಲ್ಲಿ ವಿವರವಾಗಿ ತಿಳಿಸಿದ್ದಾರೆ.

ಶಾಸ್ತ್ರಗಳೇ ಮುಖ್ಯವಾಗಿದ್ದ ಈ ಗುರುಕುಲದಲ್ಲಿ ಕಲಿತ ಶಿಲ್ಪಿಗಳು ಶಾಸ್ತ್ರದಲ್ಲಿ ಪರಿಣತರು. ಇವರ ಕಲಾಕೌಶಲ್ಯಕ್ಕೆ ಮೆಚ್ಚಿದ ಶ್ರೀ ಜಯಚಾಮರಾಜೇಂದ್ರ ಒಡೆಯರು ಇವರನ್ನು ಆಸ್ಥಾನ ಶಿಲ್ಪಿಗಳನ್ನಾಗಿ ಮಾಡಿ, ಅರಮನೆಯ ಆವರಣದಲ್ಲಿ ದೇವಾಲಯಗಳನ್ನು ರಚಿಸಲು ಮಾತ್ರವಲ್ಲದೆ ಅರಮನೆಯಲ್ಲಿ ಶಿಲ್ಪ-ಚಿತ್ರಗಳಿಂದ ಅಲಂಕರಿಸಲು ಅವಕಾಶಕೊಟ್ಟಿದ್ದರು.

ಈ ಶಿಲ್ಪಕಲಾ ಶಾಲೆ, ನಮ್ಮ ನಾಡಿನ ಮೊದಲ ಶಿಲ್ಪಶಾಲೆಯಂದರೆ ತಪ್ಪಾಗಲಾರದು. ಇವರ ಪರಂಪರೆಯ ಶಿಲ್ಪಕಲೆ ಕರ್ನಾಟಕದ ಬಹಳಷ್ಟು ಭಾಗಗಳಲ್ಲಿ ಪ್ರಚಾರದಲ್ಲಿದೆ. ಇಲ್ಲಿ ಶಾಸ್ತ್ರ, ಮೂರ್ತಿಗಳ ವರ್ಣನೆ (ಧ್ಯಾನ ಶ್ಲೋಕ) ಹಾಗೂ ಪ್ರತಿಷ್ಠಾಪನಾ ವಿಧಿಗಳೇ ಪ್ರಮುಖವಾಗಿದ್ದು, ಹಿಂದಿನ ಅಂದರೆ ಚಾಲುಕ್ಯ, ಹೊಯ್ಸಳ, ವಿಜಯನಗರ ಶೈಲಿಗಳ ಯಾವ ಪ್ರಭಾವವೂ ಕಾಣುವುದಿಲ್ಲ. ಜೊತೆಗೆ ಮಹಾರಾಜರ ಆದೇಶದ ಮೇರೆಗೆ ಕೆಲವು ಮಹತ್ತರ ಬದಲಾವಣೆಗಳಾದವು. ರವಿವರ್ಮನ ಕೃತಿಗಳ ಪ್ರಭಾವದಿಂದ, ವಸ್ತ್ರವಿನ್ಯಾಸ ಸಹಜ ರೀತಿಯಲ್ಲಿರುವಂತೆ ಮಾಡಲು ಮಹಾರಾಜರಿಗೂ ಇದ್ದ ಆಕರ್ಷಣೆಯಿಂದ ವಸ್ತ್ರವಿನ್ಯಾಸದಲ್ಲಿ ಬದಲಾವಣೆಯಾಯಿತು. ಹಿಂದಿನ ಶಿಲ್ಪಗಳಲ್ಲಿ ನವಿರಾಗಿ ತೋರಿಸಿದ್ದ ವಸ್ತ್ರವಿನ್ಯಾಸಕ್ಕಿಂತ ವಾಸ್ತವತೆಯ ಆಕರ್ಷಣೆಯಿಂದ, ಮನುಷ್ಯನ ರೂಪವನ್ನೇ ಹೋಲುವ ಪ್ರತಿಮಾಲಕ್ಷಣಗಳ ಆಕರ್ಷಣೆಯಿಂದ ಮೈಸೂರು ಶೈಲಿಯ ಜನಪ್ರಿಯ ಶೈಲಿಯ ಉಗಮವಾಯಿತು. ಈ ಶೈಲಿಯನ್ನು ಕರ್ನಾಟಕದ ಎಲ್ಲ ಕಡೆಗಳಲ್ಲೂ ಕಾಣಬಹುದು. ಉತ್ಪಾದನಾ ದೃಷ್ಟಿಯಿಂದ ಈ ಶೈಲಿಯು ಅನುಕರಣೆ ಬಹಳ ನೆರವಾಗಿದೆಯೆಂಬುದೂ ಸತ್ಯ.

ಅದೇ ಸಮಯದಲ್ಲಿ 'ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ' ಶಾಲೆಯ ಹುಟ್ಟೂ ಆಯಿತು. ಇಲ್ಲಿ ಹಲವಾರು ವೃತ್ತಿಗಳ ಶಿಕ್ಷಣದ ಜೊತೆಗೇ ಶಿಲ್ಪ ಮತ್ತು ಮರದ ಕೆತ್ತನೆ, ಶ್ರೀಗಂಧದ ಕೆತ್ತನೆಯ ವಿಭಾಗಗಳೂ ಇದ್ದವು. ಅಕ್ಷರ ವಿದ್ಯೆ ಕಲಿಯದವರಿಗೆ ಕೈಕೆಲಸದ ನೆರವಿನಿಂದ ಬದುಕು ರೂಪಿಸಿಕೊಳ್ಳಲು ನೆರವಾಗಿ ಬಂದ ಶಿಕ್ಷಣಶಾಲೆಯಿದು. ಕಲಿಯಲು ವಿದ್ಯಾರ್ಥಿ ವೇತನವನ್ನೂ ನೀಡಿ, ಚಿಕ್ಕವರನ್ನು ಆಕರ್ಷಿಸಿ, ಮುಂದೆ ಉದ್ಯೋಗದ ಸಮಸ್ಯೆ

ಬರಬಾರದೆಂಬ ದೂರದೃಷ್ಟಿಯಿಂದ ಮಹಾರಾಜರು ಸ್ಥಾಪಿಸಿದ ಶಾಲೆಯಿದು. ಇಂದಿಗೂ ಇದು ಅಸ್ತಿತ್ವದಲ್ಲಿದ್ದರೂ ಅದರ ಹೆಸರು ಬದಲಾವಣೆಯಾಗಿದೆ. ಅದೀಗ ಚಾಮರಾಜೇಂದ್ರ ಕಲಾ ದೃಶ್ಯ ಅಕಾಡೆಮಿಯಾಗಿದೆ. ಚಾಮರಾಜೇಂದ್ರ ಆರ್ಟ್ಸ್ ಅಂಡ್ ವಿಜುಯಲ್ ಅಕಾಡೆಮಿ.

ಮೈಸೂರಿನ ಜನಪ್ರಿಯ ಶೈಲಿ ಒಂದು ಬೃಹತ್ ಸಂಪ್ರದಾಯವಾಗಿ ಬೆಳೆದು ಪ್ರಚಾರದಲ್ಲಿರುವಾಗ ಈ ಶೈಲಿ ಎಷ್ಟು ಶಾಸ್ತ್ರೀಯ ಎಂಬ ಪ್ರಶ್ನೆ ಅಸಂಗತವಾಗುತ್ತದೆ. ಸ್ವಾತಂತ್ರ್ಯ ಪೂರ್ವದಿಂದಲೂ ನಡೆದು ಬಂದ ಈ ದಾರಿ ಸುಗಮವಾಗಿಯೇ ನಡೆಯುತ್ತಿದೆ. ಸಾರ್ವಜನಿಕರ ಧಾರ್ಮಿಕ ಬೇಡಿಕೆಗಳಿಗೆ ಮಾತ್ರ ಸೀಮಿತವಾಗಿರುವ ಈ ಶಿಲ್ಪಕಲೆಗೆ ಹಿಂದಿನ ಯಾವ ಶೈಲಿಗಳ ಪ್ರಭಾವವೂ ಆಗದೆ ಈ ಶಿಲ್ಪಿಗಳು ಕೇವಲ ಬದುಕಿಗಾಗಿ ನಡೆಸಿಕೊಂಡು ಹೋಗುತ್ತಿರುವ ಕೈಂಕರ್ಯವಾಗಿದೆ. ಇದರ ಬಗ್ಗೆ ಅರಿವು ಮೂಡಿ ಹೊಸ ದಾರಿ ಹುಡುಕಬೇಕಾದರೆ ಶಿಲ್ಪಿಗಳು ಎದುರಿಸುತ್ತಿರುವ ಹಲವಾರು ಕುಂದು ಕೊರತೆಗಳು ನೀಗಬೇಕು. ನೆಮ್ಮದಿಯ ಜೀವನಕ್ಕೆ ಬೇಕಾದ ಆದಾಯ, ಕಲ್ಲು ಮತ್ತು ಇತರ ಸಾಮಗ್ರಿಗಳನ್ನು ಸಂಗ್ರಹಿಸಲು ಪಡುತ್ತಿರುವ ಭವಣೆಗಳಿಗೆ ಕೊನೆ, ಅರಿವು ಮೂಡಿಸುವ ಸೂಕ್ತ ಮಾರ್ಗದರ್ಶನ ಮತ್ತು ಜನತೆಯಲ್ಲೂ ಅದರಲ್ಲೂ ಗ್ರಾಹಕರಲ್ಲಿ ಬದಲಾಗಬೇಕಾದ ಕಲಾದೃಷ್ಟಿ ಈ ಎಲ್ಲವೂ ಕೈಗೂಡಿದಾಗ, ಮೈಸೂರ ಜನಪ್ರಿಯ ಶೈಲಿಯ ಶಿಲ್ಪಗಳಿಗೆ ಹೆಚ್ಚಿನ ಜೀವಂತಿಕೆ ಮೂಡಿ, ಇದೂ ಒಂದು ಪ್ರಬಲಶಾಲಿಯಾದ ಶೈಲಿಯಾಗಿ ನಿಲ್ಲಬಹುದು.

ಹಾಗಾದರೆ ಈ ಸಂಪ್ರದಾಯ ಶಿಲ್ಪಶೈಲಿ ಎಂದರೇನು ? ಅದರ ಕಲ್ಪನೆ ಹೇಗೆ ಮೂಡಿತು ? ಅದರ ವೈಶಿಷ್ಟ್ಯವೇನು ಎನ್ನುವ ಪ್ರಶ್ನೆಗಳು ಶಿಲ್ಪಿಗಳನ್ನು ಮಾತ್ರವಲ್ಲ, ಗ್ರಾಹಕರನ್ನು ಕಲಾ ಪ್ರೇಮಿಗಳನ್ನು ಕಾಡುವ ಪ್ರಶ್ನೆ.

ಶಾಸ್ತ್ರೀಯ ಕಲೆಗಳ ಗುಂಪಿಗೆ ಸೇರಿದ್ದು ಶಿಲ್ಪಕಲೆ. ಇದನ್ನು ಶಾಸ್ತ್ರೀಯ ಸಂಗೀತ, ನೃತ್ಯಗಳಂತೆಯೇ ಶಾಸ್ತ್ರೀಯ ಶಿಲ್ಪಕಲೆಯೆಂದೇ ಗುರುತಿಸುವುದು. ಆದರೆ ವಾಡಿಕೆಯಲ್ಲಿ ಶಾಸ್ತ್ರೀಯ ಎನ್ನುವುದಕ್ಕೆ ಬದಲಾಗಿ 'ಸಂಪ್ರದಾಯ' ಎನ್ನುವುದೇ ಅಭ್ಯಾಸವಾಗಿದೆ. ಯಾವುದೇ ಆಚರಣೆ ಅಥವಾ ಕ್ರಿಯೆಯನ್ನು ಹಲವಾರು ವರ್ಷಗಳಿಂದ ಆಚರಿಸುತ್ತ, ಅನುಸರಿಸುತ್ತ ಬಂದರೆ ಅದನ್ನು 'ಸಂಪ್ರದಾಯ' ಎನ್ನುತ್ತಾರೆ. ನಾವು ಪ್ರತಿವರ್ಷ ಆಚರಿಸುವ ಹಬ್ಬ ಹರಿದಿನಗಳೂ 'ಸಂಪ್ರದಾಯ' ವೆಂದೇ ಗುರುತಿಸುತ್ತೇವೆ. ಹಾಗೆಯೇ ಧಾರ್ಮಿಕ ಅವಶ್ಯಕತೆಗಾಗಿ ವಿಗ್ರಹಗಳನ್ನು ಮಾಡುತ್ತಾ ಬಂದಿರುವುದೂ ಸಂಪ್ರದಾಯವೆನಿಸುತ್ತದೆ. ಮುಖ್ಯವಾಗಿ ದೈವಾರಾಧನೆಗೆ ಶಿಲ್ಪ ರಚಿಸುವ ಕಾರ್ಯ ತಲೆತಲಾಂತರದಿಂದಲೂ ನಡೆದು ಬರುತ್ತಿದೆ. ಇದನ್ನೇ ಶಾಸ್ತ್ರೀಯ ಕಲೆ ಎಂದರೂ ಕಾಲದಿಂದ ಕಾಲಕ್ಕೆ ಬದಲಾವಣೆಗಳನ್ನು ಹೊಂದುತ್ತಿರುವುದೂ ಸಹಜ. ಈ ರೀತಿ ಕೆಲಸ ಮಾಡುವ ಶಿಲ್ಪಿಗಳಿಗೆ ಒಂದು ಶಾಸ್ತ್ರದ ಚೌಕಟ್ಟಿದೆ. ಪ್ರತಿಮಾಲಕ್ಷಣಗಳು ಇವೆ. ಅದು ಸಾವಿರಾರು ಜನರ ಮನಸ್ಸಿನಲ್ಲಿಯೂ ಇರುವಂತಹ ಭಾವನೆ ಅಥವಾ ಕಲ್ಪನೆ, ಭಾರತಾದ್ಯಂತ ಈ ಕಲ್ಪನೆ ಒಂದೇ ರೀತಿಯಲ್ಲಿದೆ. ಶಿವ, ಗಣೇಶ, ಲಕ್ಷ್ಮೀ, ಸರಸ್ವತೀ, ವಿಷ್ಣು ಎಂದರೆ ಎಲ್ಲರಿಗೂ ಆಯಾ ದೇವತೆಗಳ ಸ್ಪಷ್ಟ ಚಿತ್ರಣ ಮೂಡುತ್ತದೆ. ಶಿಲ್ಪರಚನೆ ಮಾಡುವಾಗ ಈ ಪ್ರತಿಮಾಲಕ್ಷಣಗಳನ್ನು ಅನುಸರಿಸಬೇಕಾದುದು ಖಡ್ಡಾಯ, ಅದು ಕಟ್ಟುಪಾಡು, ಬಂಧನ ಎಂದರೂ ಈ ಮಿತಿಯೊಳಗೆ ಸುಂದರವಾದ ಯಾವುದೇ ರಚನೆ ಮಾಡುವ ಸ್ವಾತಂತ್ರ್ಯ ಶಿಲ್ಪಿಗೆ ಇದ್ದೇ ಇದೆ.

ಸಂಗೀತ ನೃತ್ಯಗಳೂ ತಮ್ಮ ಶಾಸ್ತ್ರದ ಪರಿಮಿತಿಯಲ್ಲೇ ರಸಿಕರನ್ನು ರಂಜಿಸುತ್ತದೆ. ಶಿಲ್ಪಿಗಳಿಗೂ ಇಂತಹ ಸ್ವಾತಂತ್ರ್ಯ ಇದ್ದೇ ಇದೆ. ನೋಡುವವರು ಶಿಲ್ಪಿ ಏನು ಮಾಡಲು ಹೊರಟಿದ್ದಾನೆ ಎಂದು ಗುರುತಿಸುವ ಸಾಮರ್ಥ್ಯ ಹೊಂದಿರಬೇಕು. ಶಿಲ್ಪಿಯ ಕೈ ಚಳಕ, ಕಲ್ಪನೆ, ಭಕ್ತಿಯ ಜೊತೆಗೆ ಕಲಾತ್ಮಕತೆಯನ್ನೂ ಆಸ್ವಾದಿಸುವಂತಿರಬೇಕು.

ಭಿನ್ನ ವಿಭಿನ್ನ ಶೈಲಿಗಳು

ಇನ್ನು ಶಿಲ್ಪಶೈಲಿಯ ವಿಷಯ ತೆಗೆದುಕೊಂಡಾಗ ನಮ್ಮ ದೇಶದಲ್ಲಿ ಹಲವಾರು ಶಿಲ್ಪ ಶೈಲಿಗಳಿವೆ. ಯಾವ ರಾಜರಕಾಲದಲ್ಲಿ ದೇವಾಲಯಗಳ ರಚನೆಯಾದುವೋ ಆಯಾ ರಾಜಮನೆತನಗಳ ಹೆಸರಿನಿಂದಲೇ ಆ ಶೈಲಿಯನ್ನು ಗುರುತಿಸುತ್ತಾರೆ. ಉದಾ : ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ವಿಜಯನಗರ, ಗುಪ್ತ, ಚಾಂಡೇಲ, ಗಾಂಧಾರ ಹೀಗೆ ದೇಶಾದ್ಯಂತ ಅನೇಕ ಪ್ರಕಾರದ ಕಲಾ ಭಂಡಾರಗಳಿದ್ದು ಅವುಗಳಿಗೆ ರಾಜಮನೆತನಗಳಿಂದಲೇ ಗುರುತಿಸುತ್ತಾರೆ. ಇಲ್ಲಿ ಶಿಲ್ಪಿಗಳ ಮನೆತನವಾಗಲೀ, ಅವರ ಹೆಸರುಗಳಾಗಲೀ ಮುಖ್ಯವೆಂದು ಭಾವಿಸಿದ್ದಂತಿಲ್ಲ. ಆಯಾ ಜಾಗಗಳಲ್ಲಿದೊರೆಯುವ ಕಲ್ಲು, ಆಯಾ ರಾಜ್ಯದ ಸಂಸ್ಕೃತಿ ಮತ್ತು ಆ ನಾಡಿನ ಜನರ ಹಾವಭಾವ ಎಲ್ಲವೂ ಶಿಲ್ಪ ಶೈಲಿಗಳಿಗೆ ಪೂರಕವಾದ ಅಂಶಗಳು. ಈಗ ಹೊಯ್ಸಳ ಶೈಲಿಯನ್ನೇ ತೆಗೆದುಕೊಳ್ಳೋಣ. ಈ ದೇವಾಲಯಗಳನ್ನು ನಿರ್ಮಿಸಲು ದೊರೆತಕಲ್ಲುಗಳನ್ನು ಬಳಪದ ಕಲ್ಲು ಎನ್ನುತ್ತಾರೆ. ಮೃದುವಾದ ಕಡುನೀಲಿ ಬಣ್ಣದ ಈ ಕಲ್ಲುಗಳು ಶಿಲ್ಪಕ್ಕೆಂದೇ ಇವೆಯೇನೋ ಅನುವಷ್ಟು ಹದವಾಗಿವೆ. ಶಿಲ್ಪಿಗೆ ಕೆಲಸ ಮಾಡುವ ಆಸಕ್ತಿಗೆ

ಪೂರಕವಾದ ಈ ಕಲ್ಲುಗಳಿಂದ ರಾಜ್ಯದಲ್ಲಿ ಅನೇಕ ದೇವಾಲಯಗಳ ನಿರ್ಮಾಣವಾಗಿವೆ. ಎತ್ತರದ ಜಗಲಿಯ ಮೇಲೆ



ಚಾಲುಕ್ಯ ಶೈಲಿ ಶಿಲ್ಪ

ನಕ್ಷತ್ರಾಕಾರದ ತಳದ ಮೇಲೆ, ಹೆಚ್ಚು ಎತ್ತರವಿದೆ, ಈ ದೇವಾಲಯಗಳ ಪ್ರತಿಯೊಂದು ಗೋಡೆಗಳೂ ಅಲಂಕಾರ ಭರಿತವಾಗಿವೆ. ಒಳಗೂ, ಹೊರಗೂ ಎಲ್ಲೆಲ್ಲೂ ಸುಂದರ, ಸ್ಫುಟ ಹಾಗೂ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಈ ದೇವಾಲಯಗಳು ಹೊಯ್ಸಳರ ಕಾಲದಲ್ಲಿದ್ದು ಶಿಲ್ಪಿಗಳ ಕಲ್ಪನೆಯ ಕುಸುಮಗಳು. ಇಲ್ಲಿಯ ಆಭರಣ, ವಸ್ತ್ರ ವಿನ್ಯಾಸಗಳು ವಿಗ್ರಹದತಾಳಿಕೆ ಬಾಳಿಕೆಯ ದೃಷ್ಟಿಯಿಂದ ರೂಪಿತವಾಗಿವೆ. ಶಿಲ್ಪಿಯ ಕಲ್ಪನೆ, ಜಾಣ್ಮೆ ಹಾಗೂ ಚತುರತೆ ಎಲ್ಲವೂ ಮೇಳವಾಗಿ ಈ 'ಹೊಯ್ಸಳ ಶೈಲಿ'ಯ ಮೇಳವಾಗಿದೆಯೇ ಇದೆ, ಅದೂ ಮೈಸೂರು ಕಡೆಯ ಜನರ ಹಾವಭಾವಗಳನ್ನೇ ಹೋಲುತ್ತವೆ. ಇಂತಹ ದೇವಾಲಯಗಳನ್ನು ಕಟ್ಟಲು ನೂರಾರು ವರ್ಷಗಳೇ ಬೇಕು. ಹಾಗೆ ಹಲವಾರು ವರ್ಷಗಳ ಕಾಲ ಹಲವಾರು ಶಿಲ್ಪಿಗಳು ಒಂದೇ ಮಾದರಿ ಕೆಲಸ ಮಾಡುತ್ತ 'ಹೊಯ್ಸಳ ಶೈಲಿ'ಯ ಉಗಮವಾಯಿತು. ಹೀಗೆ ಬಾದಾಮಿಯ ಚಾಲುಕ್ಯರ ಗುಹಾಂತರ ದೇವಾಲಯಗಳು, ನಿರ್ಮಿತ ದೇವಾಲಯಗಳು ಅಲ್ಲಿ ದೊರೆಯುವ ಕೆಂಪು ಹರಳಗಲ್ಲು, ಮಾಸಲು ಬಿಳಿಯ ಗಡಸುಕಲ್ಲುಗಳಿಂದ ಬೇರೆಯೇ ಶೈಲಿಯ ಉಗಮವಾಗಿದೆ. ಇದನ್ನು ಚಾಲುಕ್ಯ ಶೈಲಿಯೆಂದು ಆಗಿನ ರಾಜಮನೆತನದ ಹೆಸರಿನಿಂದಲೇ ಗುರುತಿಸಲಾಗಿದೆ.



ಚಾಲುಕ್ಯ ಶೈಲಿಯ ಶಿಲ್ಪ - ಹಣ್ಣು ಮಾರುವವ






ಹೊಯ್ಸಳ ಶೈಲಿಯ ಶಿಲ್ಪಗಳು

ಹೀಗೆ ಹಲವಾರು ಸಂಪ್ರದಾಯ ಬದ್ಧ ಶೈಲಿಗಳು ರೂಪಗೊಂಡವು. ಕರ್ನಾಟಕದಲ್ಲೇ ಬೇರೆ ಬೇರೆ ರೀತಿಯ ಕಲ್ಲುಗಳು ದೊರೆಯುವುದರಿಂದ ಇಲ್ಲಿಯೇ ಮೂರು ನಾಲ್ಕು ಶೈಲಿಗಳನ್ನು ಗುರುತಿಸಬಹುದು. ವಿಜಯನಗರದ ನಂತರ ಕೂಡ ರಾಜಾಶ್ರಯದಲ್ಲೇ ಹಲವಾರು ದೇವಾಲಯಗಳನ್ನು ಕಟ್ಟಿದರೂ ಇಂತಹುದೇ ಶೈಲಿಯೊಂದು ನಿಖರವಾಗಿ ಹೇಳಬಹುದಾದ ರೀತಿಯಲ್ಲಿ ಕೆಲಸ ನಡೆದಿಲ್ಲ. ಕದಂಬ, ಗಂಗರ ಕಾಲದಿಂದ ಮೈಸೂರು ದೊರೆಗಳ ಆಳ್ವಿಕೆಯ ಕಾಲದ ರಾಜಮನೆತನಗಳ ಹೆಸರೇ ಇದೆ. ಮೈಸೂರು ದೊರೆಗಳ ಅಳ್ವಿಕೆಯಿಂದ ಪ್ರಚಲಿತವಿರುವ ಮೈಸೂರಿನ ಶೈಲಿಯೇ ಪ್ರಚಾರದಲ್ಲಿದೆ. ದೇವಾಲಯಗಳ ನಿರ್ಮಾಣ ಹೆಚ್ಚಿನ ಸಂಖ್ಯೆಯಲ್ಲಿ ಆಗದಿದ್ದರೂ, ಶಿಲ್ಪಿಗಳು ಜನಸಾಮಾನ್ಯರ ಧಾರ್ಮಿಕ ಬೇಡಿಕೆಗಳಿಗಾಗಿ ಕೆಲಸ ಮಾಡಿ ಕೊಡುತ್ತಿದ್ದರು. ಅದೂ ವಂಶ ಪಾರಂಪರ್ಯವಾಗಿ ಬಂದ ಉದ್ಯೋಗವಾದ್ದರಿಂದ ಶಿಲ್ಪಕಲೆ ಜೀವಂತವಾಗಿ ಉಳಿದಿತ್ತು. ಆದರೆ ಹೆಚ್ಚಿನ ಲಾಭವಿಲ್ಲದೆ, ಸಾಮಾನ್ಯದರ್ಜೆಯ ಕೆಲಸಗಳೇ ನಡೆಯುತ್ತಿತ್ತು.

ಸ್ವಾತಂತ್ರ್ಯ ಸಂಗ್ರಾಮದ ವೇಳೆ ಅದೇ ವೃತ್ತಿಯಲ್ಲಿದ್ದ ಎಷ್ಟೋ ಶಿಲ್ಪಿಗಳು ವೃತ್ತಿಯನ್ನೂ ಕೈ ಬಿಡಲು ಆಗದೆ, ಮುಂದೆವರೆಸಿಕೊಂಡು ಹೋಗುವ ಚೈತನ್ಯವೂ ಇಲ್ಲದೆ ತೊಂದರೆ ಪಡುವಂತಾಯಿತು. ಸಾರ್ವಜನಿಕರೆ ಆಶ್ರಯದಾತರು, ಶಿಲ್ಪಿಗಳು ಕಲೆ, ಕಲ್ಪನೆ, ಹೊಸತನ ಎಂದೆಲ್ಲ ಯೋಚಿಸದೆ ವಿಗ್ರಹ ಮಾಡಿ ಹಣ ಸಂಪಾದಿಸುವುದು ಎಂದು ಮಾತ್ರ ಯೋಚಿಸುವಂತಾಯಿತು.



ಖಜುರಾಹೊ ಶೈಲಿಯ ರೇಖಾಚಿತ್ರ



ರಾಷ್ಟ್ರಕೂಟ ಶೈಲಿಯ ಶಿಲ್ಪ

ಸಂಪ್ರದಾಯ ಶೈಲಿಗಳ ಮರುಹುಟ್ಟು

ಬೆಂಗಳೂರಿನಲ್ಲಿ ಪ್ರಾದೇಶಿಕ ವಿನ್ಯಾಸ ಕೇಂದ್ರದ ಸ್ಥಾಪನೆಯಾಯಿತು. ಅದರ ಮುಖ್ಯ ನಿರ್ದೇಶಕರಾಗಿ ಬಂದವರು ಶ್ರೀ ಪಿ. ಹರಿಹರ್ರ ಎಂಬುವರು, ಕೇರಳದವರು, ಕಮಲಾದೇವಿಯವರ ಅನುಯಾಯಿಗಳು.

ಶ್ರೀ ಹರಿಹರ್ರ ಕೇರಳದಲ್ಲಿ ಹುಟ್ಟಿದರೂ ಬೆಳೆದದ್ದು, ಓದದ್ದೂ ಎಲ್ಲ ಬೆಂಗಳೂರಿನಲ್ಲೇ. ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದರು ಬಡವರ ಬಗ್ಗೆ ಅಪಾರ ಕನಿಕರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮನಕೊಡದೆ ಚಿತ್ರಕಲೆಯತ್ತ ಆಕರ್ಷಿತರಾದಾಗ ಅವರ ತಂದೆ ಅವರನ್ನು ಶಾಂತಿ ನಿಕೇತನಕ್ಕೆ ಕಳುಹಿಸಿದರು. ಶಾಂತಿನಿಕೇತನವೇ ಭಾರತೀಯ ಕಲೆಗಳಿಗೆ ಸ್ಫೂರ್ತಿ. ಚಿತ್ರಕಲೆಯ ಜೊತೆಗೆ ಸಿರಾಮಿಕ್ ಕಲೆಯನ್ನು ಕಲಿತು ಅಲ್ಲಿಯೇ ಸ್ವಲ್ಪಕಾಲ ಉಪಾಧ್ಯಾಯರಾಗಿದ್ದರು. ಹೆಚ್ಚಿನ ತರಬೇತಿ (ಸಿರಾಮಿಕ್ ಕಲೆಯಲ್ಲಿ) ಪಡೆಯಲು ಜಪಾನಿಗೆ ಹೋದಾಗ ಅಲ್ಲಿ ಅವರ ಅನುಭವಕ್ಕೆ ಬಂದುದೂ, ಅಲ್ಲಿಯ ಸಂಪ್ರದಾಯ ಶೈಲಿಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಿದ್ದುದು. ಅದರಿಂದ ಸ್ಫೂರ್ತಿಗೊಂಡ ಹರಿಹರ್ರರವರಿಗೆ ಭಾರತೀಯ ಕಲೆಗಳ ಬಗ್ಗೆ ಅಪಾರ ಅಭಿಮಾನ ಮೂಡಿ, ತಮ್ಮ ಜೀವನವನ್ನು ಸಂಪ್ರದಾಯ ಶೈಲಿಯ ಬೆಳವಣಿಗೆಗೆ ಮುಡಿಪಿಡಲು ತೀರ್ಮಾನಿಸಿದರು. ಶಾಂತಿ ನಿಕೇತನದಲ್ಲಿದ್ದಾಗ ಮಹಾತ್ಮಗಾಂಧಿ


ಅಲ್ಲಿಗೆ ಭೇಟಿಯತ್ತಿದ್ದೂ, ಸಿ.ಎಫ್. ಆಂಡ್ರೂಸ್‌ರವರೂ ಅಲ್ಲಿದ್ದುದೂ ಅವರು ನೆನೆಯುತ್ತಿದ್ದರು. ಅವನೀಂದ್ರನಾಥ ಟ್ಯಾಗೂರ್, ನಂದಲಾಲ್ ಬೋಸ್, ಜೆಮಿನಿರಾಯ್ ಅವರುಗಳ ಪ್ರಭಾವಕ್ಕೆ ಒಳಗಾಗಿ ಭಾರತಕ್ಕೆ ಬಂದ ಮೇಲೆ ಕುಶಲ ಕಲಾಕ್ಷೇತ್ರದಲ್ಲಿ ಭಾರತೀಯತೆಯನ್ನು ಪುನಶ್ಚೇತನಗೊಳಿಸಲು ಶ್ರಮಿಸಿದರು. ಸಾರ್ವಜನಿಕ ಸಮಾರಂಭಗಳಲ್ಲಿ ಟೇಪ್ ಕತ್ತರಿಸುವುದು, ಬಂಟಿಂಗ್ಸ್ ಕಟ್ಟುವುದು, ಇಂತಹ ಪಾಶ್ಚಾತ್ಯ ಶೈಲಿಯ ಪದ್ಧತಿಗಳನ್ನು ಬಿಟ್ಟು, ಮಾವಿನ ತೋರಣ, ರಂಗವಲ್ಲಿ, ಹೂಗಳಿಂದ ಸಮಾರಂಭದ ಸ್ಥಳವನ್ನು ಅಲಂಕರಿಸುವುದು, ದೀಪ ಬೆಳಗುವುದರ ಮೂಲಕ ಕಾರ್ಯಾರಂಭ ಮಾಡುವುದು, ಇವೆಲ್ಲವನ್ನು ಅನುಷ್ಠಾನಕ್ಕೆ ತಂದು ಎಲ್ಲದರಲ್ಲೂ ದೈವಿಕ ಕಳೆತಂದು, ಶುದ್ಧ ಭಾರತೀಯ ಪರಂಪರೆಗಳಿಗೆ ಬುನಾದಿ ಹಾಕಿದರು. ಶ್ರೀಮತಿ ಕಮಲಾದೇವಿಯವರು ಇವರ ಗುರು. ಅಂದಮೇಲೆ ಅವರಿಬ್ಬರ ನಿರ್ದೇಶನದಲ್ಲಿ ಡಿಸೈನ್ ಸೆಂಟರಿನಲ್ಲಿ ಸಾಕಷ್ಟು ಕೆಲಸಗಳಾದವು. ಸಂಪ್ರದಾಯ ಶಿಲ್ಪಕಲೆಗಳು ಹೇಗಿರಬೇಕೆಂದು ಕರ್ನಾಟಕದಲ್ಲಿ ಮತ್ತೆ ಶುದ್ಧ ಸಂಪ್ರದಾಯ ಶೈಲಿಗಳಿಗೆ ಮರುಹುಟ್ಟು ಹಾಕಿದರು.

ಶ್ರೀ ಹರಿಹರನ್ ಡಿಸೈನ್ ಸೆಂಟರಿಗೆ ಸೇರಿದ ಮೇಲೆ ಶ್ರೀ ವಾದಿರಾಜ್ ಶ್ರೀ ಪರಮೇಶ್ವರಾಚಾರ್, ಶ್ರೀ ಅಪ್ಪುಕುಟ್ಟನ್ ಮುಂತಾದ ಕಲಾವಿದರಿಗೆ ಭಾರತೀಯ ಸಂಪ್ರದಾಯಗಳಿಗೆ ಪರಿಚಯಿಸಿ, ಅದನ್ನು ಬೆಳೆಸುವ ಕೈಂಕರ್ಯದ ದೀಕ್ಷೆ ಕೊಟ್ಟವರೆಂದರೆ ತಪ್ಪಾಗಲಾರದು.

ಶ್ರೀ ವಾದಿರಾಜರು ಕರ್ನಾಟಕದ ಆಗಿಹೋದ ಹಿರಿಯ ಸಂಪ್ರದಾಯ ಶಿಲ್ಪಿಗಳು. ಅವರೇ ಹೇಳಿಕೊಂಡಿರುವಂತೆ ತಮಗೆ "ಶುದ್ಧ ಭಾರತೀಯ ಪರಂಪರೆಯ ಬಗ್ಗೆ ತಿಳುವಳಿಕೆ ಕೊಟ್ಟವರು ಹರಿಹರನ್‌ರವರೇ. ಮುಂಚೆ ಯಾವ ಶೈಲಿಗೂ ಸೇರದ, ತದ್ರೂಪ ಶೈಲಿಯೂ ಅಲ್ಲದ, ಒಂದು ಜನಪ್ರಿಯ ಶೈಲಿಯ ಅನುಕರಣೆ



ರಾಷ್ಟ್ರಕೂಟ ಶೈಲಿಯ ಶಿಲ್ಪ



ಚಾಲುಕ್ಯ ಶೈಲಿಯ ಶಿಲ್ಪ





ರೇಖಾಚಿತ್ರಗಳ ಅಭ್ಯಾಸ

ಮಾಡಿ ಶಿಲ್ಪ ರಚಿಸುತ್ತಿದ್ದರಂತೆ. ಹರಿಹರ್ರರವರು ವಾದಿರಾಜರಿಗೆ ದೇವಾಲಯಗಳಲ್ಲಿರುವ ನಮ್ಮ ಶಿಲ್ಪಗಳನ್ನು ತದ್ವತ್ತಾಗಿ ಅನುಕರಣೆ ಮಾಡಲು ಆದೇಶಿಸಿದರಂತೆ, ಹಾಗೆಯೇ ಅನುಕರಣೆ ಮಾಡುತ್ತ ಮಾಡುತ್ತ ಭಾರತಾದ್ಯಂತ ಇರುವ ಎಲ್ಲ ಶೈಲಿಗಳ ಪರಿಚಯ, ಅದರ ಹಿನ್ನಲೆಯ ಬಗ್ಗೆ ತಿಳುವಳಿಕೆ ಬಂದು, ಸಂಪ್ರದಾಯ ಶೈಲಿಗಳಿಗೆ ಮನಸೋತೆ. ಅಲ್ಲಿಂದಾಚೆಗೆ ಸಂಪ್ರದಾಯ ಶೈಲಿಗಳಲ್ಲೇ ಕೆಲಸ ಮಾಡುವುದಾಗಿ ಪಣತೊಟ್ಟೆ" ಎನ್ನುತ್ತಿದ್ದರು. ಇದೇ ರೀತಿಯ ಪ್ರಭಾವಕ್ಕೊಳಗಾದವರು ಶ್ರೀ ಪರಮೇಶ್ವರಾಚಾರ್ ಮತ್ತು ಶ್ರೀ ಅಪ್ಪುಕುಟ್ಟ್. ಇವರೆಲ್ಲರನ್ನು ಅಧ್ಯಯನಕ್ಕಾಗಿ ದೇಶದ ಅನೇಕ ದೇವಾಲಯಗಳಿಗೆ ಕಳುಹಿಸಿ, ಅಲ್ಲಿಯೇ ಕುಳಿತು ರೇಖಾಚಿತ್ರಗಳನ್ನು ಮಾಡಿಕೊಳ್ಳುವುದು, ಆ ಶೈಲಿಯನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ, ನಂತರ ಅನುಕರಣೆ ಮಾಡಿ ಶಿಲ್ಪ ರಚಿಸುವುದು ಇದು ಅವರ ಅಧ್ಯಯನದ ರೀತಿ. ಅದುವರೆಗೂ ಮೈಸೂರ ಶೈಲಿಯೇ ಪ್ರಚಾರದಲ್ಲಿದ್ದ, ಎಲ್ಲ ಶಿಲ್ಪಿಗಳನ್ನೂ ಪುರಾತನ ಶೈಲಿಗಳನ್ನು ಅನುಸರಿಸುವಂತೆ ಹುರಿದುಂಬಿಸುತ್ತಿದ್ದರು. ಶಿಲ್ಪಕಲೆ ಮಾತ್ರವಲ್ಲ ಡಿಸ್ರೈ ಸೆಂಟರಿನಲ್ಲಿದ್ದ ಇತರ ಕುಶಲಕಲೆಗಳಿಗೂ, sheet metal work Terracota ಮುಂತಾದ ಕಲೆಗಳಲ್ಲೂ ಭಾರತೀಯನ್ನು ತುಂಬಿದರು. ಕರ್ನಾಟಕದ ಕಲಾವಿದರಿಗೆ ಹಿಂದಿನ ಕಲೆಗಳ ಮಹತ್ವ ತಿಳಿಸಿ, ಅದರಂತೆ ಮಾಡುವುದರಲ್ಲಿ ಶ್ರೇಯಸ್ಸಿದೆ ಎಂದು ತೋರಿಸಿಕೊಟ್ಟ ಮೊದಲಿಗರೇ ಹರಿಹರ್ರರವರು ಎಂದರೆ ತಪ್ಪಾಗಲಾರದು.

ಇದೇ ಸಂದರ್ಭದಲ್ಲಿ ಡಿಸ್ರೈ ಸೆಂಟರ್‌ರನ್ನು ಸೇರಿದ ಮತ್ತೊಬ್ಬ ಮಹಾ ಕಲಾವಿದರೆಂದರೆ ಶ್ರೀ ಅಂಬಿಕಾ ಪ್ರಸಾದ್ ದುಬೆ ಎಂಬುವರು. ಬನಾರಸ್‌ನ ಭಾರತ್ ಕಲಾಭವನದಲ್ಲಿ ಉನ್ನತ ಹುದ್ದೆಯಲ್ಲಿದ್ದ ದುಬೆಯವರು ದಕ್ಷಿಣದ ಶಿಲ್ಪಕಲೆಯ ಬಗ್ಗೆ ಅಪಾರ ಅಭಿಮಾನಹೊಂದಿದ್ದವರು. ಆ ಉದ್ಯೋಗವನ್ನು ಬಿಟ್ಟು ದಕ್ಷಿಣ ಭಾರತದಲ್ಲಿ ನೆಲೆಸುವ ಆಸೆಯಿಂದ ಆಸಕ್ತಿಯಿಂದ ಡಿಸ್ರೈ ಸೆಂಟರ್‌ನಲ್ಲಿ ಚಿತ್ರರಚನಾಕಾರವಾಗಿ ಕೆಲಸಕ್ಕೆ ಸೇರಿದವರು. ದೇವಾಲಯಗಳಿಗೆ ಹೋಗಿ ರೇಖಾಚಿತ್ರ ಮಾಡುವುದೆಂದರೆ ಇವರಿಗೆ ಬಹಳ ಪ್ರೀತಿ. ಯಾವುದಾದರೂ ಶಿಲ್ಪದ ಮುಂದೆ ನಿಂತರೆ, ಅದು ಮೇಲ್ಭಾವಣಿಯಲ್ಲಿದ್ದರೂ, ಪೆನ್‌ನಿಂದ ಒಂದೇ ಬಾರಿ ರೇಖಾಚಿತ್ರ ಬರೆದು ಮುಗಿಸುತ್ತಿದ್ದರು. ರೇಖಾಚಿತ್ರದ ಮೇಲೆ ಅಷ್ಟೊಂದು ಹಿಡಿತ ಮತ್ತು ಗಮನಿಸುವುದರಲ್ಲಿ ಅಷ್ಟೊಂದು ಚುರುಕು, ಅಲ್ಲಿಯ ಕಲಾವಿದರಿಗೆ ರೇಖಾಚಿತ್ರ ಮಾಡಿಕೊಟ್ಟರೆ, ಆ ಕೆಲಸ ಅಷ್ಟೊಂದು ಅಚ್ಚುಕಟ್ಟಾಗಿ ಬರುತ್ತಿತ್ತು. ಹೀಗೆ ಹರಿಹರ್ರರವರಿಂದ, ಅವರು ಡಿಸ್ರೈ ಸೆಂಟರಿನಲ್ಲಿರುವಷ್ಟು ಕಾಲ

ಭಾರತೀಯ ಕಲೆಗಳಿಗೆ ಹೋದ ಜೀವ ಬಂದು, ಶಿಲ್ಪದಲ್ಲೂ ಬದಲಾವಣೆಗಳಾಯಿತು.

ಶ್ರೀ ಹರಿಹರ್ರರವರು ತಮ್ಮ ವಿಶ್ರಾಂತ ಜೀವನದಲ್ಲಿ ಬಸವನ ಗುಡಿಯಲ್ಲಿ 'ಹಿಂದ್-ನಿಪ್ರ್ ಕ್ರಾಫ್ಟ್ ಟ್ರೈನಿಂಗ್ ಸೆಂಟರ್' ಎಂಬ ಯೋಜನೆ ಪ್ರಾರಂಭಿಸಿದರು. ನಮ್ಮ ಮಹಿಳೆಯರು ತಮ್ಮ ಬಿಡುವಿನ ವೇಳೆಯಲ್ಲಿ ಕೆಲವು ಕುಶಲಕಲೆಗಳನ್ನು ಕಲಿತು, ಅದನ್ನೇ ತಮ್ಮ ಹವ್ಯಾಸ ಮಾಡಿಕೊಂಡರೆ, ವೇಳೆಯ ಸದುಪಯೋಗವೂ ಆಗುತ್ತದೆ, ಪ್ರಯತ್ನಿಸಿದರೆ ಮನೆಗೆ ಆರ್ಥಿಕ ನೆರವನ್ನೂ ನೀಡಬಹುದು ಎಂಬ ಯೋಜನೆ. ವಾದಿರಾಜರಲ್ಲಿ ಆ ವೇಳೆಗಾಗಲೇ ಶಿಲ್ಪ ಕಲಿಯಲು ಪ್ರಾರಂಭಿಸಿ ೮ ವರ್ಷಗಳಾಗಿತ್ತು, ಹರಿಹರ್ರರವರನ್ನು ನೋಡಿದ್ದೆ, ಶಿಲ್ಪಕ್ಷೇತ್ರದಲ್ಲೇ ನಿರಂತರ ಕೆಲಸ ಮಾಡುತ್ತೇನೆಂದು ಪಣ ತೊಟ್ಟಿದ್ದೂ ಅವರ ಪ್ರಭಾವದಿಂದಲೇ. ಮೊದಲೇ ಆಸಕ್ತಿಯಿಂದ ಶಿಲ್ಪಕ್ಷೇತ್ರವನ್ನು ಪ್ರವೇಶಿಸಿದ ನನಗೆ ಅಡೆತಡೆಗಳಿರಲಿಲ್ಲವೆಂದಲ್ಲ. ಆ ಸಂದರ್ಭದಲ್ಲಿ "ಅಗ್ನಿಸಾಕ್ಷಿಯಾಗಿ ಮದುವೆ ಮಾಡಿಕೊಳ್ಳುವಂತೆ, ಅಗ್ನಿ ಸಾಕ್ಷಿಯಾಗಿ ಈ ಕಲಿಕೆಯನ್ನು ಬಿಡುವುದಿಲ್ಲ ಎಂದು ದೇವರ ಮುಂದೆ ಪ್ರಮಾಣ ಮಾಡು ಎಂದು ನನ್ನಲ್ಲಿ ಎಂದೂ ಆರದ ಆಸಕ್ತಿಯನ್ನು ತುಂಬಿದ ಅವರನ್ನು ನೆನೆಯದ ದಿನವಿಲ್ಲ.

ಆ ಸಮಯದಲ್ಲಿ ಹಿಂದ್-ನಿಪ್ರ್ ತರಬೇತಿ ಕೇಂದ್ರದ ಉದ್ಘಾಟನೆಗೆ ತಯಾರಿ ನಡೆಸುತ್ತಿದ್ದೆವು. ಬಸವನಗುಡಿಯ ನ್ಯಾಷನಲ್ ಕಾಲೇಜಿನ ವೃತ್ತದ ಬಳಿ, ಮೂಲೆ ಮನೆ ಅದು, ಮನೆಯ ಮುಂದೆ ರಂಗೋಲಿ, ಮಾವಿನತೋರಣದ ಅಲಂಕಾರ ಪ್ರಾರಂಭಿಸಿದ್ದೆವು. ಇದು ಹರಿಹರ್ರರವರ ಶೈಲಿ. ಮನೆಯ ಮುಂದೆ ೨ ಎಳೆಗಳಲ್ಲಿ ಸಂಪ್ರದಾಯಿಕವಾಗಿ ಮಹಿಳೆಯರು ರಚಿಸುವ 'ಪದ್ಮ' ರಚಿಸುತ್ತಿದ್ದೆ. ಅದನ್ನು ಎಷ್ಟು ದೊಡ್ಡದಾಗಿ ಬೇಕಾದರೂ ಹೆಚ್ಚಿಸಿಕೊಂಡು ಹೋಗಬಹುದು. ಬರೀ ಕಣ್ಣಳತೆಯಲ್ಲೇ ಪ್ರಮಾಣ ಬದ್ಧವಾಗಿ ಎಷ್ಟು ದೊಡ್ಡದಾಗಿ ಬೇಕಾದರೂ ಹೆಚ್ಚಿಸಿಕೊಂಡು ಹೋಗಬಹುದು. (Geometrical Pattern). ರಂಗೋಲಿಯಲ್ಲಿ ಚುಕ್ಕಿ ರಂಗೋಲಿ, ಎರಡು, ನಾಲ್ಕು ಎಳೆಗಳಿಂದ ರಚಿಸುವ ರೇಖೆ ರಂಗೋಲಿ ಇದು ಸಾಮಾನ್ಯವಾಗಿ ತಾಯಿಯಿಂದ ಮಗಳಿಗೆ ಬರುವ ವಿದ್ಯೆ. ಅಲ್ಲೇ ನಿಂತಿದ್ದ ಹರಿಹರ್ರರವರು "ಇದು ನಿಜವಾದ ರಂಗೋಲಿ, ಸೂರ್ಯೋದಯ, ಸೂರ್ಯಾಸ್ತಮಾನ,



ಚಾಲುಕ್ಯ ಶಿಬಿರದಲ್ಲಿ ರಚಿಸಿದ ಶಿಲ್ಪ

ಪಶುಪಕ್ಷಿ, ನವಿಲು ಮುಂತಾದವುಗಳನ್ನು ಪೇಯಟಿಂಗ್ ಮಾಡುವ ರೀತಿ ಮಾಡಬಾರದು. **"ಚುಕ್ಕೆ ಗೆರೆಗಳ ಸುಂದರ ಸಮ್ಮಿಲನವೇ ನಮ್ಮ ಸಂಪ್ರದಾಯ ಶೈಲಿಯ ರಂಗೋಲಿ"** ಎಂದು ಹೇಳಿ ನನಗೆ ಭಾರತೀಯ ಕಲೆಗಳ ಬಗ್ಗೆ ಕಲಿಸಿದ್ದು ನನ್ನ ಸೌಭಾಗ್ಯ.

ಹೀಗೆ ಹರಿಹರ್ಚರವರ ಪ್ರಭಾವದಿಂದ ಶಿಲ್ಪ ಕಲಾವಿದರಲ್ಲಿ ಯೋಚನಾ ದೃಷ್ಟಿ ಬದಲಾಗಿ, ಹಳೆಯ ಶೈಲಿಗಳ ಮರುಹುಟ್ಟು ಪ್ರಾರಂಭವಾಯಿತು. ಭಾರತಾದ್ಯಂತ ಇಂತಹ ನಾಲ್ಕೈದು ಡಿಸೈನ್ ಸೆಂಟರುಗಳಿದ್ದು ಭಾರತೀಯ ಕಲೆಗಳಿಗೆ ಹೊಸ ಚೈತನ್ಯ ತರುವ ಕಾರ್ಯಕದಲ್ಲಿ ತೊಡಗಿವೆ. ಆಯಾಪ್ರಾಂತ್ಯದಲ್ಲಿರುವ ಕಲೆಗಳ ಹಿರಿಮೆಯನ್ನು ಎತ್ತಿ ಹಿಡಿಯುವುದು, ಯಥಾವತ್ತಾಗಿ ಅನುಕರಣದ ಮೂಲಕ ಅಧ್ಯಯನ ಮಾಡುವುದು, ಅದೇ ಶೈಲಿಯ ವಿನ್ಯಾಸಗಳಲ್ಲಿ ಸ್ವಂತ ಕೃತಿಗಳನ್ನು ರಚಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡು, ಕಲಾವಿದರಿಗೆ ವಿಶೇಷ ಪ್ರೋತ್ಸಾಹ ನೀಡುವುದರೊಂದಿಗೆ, ಭಾರತೀಯ ಕಲೆಗಳನ್ನು ಉಳಿಸಿ, ಬೆಳೆಸುವುದರಲ್ಲೇ ನಾಡಿನ ಉನ್ನತಿ ಅಡಗಿದೆ ಎಂಬ ಸತ್ಯವನ್ನು ಎಲ್ಲರಿಗೂ ಮನದಟ್ಟಾಗುವಂತೆ ತಿಳಿಸಿದರು. ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಕೂಡ "ರಾಷ್ಟ್ರ ಪ್ರಶಸ್ತಿ, ಗೌರವಧನಗಳನ್ನು ನೀಡಿದ್ದಲ್ಲದೆ, ಪ್ರಶಸ್ತಿ ಪಡೆದ ಕಲಾವಿದರ ಮಾರ್ಗದರ್ಶನದಲ್ಲಿ ತರಬೇತಿ ಯೋಜನೆಗಳು, ಕಲೆಗಳ ಗುಣಮಟ್ಟ ಉಳಿಸಿಕೊಳ್ಳಲು ಮಾರ್ಕೇಟಿಂಗ್ ಕ್ಲಿನಿಕ್ ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಲೆಗಳ ಸರ್ವತೋಮುಖವಾದ ಬೆಳವಣಿಗೆಗೆ ಕಾರಣರಾದರು.

ಇದರಿಂದ ಭಾರತೀಯ ಕಲಾವಸ್ತುಗಳಿಗೆ ವಿದೇಶಿ ಮಾರುಕಟ್ಟೆ ದೊರೆತು, ವಿಪರೀತ ಬೇಡಿಕೆಗಳು ಇಂದಿಗೂ ಇವೆ. ಇದರಿಂದ ಸ್ಫೂರ್ತಿ ಪಡೆದ ರಾಜ್ಯ ಸರ್ಕಾರಗಳು ಸಹ ರಾಜ್ಯ ಕರಕುಶಲ ಮಂಡಲಿಗಳನ್ನು ಸ್ಥಾಪಿಸುವುದು, ಶಾಸ್ತ್ರೀಯ ಕಲೆಗಳಿರುವಂತೆ ಈ ಲಲಿತಕಲೆಗಳಿಗೂ ಅಕಾಡೆಮಿಗಳ ಸ್ಥಾಪನೆ, ವೃತ್ತಿ ಕಲಾವಿದರನ್ನು ಗುರುತಿಸಿ ಗೌರವಿಸುವುದು, ಅವರ ಬೇಡಿಕೆಗಳಿಗೆ ಸ್ಪಂದಿಸುವುದು ಹೀಗೆ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಾಕಿಕೊಂಡು, ನಡೆಸಿಕೊಂಡು ಬರುತ್ತಿದ್ದಾರೆ.

"ಸಂಪ್ರದಾಯ ಶೈಲಿಗಳನ್ನು ಜೀವಂತವಾಗಿರಿಸಿರುವುದಕ್ಕೆ" ಎಂದು ನಮ್ಮ ರಾಜ್ಯದವರಾದ ಶ್ರೀ ವಾದಿರಾಜ್, ಶ್ರೀ ಪರಮೇಶ್ವರಾಚಾರ್ ಮತ್ತು ಶ್ರೀ ಅಪ್ಪುಕುಟ್ಟನರವರಿಗೆ ಮೊದಲ ಬಾರಿಯ ರಾಷ್ಟ್ರ ಪ್ರಶಸ್ತಿ ದೊರೆಯಿತು, ಇದು ೧೯೬೫ ಇಸವಿಯಲ್ಲಿ

ಶ್ರೀ ವಾದಿರಾಜರ ಮನೆಯಲ್ಲಿ ಗುರು-ಶಿಷ್ಯ ಪರಂಪರೆ

ಶ್ರೀ ಶಿಲ್ಪಿ ಸಿದ್ಧಲಿಂಗ ಸ್ವಾಮಿಗಳ ಶಿಲ್ಪಕಲಾ ಕೇಂದ್ರ ಮೈಸೂರಿನ ಮೊದಲ ಶಿಲ್ಪಕಲಾಶಾಲೆ. ಅದರ ನಂತರ ಬೇರೆ ಯಾವ ಶಾಲೆಯೂ ಇದ್ದಂತಿಲ್ಲ, ಇದ್ದರೂ ಅಷ್ಟೊಂದು ಪ್ರಭಾವ ಶಾಲಿಯಾಗಿರಲಿಲ್ಲ. ಶಿಲ್ಪಿ ಸಿದ್ಧಲಿಂಗಸ್ವಾಮಿಗಳ ನಂತರ ಮತ್ತೊಂದು ಶಾಲೆ, ಅಥವಾ ಗುರುಕುಲ ಎಂದರೆ ವಾದಿರಾಜರದಾಗಿತ್ತು. ಮೊದಲೇ ವಾದಿರಾಜರು ಸ್ಥಿತಿವಂತರಲ್ಲ, ಅಂದಮೇಲೆ ವಾಸಕ್ಕೆ, ತರಬೇತಿಗೆ ಎಲ್ಲಿ ಜಾಗ ತರುತ್ತಿದ್ದರು? ಇವರ ಕಲಿಸುವ ವಿಧಾನ ಬಹಳ ಸರಳವಾಗಿತ್ತು. ಮೊದಲನೆಯದಾಗಿ ನಿಗದಿತ ಸಮಯ ಎಂದು ಯಾವತ್ತೂ ಇಲ್ಲ, ಅಧ್ಯಯನದ ಪಟ್ಟಿಯಿಲ್ಲ, ಕಲಿಯಲು ಫೀ ಕೊಡ ಬೇಕಾಗಿಲ್ಲ. ಬೇರೆ ಶಾಲೆಗಳಂತೆ ತರಬೇತಿ ನಡೆಸುವ ಯಾವ ಉದ್ದೇಶವೂ ಅವರಲ್ಲಿರಲ್ಲ. ಆಸಕ್ತಿಯಿಂದ ಕಲಿಯುವ ಯಾರಿಗಾದರೂ ಪ್ರವೇಶವಿರುತ್ತಿತ್ತು. ಸಮಯ ಕಲಿಯುವವರ ಅನುಕೂಲಕ್ಕೆ ತಕ್ಕಂತೆ. ಇನ್ನು ಫೀ ಬಗ್ಗೆ ಮಾತೇ ಇಲ್ಲ. ಡಿಸೈನ್ ಸೆಂಟರಿನ ಕೆಲಸಕ್ಕೆ ರಾಜೀನಾಮೆ ಕೊಟ್ಟಮೇಲೆ ವಾದಿರಾಜರು ಹೆಚ್ಚು ಸಮಯ ಮನೆಯಲ್ಲೇ ಕೆಲಸ ಮಾಡುತ್ತಿದ್ದುದರಿಂದ ಸಮಯದ ಬಗ್ಗೆ ಎಂದೂ ಯೋಚಿಸುತ್ತಿರಲ್ಲ. ಹರಿಹರ್ಚರವರು ವಿಶ್ರಾಂತಿ ಪಡೆದಿದ್ದರು. ಅವರ ಪರಿಚಯದಿಂದ ದೇಶವಿದೇಶಗಳ ಹಲವಾರು ಕಲಾಪೋಷಕರ ಪರಿಚಯವಾಗಿ ವಾದಿರಾಜರು ಅವರ ಬೇಡಿಕೆಗಳನ್ನು ಮಾಡಿಕೊಡುತ್ತಿದ್ದರು. ಆದರೆ ಎಲ್ಲ ಬೇಡಿಕೆಗಳು ಸಂಪ್ರದಾಯ ಶೈಲಿಯ ಶಿಲ್ಪಗಳೇ, ಕಲ್ಲು, ಮರ, ಶ್ರೀಗಂಧದ ಮರ ಹೀಗೆ ವಿವಿಧ ಮಾಧ್ಯಮಗಳಲ್ಲಿ, ವಿವಿಧ ಶೈಲಿಗಳಲ್ಲಿ ಮತ್ತು ವಿವಿಧ ಅಳತೆಗಳಲ್ಲಿ ಮಾಡುವ ಅವಕಾಶ ಸಿಕ್ಕಿತ್ತು. ಇಂತಹ ಅಧ್ಯಯನದಲ್ಲಿ ತೊಡಗಿದ್ದ ಸಂದರ್ಭದಲ್ಲೇ ವಾದಿರಾಜರಿಗೆ ರಾಷ್ಟ್ರ ಪ್ರಶಸ್ತಿಯೂ ಬಂದಿತು. ನಾನು ಆಗಷ್ಟೇ ಪದವಿ ಮುಗಿಸಿ, ಕಲಾಮಂದಿರದಲ್ಲಿ ಚಿತ್ರಕಲೆ ಕಲಿಯಲು ಪ್ರಾರಂಭಿಸಿದ್ದೆ. ವಾದಿರಾಜರ ಪರಿಚಯ ಶ್ರೀ ಎ. ಸುಬ್ಬರಾಯರಿಂದ ಈಗಾಗಲೇ ಆಗಿತ್ತು, ನನ್ನಣ್ಣ ಶ್ರೀನಿವಾಸಮೂರ್ತಿ ವಾದಿರಾಜರಲ್ಲಿ ಮಣ್ಣಿನಲ್ಲಿ ಕಲಿಯುತ್ತಿದ್ದ ನನಗೂ ಕಲಿಯುವ ಆಸೆಯಾಯಿತು, ಆದರೆ ಮನೆಯಲ್ಲಿ ತಂದೆ ತಾಯಿಗಳು ಒಪ್ಪಬೇಕಲ್ಲ. ನಾವೆಲ್ಲ ಒದಿನ ಸಲುವಾಗಿ ಬಸವನಗುಡಿಯಲ್ಲಿದ್ದೆವು. ತಾಯಿಯವರು ಬೆಂಗಳೂರಿಗೆ ಬಂದಾಗ ಶ್ರೀ ವಾದಿರಾಜರ ಮನೆಗೆ ಕರೆದು ಕೊಂಡುಹೋಗಿ ವಾದಿರಾಜರ ಕೆಲಸಗಳನ್ನು ತೋರಿಸಿದೆವು. ಮೈಸೂರಿನ ಗೌರಿಗಣೇಶ ಮಾಡುವ ಕಲಾವಿದರು ನಮ್ಮ ತಾಯಿಯ ಸೋದರಮಾವ ಕೃಷ್ಣಶಾಸ್ತ್ರಿಗಳು. ತಾಯಿಯವರಿಗೆ

ಕಲೆಯಲ್ಲಿ ಆಸಕ್ತಿಯಿದ್ದರೂ, ಚಿಕ್ಕವಯಸ್ಸಿಗೇ ಮದುವೆಯಾಗಿ ಶ್ರೀಮಂತರ ಮನೆ ಸೇರಿದ್ದರಿಂದ ಕಲಿಯಲು ಅವಕಾಶವೇ ಇರಲಿಲ್ಲ. ವಾದಿರಾಜರ ಕೆಲಸ ನೋಡಿದ್ದೇ ನನಗೆ ಕಲಿಯಲು ಅನುಮತಿಯಿತ್ತರು. ಸರಿ ಅಲ್ಲಿಂದ ಪ್ರಾರಂಭವಾಯಿತು ನನ್ನ ಶಿಲ್ಪದ ಅಧ್ಯಯನ.

ರಾಷ್ಟ್ರ ಪ್ರಶಸ್ತಿ ಪಡೆದ ಕಲಾವಿದರ ನಿರ್ದೇಶನದಲ್ಲಿ ನಡೆದ ತರಬೇತಿ ಯೋಜನೆಯಲ್ಲಿ ನಾನು ಮತ್ತು ಶ್ಯಾಮಾಚಾರ್ ಎಂಬ ಕಾರ್ಕಳದ ಯುವಕ ಕಲಿಯಲು ಪ್ರಾರಂಭಿಸಿದೆವು. ತರಬೇತಿ ಮುಗಿದ ಮೇಲೆ ನಾವಿಬ್ಬರೂ ವಾದಿರಾಜರ ಮನೆಯಲ್ಲೇ ಕಲಿಕೆಯನ್ನು ಮುಂದುವರೆಸಿದೆವು. ೧೯೬೫ರಿಂದ ವಾದಿರಾಜರು ಇರುವವರೆಗೂ ೧೯೯೨ರವರೆಗೂ, ನಾನು ಅವರಲ್ಲಿ ವಿದ್ಯೆ ಕಲಿತು, ಅವರ ಕೆಲಸಗಳಲ್ಲಿ ಭಾಗಿಯಾಗುತ್ತ, ಬಹಳ ಹತ್ತಿರದಿಂದ ವಾದಿರಾಜರ ಜೀವನದ ಬಗ್ಗೆ, ಅವರು ರಚಿಸುತ್ತಿದ್ದ ಸಂಪ್ರದಾಯ ಶಿಲ್ಪಗಳ ಬಗ್ಗೆ, ಅದರಲ್ಲೂ ಭಾಗಿಯಾಗುತ್ತ, ಶಿಲ್ಪ ರಚಿಸಲು ಅವರು ನಡೆಸುತ್ತಿದ್ದ ಅಧ್ಯಯನ ಎಲ್ಲವನ್ನೂ ಗಮನಿಸುವ ಅವಕಾಶ ಸಿಕ್ಕಿತು. ಆ ಸಮಯದಲ್ಲಿ ಅವರಿಗೆ ಬರುತ್ತಿದ್ದ ಒಳ್ಳೆಯ ಅವಕಾಶಗಳು, ಅದಕ್ಕಾಗಿ ಅವರು ನಡೆಸುತ್ತಿದ್ದ ಅಧ್ಯಯನ, ಅವರಲ್ಲಿ ಕಲಿಯಲು ಬಂದ ವಿದೇಶೀಯರ ಉತ್ಸಾಹ, ಮತ್ತೆ ಬೇಡಿಕೆಗಳು ಇರಲಿ, ಇಲ್ಲದಿರಲಿ ಕಲೆಯ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ಅಧ್ಯಯನ ಮಾಡುತ್ತಿದ್ದರು. ಕಲ್ಲಿನ ಮುಂದೆ ಕುಳಿತು ಕೆಲಸ ಮಾಡುವುದು ಮಾತ್ರವೇ ಅಧ್ಯಯನ ಆಗಿರಲಿಲ್ಲ. ರೇಖಾಚಿತ್ರಗಳನ್ನು ಬರೆಯುವುದು, ಹಳೆಯ ಪುಸ್ತಕದ ಅಂಗಡಿಗಳಿಗೆ ಹೋಗಿ ಶಿಲ್ಪ ಚಿತ್ರಕಲೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು, ಪತ್ರಿಕೆಗಳನ್ನೂ ಸಂಗ್ರಹಿಸುವುದೂ ಅವರ ಅಭ್ಯಾಸದ ಒಂದು ಭಾಗವಾಗಿತ್ತು. ಹೀಗೆ ಅವರ ಅಧ್ಯಯನ ಎಲ್ಲ ದೇಶಗಳ ಕಲೆಗಳ ಬಗ್ಗೆ, ಕುಶಲಕಲೆಗಳ ಬಗ್ಗೆ, ವಿಸ್ತಾರವಾಗಿ ನಡೆದಿತ್ತು. ರಾಜ್ಯದ ಬೇರೆ ಕಡೆಗಳಲ್ಲಿ ಶಿಲ್ಪಶಾಲೆ ಆರಂಭವಾಗುವುದಕ್ಕೆ ಮೊದಲೇ ವಾದಿರಾಜರ ಮನೆ ಶಿಕ್ಷಣದ ತಾಣವಾಗಿತ್ತು.

ಕೆಲಸಗಳು ಸಿಗದೆ ಎಷ್ಟೋ ತಿಂಗಳುಗಳು ಕಾಯಬೇಕಾಗಿದ್ದ ದಿನಗಳು ಸಹ ಇದ್ದವು. ಅಂತಹ ದಿನಗಳಲ್ಲಿ ಸಣ್ಣಸಣ್ಣ ಪ್ರಮಾಣದ ಶಿಲ್ಪಗಳನ್ನು ಮಣ್ಣಿನಲ್ಲೇ ಮಾಡಿ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಅಚ್ಚು ತೆಗೆದು, ಮತ್ತೆ ಅದರಿಂದಲೇ ಸಣ್ಣ ಶಿಲ್ಪಗಳ ಉತ್ಪಾದನೆ ಮಾಡುವ ಪ್ರಯೋಗ ಮಾಡುತ್ತಿದ್ದರು. ಅಂತಹ ಕೃತಿಗಳು ಜನಸಾಮಾನ್ಯರ ಕೈಗೂ ಸಿಗುವಂತೆ ಮಾಡಿದರು. ಈ ಕೃತಿಗಳನ್ನು ಉಡುಗೊರೆಯಾಗಿ ಕೊಡಲು ಆಸಕ್ತರು ಕೊಳ್ಳುತ್ತಿದ್ದರು. ಬಹುಶಃ ಸಂಪ್ರದಾಯ ಶಿಲ್ಪಿಗಳಲ್ಲಿ ಈ ರೀತಿ ಪ್ರಯೋಗ ಮಾಡಿದವರಿಲ್ಲ. ಇವರ ಪ್ರಯೋಗ ಇತ್ತೀಚಿನ ಫೈಬರ್ ಗ್ಲಾಸ್ ಮಾಧ್ಯಮದ ಉಪಯೋಗದವರೆಗೂ ನಡೆಯಿತು. ಸುಮಾರು ಎರಡು, ಎರಡೂವರೆ ವರ್ಷಗಳು, ಹಗಲೂ ರಾತ್ರಿ ಈ ಅಚ್ಚು ತೆಗೆಯುವ, ಪ್ರತಿಕೃತಿ ಮಾಡುವುದರ ಬಗ್ಗೆ ಹುಚ್ಚರಂತೆ ಕೆಲಸ ಮಾಡಿದರು, ಅದರ ಬಗ್ಗೆ ಎಲ್ಲೆಲ್ಲಿ ಮಾಹಿತಿ ದೊರೆಯುತ್ತಿತ್ತೋ, ಅಲ್ಲೆಲ್ಲಾ ಹುಡುಕಿಕೊಂಡು ಹೋಗಿ ಕಲಿತು ಬರುತ್ತಿದ್ದರು. ಅಷ್ಟೊಂದು ಗಹನವಾಗಿ ಯೋಚನೆ ಮಾಡುತ್ತಾ "ಶಿಲ್ಪಿಗಳು ಸಮಯದೊರೆತಾಗ, ಈ ರೀತಿಯ ಉತ್ಪಾದನೆಯನ್ನು ಕಲಿತು ಪ್ರಾರಂಭಿಸಿದರೆ, ಕೆಲಸವಿಲ್ಲ ಎನ್ನುವುದೂ ತಪ್ಪುತ್ತೆ, ಶಿಲ್ಪಕಲೆ ಬರದವರೂ ಇದನ್ನು ಕಲಿತು ಉತ್ಪಾದನೆಯಲ್ಲಿ ತೊಡಗಬಹುದು" ಎನ್ನುತ್ತಿದ್ದರು. ಈ ಪ್ರಯೋಗಗಳಿಲ್ಲೆಲ್ಲಾ ಇವರಷ್ಟೇ ಉತ್ಸಾಹದಿಂದ, ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದ ಮತ್ತೊಬ್ಬರೆಂದರೆ ಆಧುನಿಕ ಶಿಲ್ಪಿ ಶ್ರೀ ವೆಂಕಟಾಚಲಪತಿ ಅವರು. ವಿಶ್ವೇಶ್ವರಯ್ಯ ಮ್ಯೂಸಿಯಂನಲ್ಲಿ ಅಲ್ಲಿಯ ಅವಶ್ಯಕತೆಗಳಿಗಾಗಿ ಶಿಲ್ಪಗಳನ್ನು ರಚಿಸುತ್ತಿದ್ದ ವೆಂಕಟಾಚಲಪತಿಯವರು ಬೇರೆ ಬೇರೆ ಮಾಧ್ಯಮಗಳಲ್ಲಿ ಅಂದರೆ ಮಣ್ಣು, ಟೆರ್ರಾಕೋಟ, ಪ್ಲಾಸ್ಟರ್, ಕಂಚು ಮಾಧ್ಯಮಗಳಲ್ಲಿ ತದ್ರೂಪಶಿಲ್ಪ, ಆಧುನಿಕ, ಸಮಕಾಲೀನ ಶಿಲ್ಪಗಳಲ್ಲಿ ಪರಿಣತಿ ಪಡೆದಿದ್ದವರು. ಹೆಚ್ಚು ಕಡಿಮೆ ಪ್ರತಿನಿತ್ಯ ಇವರಿಬ್ಬರೂ ಸಂಜೆಹೊತ್ತು, ಸೇರಿ, ಪ್ರಯೋಗಗಳ ಬಗ್ಗೆ ಸಮಾಲೋಚನೆ ನಡೆಸುತ್ತಿದ್ದರು. ಮ್ಯೂಸಿಯಂನ ಬಳಕೆಗಾಗಿ ತರಿಸುತ್ತಿದ್ದ ರಬ್ಬರ್ (ಅಚ್ಚು ತೆಗೆಯಲು) ಸಿಗುವ ಸ್ಥಳಗಳನ್ನು ತಿಳಿದುಕೊಳ್ಳುವುದು, ಅದರ ವಿಳಾಸಗಳನ್ನು ತಂದು ವಾದಿರಾಜರಿಗೆ ಕೊಡುವುದು ಫೈಬರ್ ಗ್ಲಾಸ್ ಹೊಸದಾಗಿ ಬಂದಿದ್ದರಿಂದ, ಅದರ ಪ್ರಯೋಗಗಳ ವ್ಯಾಪ್ತಿ, ಅದನ್ನು ಸಂಪ್ರದಾಯ ಶೈಲಿಯ ಶಿಲ್ಪಗಳಿಗೂ ಅಳವಡಿಸುವುದು, ಹೀಗೆ ಹಲವಾರು ಪ್ರಯೋಗಗಳು ಎಷ್ಟು ಜನಪ್ರದವಾಗಿದೆಯೆಂದರೆ, ಈಗ ಉತ್ಪಾದನೆಯ ಕ್ಷೇತ್ರ ಬಹಳ ದೊಡ್ಡ ಉದ್ಯಮವಾಗಿ ಬೆಳೆದಿದೆ. ಎಷ್ಟೋ ಜನ ಶಿಲ್ಪ ಕಲಿಯದವರೂ ಸಹ ಇದನ್ನು ಕಲಿತು ಬದುಕು ಸಾಗಿಸುತ್ತಿದ್ದಾರೆಂದರೆ, ಈ ಕ್ಷೇತ್ರಕ್ಕೆ ವಾದಿರಾಜರ ಕೊಡುಗೆ ಎಷ್ಟು ಎಂಬುದನ್ನೂ ಊಹಿಸಲೂ ಸಾಧ್ಯವಿಲ್ಲ.

ಈ ವೇಳೆಗಾಗಲೇ ವಾದಿರಾಜರಲ್ಲಿ ಅಶೋಕ ಗುಡಿಗಾರ್, ಜಿ.ಎಲ್. ಭಟ್ ವೆಂಕಟರಮಣ ಭಟ್ ಎಲ್ಲರೂ ಕಲಿಯಲು ಸೇರಿದ್ದರು. ಕರಕುಶಲ ಮಂಡಲಿಯಿಂದ ಮತ್ತೊಮ್ಮೆ ತರಬೇತಿ ಯೋಜನೆಯೂ ಸಿಕ್ಕಿತ್ತು. ಇದರ ಅಡಿಯಲ್ಲಿ ಇವರೆಲ್ಲರ ಜೊತೆ, ಮತ್ತೂ ಕೆಲವರು ಸೇರಿದರು. ಆಗಿನ ರಾಜ್ಯದಲ್ಲಿ ಮಂತ್ರಿಗಳಾಗಿದ್ದ ಶ್ರೀ ಎಂ.ವೈ. ಘೋರ್ಪಡೆಯವರು ವಾದಿರಾಜರ ಕೈಯಿಂದ ಹಲವಾರು ಶಿಲ್ಪಗಳನ್ನು ಮಾಡಿಸಿದ್ದಲ್ಲದೆ, ಅವರ ಸಂಡೂರಿನಲ್ಲಿ ಕೂಡ ಒಂದು ಶಿಲ್ಪಕಲಾ ತರಬೇತಿ ಕೇಂದ್ರವನ್ನು ತೆಗೆದರು.

ಅಲ್ಲಿಯ ಮೂವರು ಶಿಷ್ಯರು ಬೆಂಗಳೂರಿಗೆ ಬಂದರು ಒಂದು ವರ್ಷ ಕಲಿತರು. ಹೀಗೆ ಇವರ ಶಿಷ್ಯರ ಸಂಖ್ಯೆಯೂ ಬೆಳೆಯಿತು. ೧೯೮೨ರ ವೇಳೆಗೆ ವಾದಿರಾಜರು ಬ್ರಿಟನ್ನಿನಲ್ಲಿ ನಡೆದ 'ಭಾರತ ಉತ್ಸವ'ದಲ್ಲಿ ಪಾಲ್ಗೊಂಡು ಐದು ತಿಂಗಳ ಕಾಲ ಬ್ರಿಟನ್ನಿನ ನಾನಾ ಭಾಗಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡುತ್ತ, ಅಲ್ಲಿಯ ಕಲಾವಿದರನ್ನೂ ಬೇಟಿಯಾಗುವ ಅವಕಾಶ ಸಿಕ್ಕಿತು. ಪ್ರಪಂಚದ ಎಲ್ಲ ದೇಶದ ಜನರೂ ತಮ್ಮ ತಮ್ಮ ಸಂಪ್ರದಾಯ ಕಲೆಗಳ ಬಗ್ಗೆ ತಾಳಿದ್ದ ಅಭಿಮಾನ, ಅದನ್ನು ಉಳಿಸಿ ಬೆಳೆಸುವುದರ ಬಗ್ಗೆ ಅವರು ವಹಿಸುತ್ತಿದ್ದ, ಆಸಕ್ತಿ, ಶ್ರದ್ಧೆ ಇವುಗಳನ್ನು ನೋಡಿ ಬಂದ ವಾದಿರಾಜರಿಗೆ ತಾವು ನಡೆಸುತ್ತಿದ್ದ ಅಧ್ಯಯನ ಸರಿಯಾದ ದಾರಿಯಲ್ಲಿದೆ ಎಂಬ ನಂಬಿಕೆ ಬಲವಾಯಿತು. ಅವರ ಆದರ್ಶ ಗುರುಗಳು ಹರಿಹರ್ಕರವರು ೧೯೭೨ರಲ್ಲೇ ವಿಧಿವಶರಾಗಿದ್ದರು. ಅವರ ಶ್ರೀಮತಿ, ಸತೋಕೊ ಹರಿಹರ್ಕರವರು ವಾದಿರಾಜರ ವಿದೇಶಯಾತ್ರೆಯ ಬಗ್ಗೆ ಬಹಳ ಹರ್ಷವ್ಯಕ್ತ ಪಡಿಸಿದ್ದರು.

ಬ್ರಿಟನ್ನಿನಿಂದ ಹಿಂದಿರುಗಿದ ಮೇಲೆ ವಾದಿರಾಜರಿಗೆ ತಮ್ಮ ಮುಂದಿನ ಹಾದಿ ನಿಚ್ಚಳವಾಗಿತ್ತು. ಸಂಪ್ರದಾಯ ಶೈಲಿಗಳ ಅಧ್ಯಯನ, ಅದೇ ಶೈಲಿಗಳಲ್ಲಿ ತಮಗೆ ಬರುವ ಬೇಡಿಕೆಗಳನ್ನು ಮಾಡುವುದು, ಕಿರಿಯರಿಗೆ ಕಲಿಸುವುದು, ಹೀಗೆ ಸಂಪ್ರದಾಯ ಶೈಲಿಗಳಿಗಾಗಿಯೇ ಹುಟ್ಟಿದ್ದೇನೆನೊ ಎಂಬಂತೆ ಕೆಲಸ ಮಾಡುತ್ತಿದ್ದರು. ಇವರ ಆ ಆಲೋಚನೆಗಳಿಗೆ ದೇವರು ಸಹ ಕೈ ಜೋಡಿಸಿರಬೇಕು.

ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಆಶ್ರಮದ ನಂತರ (ಸಾರ್ವಜನಿಕರ ಹಿತಾಸಕ್ತಿಯಿಂದ) ಸಂಪ್ರದಾಯ ಶಿಲ್ಪಶೈಲಿಗಳನ್ನು ಉಳಿಸುವ ಉದ್ದೇಶದಿಂದ ಪ್ರಾರಂಭವಾದ ಶಾಲೆ, ಅಥವಾ ಗುರು-ಕುಲ ವಾದಿರಾಜರದಾಗಿತ್ತು. ದೊಡ್ಡದಾಗಿ ಶಾಲೆ ತೆಗೆಯುವುದಾಗಲೀ, ಪರೀಕ್ಷೆ ಮುಂತಾದ ಅಧ್ಯಯನ ಪಟ್ಟಿಯಾಗಲೀ ವಾದಿರಾಜರ ಉದ್ದೇಶವಾಗಿರಲಿಲ್ಲ. ಅವರ ಅಧ್ಯಯನದ ರೀತಿಯೇ ಬೇರೆಯಾಗಿತ್ತು. ಕಿರಿಯರು ಅನುಸರಿಸುವಂತಹ ಸುಲಭದ ದಾರಿಯಲ್ಲಿ ಹೇಳಿಕೊಡುತ್ತಾ, ತಾವು ಮಾಡುವ ಕೆಲಸಗಳಲ್ಲಿಯೂ ಭಾಗಿಯಾಗುವ ಅವಕಾಶಗಳನ್ನು ಕೊಡುತ್ತ, ಕಲಿಸುತ್ತಿದ್ದರು. ಬಿಡದಿಯ ಕುಶಲಕಲಾ ತರಬೇತಿ ಕೇಂದ್ರ ಕೂಡ ಇಂದಿಗೂ ಇದೇ ರೀತಿ ನಡೆಯುತ್ತಿದೆ.

ವಾದಿರಾಜರು ಬಯಸುತ್ತಿದ್ದ ಕಲಿಸುವಿಕೆಗೆ ತಾನೇತಾನಾಗಿ ಅವಕಾಶ ಒದಗಿ ಬಂದಿತು. 'ಕೌಶಲ್ಯ' ಎಂಬ ಒಂದು ಸಣ್ಣ ಯೋಜನೆ, ಅದರ ನೆರವಿಗೆ ಬಂದುದು ಬೆಂಗಳೂರಿನ ಕೆನರಾ ಬ್ಯಾಂಕ್, ಕೌಶಲ್ಯ ಯೋಜನೆಗೆ ಕಾರಣರಾದವರು ಶ್ರೀಮತಿ ವಿಮಲಾ ರಂಗಾಚಾರ್ ಅವರು ಶ್ರೀಮತಿ ಕಮಲಾದೇವಿ ಛಟ್ಟೋಪಾಧ್ಯಾಯ ಅವರ ಅನುಯಾಯಿಗಳೆಂದರೆ ತಪ್ಪಾಗಲಾರದು. ಕುಶಲಕಲಾವಿದರ ಅಭಿವೃದ್ಧಿಗಾಗಿ, ಅವರ ಸಮಸ್ಯೆಗಳಿಗೆ ಸ್ಪಂದಿಸಲು 'ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ'ದ ಸ್ಥಾಪನೆಯಾಯಿತು. ಇದೊಂದು "ಸ್ವಯಂ ಪ್ರೇರಿತ ಸಾರ್ವಜನಿಕ ಸಂಸ್ಥೆ. ಇಂತಹ ಸಂಸ್ಥೆ ಕೇಂದ್ರದಲ್ಲೂ ಇದೆ. ಕರ್ನಾಟಕದ ಕೇಂದ್ರಕ್ಕೆ ಶ್ರೀಮತಿ ವಿಮಲಾರಂಗಾಚಾರ್‌ರವರು ಹಲವಾರು ಬಾರಿ ಅಧ್ಯಕ್ಷರಾಗಿ ಆರಿಸಿಬಂದು, ಪ್ರಗತಿಪರ ಕೆಲಸಗಳನ್ನು ಮಾಡುತ್ತ ಬಂದಿದ್ದಾರೆ. ಸಾರ್ವಜನಿಕ ಸಹಾಯ ಕ್ಷೇತ್ರದಲ್ಲಿನ ಅವರ ಸೇವಾ ಮನೋಭಾವವನ್ನು ಗುರುತಿಸಿದ ಕೇಂದ್ರ ಸರ್ಕಾರವು ಕೆನರಾಬ್ಯಾಂಕಿನ ನಿರ್ದೇಶಕರನ್ನಾಗಿ ನೇಮಿಸಿತು. ೧೯೮೧ರಿಂದ ೧೯೮೩ರವರೆಗೆ ಇವರ ಸೇವಾ ಅವಧಿಯಾಗಿತ್ತು. ಆ ಸಮಯದಲ್ಲಿ ವಾದಿರಾಜರು ಆಗಷ್ಟೇ ಕ್ರಾಫ್ಟ್ ಕೌನ್ಸಿಲ್ ಉಪಾಧ್ಯಕ್ಷರಾಗಿ ಆರಿಸಿ ಬಂದಿದ್ದರು. ವಾದಿರಾಜರಿಗೆ ಶಿಲ್ಪಕಲೆಯ ಬಗ್ಗೆಯಿದ್ದ ಅಪಾರ ಕಳಕಳಿಯನ್ನು ಗುರುತಿಸಿ, ಶ್ರೀಮತಿ ವಿಮಲಾ ರಂಗಾಚಾರ್ ವಾದಿರಾಜರ ನಿರ್ದೇಶನದಲ್ಲಿ 'ಕೆನರಾ ಬ್ಯಾಂಕಿನ ಕೌಶಲ್ಯ' ಯೋಜನೆಯನ್ನು ರೂಪಿಸಿ, ಅದರ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಈ ಯೋಜನೆಯಡಿಯಲ್ಲಿ ಸಣ್ಣದಾಗಿ ಪ್ರಾರಂಭವಾದ ತರಬೇತಿ ಯೋಜನೆ ದೊಡ್ಡದಾಗಿ ಬೆಳೆದು, ಈಗಿನ ಬಿಡದಿಯಲ್ಲಿರುವ ಕೆಪಿಜೆ ಪ್ರಭು ತರಬೇತಿ ಕೇಂದ್ರವಾಗಿ, ಕೌಶಲ್ಯ ಅದರಲ್ಲೇ ವಿಲೀನವಾಯಿತು. ಕೆನರಾ ಬ್ಯಾಂಕಿನವರು ಸಾರ್ವಜನಿಕ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡು, ಕುಶಲ ಕಲೆಗಳಿಗೆ ಪ್ರೋತ್ಸಾಹ ಕೊಡುತ್ತಿರುವ ಮೊದಲ ಬ್ಯಾಂಕ್.

ಬಿಡದಿಯ ತರಬೇತಿ ಕೇಂದ್ರದಂತೆಯೇ ಕಾರ್ಕಳದಲ್ಲಿ ಶಿಲಾಶಿಲ್ಪ, ಕಾರೈಕುಡಿಯಲ್ಲಿ ಮರದ ಕೆತ್ತನೆಯ ತರಬೇತಿ ಕೇಂದ್ರಗಳನ್ನು ತೆರೆದು, ದೇಶದ ಸ್ವಯಂ ಉದ್ಯೋಗದ ಯೋಜನೆಗಳಿಗೆ ಪುಷ್ಟಿ ಕೊಡುತ್ತಿದೆ.

ಬಿಡದಿಯ ಬಳಿಯ ಜೋಗದ ದೊಡ್ಡಿಯ ಬಳಿ ಐದಾರು ಎಕರೆ ಪ್ರದೇಶದಲ್ಲಿ ಈ ಕೇಂದ್ರ ಸ್ಥಾಪಿತವಾಯಿತು. ಸಂಪ್ರದಾಯ ಶಿಲಾಶಿಲ್ಪ, ದಾರುಶಿಲ್ಪ, ಲೋಹದ ತಗಡಿನಲ್ಲಿ ಉಬ್ಬು ಶಿಲ್ಪ, ಕಂಚಿನ ಪ್ರತಿಮೆಗಳು ಹಾಗೂ ಕುಂಬಾರಿಕೆಗಳಲ್ಲಿ ತರಬೇತಿ ನೀಡಲಾಗುತ್ತದೆ.

ಮೇಲಿನ ಯಾವುದಾದರೂ ಕಲೆಯನ್ನು ಕಲಿಯುವವರಿಗೆ ಅವರ ಆಸಕ್ತಿಯೇ ಮೊದಲ ಅರ್ಹತೆ, ರೇಖಾಚಿತ್ರ ಬಿಡಿಸುವ ಸಾಮರ್ಥ್ಯ, ಸಾಮಾನ್ಯ ವಿದ್ಯಾಭ್ಯಾಸ, ಎಸ್‌ಎಸ್‌ಎಲ್‌ಸಿ ಆಗಿರಬೇಕೆಂಬ ನಿಯಮವೂ ಇಲ್ಲ. ಅಲ್ಲಿಯೇ ವಾಸವಾಗಿದ್ದು ೧೮ ತಿಂಗಳ ಕಾಲ ಅಧ್ಯಯನ ಮಾಡಬೇಕು. ಬೆಂಗಳೂರಿನ

ಗ್ರಾಮಾಂತರ ಪ್ರದೇಶವಾದ್ದರಿಂದ ಹಳ್ಳಿಯ ವಾತಾವರಣ, ಹಾಗಾಗಿ ಬೆಳಗಿಂದ ಸಂಜೆಯವರೆಗೂ ತೀವ್ರ ಅಭ್ಯಾಸದಲ್ಲಿ ತೊಡಗಬೇಕು. ಇದರಿಂದ ಹದಿನೆಂಟು ತಿಂಗಳುಗಳಲ್ಲಿ ಕಲಿಯುವುದು, ಆರು ವರ್ಷಗಳಷ್ಟು ಕಲಿಕೆಯಾಗುತ್ತದೆ. ಇದರಿಂದ ಸ್ವತಂತ್ರವಾಗಿ ತಾವೇ ಶಿಲ್ಪ ಮಾಡಬಹುದಾದ ಅರ್ಹತೆ ದೊರೆಯುತ್ತದೆ. ೧೯೮೨-೮೩ರ ಸುಮಾರಿಗೆ ಈ ಕೇಂದ್ರ ಪ್ರಾರಂಭವಾಯಿತು. ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಾಸಿಸಲು ವ್ಯವಸ್ಥೆಯಿದೆ. ಇದೊಂದು ಗುರು-ಕುಲ ಮಾದರಿಯ ಕೇಂದ್ರ. ಇಲ್ಲಿ ಶುದ್ಧ ಸಂಪ್ರದಾಯ ಶೈಲಿಗಳ ಅಧ್ಯಯನ, ಅವುಗಳನ್ನು ಈಗಿನ ಸಮಾಜದ ಅವಶ್ಯಕತೆಗಳಿಗೆ ಬಳಸುವ ಜಾಣ್ಮೆ, ಸ್ವಯಂ ಉದ್ಯೋಗಗಳನ್ನು ಕೈಕೊಂಡಾಗ ಕೆನರಾಬ್ಯಾಂಕಿನಿಂದ ನೆರವು, ಹೀಗೆ ಅನೇಕ ಉಪಯುಕ್ತ ಯೋಜನೆಗಳಿವೆ. ತರಬೇತಿಯ ನಂತರವೂ ಬ್ಯಾಂಕ್‌ನವರ ನಡೆಸುವ ಶಿಲ್ಪ ತಯಾರಿಕೆ ಕೇಂದ್ರದಲ್ಲೂ ಕೆಲಸ ಮಾಡಬಹುದು. ವಿಶೇಷವಾಗಿ ಗ್ರಾಮೀಣ ಪ್ರದೇಶದಿಂದ ಬರುವ, ಅದರಲ್ಲೂ ಆರ್ಥಿಕವಾಗಿ ಹಿಂದುಳಿದ ವರ್ಗ ಸೇರಿದವರೇ ಹೆಚ್ಚು ಮಂದಿ ಬರುತ್ತಾರೆ. ರಾಜ್ಯ ಮತ್ತು ದೇಶದ ನಾನಾಭಾಗಗಳಿಂದ ಬರುವ ಆಸಕ್ತರಿಗೆ ಈ ಯೋಜನೆ 'ಸರ್ವಜನಾಂಗದ ಉದ್ಧಾರ'ದ ಹಾದಿಯಾಗಿದೆಯೆಂದರೆ ಉತ್ಪ್ರೇಕ್ಷೆಯಾಗುವುದಿಲ್ಲ.

ಈ ತರಬೇತಿ ಯೋಜನೆಯಲ್ಲಿ ವಾದಿರಾಜರು ತಮ್ಮ ಶಿಷ್ಯರಿಗೆ ಕಲಿಸಿದ ರೀತಿಯಲ್ಲೇ ಶಿಕ್ಷಣ ನೀಡಲಾಗುತ್ತದೆ. ಮೊದಲಿಗೆ ವಾದಿರಾಜರ ನೇರ ಶಿಷ್ಯರಾದ ಶ್ರೀ ಅಶೋಕ ಗುಡಿಗಾರ್, ಶ್ರೀ ಜಿ.ಎಲ್. ಭಟ್, ಶಿಲ್ಪದ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಈಗ ಜಿ.ಎಲ್. ಭಟ್ ಮಾತ್ರ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಕಲಿಸುವುದೆಂದರೆ ಭಟ್ ಅವರಿಗೆ ಗುರುಗಳಿದ್ದಷ್ಟೇ ಆಸಕ್ತಿ. ಕಿರಿಯರಿಗೆ ಆಸಕ್ತಿಯಿಂದ ಕಲಿಸುವ ಈ ಕಾರ್ಯವೇ ನಿಜವಾದ ಗುರುದಕ್ಷಿಣೆಯೆಂದು ಭಾವಿಸುತ್ತ "ವಾದಿರಾಜರದು ದೊಡ್ಡ ಜೀವ, ಅವರ ಈ ಸಂತತಿ ಬೆಳೆಯಲಿ" ಎಂದು ಜಪಿಸುವ ಭಟ್ ಅವರ ಕಾಯಕ ನಿಜಕ್ಕೂ ಶ್ಲಾಘನೀಯ.

ಈ ತರಬೇತಿ ಯೋಜನೆಯಡಿ, (ಅಂದರೆ ಬಿಡದಿಯಲ್ಲಿ ಪ್ರಾರಂಭವಾದ ನಂತರ) ೧೯೯೧ರಿಂದ ಸುಮಾರು ೫೦೦ಕ್ಕೂ ಹೆಚ್ಚು ಮಂದಿ ತರಬೇತಿ ಪಡೆದಿದ್ದಾರೆ ಎಂದು ಅಲ್ಲಿಯ ಈಗಿನ ನಿರ್ದೇಶಕರಾದ ಶ್ರೀ ರಾಮಚಂದ್ರ ಮೂರ್ತಿಯವರು, ಈ ತರಬೇತಿಯ ಬಗ್ಗೆ ಸಾಕಷ್ಟು ವಿವರಗಳನ್ನು ನೀಡಿದ್ದಲ್ಲದೆ, ಅಲ್ಲಿಯ ವಿದ್ಯಾರ್ಥಿಗಳಿಗೆ ಮಾತುಗಾರಿಕೆ ಅಭ್ಯಾಸ, ಸ್ವಲ್ಪಮಟ್ಟಿಗೆ ಇಂಗ್ಲೀಷ್ ಭಾಷೆಯ ಪರಿಚಯ, ಲೋಕ ವ್ಯವಹಾರಕ್ಕೆ ಬೇಕಾದ ಜ್ಞಾನ ಇದೆಲ್ಲವನ್ನು ತಾವೇ ನಿರ್ವಹಿಸುವುದಾಗಿ ಹೆಮ್ಮೆಯಿಂದ ಹೇಳಿಕೊಂಡರು.

ಇಲ್ಲಿ ತರಬೇತಿಯ ವಿಶೇಷವೆಂದರೆ ಏನೇ ರಚಿಸಲೀ ಮೊದಲು ರೇಖಾಚಿತ್ರ ಮಾಡಿಕೊಳ್ಳಬೇಕು. ೬ ತಿಂಗಳು ಬರೀ ರೇಖಾಚಿತ್ರದ ಅಭ್ಯಾಸವೇ ನಡೆಯುತ್ತದೆ, ಪಠ್ಯಪುಸ್ತಕ, ಶಾಸ್ತ್ರದ ನೇರವಾದ ಅಧ್ಯಯನವಿಲ್ಲದಿದ್ದರೂ, ಅದರ ಸ್ಥೂಲ ಪರಿಚಯ ಮಾಡಿಕೊಡುತ್ತಾರೆ. ಧ್ಯಾನಶ್ಲೋಕಗಳನ್ನು ಬಾಯಿಪಾಠ ಮಾಡದಿದ್ದರೂ, ಪ್ರತಿಮಾ ಲಕ್ಷಣದ ಬಗ್ಗೆ ತಿಳಿದುಕೊಂಡಿರುತ್ತಾರೆ. ಧ್ಯಾನ ಶ್ಲೋಕಗಳ ಆಧಾರದಿಂದ, ಶಾಸ್ತ್ರದ ಆಧಾರದಿಂದ ರಚಿತವಾಗಿರುವ ನಮ್ಮ ಹಳೆ ಶಿಲ್ಪಗಳ ಅನುಕರಣ ಮಾಡಿಯೇ ಕಲಿಯುವುದು ಸುಲಭಮಾರ್ಗ, ವಾದಿರಾಜರು ಸಹ ಶಾಸ್ತ್ರದ ಅಧ್ಯಯನ ಮಾಡಿರಲಿಲ್ಲ. ಧ್ಯಾನಶ್ಲೋಕಗಳನ್ನು ಬಾಯಿ ಪಾಠ ಮಾಡಿರಲಿಲ್ಲ. ಲಕ್ಷಣ ವಾದ ಶಿಲ್ಪಗಳ ತದ್ರೂಪ ಮಾಡುವುದೇ ನಿಜವಾದ ಅಧ್ಯಯನ ಎಂದು ನಂಬಿದ್ದರು.

ಕೆನರಾಬ್ಯಾಂಕಿನ ಈ ತರಬೇತಿ ಯೋಜನಾ ಕಾರ್ಯ ಬೆಂಗಳೂರು ಗ್ರಾಮಾಂತರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಕಾರ್ಕಳದಲ್ಲಿ ಕಲ್ಲುಕೆತ್ತನೆ ಕಾರ್ಕುಡಿಯಲ್ಲಿ ಮರದ ಕೆತ್ತನೆಯನ್ನು ಕಲಿಸುತ್ತಿರುವ ಯೋಜನೆಗೆ ಶ್ರೀ ಗುಣವಂತ ಭಟ್ ಹಾಗೂ ಶ್ರೀ ಸುಜಯ್ ಎಂಬುವರು ತರಬೇತಿ ನೀಡುತ್ತಿದ್ದಾರೆ, ಬಿಡದಿಯಲ್ಲಿ ತರಬೇತಿ ಪಡೆದ ಪ್ರತಿಭಾವಂತರಿವರು.

ಕೆನರಾ ಬ್ಯಾಂಕಿನ ಈ ತರಬೇತಿ ಯೋಜನೆಗೆ ದೇಶದ ಬೇರೆ ಬೇರೆ ಭಾಗಗಳಿಂದಲೂ ಆಸಕ್ತರು ಬಂದು ಸೇರುತ್ತಿದ್ದಾರೆ. ಜಾತಿ, ಧರ್ಮ ಭಾಷೆಯೆಂಬ ಬೇಧ ಭಾವವಿಲ್ಲದ ಈ ತರಬೇತಿಯಲ್ಲಿ, ಕೆಲವೊಮ್ಮೆ ಭಾಷೆ ತೊಡಕಾಗಬಹುದು. ಅಲ್ಲಿ ಕಲಿತ ನಾಗಾಲ್ಯಾಂಡ್ ಶಿಲ್ಪಿಯೊಬ್ಬನ ನನ್ನ ಬಳಿ ಬಂದಾಗ ಹೇಳಿದಂತೆ ಕಲೆಗೆ ಯಾವ ಭಾಷೆಯ ಅಗತ್ಯವಿಲ್ಲ ಅದಕ್ಕೆ ತನ್ನೇದೇ ಆದ ಭಾಷೆಯಿದೆ. ಈ ಮಾತು ನಿಜ. ವಾದಿರಾಜರಿಗೂ ದೇಶೀಯ ಭಾಷೆಗಳು ಮಾತ್ರ ಬರುತ್ತಿತ್ತು. ಇಂಗ್ಲೀಷ್ ಬರುತ್ತಿರಲಿಲ್ಲ. ಅದರಂತೆಯೇ ಅವರ ಶಿಷ್ಯ ಜಿ.ಎಲ್. ಭಟ್. ಭರೀ ಎಸ್‌ಎಸ್‌ಎಲ್‌ಸಿವರೆಗೆ ಓದಿರುವ ಭಟ್ ಹಲವಾರು ಬಾರಿ ವಿದೇಶಗಳಿಗೆ ಹೋಗಿದ್ದು, ಅಲ್ಲಿ ಭಾರತೀಯ ಸಂಪ್ರದಾಯ ಕಲೆಗಳ ಬಗ್ಗೆ ತಮ್ಮ ಅನುಭವವನ್ನು ವಿದೇಶೀಯರೊಂದಿಗೆ ಹಂಚಿಕೊಂಡಿದ್ದಾರೆ. ಅಲ್ಲಿಯೂ ಕೆಲವು ಮಂದಿ ವಿದೇಶೀಯವರಿಗೆ ಕೆತ್ತನೆ ಕಲಿಸಿದ್ದಾರೆ. ತಮಗೆ ತಿಳಿದ ಹರಕು ಮುರುಕು ಭಾಷೆಯಲ್ಲೇ, ಶಿಷ್ಯರಿಗೆ ಮನದಟ್ಟಾಗುವಂತೆ ಕಲಿಸುವ ಚತುರತೆ ಇವರಿಗಿದೆ.

ವಾದಿರಾಜರ ಶಿಷ್ಯಪರಂಪರೆಯ ಶಿಲ್ಪಗಳನ್ನು ಎಲ್ಲಿದ್ದರೂ ಸುಲಭವಾಗಿ ಗುರುತಿಸಬಹುದಾಗಿದೆ. ಬಡತನದಲ್ಲಿ ಹುಟ್ಟಿ,

ಅನಾಥನಾಗಿ ಬೆಳೆದರೂ, ಶಿಲ್ಪ ವಿದ್ಯೆಯಿಂದ ಆಕರ್ಷಿತರಾಗಿ, ಅದನ್ನೇ ಪಟ್ಟು ಬಿಡದೆ ಅಧ್ಯಯನ ಮಾಡಿ, ಪರಂಪರೆಯನ್ನು ಉಳಿಸಿ, ಬೆಳೆಸಿ, ಕ್ಷೇತ್ರವನ್ನು ಪುನಶ್ಚೇತನಗೊಳಿಸಿದ ವಾದಿರಾಜರ ಈ ಕಾಣಿಕೆ ಬಹಳ ಶ್ರೀಮಂತವಾದುದು "ಇದು ಒಬ್ಬ ಕಲಾವಿದ ತನ್ನ ನಾಡಿಗೆ ನೀಡಬಹುದಾದ ಅತಿದೊಡ್ಡ ಕಾಣಿಕೆ. ಅಂತಹ ಭಾಗ್ಯ ಎಷ್ಟು ಕಲಾವಿದರಿಗೆ ಸಿಗುತ್ತದೆ !"

ಈ ರೀತಿಯ ತರಬೇತಿ ಯೋಜನೆಗಳನ್ನು ರೂಪಿಸುವಲ್ಲಿ ವಾದಿರಾಜರಿಗೆ ಸ್ಫೂರ್ತಿಕೊಟ್ಟ ಮತ್ತೊಂದು ಸಂಸ್ಥೆ ದಕ್ಷಿಣಮಧ್ಯ ಸಾಂಸ್ಕೃತಿಕ ಕೂಟ, ನಾಗಪುರ, ನವರು. ಈ ಸಂಸ್ಥೆಯವರು ಶಿಲ್ಪಕಲೆಯ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಲು ಸೂಚಿಸಲು ವಾದಿರಾಜರ ಬಳಿ ಬಂದರು. ಇವರಿಗೆ ಇದೊಂದು ಸುವರ್ಣಾವಕಾಶವೆನ್ನಿಸಿತು. ವಾದಿರಾಜರ ಡಿಸ್ಪ್ಲೈ ಸೆಂಟರಿನಲ್ಲಿದ್ದಾಗ, ಶಿಲ್ಪಕೇಂದ್ರಗಳಿಗೆ ಹೋಗಿ ಅಭ್ಯಾಸ ಮಾಡುವುದು ಬಹಳ ಪ್ರಿಯವಾದ ಕೆಲಸವಾಗಿತ್ತು. ಕಿರಿಯರಿಗೂ ಈ ಅವಕಾಶ ಮಾಡಿಕೊಡಲು ಯೋಚಿಸಿ, ಕರ್ನಾಟಕದ ಬಾದಾಮಿಯ ಬಳಿ ಮಾಡಬಹುದಾದ ಶಿಲ್ಪ ಅಧ್ಯಯನ ಶಿಬಿರದ ಬಗ್ಗೆ ತಿಳಿಸಿ, ಅದನ್ನು ಯಾವ ರೀತಿ ಮಾಡಬಹುದೆಂದೂ ತಿಳಿಸಿದರು. ಎಸ್.ಸಿ.ಝಡ್.ಸಿ.ಸಿ. ಅಡಿಯಲ್ಲಿ ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಈ ರಾಜ್ಯಗಳು ಬರುತ್ತದೆ. ಈ ೪ ರಾಜ್ಯಗಳಿಂದ ಐದು ಜನ ಯುವ ಶಿಲ್ಪಿಗಳನ್ನು ಆರಿಸಿ, ಬಾದಾಮಿಯ ಗುಹೆಗಳ ಬಳಿಯೇ ಶಿಬಿರ ನಡೆಸುವುದೆಂದು ತೀರ್ಮಾನವಾಯಿತು. ೧೫ ದಿನಗಳ ಕಾಲದ ಈ ಶಿಬಿರದ ಎಲ್ಲ ವ್ಯವಸ್ಥೆಯನ್ನೂ ದಕ್ಷಿಣ ಮಧ್ಯ ಸಾಂಸ್ಕೃತಿಕ ಕೂಟನವರು ಮಾಡಿದರು. ಶಿಬಿರಕ್ಕೆ ನಿರ್ದೇಶನ ವಾದಿರಾಜರು, ಅವರ ಸಹಾಯಕ್ಕೆ ಉಪ ನಿರ್ದೇಶಕರಾಗಿ ನನಗೂ ಮತ್ತು ಶ್ಯಾಮಾಚಾರ್ಯರಿಗೂ ಪಾಲ್ಗೊಳ್ಳುವ ಅವಕಾಶಸಿಕ್ಕಿತು. ಜಿ.ಎಲ್. ಭಟ್ ಅಶೋಕಗುಡಿಗಾರ್ ಸೇರಿದಂತೆ ಬೇರೆ ರಾಜ್ಯಗಳಿಂದ ಬಂದ ಕಲಾವಿದರೂ ಇದ್ದರು. ಶಿಬಿರದ ಸಂಚಾಲಕರಾಗಿದ್ದ ಶ್ರೀ ಪುಂಡಲೀಕ ದೇಶ್‌ಮುಖ್ ಎಂಬುವರು, ಚಿತ್ರಕಲಾವಿದರಾಗಿದ್ದರು, ಅವಕಾಶ ದೊರೆತಾಗ ಅವರೂ ಶಿಲ್ಪ ಮಾಡುವ ಪ್ರಯತ್ನ ಮಾಡುತ್ತಿದ್ದರು. ಆ ಹದಿನೈದು ದಿನಗಳ ಕಾಲದ ಅಧ್ಯಯನ ಬಹಳ ಚೆನ್ನಾಗಿ ನಡೆಯಿತು. ಬರೀ ಶಿಲ್ಪಗಳದೇ



ಚಾಲುಕ್ಯ ಶಿಲ್ಪ ಶೈಲಿಯ ಒಂದು ಶಿಬಿರದ ಒಂದು ನೋಟ

ಕುಟುಂಬ, ಸುತ್ತಲೂ ಶಿಲ್ಪಗಳು, ಮನೆ, ಮಠಗಳ ಯೋಜನೆಯಿಲ್ಲದೆ ಸ್ವರ್ಗದಲ್ಲಿದ್ದಂತಿತ್ತು.

ಮೊದಲ ಮೂರು ದಿನಗಳು ದೇವಾಲಯಗಳನ್ನೆಲ್ಲಾ ಸುತ್ತಿ, ಮಾಡಬೇಕೆಂದಿರುವ ಶಿಲ್ಪಕ್ಕೆ, ಕಲ್ಲಿನ ಅಳತೆಗೆ ತಕ್ಕಂತೆ ರೇಖಾಚಿತ್ರ ಮಾಡಿಕೊಂಡು ಮಿಕ್ಕ ಹತ್ತು ದಿನಗಳಲ್ಲಿ ಶಿಲ್ಪ ಮುಗಿಸಬೇಕಿತ್ತು. ನಮಗೂ ಶಿಲ್ಪ ಮಾಡುವ ಅವಕಾಶವಿದ್ದುರಿಂದ, ಬೇರೆಯವರಿಗೆ ಹೇಳಿಕೊಡುವುದರ ಜೊತೆಗೆ ನಾವೂ ಶಿಲ್ಪ ರಚಿಸಿದೆವು. ಪ್ರತಿಯೊಂದು ಕ್ಷಣವೂ ಆ ಹದಿನೈದು ದಿನಗಳಲ್ಲಿ 'ಶಿಲ್ಪ, ಶಿಲ್ಪ, ಶಿಲ್ಪ' ಬಯಸಿ, ಬಯಸಿ ಈ ಕ್ಷೇತ್ರಕ್ಕೆ ಬಂದ ನಮಗೆಲ್ಲ ಎಂತಹ ಸುವರ್ಣಾವಕಾಶ ಎನ್ನಿಸಿತ್ತು. ಮತ್ತೆ ಮತ್ತೆ ಇಂತಹ ಶಿಬಿರಗಳು ಬಾರದೆ ಎಂದು ಹಾತೊರೆಯುವಂತಿತ್ತು.

ಆ ವೇಳೆಗೆ ವಾದಿರಾಜರು ಶಿಲ್ಪಕಲಾ ಪ್ರತಿಷ್ಠಾನವೆಂಬ ಒಂದು ಸಣ್ಣ ಸಂಸ್ಥೆಯನ್ನು ಪ್ರಾರಂಭಿಸಿದರು. ಸಂಪ್ರದಾಯ ಶೈಲಿಗಳಿಗೆ ಒತ್ತು ಕೂಡುವಂತೆ ಕೆಲಸ ಮಾಡುವುದು, ಶಿಲ್ಪಿಗಳಿಗೂ ಅದರ ಮಹತ್ವ ತಿಳಿಸುವುದೇ ಈ ಸಂಸ್ಥೆಯ ಉದ್ದೇಶವಾಗಿತ್ತು. ಇದಕ್ಕೆ ಪ್ರೊ॥ ಎಸ್.ಕೆ. ರಾಮಚಂದ್ರರಾಯರು ಅಧ್ಯಕ್ಷರಾದರು. ರಾಮಚಂದ್ರ ರಾಯರಿಗಂತೂ ನಮ್ಮ ಪ್ರಾಚೀನ ಶಿಲ್ಪಕಲೆಯ ಬಗ್ಗೆ ಅಪಾರ ಅಭಿಮಾನ, ಶಿಲ್ಪಗ್ರಂಥಗಳನ್ನೆಲ್ಲಾ ಓದಿದ್ದ ಸಂಸ್ಕೃತ ವಿದ್ವಾಂಸರು, ಮತ್ತು ಶಿಲ್ಪಕಲೆಯ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆದವರು. ಸ್ವತಃ ಮಣ್ಣಿನಲ್ಲಿ ಶಿಲ್ಪ ರಚಿಸುವ ಹವ್ಯಾಸವನ್ನೂ ರೂಢಿಸಿಕೊಂಡಿದ್ದರು. ಕಿರಿಯ ಶಿಲ್ಪಿಗಳಿಗೆ ಶಾಸ್ತ್ರದ ಬಗ್ಗೆ, ಕಲೆಯ ಬಗ್ಗೆ ವಾರದಲ್ಲಿ ಒಂದು ದಿನ ಶ್ರೀ ರಾಮಚಂದ್ರರಾಯರು ಒಂದು ಘಂಟೆ ಉಪನ್ಯಾಸ ಮಾಡುತ್ತಿದ್ದರು. ನಮ್ಮೆಲ್ಲರ ಜೊತೆಗೆ ಮತ್ತೊಬ್ಬರು ಸ್ಫೂರ್ತಿದಾಯಕ, ಕ್ರಿಯಾತ್ಮಕ ಚಿತ್ರಕಲಾವಿದರಾದ ಶ್ರೀ ಎಚ್.ಎನ್. ಸುರೇಶ್ ಸೇರಿದ್ದು ಶಿಲ್ಪಕಲಾ ಪ್ರತಿಷ್ಠಾನಕ್ಕೆ ಹಾರಲು ರೆಕ್ಕೆ ಜೋಡಿಸಿದಂತಾಯ್ತು. ವಾದಿರಾಜರ ಶಿಷ್ಯರೆಲ್ಲ ಸದಸ್ಯರಾದರು. ಶಿಲ್ಪಕಲಾ ಪ್ರತಿಷ್ಠಾನವೇ ಒಂದು ಹೊಯ್ಸಳ ಅಧ್ಯಯನ ಶಿಬಿರವನ್ನು ವಾದಿರಾಜರ ಮನೆಯಲ್ಲೇ ಮಾಡಿತ್ತು. ಹತ್ತು ದಿನಗಳ ಈ ಶಿಬಿರದಲ್ಲಿ ಕೊನೆಯ ೩ ದಿನಗಳು ಮಾತ್ರ ವೆಂಕಟಪ್ಪ ಕಲಾ ಶಾಲೆಯಲ್ಲಿ ನಡೆಸಿ, ಸಮಾರೋಪ ಸಮಾರಂಭ ಮಾಡಿದರು. ಮೊದಲ ಬಾರಿಗೆ ಈ ರೀತಿಯ ಅಧ್ಯಯನ ಶಿಬಿರ ನಡೆದದ್ದು ಕಲಾಭಿಮಾನಿಗಳಲ್ಲೂ ಉತ್ಸಾಹ ಮೂಡಿತು. ಕೆಲವರು



ವಾರೆಂಗಲ್‌ನ ಕಾಕತೀಯ ಶೈಲಿಯ ಅಧ್ಯಯನ ಶಿಬಿರ



ಶಿಲ್ಪೋತ್ಸವ ೧೯೮೯ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷರಾದ ಶ್ರೀನಿವಾಸಾಚಾರ್ಯರು ಮುಖ್ಯ ಅತಿಥಿಗಳಾದ ವೀಣೆ ದೊರೆಸ್ವಾಮಿ ಐಯಂಗಾರ್ಯರು

ಸಹಾಯ ಹಸ್ತವನ್ನೂ ನೀಡಿದರು. ಮತ್ತೊಂದು ಶಿಬಿರ ನಡೆಸಲು ಶ್ರೀಯುತ ಚಿರಂಜಿವ್ ಸಿಂಗ್ ಐ.ಎ.ಎಸ್. ಅವರು ಆಹ್ವಾನ ನೀಡಿದರು. ಆಗ ಮೈಸೂರಿನ ಆಡಳಿತ ತರಬೇತಿ ಕೇಂದ್ರದ ಮುಖ್ಯಾಧಿಕಾರಿಗಳಾಗಿದ್ದ ಶ್ರೀಯುತ ಸಿಂಗ್ ಅವರಿಗೆ ವಾದಿರಾಜರ ಬಗ್ಗೆ ಅಪಾರ ಅಭಿಮಾನ. ಅವರ ಎಲ್ಲ ಕೆಲಸಗಳನ್ನೂ ಮೆಚ್ಚುತ್ತಿದ್ದ ಇವರು ಮೈಸೂರಿನಲ್ಲಿ ಚಾಲುಕ್ಯ ಶಿಬಿರವನ್ನು ಏರ್ಪಡಿಸಿದರು. ವಾದಿರಾಜರ ನಿರ್ದೇಶನದಲ್ಲಿ ನಡೆದ ಈ ಶಿಬಿರ ಅತ್ಯಂತ ಯಶಸ್ವಿಯಾಗಿ, ಜನಗಳಿಗೆ ಬಹಳ ಮೆಚ್ಚುಗೆಯಾಯಿತು. ಬೇರೆ ಬೇರೆ ಕಡೆಗಳಿಂದ ಬಂದ ಶಿಲ್ಪಿಗಳೂ ಹೊಸದಾರಿಯಾಯಿತೆಂದು ಸಂತೋಷಪಟ್ಟರು. ಮುಂದೆ ಶಿಲ್ಪಕಲಾ ಪ್ರತಿಷ್ಠಾನ ನಡೆಸಿದ 'ಶಿಲ್ಪೋತ್ಸವ ೧೯೯೦' ರಾಜ್ಯದಲ್ಲೇ ಮೊದಲ ಬಾರಿಗೆ ನಡೆದ ಶಿಲ್ಪಿಗಳ ಸಮ್ಮೇಳನ. ಸಮ್ಮೇಳನಾಧ್ಯರಾಗಿ ಖ್ಯಾತ ಕಂಚು ಶಿಲ್ಪಿ ಶ್ರೀ ಎಸ್.ಪಿ. ಶ್ರೀನಿವಾಸರಾಚಾರ್ಯ ಅವರನ್ನು ಆರಿಸಲಾಯಿತು. ರಾಜ್ಯದ ನಾನಾಭಾಗಗಳಲ್ಲಿರುವ ಶಿಲ್ಪಿಗಳಿಗೆಲ್ಲಾ ಪ್ರದರ್ಶನಕ್ಕಾಗಿ ಶಿಲ್ಪಗಳನ್ನು ಕಳುಹಿಸಲು ಕೋರಲಾಯಿತು. ವಾದಿರಾಜರ ಶಿಷ್ಯರಂತೂ ಶಿಲ್ಪೋತ್ಸವಕ್ಕಾಗಿಯೇ ಶಿಲ್ಪಗಳನ್ನು ರಚಿಸುವ ಉತ್ಸಾಹದಲ್ಲಿದ್ದರು. ಅಧ್ಯಕ್ಷರಾಗಿದ್ದ ಶ್ರೀ ರಾಮಚಂದ್ರರಾಯರು ತಮ್ಮ ಆಶಯ ಭಾಷಣದ ಮೂಲಕ ಸಂಪ್ರದಾಯ ಶೈಲಿಯ ಶಿಲ್ಪಗಳು ನಾಡಿಗೆ ಎಷ್ಟು ಅಗತ್ಯ, ಅದರಿಂದಲೇ ಸಂಸ್ಕೃತಿ ಬೆಳೆಸಲು ಸಾಧ್ಯ ಎನ್ನುವ ಸಂದೇಶವನ್ನೇ ಸಾರಿದರು. ಸಮ್ಮೇಳನಾಧ್ಯಕ್ಷರಿಗೆ ಸನ್ಮಾನ ಮಾಡಿ ಗೌರವ ಸೂಚಿಸಿದ್ದಾಯಿತು. ಸುರೇಶ್ ಅವರ ನೇತೃತ್ವದಲ್ಲಿ ನಡೆದ ಈ ಉತ್ಸವದಲ್ಲಿ ಸಂಗೀತಗಾರರೂ, ನೃತ್ಯಪಟುಗಳು, ವಿದ್ವಾಂಸರೂ ಪಾಲ್ಗೊಂಡು ಉತ್ಸವ "ನ ಭೂತೋ ನ ಭವಿಷ್ಯತಿ" ಎನ್ನುವಂತಾಯಿತು. ಮೊದಲ ಬಾರಿಗೆ ವೆಂಕಟಪ್ಪ ಕಲಾಶಾಲೆಯಲ್ಲಿ ೩೦೦ಕ್ಕೂ ಹೆಚ್ಚು ಶಿಲ್ಪಗಳು ಬೆಂಗಳೂರಿನ ಕಲಾರಸಿಕರ ಕಣ್ಣಿಗೆ ಹಬ್ಬವನ್ನುಂಟು ಮಾಡಿತು. ವಾದಿರಾಜರ ಈ ಸಾಧನೆ ಶಿಲ್ಪಕ್ಷೇತ್ರದಲ್ಲೇ ಒಂದು ಚಳುವಳಿಯಂತಾಗಿ ಶಿಲ್ಪಕಲೆಯ ಅಧ್ಯಯನ ರಾಜ್ಯಕ್ಕೆ ಎಷ್ಟು ಅವಶ್ಯಕತೆಯಿದೆ ಎಂಬುದನ್ನು ಸಾರಿತು. ಸಂಪ್ರದಾಯ ಶಿಲ್ಪಿಗಳಿಗೆ ಒಂದು ಪ್ರತ್ಯೇಕ ಅಕಾಡೆಮಿಯ ಅವಶ್ಯಕತೆಯಿದೆ, ಶಿಲ್ಪಿಗಳಿಗೂ ತಮ್ಮ ಕುಂದುಕೊರತೆಗಳನ್ನು ಯಶಸ್ಸನ್ನು ಹೇಳಿಕೊಳ್ಳುವ ಒಂದು ವೇದಿಕೆ ಬೇಕೆಂದು ಮನವಿ ಮಾಡಿದರು.



ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಬೆಳ್ಳಿ ಮಹೋತ್ಸವ ಸಂದರ್ಭದಲ್ಲಿ ಮಾಡಿದ ಸಮೂಹ ಶಿಲ್ಪ (೧೯೮೭)

ಮುಂದೆ ದಕ್ಷಿಣಮಧ್ಯೆ ಸಾಂಸ್ಕೃತಿಕ ಕೇಂದ್ರ ನೇತೃತ್ವದಲ್ಲಿ ಎಲ್ಲೋರದ ರಾಷ್ಟ್ರಕೂಟ ಶೈಲಿ, ಪೂನಾದಲ್ಲಿ ಭಾವಶಿಲ್ಪ ಶಿಬಿರ, ಆಂಧ್ರದ ಕಾಕತೀಯ ಶೈಲಿಯ ಅಧ್ಯಯನಗಳು ನಡೆದು, ಅಧ್ಯಯನದ ಅಗತ್ಯವೆಷ್ಟಿದೆಯೆಂದು ಯುವ ಶಿಲ್ಪಿಗಳಿಗೆ ಮನದಟ್ಟು ಮಾಡಿದರು. ಹಾಗೆಯೇ ಈ ಸಂಸ್ಥೆಯವರು ಏರ್ಪಡಿಸಿದ್ದ ಖಜುರಾಹೋ ಶಿಬಿರದಲ್ಲಿ ಭಾಗವಹಿಸಲು ವಾದಿರಾಜರ ಆರೋಗ್ಯ ಕೈ ಬಿಡಲಿಲ್ಲ. ಅದೇ ಸಂದರ್ಭದಲ್ಲಿ ಅವರು ದೈವಾದೀನರಾದರು.

ಹೀಗೆ ಶಿಲ್ಪಕ್ಕೆ ಕ್ಷೇತ್ರಕ್ಕೆ ಅಧ್ಯಯನವೇ ಮುಖ್ಯವೆಂದು ತೋರಿಸಿದ ವಾದಿರಾಜರ ಈ ಸಂದೇಶವನ್ನು ಅವರ ಶಿಷ್ಯರೂ, ಬಿಡದಿಯಲ್ಲಿ ಕಲಿತ ಯುವಶಿಲ್ಪಿಗಳೂ ಚಾಚೂತಪ್ಪದೆ ಅನುಸರಿಸುತ್ತಾ ಅವರದೇ ಹಾದಿಯಲ್ಲಿ ನಡೆಯುತ್ತಿದ್ದಾರೆ.

ವಾದಿರಾಜರ ಮತ್ತೊಂದು ಸಾಧನೆಯೆಂದರೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಪಕ್ಕದಲ್ಲಿ ರಚಿಸಿದ 'ಸಮೂಹ ಶಿಲ್ಪ' ಖ್ಯಾತ ಕಲಾವಿದ ಶ್ರೀ ಆರ್.ಎಂ. ಹಡಸದ್‌ರವರು ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲವದು. ಶ್ರೀ ಹಡಸದ್‌ರವರು ಯಾವಾಗಲೂ ಕ್ರಿಯಾಶೀಲರಾಗಿದ್ದ ಬೆಂಗಳೂರಿನ ಕಲಾ ಚಟುವಟಿಕೆಗಳಿಗೆ ಹೊಸ ಚೈತನ್ಯ ನೀಡಿದವರು. ಅವರು ಅಧ್ಯಕ್ಷರಾದ ಮೇಲೆ ಲಲಿತಕಲಾ ಅಕಾಡೆಮಿಯ ಬೆಳ್ಳಿ ಹಬ್ಬದ ಸಲುವಾಗಿ ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಚಿತ್ರ, ಶಿಲ್ಪಗಳು ನಾಡಿಗೆ ಎಷ್ಟು ಅಗತ್ಯ ಎಂಬುದನ್ನು ತೋರಿಸಲು ಶಿಬಿರಗಳನ್ನು ಪ್ರದರ್ಶನಗಳನ್ನೂ, ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿದ್ದರು. ಆಗ ಅವರು ಮಾಡಿದ ಬಹಳ ಮುಖ್ಯವಾದ ಕೆಲಸವೇ ಈ 'ಸಮೂಹ ಶಿಲ್ಪ'ದ ರಚನೆ. ಇಲ್ಲಿ ರಾಜ್ಯದ ಸಂಪ್ರದಾಯ ಮತ್ತು ಸಮಕಾಲೀನ ಶಿಲ್ಪಿಗಳು ಒಟ್ಟಿಗೆ ಸೇರಿ, ಗಟ್ಟಿ ಕಲ್ಲಲ್ಲಿ ಕೆಲಸ ಮಾಡಿ, ಈ 'ಶಿಲ್ಪ ಸಮೂಹ'ದ ಯಶಸ್ಸಿಗೆ ಕಾರಣರಾದರು. ಈ 'ಶಿಲ್ಪ ಸಮೂಹ'ದ ನಿರ್ದೇಶಕರಾಗಿ ವಾದಿರಾಜರೂ, ಶ್ರೀ ಹಡಪದ್‌ರವರೂ ಹೊಸ ಪ್ರಯೋಗವನ್ನು ಮಾಡಿದ್ದಲ್ಲದೆ, ರವೀಂದ್ರ ಕಲಾಕ್ಷೇತ್ರದ ಪಕ್ಕದ ಶಿಲ್ಪ ಉದ್ಯಾನವನದಲ್ಲಿ ಸ್ಥಿರವಾಗಿ ಪ್ರತಿಷ್ಠಾಪಿಸಿದರು. ಕಲಾವಿದರೂ ಯಾವ ಕ್ಷೇತ್ರದವರೇ ಆಗಲಿ, ಯಾವ ಸಂಪ್ರದಾಯದವರೇ ಆಗಲೀ, 'ನಾವೆಲ್ಲರೂ ಒಂದೇ' ಎಂದು ಸಾರುವ ಈ ಶಿಲ್ಪ ವೈವಿಧ್ಯತೆ ಯಲ್ಲಿ ಏಕತೆ ಯನ್ನು ಸಾರುತ್ತರೆ.

೧೯೯೫ರಲ್ಲಿ 'ಶಿಲ್ಪಕಲಾ ಅಕಾಡೆಮಿ'ಯು ಲಲಿತಕಲಾ ಅಕಾಡೆಮಿಯಿಂದ ಪ್ರತ್ಯೇಕವಾಯಿತು. ಈ ಅಕಾಡೆಮಿಯಲ್ಲಿ ಶಿಲ್ಪಿಗಳ ಏಳಿಗೆಗಾಗಿ ಹಲವಾರು ಕಾರ್ಯಕ್ರಮಗಳು ನಡೆಯುತ್ತಿವೆ. ಶಿಲ್ಪದ ಅಗತ್ಯ ಕಂಡುಕೊಂಡ ಕೆಲವು ಪ್ರತಿಷ್ಠಿತ ವ್ಯಕ್ತಿಗಳು




ಗುಪ್ತ ಶೈಲಿಯ ರೇಖಾಚಿತ್ರ
ಪ್ರೊ|| ಎಸ್.ಕೆ. ರಾಮಚಂದ್ರರಾವ್

ಸಂಪ್ರದಾಯ ಶಿಲ್ಪದ ಅಧ್ಯಯನಕ್ಕಾಗಿ ಶಾಲಾ ಕಾಲೇಜುಗಳನ್ನು ತೆರೆದಿದ್ದಾರೆ.

ಕರ್ನಾಟಕದ ಶಿಲ್ಪಕಲಾ ಶಾಲೆಗಳು

ಈ ಶಾಲೆಗಳ ಬಗ್ಗೆ, ನಮ್ಮ ರಾಜ್ಯದಲ್ಲಿರುವ ಅನೇಕ ಶಿಲ್ಪಿಗಳ ಬಗ್ಗೆ ತಿಳಿದುಕೊಳ್ಳಲು ಎಲ್ಲರಿಗೂ ಒಂದು ನಿವೇದನಾ ಪತ್ರ ಬರೆದಿದ್ದೆ. ಕೆಲವು ಶಿಲ್ಪಿಗಳ ಉತ್ಸಾಹದಿಂದ ನನ್ನ ಪತ್ರಕ್ಕೆ ಪ್ರತಿಕ್ರಿಯಿಸಿದ್ದಾರೆ. ಪೂರ್ಣ ಮಾಹಿತಿಗಳನ್ನು ಪಡೆಯಲು ಕಾಲದ ಮಿತಿಯೊಳಗೆ ಸಾಧ್ಯವಾಗಿಲ್ಲ. ನನಗೆ ಸಿಕ್ಕಿರುವ ಕಲಾವಿದರ ಬಗ್ಗೆ, ಶಾಲೆಗಳ ಬಗ್ಗೆ ಮಾತ್ರ ಬರೆಯಲು ಸಾಧ್ಯವಾಗಿದೆ. ಅನೇಕ ವಿವರಗಳು ಸಿಗದಿರುವುದಕ್ಕೆ, ಅವುಗಳ ಬಗ್ಗೆ ಬರೆಯಲಾಗದುದಕ್ಕೆ ವಿಷಾದಿಸುತ್ತೇನೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಸಿಕ್ಕಿ ಪಟ್ಟಿಯಂತೆ, ಕರ್ನಾಟಕದಲ್ಲಿರುವ ಶಿಲ್ಪಕಲಾ ಶಾಲೆಗಳು.



ಕಾರ್ಯನಿರತ ರಥ ಶಿಲ್ಪಶಾಲೆ, ಕೋಟೇಶ್ವರ

೧. ಶ್ರೀ ಸಿದ್ದಲಿಂಗೇಶ್ವರ ಶಿಲ್ಪಕಲಾಕೇಂದ್ರ - ವಿದ್ಯಾಗಿರಿ-ಕಲಾದಿಗಿ

೨. ಶ್ರೀ ಬ್ರಹ್ಮರ್ಷಿ ಶಿಲ್ಪ ಗುರುಕುಲಂ - ಶ್ರೀ ಜ್ಞಾನಾನಂದಾಶ್ರಮ - ನಂದಿ

೩. ಶ್ರೀ ಗುಂಡಪ್ಪ ಮಾಯಾಚಾರ್‌ರವರ - ಶ್ರೀ ಭುವನಶಿಲ್ಪಕಲಾ ಕೇಂದ್ರ, ಬಾಗಲಕೋಟೆ

೪. ಶ್ರೀ ವಿ. ನಾಗರಾಜಶಿಲ್ಪಿ ಗದಗ ಶಿಲ್ಪಕಲಾ ಶಾಲೆ : ಗದಗಿನ ಖ್ಯಾತ ಶಿಲ್ಪಿ ದಿ. ಸೋಮಣ್ಣ ಸಿದ್ದಣ್ಣ ಶಿಲ್ಪಿ ಅವರಿಂದ ಆರಂಭಗೊಂಡ ಈ ಶಾಲೆಯನ್ನು ಅವರ ಶಿಷ್ಯರಾದ ಶ್ರೀ ನಾಗರಾಜ ಶಿಲ್ಪಿಗಳು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ, ತಂದೆಯಿಂದ ಮಕ್ಕಳಿಗೆ ಬರುತ್ತಿರುವ ಬಳುವಳಿ ಈ ಶಾಲೆ. ಇಲ್ಲಿ ಧಾರ್ಮಿಕ ಅವಶ್ಯಕತೆಗಾಗಿ ಶಿಲ್ಪಗಳನ್ನು ಮಾಡಿ ದೇಶ, ವಿದೇಶಗಳಿಗೂ ಕಳುಹಿಸುತ್ತಾರೆ. ನಾಗರಾಜಶಿಲ್ಪಿಗಳ ಮಕ್ಕಳೂ ಶಿಲ್ಪಕಾರ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

೫. ದೇವನಹಳ್ಳಿಯ ಶಿಲ್ಪಕಲಾ ಶಾಲೆ : ದೇವನಹಳ್ಳಿಯ ಎ.ಸಿ.ಹೆಚ್. ಆಚಾರ್ಯರಿಂದ ಪ್ರಾರಂಭವಾದ ಈ ಶಾಲೆ ವಂಶಪಾರಂಪರ್ಯವಾಗಿ ಮಾತ್ರವಲ್ಲ ಗುರು-ಕುಲ ಪದ್ಧತಿಯಲ್ಲೂ ಮುಂದುವರೆಯುತ್ತಿದೆ. ಇಲ್ಲಿ ಪ್ರಾಚೀನ ಶಿಲ್ಪ ಶಾಸ್ತ್ರ ಜ್ಞಾನ, ಆಗಮ, ಜೋತಿಷ್ಯ ಶಾಸ್ತ್ರಗಳ ಅಧ್ಯಯನ ಕೂಡ ನಡೆಯುತ್ತಿತ್ತು. ರಾಷ್ಟ್ರದ ಅನೇಕ ಹಿರಿಯರು ಈ ಶಾಲೆಗೆ ಭೇಟಿಯಿತ್ತು. ಆಚಾರ್ಯರ ಕಾರ್ಯವೈಖರಿಯನ್ನು ನೋಡಿ ಮೆಚ್ಚಿದ್ದಾರೆ. ಸುತ್ತಮುತ್ತಲಿಗೆ ಹಳ್ಳಿಗಳ ಧಾರ್ಮಿಕ ಅಗತ್ಯಗಳನ್ನು ಪೂರೈಸುವ ಇವರ ಕೀರ್ತಿ ಸಾಗರದಾಚೆಗೂ ಹಬ್ಬಿದೆ. ಅನೇಕ ವಿದೇಶಿಯವರು ಸಹ ಇಲ್ಲಿಗೆ ಬಂದು ಆಚಾರ್ಯರ ಕೆಲಸಗಳನ್ನು ಮೆಚ್ಚಿದ್ದಾರೆ. ಅವರು ಶಿಲ್ಪಕಲೆಯ ಪ್ರಚಾರಕ್ಕಾಗಿ ಶ್ರಮಿಸುತ್ತಿರುವುದನ್ನು ಕಣ್ಣಾರೆ ಕಂಡಿದ್ದಾರೆ. ಆಚಾರ್ಯರ ಮರಣದ ನಂತರ ಅವರ ಪತ್ನಿ ಶಿಲ್ಪಿ ಸರೋಜಾದೇವಿಯವರು ಶಾಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆಚಾರ್ಯರ ವಂಶಕ್ಕೆ ಸೇರಿದ ಖ್ಯಾತ ಕಲಾವಿದ ಶ್ರೀ ಬಿ.ಕೆ.ಎಸ್.



ಶ್ರೀ ಸೋಮಣ್ಣ ಸಿದ್ದಣ್ಣ ಶಿಲ್ಪಿ - ಗದುಗಿನ ಶಾಲೆ

ವರ್ಮ, ಹಾಗೂ ಸಮಕಾಲೀನ ಶಿಲ್ಪಿ ಶ್ರೀ ವೆಂಕಟಾಚಲಪತಿಯವರ ಆರಂಭದ ಶಿಕ್ಷಣ ಇಲ್ಲೇ ನಡೆಯಿತೆಂಬುದು ಗಮನಾರ್ಹ.

೬. ದೇವಿದಾಸ್‌ಶೇಟ್ ಶಿಲ್ಪ ಕಲಾಶಾಲೆ - ಕುಮಟಾ

೭. ಶ್ರೀ ಲಕ್ಷ್ಮಿನಾರಾಯಣಚಾರ್ಯ ರಥಶಿಲ್ಪಿ ಕಲಾಶಾಲೆ - ಕೋಟೇಶ್ವರ ಕುಂದಾಪುರ ತಾಲ್ಲೂಕು : ಹಳ್ಳಿಹಳ್ಳಿಯಲ್ಲೂ ದೇವಾಲಯಗಳಿರುವಂತೆ, ಮುಖ್ಯದೇವಾಲಯಗಳಿಗೆ ರಥಗಳಿರುತ್ತವೆ. ದೇವಾಲಯ ಸ್ಥಿರ, ರಥ ಚರ, ಚಲಿಸಲು ಅನುಕೂಲವಾಗುವಂತೆ, ಆಗಮಶಾಸ್ತ್ರಕ್ಕೆ ಅನುಗುಣವಾಗಿ ರಥಶಿಲ್ಪ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ತಮ್ಮ ಅಪಾರ ಅನುಭವದಿಂದ ಈ ಅಪರೂಪದ ಕಲೆಯನ್ನು ಮುಂದುವರಿಸಿಕೊಂಡು ಹೋಗಲು ಗುರು-ಶಿಷ್ಯ ಪರಂಪರೆಯಲ್ಲಿ ಈ ಅಪರೂಪದ ರಥಶಿಲ್ಪ ಕಲಾಶಾಲೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

೮. ಗಂಗರಸ ಶಿಲ್ಪಕಲಾ ಶಾಲೆ, ಬಿಡದಿ ರಾಮನಗರ - ಚೆನ್ನಪಟ್ಟಣ ತಾಲ್ಲೂಕು, ಸರ್ಕಾರದಿಂದ ಮಾನ್ಯತೆ ಪಡೆದ ಪದವಿ ಕಾಲೇಜು

೯. ಶಿಲ್ಪಕಲಾ ವಿಭಾಗ - ಕನ್ನಡ ವಿಶ್ವವಿದ್ಯಾಲಯ - ಬನಶಂಕರಿ, ಬಾದಾಮಿ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಶಿಕ್ಷಣ ಶಾಲೆ

೧೦. ಶ್ರೀ ನೀಲಕಂಠಾಚಾರ್ ಶಿಲ್ಪಕಲಾ ಶಾಲೆ - ಬೆಂಗಳೂರು

೧೧. ಶ್ರೀ ಪರಮೇಶ್ವರಾಚಾರ್ ಶಿಲ್ಪಕಲಾ ಶಾಲೆ - ಗೊಪ್ಪೇನಹಳ್ಳಿ ಶಿವಮೊಗ್ಗ

೧೨. ಶ್ರೀ ಸಿ. ಪರಮೇಶ್ವರಾಚಾರ್ ಗುರುಕುಲ ಮಾದರಿ ಶಿಲ್ಪಕಲಾ ಶಾಲೆ, ಬೆಂಗಳೂರು

೧೩. ಶ್ರೀ ಶ್ಯಾಮಾರಾಯಾಚಾರ್ಯರ ವಿಜಯ ಶಿಲ್ಪಕಲಾ ಶಾಲೆ ಕಾರ್ಕಳ : ಈ ಎಲ್ಲ ಕಲಾಶಾಲೆಗಳಲ್ಲೂ ಗುರು-ಶಿಷ್ಯ ಪರಂಪರೆಯಲ್ಲಿ ಅಧ್ಯಯನ ನಡೆಯುತ್ತಿದೆ. ಹೆಚ್ಚಿನ ವಿವರಳು ಲಭ್ಯವಾಗಿಲ್ಲ.

ಹಿರಿಯ ಶಿಲ್ಪಿಗಳು

ಶಿಲ್ಪಕಲಾವಿದರ ಸಾಧನೆಗಳ ಬಗ್ಗೆ ಹರ್ಷಗೊಂಡ ಕರ್ನಾಟಕ ಸರ್ಕಾರ, ಅಪರೂಪದ ಶಿಲ್ಪಿಗಳನ್ನು ಗುರುತಿಸಿ, ೧೯೯೬ರಿಂದ ರಾಜ್ಯದ ಅತ್ಯುನ್ನತ ಪ್ರಶಸ್ತಿಯಾದ **ಜಕಣಾಚಾರಿ ಪ್ರಶಸ್ತಿಯನ್ನು** ಕೊಟ್ಟು ಗೌರವಿಸುವ ಪದ್ಧತಿ ಪ್ರಾರಂಭಿಸಿದೆ. ಈ ಅಪರೂಪದ ಪ್ರಶಸ್ತಿಯನ್ನು ಪ್ರಾರಂಭಿಸುವುದಕ್ಕೆ ಮುಂಚೆಯೇ ನಾಲ್ವರು ಹಿರಿಯ ಶಿಲ್ಪಿಗಳು ದೈವಾಧೀನರಾಗಿದ್ದರು. ಅವರ ಬಗ್ಗೆ ಮೊದಲು ತಿಳಿಸಿ, ನಂತರ ನಮ್ಮ ಪ್ರಶಸ್ತಿ ಪಡೆದ ಶಿಲ್ಪಿಗಳ ಬಗ್ಗೆ ಬರೆಯುವುದು, ಹಿರಿಯ ಶಿಲ್ಪಿಗಳಿಗೆ ತೋರಿಸಬಹುದಾದ ನನ್ನ ಗೌರವವೆಂದು ಭಾವಿಸುತ್ತೇನೆ.

ಮೊದಲಿಗೆ ಕಂಚುಶಿಲ್ಪಿ **ಶ್ರೀ ಎಚ್.ಪಿ. ಶ್ರೀನಿವಾಸಾಚಾರ್ಯರು**, ಬೆಂಗಳೂರು : ಬಹಳ ಸರಳ ವ್ಯಕ್ತಿತ್ವದ, ನೇರನುಡಿಯ ಹಿರಿಯ ಶಿಲ್ಪಿ ಶ್ರೀ ಶ್ರೀನಿವಾಸಾಚಾರ್ಯರನ್ನು ಹತ್ತಿರದಿಂದ ನೋಡಿ ಮಾತನಾಡಿಸುವ ಸೌಭಾಗ್ಯ ನನ್ನದಾಗಿತ್ತು. ವಾದಿರಾಜರ ಬಳಿ ಮರದ ಕೆತ್ತನೆಯ ತರಬೇತಿ ಪಡೆಯುತ್ತಿದ್ದ ಸಂದರ್ಭದಲ್ಲಿ ಆಚಾರ್ಯರು C.H.D.C. (Central Handicraft Development Centre) ಯಲ್ಲಿ ನಡೆಯುತ್ತಿದ್ದ ನಮ್ಮ ವಿಭಾಗ ನಿತ್ಯವೂ ಬರುತ್ತಿದ್ದರು, ನಾವು ಮಾಡುತ್ತಿದ್ದ ಕೆಲಸಗಳನ್ನು ಗಮನಿಸುತ್ತ,



ಗೊಪ್ಪೇನಹಳ್ಳಿ, ಎಂ. ಪರಮೇಶ್ವರಾಚಾರ್ಯರ ಶಿಲ್ಪಶಾಲೆಯ ಒಂದು ಕೃತಿ

ಶಾಸ್ತ್ರೋಕ್ತವಾಗಿ ವಿದ್ಯೆ ಕಲಿತರೆ ಸಂಪ್ರದಾಯ ಶೈಲಿಗಳನ್ನು ಉಳಿಸಬಹುದೆಂದು ಹೇಳುತ್ತಾ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು, ಅದೇ ಸಮಯದಲ್ಲಿ ೬ ಅಡಿ ಎತ್ತರದ ಒಂದು ಪಾರ್ವತೀ ವಿಗ್ರಹವನ್ನು ಮಾಡುತ್ತಿದ್ದುದನ್ನು ನೋಡುವ ಅಪರೂಪದ ಅವಕಾಶ ಸಿಕ್ಕಿತ್ತು. ರೇಖಾಚಿತ್ರಗಳಿಗೂ ಹೆಚ್ಚಿನ ಗಮನ ಕೊಡುತ್ತಿದ್ದು, ತಾವು ಮಾಡಿದ ಎಲ್ಲ ಶಿಲ್ಪಗಳ ರೇಖಾಚಿತ್ರ ಬಿಡಿಸಿದ್ದಾರೆ. ಅಕಾಡೆಮಿಯು ಅವರ ಬಗ್ಗೆ ಬರೆಸಿರುವ ಪುಸ್ತಕದಲ್ಲಿ ಈ ರೇಖಾಚಿತ್ರಗಳ ಸಂಗ್ರಹವೇ ಇದ್ದು, ಕಲಿಯುವರಿಗೆ ಒಳ್ಳೆಯ ಮಾರ್ಗದರ್ಶನ ನೀಡುತ್ತದೆ. ಆ ರೇಖಾಚಿತ್ರಗಳನ್ನು ನೋಡಿದರೆ ಸಾಕು ಅವರು ಶಾಸ್ತ್ರೋಕ್ತವಾಗಿ ಶಿಲ್ಪ ರಚಿಸುವುದರಲ್ಲಿ ಅವರು ಎಷ್ಟು ಪರಿಣಿತರು ಎಂದು ತಿಳಿಯುತ್ತದೆ.

ಎರಡು ಲೋಹಗಳನ್ನು ಸೇರಿಸಿ ಒಂದೇ ಶಿಲ್ಪದಲ್ಲಿ ಎರಕ ಮಾಡುವುದು ಬಹಳ ಕಠಿಣವಾದ ಕೆಲಸ. ಅವರ ಕೈ ಚಳಕವನ್ನು ಅವರು ರಚಿಸಿರುವ ಅರ್ಧನಾರೀಶ್ವರ ಪ್ರತಿಮೆಯಲ್ಲಿ ಕಾಣಬಹುದು. ಅರ್ಧತಾಮ್ರ, ಅರ್ಧಕಂಚು ಬಳಸಿ ಅವರು ಮಾಡಿರುವ ಸಾಧನೆ ಮೆಚ್ಚುವಂತಹುದು, ಮತ್ತೊಂದು ವಿಗ್ರಹದಲ್ಲಿ ದೇಹವನ್ನು ಒಂದು ಲೋಹದಲ್ಲಿ, ಆಭರಣಗಳನ್ನು ಬೇರೊಂದು ಲೋಹದಲ್ಲಿ ಮಾಡಿದ್ದಾರೆ. ಇಂತಹ ಸಾಹಸದ ಕೌಶಲ್ಯವನ್ನು ಕರಗತ ಮಾಡಿಕೊಂಡಿದ್ದ ಶ್ರೀನಿವಾಸಾಚಾರ್ಯರು ಜನಿಸಿದ್ದು ನಾಗಮಂಗಲದ ಲೋಹಶಿಲ್ಪಿಗಳ ಮನೆತನದಲ್ಲಿ. ಬಾಲ್ಯದಲ್ಲೇ ಶಿಲ್ಪ ರಚನೆಯ ವಾತಾವರಣದಲ್ಲಿ ಬೆಳೆದ ಆಚಾರ್ಯರಿಗೆ ಶಾಲೆಯ ವಿದ್ಯೆ ಆಕರ್ಷಿಸಲೇ ಇಲ್ಲ. ಬದಲು ಹಿರಿಯರು ಮೇಣದಲ್ಲಿ ಕೃತಿಗಳ ರಚಿಸುತ್ತಿದ್ದರೆ, ತಾವು ಮಣ್ಣಿನಲ್ಲಿ ಪ್ರತಿಮೆಗಳನ್ನು ರಚಿಸಿ, ಹಿರಿಯರಿಂದ ಮಾರ್ಗದರ್ಶನ ಪಡೆಯುತ್ತಿದ್ದರು. ಚಿಕ್ಕಂದಿನಲ್ಲೇ ಶಿಲ್ಪ ರಚಿಸುವುದರಲ್ಲಿ ಆಸಕ್ತಿ, ಅದರಲ್ಲೇ ಹೆಸರು ಮಾಡಿದ್ದು ಕೂಡ. ಮೈಸೂರು ಅರಮನೆಯ ಬಂಗಾರದ ಸಿಂಹಾಸನದ ಎರಡು ಬದಿಗಳಲ್ಲಿರುವ ಚಾಮರ ಧಾರಿಣಿಯರನ್ನು ರಚಿಸಿದ್ದಲ್ಲದೆ, ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗಾ ಸ್ವಾಮಿಗಳು ನಿರ್ಮಿಸುತ್ತಿದ್ದ ದೇವಾಲಯಗಳಿಗೆ ಕೆಲವು ಚಿನ್ನ ಬೆಳ್ಳಿ ಶಿಲ್ಪಗಳನ್ನೂ ಮಾಡಿದ್ದರು. ಹೊಯ್ಸಳ ಶೈಲಿ ಬರೀ ಕಲ್ಲಿನಲ್ಲಿ ಮಾಡುವುದು, ಕಂಚು ಶಿಲ್ಪವೆಂದರೆ ಚೋಳಶೈಲಿಯದು ಎಂಬುದೇ ಎಲ್ಲರೂ ತಿಳಿದುಕೊಂಡಿರುವುದು. ಕಂಚಿನಲ್ಲಿ ಹೊಯ್ಸಳ ಶೈಲಿಯ ಅಲಂಕಾರಭರಿತ ಶಿಲ್ಪ ಮಾಡುವುದೆಂದರೆ ಬಹಳ ತ್ರಾಸದಾಯಕ. ಶ್ರೀನಿವಾಸಾಚಾರ್ಯರು ಹೊಯ್ಸಳ ಶೈಲಿಯಲ್ಲೇ ಹಲವಾರು ಪ್ರತಿಮೆಗಳನ್ನು ರಚಿಸಿ ಅವರ ಅಪರಿಮಿತ ಅನುಭವ ಹಾಗೂ



ಶ್ರೀನಿವಾಸಾಚಾರ್ಯರ ಕಂಚಿನ ಅರ್ಧನಾರೀಶ್ವರ ಶಿಲ್ಪ

ಪರಿಣತಿಯನ್ನು ತೋರಿಸಿದ್ದಾರೆ. ಇಂತಹ ಚತುರ ಕುಶಲ ಶಿಲ್ಪಿಗೆ ರಾಷ್ಟ್ರಪ್ರಶಸ್ತಿ ದೊರೆತುದರಲ್ಲಿ ಆಶ್ಚರ್ಯವಿಲ್ಲ. ಇವರ ಮಕ್ಕಳೂ ಇದೇ ವೃತ್ತಿಯಲ್ಲಿ ಮುಂದುವರೆಯುತ್ತಿದ್ದಾರೆ.

ಬೆಂಗಳೂರಿನ ಶಿಲ್ಪಕಲಾ ಪ್ರತಿಷ್ಠಾನದವರು 'ಶಿಲ್ಪೋತ್ಸವ' ಹಮ್ಮಿಕೊಂಡ ಸಂದರ್ಭದಲ್ಲಿ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀನಿವಾಸಚಾರ್ಯರು ಸಂಪ್ರದಾಯ ಶೈಲಿಗಳಲ್ಲೇ ಕೆಲಸ ಮಾಡುವುದು ಶ್ರೇಯಸ್ಕರ, ಅವು ನಮ್ಮ ನಾಡಿನ 'ನಾಡಿ' ಅದನ್ನು ಉಳಿಸಿ ಬೆಳೆಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ಘೋಷಿಸಿದರು. ಜಕಣಾಚಾರಿ ಪ್ರಶಸ್ತಿಯನ್ನು ಮರಣಾನಂತರವೂ ಕೊಡಬಹುದಾಗಿದ್ದರೆ ಅದು ಶ್ರೀನಿವಾಸಚಾರ್ಯರದೇ ಪಾಲಾಗುತ್ತಿತ್ತು.

ಪ್ರತಿವರ್ಷ ವಿಜಯದಶಮಿಯ ದಿನ ಮೈಸೂರಿನಲ್ಲಿ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವ ಶ್ರೀ ಕನ್ನಡ ಭುವನೇಶ್ವರಿಯ ಶಿಲ್ಪವನ್ನು ಮಾಡಿದ ಕೀರ್ತಿ ಶ್ರೀ ಶ್ರೀನಿವಾಸಾಚಾರ್ಯ ಅವರದು.

ಶ್ರೀ ದೇವಲಕುಂದ ವಾದಿರಾಜ, ಬೆಂಗಳೂರು

ಹೆಸರೇ ಸೂಚಿಸುವಂತೆ ವಾದಿರಾಜರು ಶಿಲ್ಪಿಗಳ ವಂಶದಲ್ಲಿ ಜನಿಸಿದವರಲ್ಲ. ಶಿಲ್ಪಗಳನ್ನು ಪೂಜಿಸುವ ವಂಶದಲ್ಲಿ ಜನಿಸಿ, ಶಿಲ್ಪ ರಚಿಸುವ ವಿದ್ಯೆಗೆ ಮನಸೋತವರು. ಎಷ್ಟೇ ಆಸಕ್ತಿಯಿದ್ದರೂ



ಅವಕಾಶಗಳೂ ಒದಗಿ ಬರಬೇಕಲ್ಲ. ಚಿಕ್ಕ ವಯಸ್ಸಿನಲ್ಲೇ ತಂದೆತಾಯಿಯರನ್ನು ಕಳೆದುಕೊಂಡು, ಮೈಸೂರಿನ ಜಯಚಾಮ ರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಶ್ರೀಗಂಧದ ಕೆತ್ತನೆಯ ವಿಭಾಗದಲ್ಲಿ ಕೇವಲ ೧ ೧/೨ ವರ್ಷದ ಕಲಿಕೆ. ಆಗ ಅವರಿಗೆ ಕೇವಲ ೧೨ ವರ್ಷ. ಸೊರಬ ಸಾಗರದ ಪ್ರಸಿದ್ಧ ಗುಡಿಗಾರರಾಗಿದ್ದ ಶ್ರೀ ವೆಂಕಪ್ಪ ಹಾಗೂ ಶ್ರೀ ಗಣಪತಪ್ಪ ಇವರ ಮೊದಲ ಗುರುಗಳು. ರೇಖಾಚಿತ್ರದ ಮಹತ್ವ ಅರಿವಾದದ್ದೆ ಅವರಿಂದ ಎನ್ನುತ್ತಿದ್ದ ವಾದಿರಾಜರು ತಮ್ಮ ಗುರುಗಳ ಬಗ್ಗೆ ಹೇಳುತ್ತಿದ್ದುದು, "ಸ್ಫುಟವಾದ ರೇಖಾಚಿತ್ರ, ನವಿರಾದ ಕೆತ್ತನೆ, ಅತಿಸೂಕ್ಷ್ಮ ಕೆತ್ತನೆ, ಅಂತಹ ಕೆಲಸವನ್ನು ಮುಂದೆಂದೂ ನೋಡಲಿಲ್ಲ" ಎಂದು ಮುಂದೆ ೨೬ ವರ್ಷಗಳವರೆಗೆ ಕೆತ್ತನೆ ಮಾಡುವ ಸೌಭಾಗ್ಯವೇ ಸಿಗಲಿಲ್ಲ. ಜೀವನ ನಿರ್ವಹಣೆಗೆಂದು ಹೊಟೆಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ, ಅವರು ಶಿಲ್ಪ ರಚಿಸುವ ಕನಸು ಕಾಣುತ್ತಿದ್ದ ಅವರ ನೋವು, ಅವರ ಮಾತುಗಳಲ್ಲಿ ಎದ್ದು ಕಾಣುತ್ತಿತ್ತು. ಮುಂದೆ ಶಿಲ್ಪ ಮಾಡಿಯೇ ಬದುಕುವ ತೀರ್ಮಾನ ಮಾಡಿದಾಗ ಅವರ ನೆರವಿಗೆ ಬಂದಿದ್ದು ಬಾಲ್ಯ ಸ್ನೇಹಿತ ಶ್ರೀ ನಾರಾಯಣಮೂರ್ತಿ ಹಾಗೂ ಗಾನಸುಧಾಕರ ಶ್ರೀ ಎ. ಸುಬ್ಬರಾಯರು ಮತ್ತೆ ಶಿಲ್ಪಕಲೆಯ ಅಭ್ಯಾಸ, ಅದರಿಂದಲೇ ಗಳಿಸುವ ಸಾಹಸ, ಅಂತಹ ಸಂದರ್ಭದಲ್ಲಿ ಶ್ರೀ ಹರಿಹರ್ಲರವರ ಪರಿಚಯವಾದ ಮೇಲೆ ಸಂಪ್ರದಾಯ ಶಿಲ್ಪಗಳ ಮಹತ್ವವನ್ನು ತಿಳಿದುಕೊಂಡು, ಅದಕ್ಕೇ ತಮ್ಮನ್ನು ಅರ್ಪಿಸಿಕೊಂಡರು. ರಾಷ್ಟ್ರಪ್ರಶಸ್ತಿಯನ್ನೂ ಪಡೆದರು. ಬಡತನದಲ್ಲೇ ಹುಟ್ಟಿ, ಬೆಳೆದು ಜೀವನ ಸಾಗಿಸಿದರೂ





ಕಾವೇರಿ ಶಿಲ್ಪ - ಡಿ. ವಾದಿರಾಜ

ಕರ್ನಾಟಕದಲ್ಲಿ ಒಂದು ಪರಂಪರೆಯನ್ನೇ ಬೆಳೆಸಿದ ಶ್ರೀಮಂತಿಕೆ ಅವರದು. "ಅವರ ಈ ಕೊಡುಗೆ ಮುಂದಿನ ಕೆಲವು ಶತಮಾನಗಳವರೆಗೂ ಮುಂದುವರೆಯುವುದರಲ್ಲಿ ಆಶ್ಚರ್ಯವಿಲ್ಲ. ಯಾವ ಮೂಲೆಯಲ್ಲಿದ್ದರೂ ಇದು ವಾದಿರಾಜರ ಪರಂಪರೆಯವರ ಕೆಲಸ ಎಂದು ಸುಲಭವಾಗಿ ಗುರುತಿಸಬಹುದು" ಎಂದು ಪ್ರಾಚ್ಯವಸ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿದ್ದ ಡಾ|| ಎಸ್.ಆರ್. ರಾವ್ ಅವರು ವಾದಿರಾಜರ ಕೆಲಸವನ್ನು ಮೆಚ್ಚಿ ಆಡಿದ ಮಾತುಗಳಿವು. ಶೈಲಿಗಳ ಶಿಬಿರಗಳನ್ನು ಆಯೋಜಿಸಿ, ಚಾಲುಕ್ಯ, ಹೊಯ್ಸಳ, ಕಾಕತೀಯ ರಾಷ್ಟ್ರಕೂಟ ಶೈಲಿಗಳ ಅಧ್ಯಯನವನ್ನೂ ಮಾಡಿಸಿ, ಅಂತಹ ಶೈಲಿಗಳಲ್ಲೇ ಹಲವಾರು ಶಿಲ್ಪಿಗಳನ್ನು ರಚಿಸಿ ದೇಶ ವಿದೇಶಗಳಲ್ಲೂ ಹೆಸರು ಮಾಡಿದ್ದಾರೆ. ಪರಂಪರೆಗೇ ತನ್ನನ್ನು ಅರ್ಪಿಸಿಕೊಂಡ ಕಲಾವಿದರಿಗೆ ರಾಷ್ಟ್ರಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ಮಾತ್ರವಲ್ಲ ಭಾರತೀಯ ಸಂಪ್ರದಾಯ ಶಿಲ್ಪವನ್ನು ಗ್ರೇಟ್ ಬ್ರಿಟನ್ನಿನಲ್ಲಿ ನಡೆದ ಭಾರತದ ಉತ್ಸವದಲ್ಲಿ ಪ್ರತಿನಿಧಿಸಲು ಆಹ್ವಾನ ಸಿಕ್ಕಿ ದೇಶಕ್ಕೆ ಕೀರ್ತಿತಂದರು. ಸಂಪ್ರದಾಯ ಬದ್ಧತೆ, ನೇರನುಡಿ, ಸರಳ ವ್ಯಕ್ತಿತ್ವ ಇವರನ್ನು ಒಬ್ಬ ಪರಿಪೂರ್ಣ ಕಲಾವಿದರನ್ನಾಗಿ ಮಾಡಿತ್ತು. ಇದರಿಂದ ಪ್ರಭಾವಗೊಂಡ ಬ್ರಿಟಿಷ್ ಕಲಾವಿದರು ತಮ್ಮ ಪ್ರತಿವರ್ಷ ನಡೆಸುವ 'ಆರ್ಟ್ ಇನ್ ಆರ್ಕ್ಯ' ಉತ್ಸವಕ್ಕೆ ಮತ್ತೆ ಮತ್ತೆ ಕರೆಸುತ್ತ, ಗೌರವ ತೋರಿದ್ದಾರೆ. ಅವರ ನೇರ ಶಿಷ್ಯರಾದ ನಾವು (ನಾನು, ಜಿ.ಎಲ್. ಭಟ್ ಅಶೋಕ್, ವೆಂಕಟರಮಣಭಟ್) ಅವರನ್ನು ನೆನೆಯದ ದಿನವಿಲ್ಲ, ಕಲಿಯುವಾಗ ಅವರಿಗೆ ನಾವೇನೂ ಕೊಡಲಿಲ್ಲ, ಬದಲಿಗೆ ನಾವೇ ಅವರಿಂದ ಧನಸಹಾಯ ಪಡೆಯುತ್ತಿದ್ದೆವು. ಅಂತಹ ಗುರುವಿಗೆ ನಾವೇನು ತಾನೆ ಕೊಡಬಲ್ಲೆವು ? ಅದಕ್ಕಾಗಿ ಪ್ರತಿವರ್ಷ ಒಬ್ಬ ಪ್ರತಿಭಾವಂತ ಯುವಶಿಲ್ಪಿಗೆ ಅವರ ಹೆಸರಿನಲ್ಲೇ ವಿದ್ಯಾರ್ಥಿವೇತನ ಕೊಡುತ್ತ, ಕಿರಿಯರಿಗೆ ಪ್ರೋತ್ಸಾಹ ನೀಡುತ್ತಿದ್ದೇವೆ. ವಾದಿರಾಜರ ಶಿಷ್ಯರ ಗುಂಪು, ಶಿಷ್ಯರ ಶಿಷ್ಯ ಪಡೆ, ಹೀಗೆ, ಒಂದು ಜನಾಂಗವೇ ಬೆಳೆಯುತ್ತಿರುವುದು ಹೆಮ್ಮೆಯ ವಿಷಯ.

ಶ್ರೀ ರಂಜಾಳ ಗೋಪಾಲ ಕೃಷ್ಣಶೆಣ್ಯೈ, ಕಾರ್ಕಳ

ಧರ್ಮಸ್ಥಳಕ್ಕೆ ಹೋದವರು ೩೯ ಅಡಿಯ ಏಕ ಶಿಲಾವಿಗ್ರಹ ಶ್ರೀ ಗೊಮ್ಮಟ ಮೂರ್ತಿಯನ್ನು ನೋಡದೆ ಬರುವುದಿಲ್ಲ. ಈ ಶತಮಾನದಲ್ಲೂ ಇಂತಹ ರಚನೆ ಮಾಡಿದವರೆಂದರೆ ಕಾರ್ಕಳದ ರಂಜಾಳ ಗೋಪಾಲಕೃಷ್ಣ ಶೆಣೈ ಅವರು. ತಮ್ಮ ೭೦ನೇ ವಯಸ್ಸಿನಲ್ಲಿ ಇಂತಹ ಬೃಹತ್ ಶಿಲ್ಪಿ ರಚಿಸಲು ಧೈರ್ಯ ಮಾಡಿದ




ರಂಜಾಳ ಗೋಪಾಲಕೃಷ್ಣ ಶೆಣೈಯವರ ಶಿಲ್ಪ ಕುಸರಿ ಕೆಲಸದ ಕಂಬ

ಸಾಹಿಸಿ ಶಿಲ್ಪಿ ಗೋಪಾಲ ಶೆಣೈ ಅವರು, ಅವರು ನೆನಸಿದಂತೆ ಈ ಬೃಹತ್ ಕೆಲಸಕ್ಕೆ ದೈವಾನುಗ್ರಹವೆಂಬಂತೆ ದೊರೆತ ಸೂಕ್ತ ದೊಡ್ಡ ಬಂಡೆಕಲ್ಲು, ಸಹಾಯಕ ಶಿಲ್ಪಿಗಳಿಗೆ ವಾಸ್ತವ್ಯ ಹೂಡಲು ದೊರೆತ ನೀರಿನ ಸೆಲೆ ಮತ್ತು ಇಂತಹ ಕೆಲಸ ಮಾಡಲು ದೊರೆತ ಅಪರೂಪದ ಪ್ರೋತ್ಸಾಹ, ಇವೆಲ್ಲ ಅವರನ್ನು ಸಾಹಸ ಮಾಡಲು ಪ್ರೇರೇಪಿಸಿದವು. ಗೋಪಾಲಶೆಣೈಯವರದು ಆ ಪ್ರಾಂತ್ಯದಲ್ಲೆಲ್ಲ ಪರಿಚಿತವಾದ ಹೆಸರು. ಅವರು ಸ್ಥಾಪಿಸಿದ ಶ್ರೀಮದ್ಭುವನೇಂದ್ರ ಶಿಲ್ಪಶಾಲೆಯಲ್ಲಿಹಲವಾರು ಶಿಲ್ಪಿಗಳಿಗೆ ಮಾರ್ಗದರ್ಶನ ಮಾಡಿದ್ದರು. ಅಲ್ಲಿಯ ಧಾರ್ಮಿಕ ಅವಶ್ಯಕತೆಗಳಿಗೆ ಅವರು ಮಾಡಿರುವ ಕೃತಿಗಳು ಅಪಾರ. ಜಪಾನಿಗೆ ಬುದ್ಧನ ಅನೇಕ ಚಿಕ್ಕ, ದೊಡ್ಡ ವಿಗ್ರಹಗಳನ್ನು ಕಳಿಸಿದ್ದಾರೆ. ಜೀವಮಾನ ಪೂರ್ತಿ ಶಿಲ್ಪಗಳನ್ನು ರಚಿಸುತ್ತಿದ್ದ ಇವರಿಗೆ ೧೯೭೯ರಲ್ಲಿ ರಾಜ್ಯ ಪ್ರಶಸ್ತಿ, ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಧರ್ಮಸ್ಥಳ ಶ್ರೀ ಹೆಗ್ಗಡೆಯವರು ಬಂಗಾರ ಕಡಗ ತೊಡಿಸಿ 'ಶಿಲ್ಪ ವಿಶಾರದ' ಎಂಬ ಬಿರುದನ್ನಿತ್ತರು. ಶ್ರೀ ಕಾಶೀಮಠದ ಸುಧೀಂದ್ರ ತೀರ್ಥಸ್ವಾಮಿಗಳಿಂದ ೧೯೮೨ರಲ್ಲಿ "ಶಿಲ್ಪ ಸಾಮ್ರಾಜ್ಯ ಚಕ್ರವರ್ತಿ" ಎಂಬ ಬಿರುದು ನೀಡಿಕೆ. ಕರ್ನಾಟಕದ ಯಾವ ಶಿಲ್ಪಿಯ ಹೆಸರಿನ ಮುಂದೆ 'ಡಾಕ್ಟರೇಟ್' ಪದವಿಯಿತ್ತಿಲ್ಲ. ಮಂಗಳೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿ, **ಡಾ|| ರಂಜಾಳ ಗೋಪಾಲಕೃಷ್ಣ ಶೆಣೈ** ಆದರು.

ಅಪ್ಪು ಕುಟ್ಟಿ ಆಚಾರ್ : ಡಿಸೈನ್ ಸೆಂಟರಿನ ದಂತದ ವಿಭಾಗದ ಮಾಸ್ಟರ್ ಕ್ರಾಫ್ಟ್ ಮಾನ್ ಆಗಿ ಕೆಲಸ ಮಾಡುತ್ತ ನಿವೃತ್ತರಾದರು. ಸಂಪ್ರದಾಯ ಶಿಲ್ಪ ಮತ್ತು ಸಮಕಾಲೀನ ಶಿಲ್ಪಗಳ ರಚನೆಯಲ್ಲಿ ಹೆಸರು ಮಾಡಿದ ಇವರು ಕೇರಳದ ಮೂಲದವರಾದರೂ, ಬೆಂಗಳೂರಿನಲ್ಲೇ ನೆಲೆಸಿದವರು. ಸಂಪ್ರದಾಯ ಶಿಲ್ಪಿಗಳು ಕೂಡ ಸಮಕಾಲೀನ ಮತ್ತು ಆಧುನಿಕ ಶೈಲಿಗಳಲ್ಲಿ ಕೆಲಸ ಮಾಡಬಹುದೆಂದು ತೋರಿಸಿದವರು. ಇವರ ಈ ಶೈಲಿಗಳ ಬದಲಾವಣೆಯೇ ಅನೇಕ ಆಸಕ್ತರನ್ನು ಆಕರ್ಷಿಸಿ ಅವರ ಮಾರ್ಗದರ್ಶನ ಪಡೆಯಲು ಅವಕಾಶವಾಯಿತು. ಕರ್ನಾಟಕದ ಖ್ಯಾತ ಸಮಕಾಲೀನ ಶಿಲ್ಪಿ ಶ್ರೀ ಯೂಸುಫ್ ಅರೆಕಲ್ ಇವರ ಶಿಷ್ಯರು. ನಿವೃತ್ತರಾದ ಮೇಲೆ ನಟೇಶನ್ ಆಂಟಿಕ್ ಆರ್ಟ್ಸ್‌ನಲ್ಲಿ ಶಿಲ್ಪ ರಚನೆಯ ಮೇಲ್ವಿಚಾರಕಾಗಿ ಕೆಲವು ಕಾಲ ಕೆಲಸ ಮಾಡಿದರು. 'ರೇಖಾಚಿತ್ರ'ವೇ ಶಿಲ್ಪದ ಜೀವಾಳ ಎಂದು ನಂಬಿದ ಇವರು, ರಚಿಸಿದ ರೇಖಾಚಿತ್ರಗಳು, ಅದರಲ್ಲೂ ದೇವಾಲಯಗಳಿಗೆ ಹೋಗಿ, ಅಲ್ಲಿಯೇ ಕುಳಿತು ರಚಿಸಿಕೊಂಡು ಬಂದ ರೇಖಾಚಿತ್ರಗಳು ೬೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿವೆ.

ದುರದೃಷ್ಟವೆಂದರೆ, ನಮ್ಮ ಕರ್ನಾಟಕ ಸರ್ಕಾರವಾಗಲೀ ಕೇಂದ್ರ ಸರಕಾರವಾಗಲೀ ಈ ರೇಖಾಚಿತ್ರಗಳ ಮೌಲ್ಯ ತಿಳಿದೂ ಸಹ, ಅದನ್ನು ಪ್ರಕಟಿಸುವ ಗೋಜಿಗೆ ಹೋಗಿಲ್ಲ. ಅಲ್ಲಲ್ಲಿ ಕೆಲವು ಪುಸ್ತಕಗಳಿಗೆ (ಪ್ರೊ. ಎಸ್.ಕೆ. ರಾಮಚಂದ್ರರಾಯರು ಪ್ರತಿಮಾಕೋಶ) ಬಳಸಿದ್ದಾರೆಂಬುದೇ ಒಂದು ಸಮಾಧಾನದ ಸಂಗತಿ. ರಾಷ್ಟ್ರಪ್ರಶಸ್ತಿ ಪಡೆದ ಮೊದಲ ಗುಂಪಿನ ಮೂವರು ಶಿಲ್ಪಿಗಳಲ್ಲಿ ಇವರೂ ಒಬ್ಬರು, ಅಪ್ಪು ಕುಟ್ಟ್ಯರವರದು ಜೋಳ, ಚೇರ ಶೈಲಿಗಳ ಶಿಲ್ಪಗಳು ಹಾಗೂ ರೇಖಾಚಿತ್ರಗಳು. ದಂತದ ಕೆತ್ತನೆಯಲ್ಲೂ ಈ ಸಂಪ್ರದಾಯ ಶೈಲಿಗಳನ್ನೇ ಅನುಕರಣೆ ಮಾಡಿದ್ದಾರೆ. ಇವರ ಕೆಲವು ಪ್ರತಿಮೆಗಳು ಡಿಸ್ನೈ ಸೆಂಟರಿನ ಸಂಗ್ರಹದಲ್ಲಿವೆ.



ಅಪ್ಪು ಕುಟ್ಟ್ಯ ಆಚಾರ್‌ರವರ ರೇಖಾಚಿತ್ರ

ಶ್ರೀ ಬಸವಣ್ಣ ಶಿಲ್ಪಿಗಳು : ಮೈಸೂರು : ಮೈಸೂರು ನೂರಡಿ ರಸ್ತೆಯಲ್ಲಿರುವ ಕಾಶ್ಯಪ ಶಿಲ್ಪಕಲಾ ಶಾಲೆಯನ್ನು ಪ್ರಾರಂಭಿಸಿದವರು ಶ್ರೀ ಬಸವಣ್ಣ ಶಿಲ್ಪಿಗಳು. ಒಮ್ಮೆ ವಾದಿರಾಜರು ನನ್ನನ್ನೂ ಶ್ಯಾಮಾಚಾರ್ಯರನ್ನೂ ಬಸವಣ್ಣನವರ ಶಿಲ್ಪಶಾಲೆಗೆ ಕರೆದುಹೋಗಿ ತೋರಿಸಿದ್ದರು. ಆವರಣದ ತುಂಬ ಕಡೆಯಲು ಇಟ್ಟುಕೊಂಡಿದ್ದ ಕಲ್ಲುಗಳು ಹಲವಾರು ಅರ್ಧ ಮುಕ್ಕಾಲು ರೂಪಗೊಂಡ ವಿಗ್ರಹಗಳು, ವಿಶಾಲವಾದ ಜಾಗ, ಅದನ್ನೆಲ್ಲಾ ನೋಡಿ ನಮಗೆ ಬಹಳ ಸಂತೋಷವಾಯಿತು. ಬಸವಣ್ಣನವರು ಆತ್ಮೀಯವಾಗಿ ನಮ್ಮನ್ನು ಬರಮಾಡಿಕೊಂಡು ನಗುನಗುತ್ತಾ ಮಾತನಾಡುತ್ತ, ತಮ್ಮ ಕೆಲಸಗಳನ್ನು ತೋರಿಸಿದರು ಬಹಳ ಸರಳ ವ್ಯಕ್ತಿತ್ವ ಅವರದು.

ಇವರದೂ ಮೈಸೂರು ಜನಪ್ರಿಯ ಶೈಲಿಯ ಶಿಲ್ಪಗಳು. ಶಿಲ್ಪಿಸಿದ್ಧಾಂತಿ ಶ್ರೀ ಸಿದ್ಧಲಿಂಗಾಸ್ವಾಮಿಗಳ ಶಿಷ್ಯರು. ಎಷ್ಟೋ




ಬಸವಣ್ಣ ಶಿಲ್ಪಿಯವರ ಲಕ್ಷ್ಮೀ ನರಸಿಂಹ ಶಿಲ್ಪ

ವರ್ಷಗಳು ಅವರ ಆಶ್ರಮದಲ್ಲೇ ಇದ್ದು, ಕಲಿತು ಮುಂದೆ ಗುರುಗಳು ಮಾಡುತ್ತಿದ್ದ ಕೆಲಸಗಳಲ್ಲೂ ಭಾಗಿಯಾಗುತ್ತ 'ಗುರು-ಶಿಷ್ಯ' ಪರಂಪರೆಯಲ್ಲಿ ಅಧ್ಯಯನ ಮಾಡಿ, ಬಹಳ ಹೆಸರು ಮಾಡಿದವರು. ಅನಂತರ ಸ್ವತಃ ಕಲಾಶಾಲೆಯನ್ನು ಪ್ರಾರಂಭಿಸಿ, ಶಿಷ್ಯರಿಗೂ ತಮ್ಮ ಮಕ್ಕಳಿಗೂ ಶಿಲ್ಪಕಲೆಯನ್ನು ಕಲಿಸಿದ್ದರು. ಧಾರ್ಮಿಕ ಅವಶ್ಯಕತೆಗಳಿಂದಾಗಿ ಹಲವಾರು ಶಿಲ್ಪಗಳನ್ನು ರಚಿಸಿಕೊಟ್ಟಿದ್ದರು. ಆಗಿನ ಮೈಸೂರಿನಲ್ಲಿ ಶಿಲ್ಪಿಯ ಚತುರತೆ, ಕಲಾಚಾತುರ್ಯಗಳನ್ನು ಗುರುತಿಸಬೇಕಾದರೆ 'ರಾಜಾಶ್ರಯ' ದೊರೆತಿತ್ತೆ ಎಂಬ ಪ್ರಶ್ನೆ ಬರುತ್ತಿತ್ತು. ಅಂದಿನ ಮಹಾರಾಜರು ಚತುರ ಶಿಲ್ಪಿಗಳು ಯಾವ ಮೂಲೆಯಲ್ಲಿದ್ದರೂ ಗುರುತಿಸಿ, ಅರಮನೆಗೆ ಬೇಕಾದ ಕೆಲವು ಪ್ರತಿಮೆಗಳನ್ನು ಮಾಡಿಸಿದರೆ, ಅದೇ ಒಂದು ಪ್ರಶಂಸೆ. ದಸರಾ ಮಹೋತ್ಸವದಲ್ಲಿ ಬಹುಮಾನ, ಸಮಾಜದ ಪ್ರಮುಖರಿಂದ ಪ್ರಶಂಸೆ, ಇವೇ ಇಂದಿನ ಮೌಲ್ಯಾಧಾರಿತ ಪ್ರಶಸ್ತಿಗಳು. ಅಂತಹ ಪ್ರಶಂಸೆಗೆ ಪಾತ್ರರಾಗಿ, ಹೆಸರು ಮಾಡಿದ್ದವರು ಬಸವಣ್ಣನವರು. ೧೯೮೩ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡ ಹೆಗ್ಗಳಿಕೆ ಇವರದು.

ಜಕಣಾಚಾರಿ ಪ್ರಶಸ್ತಿ ವಿಜೇತರು

ಶಿಲ್ಪಕಲಾವಿದರ ಸಾಧನೆಗಳ ಬಗ್ಗೆ ಹರ್ಷಗೊಂಡ ಕರ್ನಾಟಕ ರಾಜ್ಯ, ಅಪರೂಪದ ಶಿಲ್ಪಿಗಳನ್ನು ಗುರುತಿಸಿ, ೧೯೯೬ರಿಂದ ರಾಜ್ಯದ ಅತ್ಯುನ್ನತ ಪ್ರಶಸ್ತಿಯಾದ "ಜಕಣಾಚಾರಿ ಪ್ರಶಸ್ತಿ" ಯನ್ನು ಕೊಟ್ಟು ಗೌರವಿಸಿದೆ.

ಶ್ರೀ ಸಿ. ಪರಮೇಶ್ವರಾಚಾರ್ಯ



ಈ ಪ್ರಶಸ್ತಿಯ ವಿಜೇತರು ಶ್ರೀ ಪರಮೇಶ್ವರಾಚಾರ್ಯರು. ಇವರ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವ ಪುಸ್ತಕವನ್ನು ಶಿಲ್ಪಕಲಾ ಅಕಾಡೆಮಿ ಪ್ರಕಟಿಸಿದೆ. ಶಿಲ್ಪ ಕಲಾವಿದರ ವಂಶದಲ್ಲಿ ಜನಿಸಿದ ಇವರು, ಮೈಸೂರಿನ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಶ್ರೀ ಜಗದ್ಗುರು ಶೈವಶಿಲ್ಪ ಶ್ರೀ ಬ್ರಹ್ಮರ್ಷಿ ಗುರುಕುಲಂನಲ್ಲಿ ಅಧ್ಯಯನ ಮಾಡಿದರು. ಗುರುಗಳ ಜೊತೆಯಲ್ಲಿ ಅರಮನೆಯ ಆವರಣದಲ್ಲಿ ನಿರ್ಮಿಸಿದ ಕಾಮಕಾಮೇಶ್ವರೀ ದೇವಾಲಯದ ಮೂಲ ಮೂರ್ತಿಯನ್ನು ಮಾಡಿದರು. ವಿಧಾನಸೌಧದ ಅಲಂಕಾರದ ಸಲುವಾಗಿ ಬೆಂಗಳೂರಿಗೆ ಬಂದರು. ಅನಂತರ ಡಿಸ್ಟೈ ಸೆಂಟರಿನ ಮರದ ಕೆತ್ತನೆಯ ವಿಭಾಗದಲ್ಲಿ ಕೆಲಕ್ಕೆ ಸೇರಿಕೊಂಡರು. ಶ್ರೀ ಹರಿಹರ್ರರವರ ಪ್ರಭಾವದಿಂದ ವಿವಿಧ ಕಲಾಶೈಲಿಗಳ ಅಧ್ಯಯನ ಮಾಡಿದರು ಮತ್ತು ಅಲ್ಲಿಯೇ ಕೆಲಸ ಮಾಡುತ್ತ ನಿವೃತ್ತಿ ಹೊಂದಿದವರು. ಡಿಸೈನ್ ಸೆಂಟರಿನಲ್ಲಿದ್ದಾಗಲೇ ಇವರಿಗೆ ರಾಷ್ಟ್ರ ಪ್ರಶಸ್ತಿಯೂ ಲಭಿಸಿತ್ತು. ದೇಶದ ಹಲವಾರು ಕಡೆಗಳಿಂದ ಇವರು ಡಿಸೈನ್ ಸೆಂಟರ್ ಮೂಲಕ ನಡೆಸುತ್ತಿದ್ದ ತರಬೇತಿ ಯೋಜನೆಯಡಿಯಲ್ಲಿ ಹಲವಾರು ಕಿರಿಯರಿಗೆ ಮಾರ್ಗದರ್ಶನ ನೀಡಿದ್ದಾರೆ. ಇವರಿಗೆ ಭಾರತದ ಎಲ್ಲ ಶಿಲ್ಪಶೈಲಿಗಳ ಪರಿಚಯವಿದೆ. ಆದರೆ ಅವರ ಒಲವಿರುವುದು ಸ್ವಲ್ಪ ಮನುಷ್ಯರೂಪವನ್ನು ಅನುಸರಿಸುವಲ್ಲಿ. ಸಂಪ್ರದಾಯ ಶೈಲಿಗಳಿಗಿಂತ ಸ್ವಲ್ಪ ಭಿನ್ನವಾದ ತಮ್ಮದೇ ಆದ ಶೈಲಿಯನ್ನೂ ರೂಪಿಸಿಕೊಂಡಿರುವುದಾಗಿ ಹೇಳುತ್ತಾರೆ, ದೇವರ ವಿಗ್ರಹವಾದರೂ ಸ್ವಲ್ಪ ಮನುಷ್ಯನ ಆಕಾರವನ್ನು ಹೋಲುವಂತಿದ್ದರೇನೆ ಚೆಂದ ಎಂದು ಇವರ ಅಭಿಪ್ರಾಯ. ಏನಾದರೂ ಕೇಳಬೇಕಾದರೆ ನಾಡಿನ ಹಿರಿಯ ಶಿಲ್ಪಿಗಳಾದ ಇವರನ್ನು ಫೋನಿನ ಮೂಲಕ ಸಂಪರ್ಕಿಸುತ್ತಿರುತ್ತೇನೆ. ಶೈಲಿಗಳ ಬಗ್ಗೆ ಕೇಳಿದಾಗ, ಹಿಂದಿನ ಶೈಲಿಗಳ ಬಗ್ಗೆ ಕೂಲಂಕುಶವಾಗಿ ತಿಳಿಸಿ, ಈಗಿನ ಸಂದರ್ಭಕ್ಕೆ ತಾವು ರೂಪಿಸಿ ಕೊಂಡಿರುವ ಶೈಲಿಯೇ ಸೂಕ್ತ ಎಂದು ಅಭಿಪ್ರಾಯಪಟ್ಟರು.

ಶ್ರೀ ಪರಮೇಶ್ವರಾಚಾರ್ಯರು ಮೃದುಭಾಷಿಗಳು. ಆತ್ಮೀಯವಾಗಿ ಮಾತನಾಡಿಸುತ್ತಾರೆ. ಬಹಳ ಶ್ರದ್ಧೆಯಿಂದ ಕೆತ್ತನೆ ಮಾಡುತ್ತಿರುತ್ತಾರೆ. ಶಿಲ್ಪಕಲಾ ಅಕಾಡೆಮಿ ಪ್ರಾರಂಭವಾದ ಹೊಸತರಲ್ಲಿ ಒಂದು ಶಿಲ್ಪ ಕಲಾ ಶಿಬಿರದ ಏರ್ಪಾಡಾಗಿತ್ತು. ಹಿರಿಯ ಶಿಲ್ಪಿಗಳಾದ ಇವರೂ ಇದ್ದರು. ನನಗೂ ಆ ಶಿಬಿರದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿತ್ತು. ನಾನು ಇವರ ಪಕ್ಕದಲ್ಲೇ ಕುಳಿತು ಶಿಲ್ಪ ರಚಿಸಲು ಪ್ರಾರಂಭಿಸಿದೆ. ಕಾರಣ ಇಷ್ಟೆ, ಅವರು ಕಲ್ಲನ್ನು ಕಡಿಯುವ ರೀತಿ, ಆಕಾರ ಮೂಡಿಸುವುದು ಹೇಗಿರಬಹುದೆಂಬ ಕುತೂಹಲ. ಆರಾಮವಾಗಿ ಮಾತನಾಡುತ್ತ ಅವರೂ ಕೆಲಸ ಪ್ರಾರಂಭಿಸಿದರು. ಬೆಳಿಗ್ಗೆ ಸುಮಾರು ೧೦ ಘಂಟೆಗೆ ಕುಳಿತ ಆಚಾರ್ಯರು ೧ ಘಂಟೆಯುವರೆಗೂ ಬಿಡದೆ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನದ ಊಟಕ್ಕೆ ಒಟ್ಟಿಗೆ ಹೋದೆವು, ದಾರಿಯಲ್ಲಿ ಊಟಮಾಡುವಾಗ ಎಲ್ಲರ ಜೊತೆಯಲ್ಲೂ ಆತ್ಮೀಯವಾಗಿ ಮಾತನಾಡುತ್ತಿದ್ದರು, ಮತ್ತೆ ಎರಡು ಘಂಟೆಗೆ ಕೆಲಸಕ್ಕೆ ಕುಳಿತು ೫ ಘಂಟೆಯವರೆಗೂ ಮಾಡುತ್ತಲೇ ಇದ್ದರು. ನನಗಂತೂ ಬಹಳ ಆಶ್ಚರ್ಯವಾಯಿತು. ಹೀಗೆ ಒಂದೇ ಕಡೆ, ಒಂದೇ ಸಮನೆ ಕುಳಿತು ಕೆಲಸ ಮಾಡುವ ಅಭ್ಯಾಸ ನನಗಿಲ್ಲ. ಅದು ಅವರಿಗೆ ಸಿದ್ಧಿಸಿರುವ ಅಸಾಧಾರಣ ಸಾಮರ್ಥ್ಯ ಎನಿಸಿತು. ಅವರದು ಒಂದು ವ್ಯವಸ್ಥಿತವಾದ ಶಿಸ್ತಿನ ಜೀವನಶೈಲಿ ಎನ್ನಿಸಿತು.



ಶ್ರೀ ಪರಮೇಶ್ವರಾಚಾರ್ಯರ 'ಬನಶಂಕರಿ' ಶಿಲ್ಪ

ಶ್ರೀ ಸಿ. ಪರಮೇಶ್ವರಾಚಾರ್ಯರಿಗೆ ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮತ್ತು ಕರ್ನಾಟಕದ ಅತಿ ಹೆಚ್ಚಿನ ಮಹತ್ವದ ಮೊದಲ ಜಕಣಾಚಾರಿ ಪ್ರಶಸ್ತಿ ಕೂಡ ಲಭಿಸಿದೆ. ನಮ್ಮ ನಾಡಿನಲ್ಲಿ, ದೇಶ ವಿದೇಶಗಳಲ್ಲೆಲ್ಲಾ ಸಂಚರಿಸಿ, ತಮ್ಮ ಕುಶಲತೆಯನ್ನು ಪ್ರದರ್ಶಿಸಿ, ಅಪಾರ ಜನಪ್ರಿಯತೆ ಗಳಿಸಿದ್ದಾರೆ. ನಿವೃತ್ತಿ ಹೊಂದಿದ ಮೇಲೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಈಗ ವಿಶ್ರಾಂತ ಜೀವನದಲ್ಲಿದ್ದಾರೆ.




ನೀಲಕಂಠಾಚಾರ್ಯರ ಕಂಚಿನ ಶಿಲ್ಪ

ಶ್ರೀ ಎಚ್.ಜಿ. ನೀಲಕಂಠಾಚಾರ್, ಬೆಂಗಳೂರು :



ನಾಗಮಂಗಲದ ನೀಲಕಂಠಾಚಾರ್ ಎಂದೇ ಪ್ರಸಿದ್ಧರಾಗಿರುವ ಇವರು ಹುಟ್ಟಿದ್ದು ನಾಗಮಂಗಲದ ಕಂಚು ಶಿಲ್ಪಿಗಳ ಮನೆತನದಲ್ಲಿ. ಲೋಹ ಶಿಲ್ಪದಲ್ಲಿ ಇವರ ಪಾಂಡಿತ್ಯ ಅಪಾರ. ದಕ್ಷ ಹಿರಿಯರಿಂದ, ಶ್ರದ್ಧೆಯಿಂದ ಅಭ್ಯಾಸ ಮಾಡಿ, ಕಲೆಯೇ ಸರ್ವಸ್ವವೆಂದು ತಿಳಿದು ಇಂದಿಗೂ ಕಾರ್ಯನಿರತರಾಗಿದ್ದಾರೆ. ಇವರಿಗೆ ಸಂದ ಸನ್ಮಾನ ಗೌರವಗಳು ಅಪಾರ. ಡಿಸೈ್ನ ಸೆಂಟರಿನ ಕೆಲಸದಲ್ಲಿದ್ದು ಜನಪ್ರಿಯ ಕಲಾವಿದರಾಗಿದ್ದ ಇವರಿಗೆ ಬರುತ್ತಿದ್ದ ಬೇಡಿಕೆಗಳು ಪೂರೈಸುವ ಸಲುವಾಗಿ ಕೆಲಸವನ್ನು ಬಿಟ್ಟು, ನಿರಂತರ ಶಿಲ್ಪರಚನೆಗಳಲ್ಲಿ ತೊಡಗಿರುತ್ತಾರೆ. ರಾಜ್ಯಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಹಲವಾರು ಸಂಘ ಸಂಸ್ಥೆಗಳ ಗೌರವ ಪ್ರಶಸ್ತಿಗಳೂ ಬಂದಿವೆ. ತಮ್ಮ ಮನೆತನದ ವೃತ್ತಿಯನ್ನೂ ಮಕ್ಕಳಿಗೆ ಕಲಿಸುತ್ತಾ ಅವರನ್ನೂ ಉತ್ತಮ ಶಿಲ್ಪಿಗಳನ್ನಾಗಿ ರೂಪಿಸುತ್ತಿದ್ದಾರೆ. ಇವರ ಪರಂಪರೆ, ಶಿಸ್ತಿಗೂ, ನಿಷ್ಠೆಗೂ, ಹಿಡಿದ ಕೆಲಸ ಬಿಡದೆ ಮಾಡುವ ಛಾತಿಗೂ ಹೆಸರಾಗಿದೆ. ಶಾಸ್ತ್ರಬದ್ಧವಾಗಿ ಶಿಲ್ಪ ರಚಿಸುವ ಇವರಿಗೆ "ಶಿಲ್ಪಗುರು ಪ್ರಶಸ್ತಿ" ಕೂಡ ಲಭಿಸಿದೆ.

ಶ್ರೀ ಗುಂಡಪ್ಪ ಮಾಯಾಚಾರ್, ಬಾಗಲಕೋಟೆ :



ಶಿಲಾಶಿಲ್ಪದಲ್ಲಿ ಮಾಯಾಚಾರ್ಯರದು ಎತ್ತಿದ ಕೈ. ತಮ್ಮ ಪರಂಪರೆಯನ್ನು ಬೆಳೆಸುವ ಉದ್ದೇಶದಿಂದ, ಆಸಕ್ತರಿಗೆ ಕಲಿಸುವ ಉದ್ದೇಶದಿಂದ "ಶ್ರೀ ಭುವನಶಿಲ್ಪಿ ಕಲಾಶಾಲೆ" ಯನ್ನು ಪ್ರಾರಂಭಿಸಿ, ಶಿಲ್ಪಗಳನ್ನು ರಚಿಸುತ್ತಾ, ಶಿಲ್ಪಿಗಳನ್ನೂ ರೂಪಿಸುತ್ತಾ, ಇರುವ ಹಿರಿಯ ಶಿಲ್ಪಿಗಳು. ಕರ್ನಾಟಕ ರಾಜ್ಯದ ಎಲ್ಲ ಪ್ರಶಸ್ತಿಗಳೂ ಇವರನ್ನು ಹುಡುಕಿಕೊಂಡು ಬಂದಿವೆ. ಅತ್ಯಂತ ಹಿರಿಮೆಯ ಪ್ರಶಸ್ತಿ ಜಕಣಾಚಾರಿ ಪ್ರಶಸ್ತಿ ಇವರಿಗೆ ಸಂದಿರುವುದು ಇವರ ಕಲಾ

ಕೌಶಲ್ಯಕ್ಕೆ ಸಂದ ನಿಜವಾದ ಗೌರವ. ತಮ್ಮ ಮಕ್ಕಳಿಗೆ ಶಿಲ್ಪ ವಿದ್ಯೆಯನ್ನು ಕಲಿಸಿ, ಅವರನ್ನೂ ಉತ್ತಮ ಶಿಲ್ಪಿಗಳನ್ನಾಗಿ ಮಾಡಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ "ವರಶಿಲ್ಪಿ ಮಾಯಾಚಾರ್" ಎಂಬ ಪುಸ್ತಕವನ್ನು ಪ್ರಕಟಿಸಿ, ಅವರ ಸಮಗ್ರ ಸಾಧನೆಯ ಬಗ್ಗೆ ತಿಳಿಸಿದ್ದಾರೆ.

ಶ್ರೀ ರಾಮಚಂದ್ರ ಶೆಟ್ಟಿ ಗುಡಿಗಾರ್, ಕುಮಟಾ : ಕರ್ನಾಟಕದ ಸಂಪ್ರದಾಯ ಶಿಲ್ಪಿಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಯನ್ನು ಹೊರದೇಶಗಳಲ್ಲಿ ಮೊದಲ ಬಾರಿಗೆ ನೀಡಿದ ಹಿರಿಮೆ. ಶಿಲ್ಪಕಲಾವಿದ ಶ್ರೀ ರಾಮಚಂದ್ರಶೆಟ್ಟಿ ಗುಡಿಗಾರ್, ಅವರು ಸುಮಾರು ೫ ಅಡಿ ಎತ್ತರದ ಶಿವನಿ ಮರದಲ್ಲಿ, ಬೇಲೂರಿನ ಶಿಲಾಬಾಲಿಕೆಯರ ಪ್ರತಿಕೃತಿಗಳನ್ನು ಮಾಡಿ, ಅವುಗಳನ್ನು ಸುಮಾರು ೭೦ ದಶಕದಲ್ಲಿ, ಕೋಟೆ ಹೈಸ್ಕೂಲಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರದರ್ಶಿಸಿದ್ದು, ಆಗಲೇ ಅವರ ಪರಿಚಯವಾಗಿದ್ದು. ಯಾವಾಗಲೂ ನಗುತ್ತಾ ಮಾತನಾಡುವ ಸ್ವಭಾವ. ನಾನು ವಾಣಿವಿಲಾಸ ರಸ್ತೆಯ ಮನೆಯಲ್ಲಿದ್ದಾಗ ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದರು. ಎಷ್ಟು ದೊಡ್ಡ ಕಲಾವಿದರಾದರೂ ಕಲಿಯುವ ಕಿರಿಯರನ್ನು ಕಂಡರೆ ಬಹಳ ಅಭಿಮಾನ, ಬಂದಾಗಲೆಲ್ಲ ಕೆಲಸ ಮಾಡುವುದರ ಬಗ್ಗೆ ಮಾತನಾಡುತ್ತಿದ್ದರು. "ಕಣ್ಣು ಮುಚ್ಚಿದರೂ, ಎಲ್ಲೇ ಇದ್ದರೂ, ಮಾಡುತ್ತಿರುವ ಕೆಲಸದ ಬಗ್ಗೆ, ಅದರ ಆಕಾರದ ಬಗ್ಗೆಯೇ ಚಿಂತಿಸಬೇಕು" ಎನ್ನುತ್ತಿದ್ದರು. ಮನದಲ್ಲೇ ಶಿಲ್ಪದ ರೂಪ, ರೇಖಾಚಿತ್ರ ಮೂಡಿಸಿಕೊಂಡರೆ ಶಿಲ್ಪ ಮಾಡುವುದು ಸುಲಭ ಎನ್ನುತ್ತಿದ್ದರು, ಮಾತ್ರವಲ್ಲ SAARC ಸಮ್ಮೇಳನದ ಸಮಯದಲ್ಲಿ ಹೇಳಿದಂತೆ ಎಲಿಫಂಟಾಗುಹೆಯ ತ್ರಿಮೂರ್ತಿ ಶಿಲ್ಪವನ್ನು ಮಾಡಿತೋರಿಸಿದರು. ಜಕಣಾಚಾರಿ ಪ್ರಶಸ್ತಿಯ ವಿಜೇತರು ಇವರು.

ಶ್ರೀ ಕೆ. ಶಾಮರಾಯಾಚಾರ್ಯ, ಕಾರ್ಕಳ : ಕರ್ನಾಟಕ



ಶಿಲ್ಪಕಲಾ ಅಕಾಡೆಮಿಯ ಸ್ಥಾಪನೆಯಾದಾಗ ಮೊದಲ ಅಧ್ಯಕ್ಷರಾಗಿ ಸರ್ಕಾರದಿಂದ ನೇಮಕಗೊಂಡ ಹೆಗ್ಗಳಿಕೆ ಇವರದು, ಸಂಸ್ಕೃತಾಭ್ಯಾಸದ ಜೊತೆ ಜೊತೆಯಲ್ಲೇ ತಂದೆಯವರಿಂದ ಕಾಷ್ಠ ಶಿಲ್ಪದ ಅಭ್ಯಾಸವಾಯಿತು. ನಂತರ ೨೨ ವರ್ಷಗಳ ಕಾಲ ಡಾ॥ ರಂಜಾಳ ಗೋಪಾಲ ಶೆಣೈ ಅವರಲ್ಲಿ ಅಭ್ಯಾಸ



ಶ್ರೀ ರಾಮಚಂದ್ರ ಶೆಟ್ಟಿ ಗುಡಿಗಾರ್ ರಚಿಸಿದ ಮರದ ಮದನಿಕೆ



ಮಾಡಿದರು. ಅನಂತರದ ದಿನಗಳು ಶ್ಯಾಮಾರಾಯಾಚಾರ್ಯರ ಸ್ವತಂತ್ರ ಜೀವನದ ಸಾಧನೆಗಳ ಸರಮಾಲೆ. ಶ್ರೀ ವಿಜಯ ಶಿಲ್ಪಕಲಾ ಶಾಲೆಯನ್ನು ಪ್ರಾರಂಭಿಸಿ ಹಲವಾರು ಶಿಲ್ಪಕೃತಿಗಳನ್ನು ರಚಿಸಿ, ಕರ್ನಾಟಕ, ದೇಶ ವಿದೇಶಗಳಿಗೆ ಕಳುಹಿಸಿದ್ದಾರೆ. ವಾಸ್ತು ಶಿಲ್ಪದಲ್ಲೂ ಪರಿಶ್ರಮ ಪಡೆದ ಇವರು ಹಲವಾರು ದೇವಾಲಯಗಳನ್ನು ಶಾಸ್ತ್ರೋಕ್ತವಾಗಿ ನಿರ್ಮಿಸಿ, ಅಪಾರ ಅನುಭವಗಳಿಸಿದ್ದಾರೆ. ಇಷ್ಟೊಂದು ಪರಿಣತಿ ಇರುವ ಕಲಾವಿದರನ್ನು ಪ್ರಶಸ್ತಿ ಗೌರವಗಳು ಆರಿಸಿಕೊಂಡು ಬರುವುದರಲ್ಲಿ ಆಶ್ಚರ್ಯವಿಲ್ಲ. ರಾಜ್ಯೋತ್ಸವ ಪ್ರಶಸ್ತಿ, ಜಕಣಾಚಾರಿ ಪ್ರಶಸ್ತಿ ಮತ್ತು ಶಿಲ್ಪಗುರು ಪ್ರಶಸ್ತಿ ಇವರದಾಗಿದೆ. ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾಗಿ, ಶಿಲ್ಪಕಲೆಯ ಅಭಿವೃದ್ಧಿಗೆ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಶಿಲ್ಪ ಸಮುದಾಯದ ಬಗ್ಗೆ ಬಹಳ ಕಾಳಜಿ ತೋರಿಸುತ್ತಿದ್ದಾರೆ.

ಶ್ರೀ ಧನಂಜಯ ಶಿಲ್ಪಿ, ಗುಲ್ಬರ್ಗಾ :



ಸಂಪ್ರದಾಯ ಶಿಲ್ಪದಂತೆಯೇ ರೂಪಶಿಲ್ಪ ಕೂಡ ಈಗ ಒಂದು ಸಂಪ್ರದಾಯವಾಗಿಯೇ ಬೆಳೆದಿದೆ ವ್ಯಕ್ತಿಗಳ ಶಿಲ್ಪ ಮಾಡುವುದು ಬ್ರಿಟಿಷರಿಂದ ಬಂದ ಕಲೆ ಎನ್ನುವಂತಿಲ್ಲ. ಹೆಚ್ಚಿನ ಪುರಾವೆ ಇಲ್ಲದಿದ್ದರೂ ತಿರುಪತಿಯಲ್ಲಿರುವ ಕೃಷ್ಣ ದೇವರಾಯ ಮತ್ತು



ಅವನ ರಾಣಿಯರ ಕಂಚು ಶಿಲ್ಪಗಳು, ಮತ್ತು ಮೈಸೂರ ಅರಮನೆಯಲ್ಲಿ ಕೆಲವು ರೇಖಾಚಿತ್ರಗಳೂ ಇವೆ. ರೂಪ ಶಿಲ್ಪ ಮಾಡಬೇಕಾದರೆ ಮುಖ್ಯವಾಗಿ ಬೇಕಾಗುವುದೆಂದು ಸೂಕ್ಷ್ಮವಾಗಿ ವ್ಯಕ್ತಿಗಳನ್ನು ಗಮನಿಸುವ ಚುರುಕು ಬುದ್ಧಿ, ವ್ಯಕ್ತಿಯ ಹಿನ್ನೆಲೆ, ಚಲನವಲನ, ಮಾತನಾಡುವಾಗ ಅಥವಾ ಯಾವುದಾದರೂ ಕ್ರಿಯೆಯಲ್ಲಿ ತೊಡಗಿದಾಗ (ಸಂಗೀತ ನೃತ್ಯ ಇತ್ಯಾದಿ) ಹೆಚ್ಚಾಗಿ ತೋರಿಸುವ ಭಾವನೆಗಳು ಇದೆಲ್ಲವೆನ್ನೂ ಗಮನಿಸಿದಾಗ ಮಾತ್ರ ತದ್ರೂಪ ಶಿಲ್ಪ ಭಾವಶಿಲ್ಪವಾಗಲು ಸಾಧ್ಯ. ಶ್ರೀ ಧನಂಜಯ ಶಿಲ್ಪಿಯವರಿಗೆ ಬಾಲ್ಯದಿಂದಲೂ ಕಲೆಯಲ್ಲಿ ಆಸಕ್ತಿಯಿದ್ದರೂ ಹಿರಿಯರ ಆದೇಶದಂತೆ ಆಗಿನ intermediate ಪರೀಕ್ಷೆ ಪಾಸು ಮಾಡಿ, ಉದ್ಯೋಗದಲ್ಲೂ ಇದ್ದರು. ಆ ವೇಳೆಗಾಗಲೇ ಶಿಲ್ಪಗಳನ್ನು ಮಾಡುತ್ತ ಸಾಕಷ್ಟು ಹೆಸರೂ ಗಳಿಸಿದ್ದರು. ಹೆಚ್ಚಿನ ಅಭ್ಯಾಸ ಮಾಡಲು ಮುಂಬೈನ J.J. School of Art ನಲ್ಲಿ ಓದಿ, ಮೊದಲ ವರ್ಷವೇ ರ್‍ಯಾಂಕ್ ಪಡೆದದ್ದರಿಂದ ಅವರ ಮುಂದಿನ ಅಧ್ಯಯನ ಸುಗಮವಾಗಿ ಓರ್ವ ಪ್ರತಿಭಾವಂತ ಶಿಲ್ಪಿಯಾದರು, ವಿದ್ಯಾರ್ಥಿ ದೆಸೆಯಿಂದಲೇ ಅವರ ಕೃತಿಗಳಿಗೆ ಪ್ರಶಸ್ತಿಗಳು ದೊರೆಯುತ್ತಲೇ ಇತ್ತು ಮತ್ತು ಆ ಸರಮಾಲೆ ಬೆಳೆಯುತ್ತಲೇ ಇತ್ತು. ವೀರ ಮದಕರಿ ನಾಯಕನ ಪ್ರತಿಮೆ ಮಾಡಿದ ಹಿರಿಮೆ ಇವರದು. ಕರ್ನಾಟಕ ಲಲಿತಕಲಾ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಹಾಗೂ ಜಕಣಾಚಾರಿ ಪ್ರಶಸ್ತಿಗಳು ಧನಂಜಯ ಶಿಲ್ಪಿಯವರ ಪ್ರತಿಭೆಗೆ ಸಂದು ಪುರಸ್ಕಾರಗಳು ಪ್ರಕಟಿಸಿರುವ ಪುಸ್ತಕದಲ್ಲಿ ಹೆಚ್ಚಿನ ವಿವರಗಳಿವೆ.

ಶ್ರೀ ಎಂ. ಪರಮೇಶ್ವರಾಚಾರ್ಯ, ಗೊಪ್ಪೇನಹಳ್ಳಿ :



ಪ್ರಸಿದ್ಧ ಶಿಲ್ಪಿಗಳ ಮನೆತನದಲ್ಲಿ ಜನಿಸಿದ ಶ್ರೀ ಪರಮೇಶ್ವರಾಚಾರ್ಯ ಅವರು ತಮ್ಮ ೭೦ನೇ ವಯಸ್ಸಿನ ವರೆಗೂ ಕೆಲಸ ಮಾಡುತ್ತಿದ್ದರು ಮನತನದಲ್ಲಿ ಶ್ರೀ ರುದ್ರಾಚಾರ್ಯ ಎಂಬುವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇಂತಹ ವಂಶದ ಹಿನ್ನಲೆಯಿಂದ ಬಂದ ಪರಮೇಶ್ವರಾಚಾರ್ಯರು ಚಿನ್ನ ಬೆಳ್ಳಿಯಲ್ಲಿ ಪ್ರತಿಮೆಮಾಡುವುದು, ಕಂಚಿನ ಎರಕ ಮಾಡುವುದು, ಮರದಲ್ಲಿ ಶಿಲ್ಪ ಮಾಡುವುದು, ಎಲ್ಲದರಲ್ಲೂ ಹೆಚ್ಚಿನ ಅನುಭವ ಪಡೆದವರು. ಈ ಪರಿಶ್ರಮದ ಅನುಭವದಿಂದ "ರಥಶಿಲ್ಪಿ"ವನ್ನು ಮಾಡಿ, ಅನೇಕ ಪ್ರಸಿದ್ಧ ದೇವಾಲಯಗಳಿಗೆ ರಥವನ್ನು ಮಾಡಿಕೊಟ್ಟಿದ್ದಾರೆ. "ರಥಶಿಲ್ಪಿ ಪರಮೇಶ್ವರಾಚಾರ್" ಎಂದೇ ಹೆಸರು ಪಡೆದ ಇವರು ತದ್ರೂಪ ಶಿಲ್ಪದಲ್ಲೂ ಸಿದ್ಧಹಸ್ತರು. ಆಸಕ್ತರಿಗಲ್ಲದೆ ಮಕ್ಕಳಿಗೂ ಶಿಲ್ಪಕಲೆಯನ್ನು ಕಲಿಸಿದ್ದಾರೆ. ಇವರ ಹೆಸರಿನ ಶಾಲೆಯೂ ಇದೆ.

ಶ್ರೀ ಮೃತ್ಯುಂಜಯಾಚಾರ್ : ವಿವರಗಳು ಸಿಕ್ಕಿಲ್ಲ.

ಶ್ರೀ ರು. ಕಾಳಾಚಾರ್, ಚೆನ್ನಗಿರಿ : ಅನುವಂಶಿಕವಾಗಿ, ಶಾಸ್ತ್ರೋಕ್ತವಾಗಿ ಶಿಲ್ಪಕಲೆಯನ್ನು ಅಧ್ಯಯನ ಮಾಡಿರುವ ಶ್ರೀ ಕಾಳಾಚಾರ್ಯರು ಚೆನ್ನಗಿರಿ ತಾಲ್ಲೂಕಿನ ಅಜ್ಜಿಹಳ್ಳಿಯವರು. ಹಳ್ಳಿ



ಹಳ್ಳಿಯ ಧಾರ್ಮಿಕ ಅವಶ್ಯಕತೆಗೆ ಬೇಕಾಗುವ ಶಿಲ್ಪಗಳನ್ನು ರಚಿಸುತ್ತಾ ಇರುವ ಅಚಾರ್ಯರು ಶಿಲೆ, ಲೋಹ, ಮರ, ಚಿನ್ನ, ಬೆಳ್ಳಿಗಳಲ್ಲೂ ಶಿಲ್ಪ ರಚಿಸಬಲ್ಲವರು, ಅದರ ಮನೆಯೇ ಒಂದು ಶಿಲ್ಪಗಾರ. ಕಲಿಯುವ ಆಸಕ್ತಿರಿಗೆ ಮನೆಯಿದ್ದಂತೆ. ಗುರು-ಕುಲ ರೀತಿ ಶಿಷ್ಯರನ್ನು ಪ್ರೀತಿಯಿಂದ ನೋಡಿಕೊಂಡು ವಿದ್ಯೆ ಕಲಿಸುವ ವಿಶಾಲ ಹೃದಯಿಗಳು. ಮೈಸೂರು ದಸರಾ ಪ್ರದರ್ಶನಗಳು ಸಾರ್ವಜನಿಕ ಸಂಘ ಸಂಸ್ಥೆಗಳು ಇವರ ಕಲಾಚಾತುರ್ಯವನ್ನು ಗಮನಿಸಿ ಪ್ರಶಸ್ತಿ ಗೌರವಗಳನ್ನಿತ್ತಿದ್ದಾರೆ, ಕರ್ನಾಟಕ ಶಿಲ್ಪ ಕಲಾ ಅಕಾಡಮಿ ಪ್ರಶಸ್ತಿ, ಈಗ ಜಕಣಾಚಾರಿ ಪ್ರಶಸ್ತಿ ಕೂಡ ಅವರ ಮುಡಿಗೇರಿದೆ,



ರು. ಕಾಳಾಚಾರ್ಯರ ಶಿಲ್ಪ



ಶ್ರೀ ಕೆ. ಕಾಶೀನಾಥ್, ಶಿವಮೊಗ್ಗ : ಶಿವಮೊಗ್ಗದ ಶಿಲ್ಪಿ



ಕೆ. ಕಾಶೀನಾಥ್‌ರವರ ಹೆಸರನ್ನು ಕೇಳದವರಿಲ್ಲ, ಅವರ ಬೃಹತ್ ಸೀಮೆಂಟ್ ಶಿಲ್ಪಿಗಳನ್ನು ನೋಡಿ ಆನಂದಿಸದವರಿಲ್ಲ. ಅವರ ಬೃಹತ್ ಶಿಲ್ಪವೊಂದಕ್ಕೆ ಬೆಟ್ಟವೇ ಪೀಠ, ಆಕಾಶವೇ ಹಿನ್ನಲೆ, ನೋಡುವವರಿಗೆ ಕೈಲಾಸ ಪರ್ವತದಲ್ಲಿ ಶಿವನ ಸಾನಿಧ್ಯದಲ್ಲಿದ್ದೇವೆನ್ನುವ ಅನುಭವ. ಇದು ಬರಿಯ ಮಾತಲ್ಲ, ಸ್ವಂತ ಅನುಭವ. ಮುರುಡೇಶ್ವರದಲ್ಲಿರುವ ಇವರ ಶಿಲ್ಪ ನೋಡಲು ಹೋದಾಗ ಸಂಜೆ, ಬಿಸಿಲೂ ಇರಲಿಲ್ಲ, ಆದರೆ ಹಿತವಾದ ಬೆಳಕು, ಶಿವನನ್ನು ನೋಡುತ್ತಾ, ಸಮೀಪಿಸುತ್ತಿದಂತೆ, ನಾವೂ ಕೈಲಾಸದಲ್ಲಿರುವ ಅನುಭವ. ಸುತ್ತಲೂ ಏನೂ ಕಾಣುವುದಿಲ್ಲ, ಕಡಲು, ಕೈಲಾಸ, ಮತ್ತೆ ನಾವು ಭಕ್ತರಾಗಿಬಿಡುತ್ತೇವೆ. ಶಿಲ್ಪ ಮಾಡುವುದಕ್ಕಿಂತ ಮುಂಚೆ, ಆ ಪರಿಸರವನ್ನು ಸೂಕ್ತವಾಗಿ ಬಳಸಿಕೊಂಡು, ಬೃಹತ್ ಶಿಲ್ಪಗಳ ರಚನೆಗೆ, ಬೃಹತ್ ಹಿನ್ನೆಲೆಗಳನ್ನೇ ಬಳಸಿ ಮಾಡಿರುವ ಇವರ ಕಲಾ ಚಾತುರ್ಯ ಎಲ್ಲರನ್ನೂ ಬೆರಗುಗೊಳಿಸುತ್ತದೆ.

ವಂಶಪರಂಪರೆಯಾಗಿ ಕಲ್ಲು, ಮರ, ಲೋಹಗಳ ಮೂರ್ತಿ ರಚನೆ ಮಾಡುವ ಶಿಲ್ಪಿಯ ಈ ಅಪರೂಪದ ಸಿಮೆಂಟ್ ಮಾಧ್ಯಮವನ್ನು ತೆಗೆದುಕೊಂಡು ಇಷ್ಟೊಂದು ಪ್ರಭಾವಶಾಲಿ ಶಿಲ್ಪಗಳ ರಚನೆಯ ಹಿಂದೆ ಅವರ ಅಪಾರ ಪರಿಶ್ರಮ, ಅಧ್ಯಯನ ಹಾಗೂ ಪ್ರಯೋಗಶೀಲ ಮನಸ್ಸಿರುವುದು ತಿಳಿಯುತ್ತದೆ. ಬೆಂಗಳೂರಿನಲ್ಲೂ ಏರ್‌ಪೋರ್ಟ್ ಶಿವ ಎಂದೇ ಪ್ರಸಿದ್ಧವಾಗಿರುವ ಬೃಹತ್ ಶಿಲ್ಪ, ಬೆಂಗಳೂರಿನ ಒಂದು ಆಕರ್ಷಕ ಕೇಂದ್ರ. ಈಗ ಇವರಿಂದ ತರಬೇತಿ ಪಡೆದ ಹಲವಾರು ಮಂದಿ ಶಿಲ್ಪಿಗಳು ಸಿಮೆಂಟ್ ಶಿಲ್ಪರಚನೆಗಳಲ್ಲಿ ತೊಡಗಿದ್ದಾರೆ.

ಶ್ರೀ ಸಿದ್ಧ ಲಿಂಗಯ್ಯ, ಮೈಸೂರು : ಶಿವಮೊಗ್ಗ ಜಿಲ್ಲೆಯ



ಸಂತೆ ಬೆನ್ನೂರಿನಲ್ಲಿ ಜನಿಸಿದ ಇವರು ಮಠದ ಸ್ವಾಮಿಗಳಾಗಬೇಕಿತ್ತು. ಆದರೆ ಕಲೆಯ ಕಲಿಕೆಗೆ ಮನಸೋತು, ಸ್ವತಃ ಗುರುವಾಗಿ ಶಿಲ್ಪ ಮಾಡಲು ಪ್ರಾರಂಭಿಸಿದರು. ಜೈಪುರದ ಕಲಾಶಾಲೆಯಲ್ಲಿ ೫ ವರ್ಷಗಳ ಅಭ್ಯಾಸದಲ್ಲಿ ಅಮೃತ ಶಿಲೆಯಲ್ಲಿ ತದ್ರೂಪ ರಚನೆಗಳನ್ನು ಮಾಡುವ



ಶ್ರೀ ಸಿದ್ಧಲಿಂಗಯ್ಯನವರ ಶಿಲ್ಪ

ಪ್ರಾವೀಣ್ಯತೆ ಪಡೆದರು. ಮುಂದೆ ಕಲಿಯುವ ಬಯಕೆ ಹಿಂಗದೇ, ಬೊಂಬಾಯಿನ ಜಿ.ಜಿ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಮಣ್ಣಿನಲ್ಲಿ ಪ್ರತಿಮೆಗಳನ್ನು ನಿರ್ಮಿಸುವುದನ್ನು ಕಲಿತರು. ಮೈಸೂರಿನ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಶಿಲ್ಪ ವಿಭಾಗದ ಬೋಧಕರಾಗಿ, ಕೆಲಸ ಮಾಡುತ್ತ, ನಿವೃತ್ತರಾದರು, ಈಗಲೂ ಇವರ ಕಲಾ ರಚನೆಗಳು ನಡದೇ ಇವೆ, ಜೊತೆಗೆ ಕಿರಿಯರಿಗಾಗಿ ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸುವ ಬಯಕೆ ಇವರದು, ಇವರ ಸಾಧನೆಗಳ ಬಗ್ಗೆ ಕರ್ನಾಟಕ ಶಿಲ್ಪ ಕಲಾ ಅಕಾಡಮಿ ಒಂದು ಕಿರುಚಿತ್ರವನ್ನು ಮಾಡಿದೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯಲ್ಲದೆ ಬೇರೆ ಬೇರೆ ಪ್ರಶಸ್ತಿ ಪುರಸ್ಕಾರಗಳೂ ಲಭಿಸಿವೆ. ಜಕ್ಕಣಾಚಾರಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡ ಹಿರಿಮೆ ಇವರದು.

ಶ್ರೀ ಬಿ.ಎಸ್. ಚನ್ನಪ್ಪಚಾರ್ :



ಇವರ ಬಗ್ಗೆ ಯಾವ ವಿವರಗಳೂ ಸಿಗಲಿಲ್ಲ.

ಇಷ್ಟೆಲ್ಲಾ ಪುರಸ್ಕೃತ ಶಿಲ್ಪಿಗಳಿದ್ದಾರೆ. ಅವರ ಶಿಷ್ಯ ವೃಂದಗಳೂ ಬೆಳೆಯುತ್ತಿದವೆ. ಇಷ್ಟಾದರೂ ಶಿಲ್ಪಿಗಳು ಕಲ್ಲು ಸಂಗ್ರಹಿಸುವುದಕ್ಕೆ ಏನು ಮಾಡುತ್ತಾರೆ ? ಮರದ ಶಿಲ್ಪಕ್ಕೆ ಬೇಕಾದ ಮರಗಳು ಸಿಗುತ್ತವೆಯೆ ? ಈ ಸಾಮಗ್ರಿಗಳನ್ನು ತರಲು ಶಿಲ್ಪಿಗಳು ಪಡುವಪಾಡು ಹೇಳುವಂತಿಲ್ಲ. ಬೀದಿಯಲ್ಲಿ ಸಿಗುವ ಕಲ್ಲುಗಳೆಲ್ಲ ಕೆಲಸಕ್ಕೆ ಬರುವುದಿಲ್ಲ ಎಂಬ ಸತ್ಯಕೂಡ ಎಷ್ಟೋ ಜನರಿಗೆ ತಿಳಿದಿಲ್ಲ.

ಮೈಸೂರಿನ ಸುತ್ತಮುತ್ತ ಬಳಪದ ಕಲ್ಲುಗಳು ಹೇರಳವಾಗಿ ಸಿಗುತ್ತದೆ. ಹಾಗೆಯೇ ಬಾದಾಮಿಯ ಬಳಿ, ಕಗಲ ಗೊಂಬು, ಹಾಸನದ ಸುತ್ತ ಮುತ್ತ ಕೂಡ ದೊರೆಯುತ್ತವೆ. ಆಯಾಪ್ರದೇಶದಲ್ಲಿರುವ ಶಿಲ್ಪಿಗಳು ತಮ್ಮ ಸಮೀಪವೇ ದೊರೆಯುವ ಕಲ್ಲುಗಳಿಂದಲೇ ಕೆಲಸ, ಮಾಡಿಕೊಂಡು ಬರುತ್ತಾ ಇದ್ದಾರೆ. ಆದರೆ ಗಣಿಗಳಿಂದ ಕಲ್ಲು ತೆಗೆದು, ತಾವು ಕೆಲಸ ಮಾಡುವ ಜಾಗಕ್ಕೆ ತೆಗೆದುಕೊಂಡು ಹೋಗುವ ವರೆಗೂ ಶಿಲ್ಪಿಗಳು ಎದುರಿಸಬೇಕಾದ ಸಮಸ್ಯೆಗಳು ಹಲವಾರು. ಇದುವರೆಗೂ ಶಿಲ್ಪಿಗಳಿಗೆಂದೇ ಸುಲಭದರದಲ್ಲಿ ಸುಲಭವಾಗಿ ಸಿಗಬಹುದಾದ ಯಾವ ವ್ಯವಸ್ಥೆಯನ್ನು ಮಾಡಿಲ್ಲ, ಬದಲಾಗಿ ಹಲವಾರು ಸಮಸ್ಯೆಗಳನ್ನೇ ಸೃಷ್ಟಿಸುತ್ತಿವೆ. ಇದಕ್ಕೇನಾದರೂ ಪರಿಹಾರವಿದೆಯೇ ಎಂಬುದೇ ಪ್ರತಿಯೊಬ್ಬ ಶಿಲ್ಪಿಯೂ ಕೇಳುತ್ತಿರುವ ಪ್ರಶ್ನೆ. ಈ ಪ್ರಶ್ನೆಗೆ ಉತ್ತರಿಸುವವರು ಯಾರು ? ರಾಜ್ಯದ ಪ್ರಗತಿಗೆ ಶಿಲ್ಪಕಲೆಯ ಅಗತ್ಯ ಎಷ್ಟಿದೆಯೆಂದು ಬಲ್ಲ ಘನಸರ್ಕಾರ ಶಿಲ್ಪಗಳಿಗೆ ಬೇಕಾದ

ಸೌಲಭ್ಯಗಲನ್ನು ಒದಗಿಸುವುದು, ಗಣಿಗಳಲ್ಲಿರುವ ಕಲ್ಲುಗಳನ್ನು ಶಿಲ್ಪ ಮಾಡುವುದಕ್ಕೆಂದೇ ಮೀಸಲಿಡುವ ವ್ಯವಸ್ಥೆ ಮಾಡುವುದು, ಬೇರೆಯ ಬಳಕೆಗಳಿಗೆ ಪರವಾನಗಿ ಕೊಡದಿರುವದು, ಕಲ್ಲು ಸಾಗಿಸುವ ಸಮಯದಲ್ಲಿ ಬೇಕಾಗುವ ಪರವಾನಗಿ ಅವುಗಳನ್ನು ಸರಳಗೊಳಿಸಿ, ಶಿಲ್ಪಿಗಳು ಕೆಲಸದ ಕಡೆಗೆ ಹೆಚ್ಚಿನ ಗಮನ ಕೊಡುವುದಕ್ಕೆ ಸಹಾಯ ಮಾಡಿದ್ದಲ್ಲಿ ಶಿಲ್ಪಕಲೆಯ ಅಭಿವೃದ್ಧಿ ಇನ್ನೂ ತ್ವರಿತ ಗತಿಯಲ್ಲಾಗುವುದು ಖಂಡಿತ.

ಇನ್ನು ಶಿಲ್ಪಕ್ಕೆ ಬೇಕಾದ ಮರಗಳಂತು ಈ ನಡುವೆ ಬಹಳ ತುಟ್ಟಿಯಾಗುತ್ತಿವೆ. ಕಾಡುಗಳನ್ನೇ ಕಡಿಯುತ್ತ ಬಂದರೆ ಮರಗಳು ಸಿಗುವುದಾದರೂ ಹೇಗೆ ? ಪರಿಸರವನ್ನು ಕಾಪಾಡುವ ದೃಷ್ಟಿಯಿಂದಲೂ ಕಾಡುಗಳನ್ನು ಉಳಿಸುವುದು, ಅದರ ರಕ್ಷಣೆ ಮಾಡುವುದೂ ಸರಕಾರಕ್ಕೇ ಸೇರಿದ್ದು. ಶಿಲ್ಪಿಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸುವಾಗ ಈ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾ, ಅದರ ಪರಿಹಾರದ ಕಡೆಗೆ ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತಾ ಅದರ ಪರಿಹಾರದ ಕಡೆಗೆ ಸರಕಾರಕ್ಕೆ ಮನವಿ ಮಾಡಿಕೊಳ್ಳಲು ಕೇಳಿದ್ದಾರೆ, ಇದಕ್ಕೆ ಪರಿಹಾರ ದೊರೆಯಲಿದೆಯೆ? ಇದು ಎಲ್ಲರ ಪ್ರಶ್ನೆ.

ಬರೀ ಪ್ರತಿಮಾ ಶಿಲ್ಪಿಗಳೇ ನಮ್ಮ ನಾಡಿನಲ್ಲಿ ಹೆಚ್ಚಿನ ಮಂದಿ ಇದ್ದಾರೆ. ವಾಸ್ತು ಶಿಲ್ಪಗಳ ಸಂಖ್ಯೆ ಬಹಳವೇ ಕಡಿಮೆಯಾಗುತ್ತಿದೆ. ಇದಕ್ಕೆ ಹಲವಾರು ಮುಖ್ಯಕಾರಣಗಳಿವೆ. ಮುಖ್ಯವಾಗಿ ಮೂರ್ತಿ ಶಿಲ್ಪಗಳನ್ನು ಕಲಿಸುವ ಶಾಲೆಗಳೇ ಇನ್ನೂ ಸಾಲದಿದ್ದಾಗ, ವಾಸ್ತುಶಿಲ್ಪ ಕಲಿಸುವ ಶಾಲೆಗಳೇ ಇಲ್ಲ. ಆದರೆ ಪಕ್ಕದ ತಮಿಳುನಾಡಿನಲ್ಲಿ ವಾಸ್ತು ಶಿಲ್ಪದ ರಚನೆಗೇ ಹೆಚ್ಚಿನ ಗಮನಕೊಟ್ಟು ಕಲಿಸುವ ಶಾಲೆಗಳು ಇವೆ. ಕರ್ನಾಟಕದಲ್ಲಿ ಹಿಂದೆ ಹಲವಾರು ಶೈಲಿಗಳ ವಾಸ್ತು ಶಿಲ್ಪಗಳ ರಚನೆಗಳಾಗಿವೆ. ಗುಹಾಂತರ ದೇವಾಲಯಗಳು, ಕಲ್ಲು ಬಂಡೆಗಳನ್ನು ಕೊರೆದು, ದೇವಾಲಯುಗಳ ನಿರ್ಮಾಣಮಾಡಿ, ಅದರಲ್ಲೇ ಅಲ್ಲಲ್ಲಿ ಪ್ರತಿಮೆಗಳನ್ನು ಕೊರೆದಂತಹ ಕಲಾ ಚಾತುರ್ಯತೆ ತೋರಿಸಿರುವ ಪ್ರಾಚೀನರಚನೆಗಳು ಎಲ್ಲೋರ (ರಾಷ್ಟ್ರಕೂಟ) ಬಾದಾಮಿ ಗುಹಾಂತರ ದೇವಾಲಯಗಳು (ಚಾಲುಕ್ಯ). ಮುಂದೆ ನಿರ್ಮಿತ ದೇವಾಲಯಗಳು, ಕಟ್ಟಿದ ದೇವಾಲಯಗಳು ಬಂದಾಗ, ಅದೇ ಜನಪ್ರಿಯುವಾಗಿ ಎಷ್ಟೊಂದು ದೇವಾಲಯುಗಳ ನಿರ್ಮಾಣವಾದುವು ! ಕಲ್ಲು ಕಟ್ಟಡದ ಮೇಲೆ ಗಾರೆಯಿಂದ ಗೋಪುರಗಳ ನಿರ್ಮಾಣವಾಗಿ, ಅಲ್ಲೂ ಶಿಲ್ಪಗಳನ್ನು ರಚಿಸಿದ್ದಾರೆ. ವಿಜಯನಗರದ ಕಾಲದಲ್ಲಿ ಹೆಚ್ಚಾಗಿ ಪ್ರಖ್ಯಾತಿಗೆ ಬಂದ ಈ ಗೋಪುರಗಳನ್ನು "ರಾಯಗೋಪುರ"ವಂದೇ ಕರೆಯುತ್ತಿದ್ದರು. ಹಳ್ಳಿ ಹಳ್ಳಿಯಲ್ಲೂ ಗಾರೆಯಿಂದ ಈ ಗೋಪುರಗಳನ್ನು ನಿರ್ಮಿಸುವ ಕಲೆಗೊತ್ತಿತ್ತು. ಸುಣ್ಣದ ಕಲ್ಲು, ಮರಳು ಮುಂತಾದ ಸಾಮಗ್ರಿಗಳನ್ನು ಬಳಸಿ, ಸರಳುಗಳಿಂದ ಆಕಾರವನ್ನು ಮಾಡಿ ಈ ಗೋಪುರ ನಿರ್ಮಾಣ ಮಾಡುತ್ತಿದ್ದರು. ಅದರೊಳಗಿನ ಶಿಲ್ಪಗಳು, ಗೋಪುರದ ತುದಿಯವರೆಗೂ, ಯಾರಿಗೂ ನೋಡಲು ಸಿಗದಿದ್ದ ಜಾಗಗಳಲ್ಲೂ ಸಹ, ಅತ್ಯಂತ ಸುಂದರವಾದ ರಚನೆಗಳನ್ನು ಮಾಡುತ್ತಿದ್ದರು, "ದೇವರ ಕೆಲಸ" ಎಂದು ಅತ್ಯಂತ ಭಕ್ತಿಯಿಂದ, ಎಷ್ಟು ಎತ್ತರದಲ್ಲಾದರೂ, ಸರ್ವಾಂಗಸುಂದರವಾದ ಶಿಲ್ಪಗಳನ್ನೂ ಗಾರೆಯಲ್ಲೇ ರಚಿಸುತ್ತಿದ್ದರು. ಈ ಗೋಪುರದ ನಿರ್ಮಾಣಕ್ಕೂ ಒಂದು ಶಾಸ್ತ್ರವಿದೆ, ಕ್ರಮೇಣ ಗೋಪುರಗಳು ಮರೆಯಾಗುತ್ತ, ಸೀಮೆಂಟಿನ ಗೋಪುರಗಳೇ ರಚನೆಗೊಳ್ಳುತ್ತಿವೆ. ಹೇಗೊ, ಏನೋ, ಸೀಮೆಂಟಿನಲ್ಲಿ ಮಾಡಬಹುದಾದ ಈ ವಾಸ್ತು ಶಿಲ್ಪಕಲೆ ಕೂಡ ಕರ್ನಾಟಕದಲ್ಲಿ ವಿರಳವಾಗುತ್ತಿದೆ.

ಈ ವಾಸ್ತುಶಿಲ್ಪದ ರಚನೆಗಳು ಒಬ್ಬಿಬ್ಬರಿಂದ ಆಗುವ ಕೆಲಸಗಳಲ್ಲಿ ಇದಕ್ಕೆ ಒಂದು ಸುಸಜ್ಜಿತ ಗುಂಪೇ ಇರಬೇಕು. ಕರ್ನಾಟಕದಲ್ಲಿ ವಾಸ್ತು ಶಿಲ್ಪ ಮರೆಯಾಗುತ್ತಿರುವ ಸಮಯದಲ್ಲೇ ದೇವಾಲಯದ ನಿರ್ಮಾಣಗಳು ಮಾತ್ರ ನಿಲ್ಲದೆ, ಅದಕ್ಕಾಗಿ ತಮಿಳು ನಾಡಿನಿಂದ ಶಿಲ್ಪಗಳು ಬರುತ್ತಿರುವುದು ವಾಸ್ತವದ ಸಂಗತಿಯಾಗಿದೆ. ಕರ್ನಾಟಕದ ವಾಸ್ತು ಶಿಲ್ಪದ ಬಗ್ಗೆ ಬಹುಶಃ ಪುಸ್ತಕಗಳಲ್ಲಿ ಮಾತ್ರ ವಿವರಗಳು ಲಭ್ಯವಾಗಿರಬಹುದು. ತಮಿಳು ನಾಡಿನಿಂದ ಬಂದ ವಾಸ್ತು ಶಿಲ್ಪಗಳು ಸಹಜವಾಗಿ ಅವರು ಕಲಿತ, ಅವರ ನಾಡಿನ ವಾಸ್ತು ಶಿಲ್ಪ ರಚನೆಗಳನ್ನು ನಮ್ಮ ನಾಡಿನಲ್ಲೂ ತುಂಬುತ್ತಿದ್ದಾರೆ. ಬೆಂಗಳೂರಿನಲ್ಲೇ, ಬೀದಿಗೊಂದು ದೇವಾಲಯಗಳ ರಚನೆಯಾಗುತ್ತಿವೆ. ಜನಗಳಿಗೆ ತಮ್ಮ ಆರ್ಥಿಕ ಸ್ಥಿತಿಗೆ ಹೊಂದುವ ದೇವಾಲಯಗಳು ಬೇಕು, ಕಲೆ, ನಮ್ಮ ನಾಡಿನ ಸಂಪ್ರದಾಯ ಇದು ಯಾವುದೂ ಲೆಖ್ಖಕ್ಕೇ ಬಂದಂತಿಲ್ಲ. ಹಾಗೆ ನೋಡಿದರೆ ಕರ್ನಾಟಕದಲ್ಲಿ ಕನ್ನಡವರಿಗಿಂತ ಇತರ ನಾಡಿನ ಜನರೇ ತುಂಬಿರುವಾಗ ಕನ್ನಡದ ಶಿಲ್ಪಗಳಿಗೆ ಜಾಗವಾದರೂ ಎಲ್ಲಿ? ಕಟ್ಟಿರುವ ದೇವಾಲಯಗಳಿಗೆ ಶಿಲ್ಪ ಮಾಡಿಕೊಟ್ಟರೆ ಸಾಕು ಎಂದು ನಮ್ಮ ಶಿಲ್ಪಗಳು ಯೋಚಿಸುವ ಕಾಲ ಬಂದಿದೆ.

ಹೊಸ ಅವಕಾಶಗಳು : ಇದಿಷ್ಟು ವಾಸ್ತು ಶಿಲ್ಪ, ಅದರೊಂದಿಗೆ ರಚಿಸಬಹುದಾದ ಶಿಲ್ಪಗಳ ಸಮಸ್ಯೆಗಳೆಂದು ಪರಿಗಣಿಸಿದರೆ, ಅದಕ್ಕೆ ಸಧ್ಯಕಂತೂ ಪರಿಹಾರ ಸಿಗುವಂತೆ ಕಾಣದು. ಇಂತಹ ಸಮಸ್ಯೆಗಳು ಗೌಣವಾಗಿರುವ ಈ ಸಮುಯದಲ್ಲಿ ನಮ್ಮ ಶಿಲ್ಪಿಗಳಿಗೆ ದೊರೆಯುತ್ತಿರುವ ಅವಕಾಶಗಳನ್ನೂ ಕಲಾ ದೃಷ್ಟಿಯಿಂದ ನೋಡಿದಾಗ, ಅದಕ್ಕೆ ವಿಸ್ತಾರವಾದ ಭವಿಷ್ಯವಿದೆ ಎನ್ನಿಸುತ್ತದೆ. ಧಾರ್ಮಿಕ ಅವಶ್ಯಕತೆಗಳು ಮಾತ್ರವಲ್ಲ, ಕಲಾದೃಷ್ಟಿಯಿಂದ ನೋಡುವ ಕಾಲವೂ ಬಂದಿದೆ.

'ನಮ್ಮತನ' ನಿರೂಪಿಸುವ ಶಿಲ್ಪಿಗಳ ಕಡೆಗೆ ನಮ್ಮವರ ನಮನವೂ ಹರಿಯುತ್ತಿದೆ. ಅಂತಹ ಅವಶ್ಯಕತೆಗಳಿಗೆ ಸ್ಪಂದಿಸುವ ನಮ್ಮ ಯುವ ಶಿಲ್ಪಿಗಳ ಗುಂಪೂ ಬೆಳೆಯುತ್ತಿದೆ, ಬರೀ ದೇವಾಲಯಗಳಿಗೆ ಮಾತ್ರವಲ್ಲ, ಪರಿಸರಕ್ಕೆ ಅನುಗುಣವಾಗಿ, ಅಲಂಕಾರಕ್ಕಾಗಿ, ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಎತ್ತಿತೋರಿಸುವುದಕ್ಕಾಗಿ, ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಹಲವಾರು ಸಮಾಕಾಲಿನ ಬೇಡಿಕೆಗಳು ಬರುತ್ತಿವೆ. ಇಂತಹ ಅವಶ್ಯಕತೆಗಳು ಅಧ್ಯಯನದ ದೃಷ್ಟಿಯಿಂದ ನಮ್ಮ ಯುವ ಜನಾಂಗಕ್ಕೆ ಹೊಸ ಸವಾಲುಗಳನ್ನು ತರುತ್ತಿವೆ.

ಅದರಲ್ಲೂ ಈಗ ಬಹಳ ಜನಪ್ರಿಯತೆ ಗಳಿಸುತ್ತಿರುವ ಬಿಡದಿಯಲ್ಲಿ ಕಲಿತ ಉತ್ಸಾಹೀ ಯುವ ಶಿಲ್ಪಿಗಳಿಗೆ, ಧಾರ್ಮಿಕ ಅವಶ್ಯಕತೆಗಳಲ್ಲದೆ, ಬೇರೆ ಬೇರೆ ಅಲಂಕಾರಗಳನ್ನು ಮಾಡುವ. ಅವಕಾಶಗಳು ಸಿಗುತ್ತಿರುವುದು ಹೊಸ ದಿಗಂತವನ್ನೇ ಸೃಷ್ಟಿಸಿದೆ. ದೊಡ್ಡ ದೊಡ್ಡ ವ್ಯಾಪಾರೀ ಕಟ್ಟಡಗಳು, ಸಿನಿಮಾ ಮಂದಿರಗಳು, ಸಾರ್ವಜನಿಕ ಸಭಾ ಗೃಹಗಳು, ಐಟಿ, ಬಿಟಿ ಕಂಪನಿಗಳು, ಶ್ರೀಮಂತರು ತಮ್ಮ ಗೃಹಗಳನ್ನು ಅಲಂಕರಿಸುವ ಅವಕಾಶಗಳು ನಮ್ಮ ಈ ಉತ್ಸಾಹೀ ತರುಣರ ಉತ್ಸಾವವನ್ನು ಇಮ್ಮಡಿಸಿವೆ. ಜೊತೆಗೆ ಟಿ.ವಿ.ಯಲ್ಲಿ ಬರುವ ಕಾರ್ಯಕ್ರಮಗಳಿಗೆ ಹೊಂದುವಂತೆ ಶಿಲ್ಪಗಳಿಂದ ಅಲಂಕರಿಸುವ ಅವಕಾಶಗಳೂ ದೊರೆಯುತ್ತವೆ. ಈ ರೀತಿಯ ಕೆಲಸಗಳಲ್ಲಿ ಅನೇಕರು ತೊಡಗಿರುವುದೂ ಸಂತೋಷದ ವಿಷಯ. ತಮ್ಮ ಎದುರಿಗೆ ಬರುವ ಎಂತಹ ಕೆಲಸವೇ ಆಗಲೀ, ತಮ್ಮ ಅನುಭವದಿಂದ, ತೆರೆದಿಟ್ಟ ಮನದಿಂದ, ಕೈಗೆ ತೆಗೆದುಕೊಂಡು ಹೊಸ ನಿರೀಕ್ಷೆಗಳಿಗೆ ಸ್ಪಂದಿಸುತ್ತಿದ್ದರೂ, ಸಂಪ್ರದಾಯಶೈಲಿಗಳನ್ನು ಬಿಟ್ಟುಹೋಗುತ್ತಿಲ್ಲ. ಈ ಹೊಸ ಅಧ್ಯಾಯ ಶಿಲ್ಪಿಗಳ ಕ್ರಿಯಾ ಶೀಲತೆಗೆ, ಕಲ್ಪನೆಗಳಿಗೆ, ರಚನಾ ಸಾಮರ್ಥ್ಯಕ್ಕೆ ಸವಾಲಾಗಿರುವುದಲ್ಲದೆ, ಅವರ ಅರ್ಹತೆಯನ್ನು ಎತ್ತಿ ತೋರಿಸುತ್ತಿದೆ. ಹಾಗಾಗಿ ಈ ಆಧುನಿಕ ಯುಗದಲ್ಲಿ ಸಂಪ್ರದಾಯ ಶಿಲ್ಪಿಗಳಿಗೂ ಕೆಲಸಗಳು ಇದ್ದೇ ಇವೆ. ಮತ್ತೊಂದು ವಿಶೇಷವೆಂದರೆ ಇವರೆಲ್ಲ ಸ್ವಂತ ಉದ್ಯೋಗಗಳನ್ನು ಆರಂಭಿಸಿ, ದೇಶದ ಉದ್ಯೋಗದ ಸಮಸ್ಯೆಗೂ ಪರಿಹಾರ ನೀಡಿದ್ದಾರೆಂದರೆ ಮೆಚ್ಚುವ ಅಂಶವಲ್ಲವೆ ? ಹಿಂದೆ, ಕಲೆಯಿಂದ ಏನು ಗಳಿಸಬಹುದು, ಎನ್ನುತ್ತಿದ್ದ ಕಾಲ ಹೋಗಿದೆ, ಕಲೆಯಿಂದಲೂ ಗೌರವಯುತವಾದ ಜೀವನ ನಡೆಸಬಹುದು ಎಂದು ಇವರೆಲ್ಲ ಸಾಧಿಸಿ ತೋರಿಸುತ್ತಿದ್ದಾರೆ. ಶಿಲ್ಪ ಕಲೆಯೂ ನಿಂತ ನೀರಾಗದೆ, ನಿರಂತರ ಹರಿಯುವ ಜೀವನದಿಯಾಗುತ್ತಿದೆಯೆಂದರೆ ನಿಜಕ್ಕೂ ಸಂತೋಷ ಪಡುವ ವಿಷಯ, ಇಂತಹ ನೂತನ ಪ್ರಯೋಗಗಳಲ್ಲಿ ಶಿಲ್ಪಿಗಳು ಮಾತ್ರವಲ್ಲ, ಆಸಕ್ತರೂ, ಪೋಷಕರು ಕೈ ಜೋಡಿಸಿರುವುದು ಒಳ್ಳೆಯ ಸಂಕೇತ.

ಶಿಲ್ಪಿಗಳ ಕೊರಗು

ಇಷ್ಟೆಲ್ಲಾ ಸಮಸ್ಯೆಗಳ ನಡುವೆಯೂ ಹೊಸ ಹೊಸ ದಾರಿಗಳನ್ನು ಹುಡುಕಿಕೊಂಡು ಹೋಗುತ್ತಿರುವ ಯುವ ಶಿಲ್ಪಿಗಳದೂ, ಸಂಪ್ರದಾಯವನ್ನೇ ನಂಬಿರುವ ಹಿರಿಯ ಶಿಲ್ಪಿಗಳೂ ಒಂದೇ ಕೊರಗು, ಇಷ್ಟೆಲ್ಲಾ, ಸಮಸ್ಯೆಗಳನ್ನು ಬಗೆ ಹರಿಸಿಕೊಂಡು ಸಾರ್ವಜನಿಕ ಬೇಡಿಕೆಗಳಲ್ಲಿ ಸ್ಪಂದಿಸಿದರೂ, ಅವರಿಗೆ ಸರಿಯಾಗಿ ಕೃತಜ್ಞತೆ ತೋರಿಸುತ್ತಿಲ್ಲ. ನನಗೆ ಶಿಲ್ಪಗಳ ಬಗ್ಗೆ ಬರೆಯಲು ಶಿಲ್ಪ ಕಲಾ ಅಕಾಡಮಿ ಅವಕಾಶ ಕೊಟ್ಟು ನಮ್ಮೊಳಗಿನ ನೋವು ನಲಿವುಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಟ್ಟಿತು. ಅದಕ್ಕೆ ಎರಡು ಮೂರು ದಿನಗಳ ಹಿಂದೆಯಷ್ಟೇ ಪತ್ರಿಕೆಗಳಲ್ಲಿ ಯಾವುದೋ ಪ್ರತಿಮೆಯ ಉದ್ಘಾಟನೆ ಮಾಡಿದ ಪ್ರಮುಖರ ಹೆಸರು, ಎಲ್ಲಿ ಪ್ರಮುಖರ ಹೆಸರು, ಪ್ರತಿಮೆಯನ್ನು ಏಕೆ ಮಾಡಿಸಿದರು, ಎಲ್ಲಿ ಪ್ರತಿಷ್ಠಾಪನೆ ಮಾಡಿದರೆಂಬುದರ ಬಗ್ಗೆ ವಿವರಣೆಯಿತ್ತು, ಆದರೆ ಶಿಲ್ಪ ರಚಿಸಿದ ಶಿಲ್ಪಿಯ ಹೆಸರು ಎಲ್ಲೂ ಇರಲಿಲ್ಲ, ಅದನ್ನು ನೋಡಿ ಬಹಳ ದುಃಖವೇ ಆಯಿತು. ಇದು ಇಂದು ನಿನ್ನೆಯ ತಪ್ಪಲ್ಲ, ನಿರಂತರವಾಗಿ ಶಿಲ್ಪಿಗಳು ಎದುರಿಸುತ್ತಿರುವ ಒಂದು ಸಮಸ್ಯೆಯೆನ್ನಲೆ ? ಅವಮಾನವೆನ್ನಲೆ ? ಹಿಂದಿನಿಂದ ಬಂದ ಪರಂಪರೆಯೆನ್ನಲೆ ? ಹೌದು ಶತ ಶತಮಾನಗಳಿಂದ ನಡೆದು ಬಂದ ಸಂಪ್ರದಾಯ. ಶತಮಾನಗಳಿಂದ ಎಷ್ಟೆಲ್ಲ ಶಿಲ್ಪ ರಚನೆಗಳಾಗಿದ್ದರೂ, ಅಲ್ಲಿ ಶಿಲ್ಪಿಗಳ ಹೆಸರಿಲ್ಲ, ರಾಜಮನೆತನದ ಹೆಸರಿನಿಂದಲೇ ಗುರುತಿಸುತ್ತಾ ಬಂದಿದ್ದಾರೆ, ಹೊಯ್ಸಳರ ದೇವಾಲಯಗಳಲ್ಲಿ ಮಾತ್ರ ಕೆಲವು ಹೆಸರಿರುವುದನ್ನು ಗಮನಿಸುತ್ತೇವೆ. ಬೇರೆ ಯಾವ ದೇವಾಲಯಗಳಲ್ಲಿವೆ ? ಶಿಲ್ಪಿಗಳ ಕಲಿಕೆ ಹೇಗಿತ್ತು ಎಂದೆಲ್ಲ ಕುತೂಹಲ ನನ್ನನ್ನೂ ಕಾಡುತ್ತಿತ್ತು. ಶಿಲ್ಪಿಗಳ ಜೀವನ ಶೈಲಿ, ಅಧ್ಯಯನಗಳ ಬಗ್ಗೆ ತಿಳಿಯಲೂ ಇಲ್ಲ, ಹೆಚ್ಚಿನ ಅಧ್ಯಯನ ನಡೆಸಿ ಅದನ್ನು ತಿಳಿಯುವಷ್ಟು ಸಮಯವೂ ಇರಲಿಲ್ಲ. ಇದರ ಬಗ್ಗೆ ಕುತೂಹಲದಿಂದ ಕೇಳಿದಾಗ ಕೆಲವೊಂದು ಹಳೆಯ ಶಿಲ್ಪಿಗಳ ಬಗ್ಗೆ ಮಾಹಿತಿಗಳು ಇದೆಯೆಂದು ಡಾ|| ಸೂರ್ಯನಾಥ್ ಕಾಮತ್, ಹಾಗೂ ಶ್ರೀ ಸಿ. ಕೃಷ್ಣಮೂರ್ತಿಗಳು (ಪ್ರಾಚ್ಯ ವಸ್ತು ಸಂಗ್ರಹಾಲಯ ನಿವೃತ್ತ ಅಧಿಕಾರಿಗಳು) ಹೇಳಿ ಕೆಲವು ಹೆಸರುಗಳನ್ನು ತಿಳಿಸಿದರು.

ಹಿಂದಿನಿಂದಲೂ ಶಿಲ್ಪರಚನೆಯಲ್ಲಿ ತೊಡಗಿರುವ ಶಿಲ್ಪಿಗಳ ಬಗ್ಗೆ, ಅವರ ಹಿನ್ನೆಲೆ, ಹೆಸರುಗಳಿಂದ ಹಿಡಿದು ಯಾವ ವಿವರಗಳನ್ನೂ ತಿಳಿಸಿಲ್ಲ. ಶಿಲ್ಪಿಗಳು ಸಹ "ತಮ್ಮತನ"ವನ್ನು ಮೆರೆಯುವ ಯಾವ ಉದ್ಧಟತನವನ್ನೂ ತೋರಿಸಿಲ್ಲ. ಅದಕ್ಕಾಗಿ ಎಲ್ಲಿಯೂ ಅಂಕಿತ ಹಾಕಿಲ್ಲ ಹಾಕುತ್ತಿಲ್ಲ. ಪೂಜಾಪ್ರತಿಮೆಗಳ ಮೇಲೆ ತಮ್ಮ ಹೆಸರು ಕಾಣುವಂತೆ ಬರೆಯುವ 'ಅಹಂಕಾರ'

ಶಿಲ್ಪಿಗಳಿಗಿಲ್ಲ. ಆದರೆ ದೇವಾಲಯದ ಯಾವ ಮೂಲೆಯಲ್ಲಾದರೂ ಅದನ್ನು ದಾಖಲಿಸಬಹುದಲ್ಲವೆ ? ಸ್ವಾತಂತ್ರ್ಯ ಪೂರ್ವದ ಅಥವಾ ಅದಕ್ಕೂ ಹಿಂದಿನ ನಿರ್ಮಾಣಗಳ ಮಾತು ಬೇಡ ಇತ್ತೀಚಿನ ದಿನಗಳಲ್ಲಿ ಎಷ್ಟೊಂದು ದೇವಾಲಯಗಳ ನಿರ್ಮಾಣವಾಗುತ್ತಿವೆ. ಎಷ್ಟೊಂದು ಮಂದಿ ಪ್ರಸಿದ್ಧ ಪುರುಷರ ಪ್ರತಿಮೆಗಳು ಸ್ಥಾಪನೆಯಾಗುತ್ತಿವೆ. ಆದರೂ ಪತ್ರಿಕಾ ವರದಿಗಳಲ್ಲೂ ಬೇರೆಲ್ಲಿ ವಿವರಗಳಿದ್ದರೂ ಶಿಲ್ಪಿಯ ಹೆಸರು ಅವರ ಬಗ್ಗೆ ಒಂದೇ ಒಂದು ಸಾಲು ಬರೆಯಲೂ ಆಗುವುದಿಲ್ಲವೆ ? ಇದೆಂತಹ ಸಂಸ್ಕೃತಿ ? ಕೃತಿ ರಚಿಸಿದ ಕಲಾವಿದನಿಗೆ ಬರೀ ಅವನು ಕೇಳಿದ ಹಣ ಕೊಟ್ಟರೆ ಸಾಕೆ ? ದುಡ್ಡು ಕೊಟ್ಟರೆ ಅಂಗಡಿಯಲ್ಲಿ ಸಿಗುವ ವಸ್ತುವಲ್ಲ ಕಲೆ ಎನ್ನುವುದು ಎಂದು ತಿಳಿದಿಲ್ಲವೆ ? ಸಮಾಜದ ಈ ಧೋರಣೆಯ ಬಗ್ಗೆ ಎಲ್ಲ ಶಿಲ್ಪಿಗಳಿಗೂ ಕೊರಗಿದೆ.

ನಮ್ಮ ಶಿಲ್ಪಿ ಸಮುದಾಯದಲ್ಲಿ ಹೆಚ್ಚಿನ ಓದು-ಬರಹದ ವಿದ್ಯೆ ಕಲಿತವರಿಲ್ಲ, ಅವರ ಗಮನವೆಲ್ಲ ಬರೀ ಶಿಲ್ಪರಚನೆಯ ಕಡೆಗೇ ಎಂದರೆ ತಪ್ಪಾಗಲಾರದು. ಹೆಚ್ಚಿನ ಜ್ಞಾನಪಡೆದು ಇತಿಹಾಸದ ಬೃಹತ್ ಗ್ರಂಥಗಳನ್ನು ಓದುವುದಕ್ಕೆ ಅವಕಾಶವೆಲ್ಲಿ? ಶಿಲೆಯಾಗಲೀ, ಲೋಹವಾಗಲೀ ಗಡಸು ಮಾಧ್ಯಮಗಳು, ಅದಕ್ಕೆ ಹಿಡಿಸುವ ಸಮಯವೂ ಬಹಳ. ಅಂತಹ ಮಾಧ್ಯಮಗಳಲ್ಲಿ ಸುಂದರ. ಶಿಲ್ಪಗಳನ್ನು ರಚಿಸುವುದಾಗಲೀ, ಆಕರ್ಷಕ ದೇವಾಲಯಗಳನ್ನು ನಿರ್ಮಿಸುವುದಾಗಲೀ ಸುಲಭದ ಕೆಲಸವಲ್ಲ. ಹೀಗಿರುವಾಗ ಬೇರೆ ಯಾವ ಕಡೆಗೂ ಗಮನ ಹರಿಸದೆ ಶಿಲ್ಪಿ, ತನ್ನ ಬಗ್ಗೆ ತಿಳಿಸುವುದು ಯಾವಾಗ ? ಹೀಗಾಗಿ 'ಶಿಲ್ಪಿ'ಯ ಬಗ್ಗೆ ತಿಳಿಯುವುದೂ, ತಿಳಿಸುವುದೂ ಗೌಣವಾಗಿದೆ. ಇದರ ಜೊತೆಗೆ ಹಲವಾರು ಇತರ ಸಮಸ್ಯೆಗಳೂ ಇವೆ. ಅವುಗಳಿಗೆ ಸೂಕ್ತ ಪರಿಹಾರ ನೀಡುವುದು ನಾಗರೀಕರ, ಸರಕಾರದ ಹೊಣೆ. ಆದರೆ ಇಂತಹ ಸಮಸ್ಯೆಗಳಿಗೆ ಸಾಧ್ಯವಾದಷ್ಟೂ ನಾವೇ ಪರಿಹಾರ ಕಂಡುಕೊಳ್ಳಬೇಕೆಂಬುದು ನಿರ್ವಿವಾದ. ಪುಸ್ತಕ ಬರೆಯುವ ಮೊದಲು ಶಿಲ್ಪಿಗಳಿಗೆಲ್ಲಾ ಮನವಿಪತ್ರ ಬರೆದು, ಅವರ ಆಗು-ಹೋಗುಗಳ ಬಗ್ಗೆ ತಿಳಿಸಬೇಕೆಂದು ಕೇಳಿಕೊಂಡಿದ್ದೆ. ಆ ಮನವಿ ಹೀಗಿದೆ.

ಮನವಿ

ಆತ್ಮೀಯ ಬಂಧುಗಳೇ,

'ಸಂಪ್ರದಾಯ ಶಿಲ್ಪಕಲೆ' ನಮ್ಮ ನಾಡಿಗೆ ಹೆಮ್ಮೆತಂದ ಕಲೆ. ಅದನ್ನು ಉಳಿಸಿ ಬೆಳೆಸುತ್ತಿರುವವರು ನೀವು. ಪ್ರಪಂಚವೇ ಮೆಚ್ಚಿ ಹೊಗಳುತ್ತಿರುವ ಇಂತಹ ಸಂಪ್ರದಾಯ ಶಿಲ್ಪಕಲೆಯ ಆರಾಧನೆಯಲ್ಲಿ ತೊಡಗಿರುವವರು ನೀವು. ಶಿಲ್ಪಕಲೆಯ ಬಗ್ಗೆ, ಅದನ್ನು ಬೆಳೆಸುತ್ತಿರುವ ನಿಮ್ಮ ಬಗ್ಗೆ, ನಿಮ್ಮ ಅನುಭವ, ಅನಿಸಿಕೆಗಳ ಬಗ್ಗೆ, ಅದರ ಉಜ್ವಲ ಭವಿಷ್ಯದ ಬಗ್ಗೆ ನೀವು ಕಂಡಿರಬಹುದಾದ ಕನಸುಗಳ ಬಗ್ಗೆ, ಒಂದು ಪುಸ್ತಕವನ್ನು ಬರೆಯಲು 'ಕರ್ನಾಟಕ ಶಿಲ್ಪ ಕಲಾ ಅಕಾಡಮಿ'ಯು ನನ್ನನ್ನು ಕೇಳಿದೆ. ಈ ದಿಸೆಯಲ್ಲಿ ನಿಮ್ಮೆಲ್ಲರ ಸಹಕಾರ ಬಹಳ ಮುಖ್ಯ. ಅದನ್ನು ಕೋರುತ್ತ, ಈ ಪತ್ರವನ್ನು ಬರೆಯುತ್ತಿದ್ದೇನೆ.


ಬರವಣಿಗೆ ನನ್ನದಾದರೂ, ಅನುಭವ, ಅನಿಸಿಕೆಗಳು ನಿಮ್ಮದೇ. ನೀವು ಗುರು-ಶಿಷ್ಯ ಪರಂಪರೆಯಲ್ಲಿ, ಮನೆ ತನದ ವೃತ್ತಿಯಾಗಿ ಕಲಿತು, ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದೀರಿ. ನೀವು ಈ ವಿದ್ಯೆ ಕಲಿತ ರೀತಿ, ಗುರು-ಶಿಷ್ಯಪರಂಪರೆಯ ಬಗ್ಗೆ ಹಾಗೂ ಸ್ವಾತಂತ್ರ್ಯಪೂರ್ವದಲ್ಲಿದ್ದ ನಿಮ್ಮ ಮನೆತನದ ಬಗ್ಗೆ, ದಯೆಯಿಟ್ಟು ತಿಳಿಸಿ ಈ ಕ್ಷೇತ್ರ ಮುಂಚಿನ ಭವ್ಯತೆ ಪಡೆಯಲು ನೀವು ಸೂಚಿಸಬಹುದಾದ ಸಲಹೆಗಳು, ಸೂಚನೆಗಳು ಎಲ್ಲವನ್ನು ವಿವರವಾಗಿ ಬರೆದು ತಿಳಿಸಿ. ಬರೆಯಲು ವೇಳೆ ದೊರೆಯದಿದ್ದರೆ ದೂರವಾಣಿಯ ಮುಖಾಂತರ ತಿಳಿಸಬಹುದು. ನಾವೆಲ್ಲರೂ ಒಟ್ಟಿಗೆ ಸೇರಿ ನಮ್ಮ ಅಭಿಪ್ರಾಯಗಳಿಗೆ 'ಪುಸ್ತಕ' ರೂಪಕೊಡೋಣ.

ಇದರ ಜೊತೆಗೆ, ನಿಮ್ಮ ಸ್ವ-ವಿವರ, ಭಾವ ಚಿತ್ರ, ನೀವು ಮಾಡಿರುವ ಅತ್ಯುತ್ತಮ ಕಲಾಕೃತಿ, ಹಾಗೂ ಕೆಲಸಮಾಡುತ್ತಿರುವ ಒಂದು ಭಂಗಿಯ ಚಿತ್ರ, ಇವುಗಳ ವಿವರಗಳೊಡನೆ, ಇದೇ ಜುಲೈ ೨೫ನೇ ತಾರೀಖಿನ ಒಳಗೆ ಕಳುಹಿಸಿಕೊಡಿ. ನಿಮ್ಮ ಸಹಕಾರ, ಪ್ರೋತ್ಸಾಹಗಳಿಂದ, 'ನಿಮ್ಮದನಿ'ಯಾಗಲು ನನಗೆ ಅವಕಾಶ ಮಾಡಿಕೊಡಿ. ನಿಮ್ಮ ಉತ್ತರಗಳಿಗಾಗಿಯೇ ಕಾಯುತ್ತಿರುತ್ತೇನೆ. ಇಂತು ನಮಸ್ಕಾರಗಳೊಡನೆ,

೯.೭.೨೦೦೭ **ಕನಕಾಮೂರ್ತಿ**

ನನ್ನ ಪತ್ರಕ್ಕೆ ಉತ್ತರಿಸಿದವರು ಕೇವಲ ೪೯ ಮಂದಿ ಶಿಲ್ಪಿಗಳು. ಅವರಲ್ಲಿ ಹಿರಿಯರೂ, ಕಿರಿಯರೂ, ಪ್ರಶಸ್ತಿ ಪಡೆದು ಹೆಸರು ಮಾಡಿರುವವರೂ ಇದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಅವರ ಬಗ್ಗೆ, ಅವರ ಆಶಯಗಳ ಬಗ್ಗೆ ತಿಳಿಸುವುದು ನನ್ನ ಕರ್ತವ್ಯ, ಆಗಮಾತ್ರ ಈ ಪುಸ್ತಕ "ನಮ್ಮೆಲ್ಲರ ದನಿ" ಯಾಗಲು ಸಾಧ್ಯ.

೧. **ನಾಡೋಜ ನಾಗಣ್ಣ ಬಡಿಗೇರ,**



ಗುಲ್ಬರ್ಗಾ : ೧೯೧೬ರಲ್ಲಿ ಗುಲ್ಬರ್ಗಾದಲ್ಲಿ ಜನಿಸಿದ ಡಾ।। ನಾಗಣ್ಣಬಡಿಗೇರ ಈ ೯೧ನೇ ಇಳಿ ವಯಸ್ಸಿನಲ್ಲೂ ತಮಮ ಶಿಷ್ಯರಿಗೆ ಮಾರ್ಗದರ್ಶನ ನೀಡುತ್ತಿರುವ



ನಾಡೋಜರವರ ಜೋಡಿ ಕುದುರೆಗಳು ಅಲಂಕಾರ ಶಿಲ್ಪ

ಹಿರಿಯ ಮರದ ಶಿಲ್ಪಿಗಳು. ಗುಲ್ಬರ್ಗಾಕ್ಕೆ ಹೋದ ಸಂದರ್ಭದಲ್ಲಿ ಇವರನ್ನು ಭೇಟಿಯಾಗುವ, ಅವರ ಕೆಲವು ಕೃತಿಗಳನ್ನೂ ಕಣ್ಣಾರೆ ನೋಡುವ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ.

ಕಲಾತ್ಮಕ ಕೆತ್ತನೆಗಳಲ್ಲಿ ಬಡಿಗೇರರದು ಎತ್ತಿದ್ದ ಕೈ. ವಾಸ್ತು ವಿದ್ಯೆಯಲ್ಲೂ ಪರಿಣಿತರು. ತಮ್ಮ ಸುದೀರ್ಘ ಕಲಾಜೀವನದಲ್ಲಿ, ಹಲವಾರು ಗೃಹಾಲಂಕರಣಗಳನ್ನು ಶಾಸ್ತ್ರ ರೀತಿ ಮಾಡಿಕೊಟ್ಟಿದ್ದಾರೆ, ದೇವರ ಮನೆ, ಚದುರಂಗ, ಪಡಸಾಲೆ, (೫ ಮತ್ತು ೭ ಅಂಕಣಗಳ ಪಡಸಾಲೆ) ತೊಟ, ಬೋದು, ಕಂಬ, ಗಡಿಗ, ತೋರಣ, ಹೀಗೆ ಎಲ್ಲವೂ ಅಲಂಕಾರಗಳಿಂದ ತುಂಬಿರುತ್ತದೆ, ಅದನ್ನು ಎಲ್ಲಿ, ಹೇಗೆ ಮಾಡಬೇಕೆಂಬುದೇ ವಾಸ್ತುಶಿಲ್ಪ ಶಾಸ್ತ್ರದಿಂದ ತಿಳಿದು ಮಾಡುವ ವಿದ್ಯೆ. ಇದಲ್ಲದೆ ಪಲ್ಲಕ್ಕಿ, ತೇರು, ರಥ, ಮಂಟಪ, ಹಾಗೂ ಜನಪದ ಶೈಲಿಯ ಅನೇಕ ದೇವತಾ ವಿಗ್ರಹಗಳನ್ನು ಮಾಡಿದ್ದಾರೆ. ಇವರ ಕೆತ್ತನೆಗಳು ಗುಲ್ಬರ್ಗಾ, ಹಾಗೂ ರಾಯಚೂರು ಭಾಗಗಳಲ್ಲಿ ನೋಡಬಹುದು.

ಇವರ ಕೆತ್ತನೆಯ ಕೌಶಲ್ಯಕ್ಕೆ ಮೆಚ್ಚಿ ಹಂಪಿ ಕನ್ನಡ ವಿಶ್ವವಿದ್ಯಾಲಯ "ನಾಡೋಜ" (ಗೌರವ ಡಾಕ್ಟರೇಟ್) ಗೌರವ ಪದವಿಯನ್ನು ನೀಡಿ ಗೌರವಿಸಿದೆ. ಇವರಿಗೆ, ಇಷ್ಟೂ ವಯೋವೃದ್ಧರಿಗೆ ಸರಕಾರದಿಂದ ಸಿಕ್ಕಿರುವ ಪ್ರಶಸ್ತಿಯೆಂದರೆ 'ಶಿಲ್ಪಕಲಾ ಅಕಾಡಮಿಯ' ಪ್ರಶಸ್ತಿ ಮಾತ್ರ ರಾಜ್ಯೋತ್ಸವ ಪ್ರಶಸ್ತಿ, ಜಕಣಾಚಾರಿ ಪ್ರಶಸ್ತಿಗೆ ಇಂತಹ ಹಿರಿಯ ಅನುಭವೀ ಕಲಾವದರನ್ನು ಆರಿಸದಿರುವುದು ನಿಜಕ್ಕೂ ಶೋಚನೀಯ. ಆದರೆ ಶ್ರೀ ನಾಗಣ್ಣನವರಿಗೆ ಮಾತ್ರ ಇದಾವುದರ ಕಡೆಯೂ ಗಮನವಿಲ್ಲ. ಅವರು ಮಾಡಿರುವ ಕೆತ್ತನೆಗಳಿಗೆ ಜನಮೆಚ್ಚಿ ಅವರಿಗೆ ಬಂಗಾರದ ತೋಡ ತೊಡಿಸಿದ್ದಾರೆ, ಊರಿನಲ್ಲಿ ಮೆರವಣಿಗೆ ಮಾಡಿ ಮೆರೆಸಿದ್ದಾರೆ, ೪ ಎಕರೆ ಜಮೀನನ್ನೂ ಉಡುಗೊರೆಯಾಗಿ ಕೊಟ್ಟಿದ್ದಾರೆ, ಇದೆಲ್ಲದರ ಅನುಭವದಿಂದ ಅವರು ಹೇಳುವುದು ನಿಜವಾದ ಅಧ್ಯಯನ. ಜನಮೆಚ್ಚಿ, ಸಂತೋಷಪಟ್ಟು ಹೊಗಳಿದರೆ ಅದೇ ಪ್ರಶಸ್ತಿ" ಅವರ ಮಾತಿನಲ್ಲಿ ಎಷ್ಟು ಸತ್ಯವಿದೆ ? ನಾವು ಮಾಡುವ ಕೆಲಸ ಅಚ್ಚು ಕಟ್ಟಾಗಿದ್ದರೆ ಮಾತ್ರ ಜನಮೆಚ್ಚುವುದು, ಅದೇ ನಿಜವಾದ ಪ್ರಶಂಸಾ ಪತ್ರ. ಕಾಯಕವೇ ಕೈಲಾಸವೆಂದು ನಂಬಿದ ಈ ಸರಳ, ಸಜ್ಜನ ಕಲಾವಿದ ಕಿರಿಯರಿಗೂ ಕಲಿಸುತ್ತ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ಅವರ ಮನೆ ಒಂದು ಸಣ್ಣ ವಸ್ತು ಸಂಗ್ರಹಾಲಯದಂತಿದೆ. ಅಲ್ಲಿ ಹೋಗಿ ಬರುವುದೇ ಒಂದು ಆನಂದ.

೨. **ಶ್ರೀ ಶಂಕರ ನಾರಾಯಣಾಚಾರ್ಯ**, ಶಿವಾರಪಟ್ಟಣ : ಶಿಲ್ಪಕಲೆಯಲ್ಲಿ ರಾಷ್ಟ್ರಪ್ರಶಸ್ತಿ ಪಡೆದ ಕಲಾವಿದರು ಶ್ರೀ ಶಂಕರ ನಾರಾಯಣಾಚಾರ್ಯ ಅವರು. ಶಿಲ್ಪಕಲೆಯಲ್ಲಿ ಲೋಹ ಶಿಲ್ಪ, ಶಿಲಾಶಿಲ್ಪ ಹಾಗೂ ಚಿತ್ರಕಲೆಯಲ್ಲಿ ೬೦ ವರ್ಷದ ಅನುಭವವನ್ನು ಹೊಂದಿರುವ ಇವರು ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ಅಧ್ಯಯನ ಮಾಡಿ, ತಮ್ಮ ನಾಡಿಗೂ, ರಾಜ್ಯಕ್ಕೂ ಕೀರ್ತಿ ತಂದಿದ್ದಾರೆ.



ಲಲಿತ ಕಲಾ ಅಕಾಡಮಿಯ ಸದಸ್ಯರಾಗಿದ್ದು, ಕೇಂದ್ರ ಹಸ್ತ ಕಲಾ ಮಂಡಲಿಯ, ದೇಶಾದ್ಯಂತ ನಡೆದ ಅನೇಕ ಮೇಳಗಳಲ್ಲಿ ಭಾಗವಹಿಸಿದ್ದಾರೆ, ರಾಷ್ಟ್ರಪ್ರಶಸ್ತಿ, 'All India Fine Arts and Crafts' ಪ್ರಶಸ್ತಿ, ಭಾರತದ ಸ್ವಾತಂತ್ರ್ಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ 'ಇಂದಿರಾ ಪ್ರಿಯದರ್ಶಿನಿ' ಪ್ರಶಸ್ತಿಗಳು ಇವರ ಕಲಾ ಕೌಶಲ್ಯಕ್ಕೆ ದೊರೆತ ಸನ್ಮಾಗಳು, ದೇಶವಿದೇಶದ ಬೇಡಿಕೆಗಳಿಗೆ ಸ್ಪಂದಿಸಿರುವ ಇವರು ಶಿವಾರಪಟ್ಟಣದ ಪ್ರಸಿದ್ಧ ಶಿಲ್ಪಿಗಳು.

ಸಂಪ್ರದಾಯ ಶಿಲ್ಪಕಲೆಯೇ ಇವರ ಬಾಳಿನ ಉಸಿರಾಗಿ, ಕಿರಿಯರಿಗೂ ಮಾರ್ಗದರ್ಶನ ನೀಡುತ್ತಾ, ಶಿಲ್ಪಕಲೆಯ ಅಭಿವೃದ್ಧಿಗಾಗಿ ಹಲವಾರು ಸೂಚನೆಗಳನ್ನಿತ್ತಿದ್ದಾರೆ. ಶಿಲ್ಪಕ್ಕೆ ಬೇಕಾದ ಶಿಲೆಗಳ ಸಂಗ್ರಹ ಸರಕಾರದಿಂದ ಸಹಕಾರ ಮತ್ತು ವೃದ್ಧ ಕಲಾವಿದರಿಗೆ ಆರ್ಥಿಕ ನೆರವು ನೀಡಬೇಕೆಂದು ಸೂಚಿಸುತ್ತಾರೆ. ಇವರ ಮಕ್ಕಳೂ ಇದೇ ವೃತ್ತಿಯಲ್ಲಿ ಮುಂದುವರೆಯುತ್ತಿದ್ದು ಉತ್ತಮ ಶಿಲ್ಪಿಗಳಾಗಿ ರೂಪಗೊಳ್ಳುತ್ತಿರುವುದು ಇವರಿಗೆ ಬಹಳ ಸಂತೋಷ ತಂದಿದೆ.



೩. **ರಥಶಿಲ್ಪಿ ಶ್ರೀ ಲಕ್ಷ್ಮಿನಾರಾಯಣ್‌ಚಾರ್, ಕೋಟೇಶ್ವರ** ದ.ಕ. : ರಾಜ್ಯ ರಾಷ್ಟ್ರ ಪ್ರಶಸ್ತಿಗಳನ್ನು ಕೊರಳಲ್ಲಿ ಧರಿಸಿದ ಶ್ರೀ ಲಕ್ಷ್ಮಿನಾರಾಯಣಾಚಾರು, ಅಪರೂಪದ ರಥಶಿಲ್ಪದ ರೂವಾರಿಯಾಗಿ 'ಶಿಲ್ಪಿ ಗುರು' ಪ್ರಶಸ್ತಿಗೂ ಭಾಜನರಾಗಿರುವುದು ಆಶ್ಚರ್ಯ ಪಡುವಂತಹ ವಿಷಯವೇನಲ್ಲ. ಈ ಎಲ್ಲ ಪ್ರಶಸ್ತಿಗಳಿಗೂ ಮೀರಿದ್ದು ಅವರ ರಥಶಿಲ್ಪ ರಚನಾ ಕೌಶಲ್ಯ ಅದರಿಂದ ಈ ಪ್ರಶಸ್ತಿಗಳಿಗೇ ಗೌರವ ಕೊಟ್ಟಂತಾಗಿದೆ.

'ರಥಶಿಲ್ಪ' ಒಂದು ಅಪರೂಪದ ಕಲೆ. ರಥವನ್ನು ಚಲಿಸುವ ದೇವಾಲಯವೆನ್ನಬಹುದು. ನೂರಾರು ವರ್ಷಗಳು ಬಳಸಲು ಉಪಯೋಗವಾಗುವಂತೆ ರಥವನ್ನು ರಚಿಸುವುದೆಂದರೆ ಒಂದು ದೇವಾಲಯವನ್ನು ಕಟ್ಟುವುದಕ್ಕಿಂತ ಹೆಚ್ಚಿನ ಅನುಭವ ಬೇಕು. ದೇವಾಲಯ ಸ್ಥಿರ, ರಥ-ಚರ. ಚಲಿಸುವ ರಥವನ್ನು ೩೦೦,೪೦೦ ವರ್ಷಗಳ ವರೆಗೆ ಬಾಳಿಕೆ ಬರುವಂತೆ ರಚಿಸುವುದೆಂದರೆ ಸಾಕಷ್ಟು ಅನುಭವ, ಅಧ್ಯಯನಗಳು ಇರಲೇ ಬೇಕು. ಅದಕ್ಕೆ ಉಪಯೋಗಿಸುವ ಮರ ಮುಟ್ಟುಗಳಿಂದ ಹಿಡಿದು ರಚಿಸುವ ವಿಧಾನದ ವರೆಗೂ ಶಾಸ್ತ್ರೀಯ ರೀತಿಯಲ್ಲೇ ಆಗಬೇಕು. ಅಂದರೇನೇ ತಾಳಿಕೆ, ಬಾಳಿಕೆ ಬರುವುದು. ರಥಶಿಲ್ಪರಚನೆಗೆ ಶಾಸ್ತ್ರದ ಭದ್ರವಾದ ಬುನಾದಿಯಿದೆ. ಬೇರೆ ಬೇರೆ ದೇವರುಗಳಿಗೆ ರಥಗಳನ್ನು ನಿರ್ಮಿಸುವಾಗ ಬೇರೆ ಬೇರೆಯದೇ ರೀತಿ ನೀತಿಗಳಿರುತ್ತದೆ. ಅದನ್ನೆಲ್ಲ ಆಳವಾಗಿ ಅಧ್ಯಯನ ಮಾಡಿರುವ ಶ್ರೀ ಲಕ್ಷ್ಮಿ ನಾರಾಯಣಾಚಾರ್ಯರಿಗೆ 'ಶಿಲ್ಪ-ಗುರು' (ಕೇಂದ್ರ ಸರ್ಕಾರದ್ದು) ದೊರೆ ತಿರುವುದು ಸಮಂಜಸವೆನ್ನಿಸುತ್ತದೆ. 'ರಥ ಶಿಲ್ಪ'ವನ್ನು ಮಾಡುವುದೆಂದರೆ ಒಬ್ಬಿಬ್ಬರು ಮಾಡುವ ಕೆಲಸವಲ್ಲ. ಪ್ರಾರಂಭದಲ್ಲಿ ಆಚಾರ್ಯರು ಒಂದು ಶಿಷ್ಯ ವೃಂದವನ್ನು ಕಟ್ಟಿದರೂ, ಅದನ್ನು ನಿರ್ವಹಿಸಲು ಬಹಳ ಶ್ರಮಿಸಬೇಕಾಯಿತು. ಆದರೆ ಅಂತಹ ಸಾಹಸದ ಕೆಲಸಕ್ಕೆ ಕೈ ಹಾಕಿದಾಗ, ಬೆನ್ನುತಟ್ಟಿ ಊರು ಗೋಲಾಗಿ ನಿಂತವರು ಅವರ ಸೋದರ ಶ್ರೀ ಶಂಕರ ಆಚಾರ್ಯರೆಂದು ಅವರೇ ತಿಳಿಸಿದ್ದಾರೆ. ಪಲ್ಲಕ್ಕಿ, ಮಂದಾಸನ ಮುಂತಾದ ಸಣ್ಣ ಸಣ್ಣ ಕೆಲಸಗಳಿಂದ ಪ್ರಾರಂಭಿಸಿ, ಶಕ್ತಿ ಕೂಡಿಸಿಕೊಂಡು, ಈಗ ರಥ ಶಿಲ್ಪದಂತಹ ಮಹತ್ತರ ಕೆಲಸದಲ್ಲಿ ತೊಡಗಿದ್ದಾರೆ, 'ರಥ ಶಿಲ್ಪ' ವೆಂದರೆ ವಾಸ್ತುಶಿಲ್ಪ ಮತ್ತು ಪ್ರತಿಮಾಶಿಲ್ಪಗಳ ಮೇಳ. ನಾಲ್ಕು ಚಕ್ರದಿಂದ ಹಿಡಿದು ೧೬ ಚಕ್ರದವರೆಗೆ ಶಾಸ್ತ್ರೋಕ್ತವಾಗಿ ರಥಗಳನ್ನು ರಚಿಸುವ ಇವರು ೫೦ಕ್ಕೂ

ಹೆಚ್ಚು ರಥಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ೧೮ ಬ್ರಹ್ಮರಥ, ೩೫ ಪುಷ್ಪರಥಗಳು, ಹಾಗೂ ಚಿನ್ನ ಬೆಳ್ಳಿಗಳಲ್ಲೂ ರಥಗಳನ್ನು ನಿರ್ಮಿಸಿದ ಕೀತಿ ಇವರದು. ಈ ರಥಶಿಲ್ಪದ ಅಧ್ಯಯನ ಮತ್ತು ತರಬೇತಿಗೆಂದು ತಮ್ಮ ಹೆಸರಿನಲ್ಲಿಯೇ ಕೋಟೇಶ್ವರದಲ್ಲಿ ಶಾಲೆ ನಡೆಸುತ್ತಿರುವ ಇವರಿಗೆ ಕಿರಿಯರನ್ನು ಬೆಳಸುವುದರಲ್ಲಿ ಆಸಕ್ತಿ.



೪. **ಶ್ರೀ ಎಸ್.ಪಿ. ಜಯಣ್ಣಾಚಾರ್**, ಚಿಕ್ಕಮಗಳೂರು : ಚಿಕ್ಕಮಗಳೂರಿನ ನಾರಾಯಣಪುರದಲ್ಲಿರುವ ಇವರು ಬಾಲ್ಯದಿಂದಲೇ ಸಂಪ್ರದಾಯ ಶಿಲ್ಪಕಲೆಯುನ್ನು ತಂದೆಯವರಿಂದ ಕಲಿತಿದ್ದಾರೆ. ಇವರು ಮಾಡಿರುವ ಹಲವಾರು ಶಿಲ್ಪಗಳು ರಾಜ್ಯದ ನಾನಾ ಭಾಗಗಳಲ್ಲಿವೆ, ಮೈಸೂರು ದಸರಾ ವಸ್ತುಪ್ರದರ್ಶನ ಪ್ರಶಸ್ತಿಯಲ್ಲದೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ಪಡೆದಿದ್ದಾರೆ.

೫. **ಶ್ರೀ ವಿ. ನಾಗರಾಜ ಶಿಲ್ಪಿ**, ಗದಗ : ಬಾದಾಮಿ, ಎಲ್ಲೋರ, ಶಿಲ್ಪಕಲಾ ಪ್ರತಿಷ್ಠಾನ, ಕರ್ನಾಟಕ ಶಿಲ್ಪಕಲಾ ಅಕಾಡಮಿಗಳ ಎಲ್ಲ ಶಿಬಿರಗಳಲ್ಲೂ ಭಾಗವಹಿಸಿದ ಸಂದರ್ಭದಲ್ಲಿ ಶ್ರೀ ನಾಗರಾಜ ಶಿಲ್ಪಿಗಳ ಪರಿಚಯವಾಯಿತು ಸದಾ ನಗುನಗುತ್ತಾ, ಏನಾದರೂ





ನಾಗರಾಜ ಶಿಲ್ಪಿಯವರ ರಚನೆ

ಹಾಡುತ್ತ, ಕೆಲಸ ಮಾಡುವಾಗ ಜತೆಯ ಶಿಲ್ಪಿಗಳೊಂದಿಗೆ ಹಾಸ್ಯ ಚಟಾಕಿಗಳನ್ನು ಹಾರಿಸುತ್ತ, ಸುಲಭವಾಗಿ ಎಲ್ಲರೊಡನೆ ಬೆರೆಯುವವರು ಶ್ರೀ ನಾಗರಾಜ ಶಿಲ್ಪಿಗಳು. ರಂಗಗೀತೆಗಳನ್ನು ಭಾವಪೂರ್ಣವಾಗಿ, ಸುಶ್ರಾವ್ಯವಾಗಿ

ಹಾಡುವ ಕಲೆ ಇವರಲ್ಲಿದೆ. ಬಾಗಲಕೋಟೆ ಕಲ್ಲು, ಅಂದರೆ ಕಗಲಗೊಂಬು ಎಂಬ ಪ್ರದೇಶದಲ್ಲಿ ಸಿಗುವಕಲ್ಲಿನಿಂದ ಬಸವಣ್ಣ ಮತ್ತು ಅದಕ್ಕೆ ಸೇರಿದಂತೆ ಕಲ್ಲಿನಲ್ಲೇ ಸರಪಳಿ ಮಾಡಿ ಲಲಿತಕಲಾ ಅಕಾಡಮಿಯ ಪ್ರಶಸ್ತಿ ಪಡೆದಿದ್ದಾರೆ. ಅಂದರೆ ಕಲ್ಲಿನ ಗುಣ ತಿಳಿದುಕೊಂಡು, ಅದರಲ್ಲಿ ಅಷ್ಟು ಸೂಕ್ಷ್ಮ ಕೆಲಸ ಮಾಡಬಹುದೆಂಬ ಅನುಭವ ಪಡೆದು, ಅದನ್ನು ಎಲ್ಲರೊಡನೆ ಹಂಚಿಕೊಳ್ಳುತ್ತಾರೆ. ಅಂತಹ ತಾಳ್ಮೆ ಇವರಲ್ಲಿ ಮನೆ ಮಾಡಿರುವಂತೆಯೇ ಅವರು ಕೆಲಸಗಲನ್ನು ಮಾಡುವಾಗ, ಕಾಣುತ್ತದೆ. ತಮ್ಮ ದೊಡ್ಡಪ್ಪ ಶ್ರೀ ಸೋಮಣ್ಣ ಸಿದ್ದಣ್ಣ ಶಿಲ್ಪಿಗಳಿಂದ ಪಾರಂಪರಿಕ ಶಿಲ್ಪ ವಿದ್ಯೆಯನ್ನು ಕಲಿತು ಈಗ ತಮ್ಮ ಹೆಸರಿನಲ್ಲಿಯೇ ನಡೆಸುವ ಶಾಲೆಯಲ್ಲಿ ಆಸಕ್ತಿ ಕಿರಿಯರಿಗೂ ತಮ್ಮ ಇಬ್ಬರು ಮಕ್ಕಳಿಗೆ ಕಲಿಸುತ್ತಿದ್ದಾರೆ. ಇವರಿಂದ ರಚಿತಗೊಂಡ ಶಿಲ್ಪಗಳು, ಸುತ್ತಮುತ್ತಲಿನ ಹಳ್ಳಿಗಳ ಧಾರ್ಮಿಕ ಅಗತ್ಯಗಳನ್ನು ಪೂರೈಸುವುದಲ್ಲಿ, ದೇಶ ವಿದೇಶಗಳ ಬೇಡಿಕೆಗಳನ್ನೂ ಪೂರೈಸುತ್ತಿದ್ದಾರೆ.

೬. **ಗುಲ್ಬರ್ಗಾದ ಲೋಹ ಶಿಲ್ಪಿ ಭೀಮಣ್ಣ ಕಂಬಾರ** : ಗಾಜರತೋಟ್‌ನಲ್ಲಿ ಜನಿಸಿದ ಶ್ರೀ ಭೀಮಣ್ಣ ಕಂಬಾರರು, ಸ್ಥಿತಿವಂತ ಮನೆತನದಲ್ಲೇ ಜನಿಸಿದರು ಬಹಳ ಚಿಕ್ಕವಯಸ್ಸಿಗೆ ತಾಯಿ, ತಂದೆಯರನ್ನು ಕಳೆದುಕೊಂಡು ಸೋದರತ್ತೆಯ ಆಶ್ರಯಕ್ಕೆ ಬರಬೇಕಾಯಿತು. ಮಾವಕಾಳಪ್ಪ ಗ್ವಾಡಿ, ಇವರಿಗೆ ತಾವು ಮಾಡುತ್ತಿದ್ದ ಲೋಹ ಶಿಲ್ಪವನ್ನೇ ಕಲಿಸಿದರು. ಜಾನಪದ ಶೈಲಿಯ ಈ ಎರಕನ ಕಲೆಯನ್ನು ಕಲಿತ ಭೀಮಣ್ಣ ಅವರು ತಮ್ಮದೇ ಆದ ಒಂದು ಛಾಪು ಮೂಡಿಸಿ, ಎರಕದಲ್ಲಿ ಅದ್ವಿತೀಯ ಪಾಂಡಿತ್ಯಗಳಿಸಿ ಆ ಭಾಗದಲ್ಲೆಲ್ಲಾ ಬಹಳ ಹೆಸರು ಮಾಡಿದ್ದಾರೆ. ಇವರ ಶಿಲ್ಪಗಳು ಆಂದ್ರ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಹೆಚ್ಚು ಪ್ರಚಾರದಲ್ಲಿವೆ. ಪ್ರಮುಖ ದೇವಾಲಯಗಳಲ್ಲಿ ಉತ್ಸವ ಮೂರ್ತಿಗಳು, ಕಳಸಗಳು, ಅಲ್ಲದೆ ಎತ್ತಿನ ಕೊರಳ ಗಂಟೆ, ಸರಗೆಜ್ಜೆಗಳು, ಎಣ್ಣೆಗುದ್ದಲಿ, ದೇವರ ಮುಂದೆ ಬೆಂಕಿ ಹಿಡಿಯುವುದಕ್ಕೆ ಕಾಯಿಕೋಲು, ಅಶ್ವರೂಢ ಮಲ್ಲಯ್ಯ, ಗಂಗೆಮಾಳಮ್ಮ ಇಂತಹ ಶಿಲ್ಪಗಳನ್ನೆಲ್ಲಾ ರಚಿಸಿದ್ದಾರೆ. ಪ್ರತಿಯೊಂದು ಮಲ್ಲಯ್ಯ ದೇವಸ್ಥಾನಗಳಲ್ಲಿ, ಶ್ರೀಮಂತರ ಮನೆಗಳ ದೀಪಲಕ್ಷ್ಮಿ ಸ್ಥಂಭಗಳು, ಆನೆ ಅಂಬಾರಿ ಶಿಲ್ಪಗಳು,





ಮಾಯಿ ಮರ್ತ್ಯೆಪ್ಪ ಮತ್ತು ಮುಸ್ಲಿಂ ದೇವರುಗಳಾದ ಪಿರ್ಲಾಮೌಲಾಲಿ, ವಿರುಪಾಕ್ಷಿ, ಕವಡಿ ಸೀರಾ, ಮುಂತಾದ ಶಿಲ್ಪಗಳು ಪ್ರಮುಖವಾದವು. ಶ್ರೀಯುತ ವಿಜಯ ಹಾಗರ ಗುಂಡಿಗೆಯವರ ಸಂಗ್ರಹದಲ್ಲಿ ಇವರ ಶಿಲ್ಪಗಳು ಬೇಕಾದಷ್ಟಿದೆ.

ಶಿಲ್ಪ ರಚನಾ ವಿಧಾನದಲ್ಲಿ ಭೀಮಣ್ಣನವರದು ಒಂದು ವಿಶೇಷ ಸಾಧನೆ. ಅತಿ ಚಿಕ್ಕ ಶಿಲ್ಪದಿಂದ ಹಿಡಿದು ಅತಿ ದೊಡ್ಡ ಶಿಲ್ಪವನ್ನೂ ಟೊಳ್ಳಾಗಿ ಎರಕ ಮಾಡುವಲ್ಲಿ ಸಿದ್ಧ ಹಸ್ತರು. ಟೊಳ್ಳು ಶಿಲ್ಪಗಳಲ್ಲಿ ಒಳಭಾಗವು ಹೊರಭಾಗದಷ್ಟೇ ಸ್ವಚ್ಛವಾಗಿರುವುದು ವಿಶೇಷವೇ. ಶ್ರೀ ಭೀಮಣ್ಣ ಕಂಬಾರರು ಶಿಲ್ಪ ಕಲಾ ಅಕಾಡಮಿಯವರು ಇತ್ತೀಚೆಗೆ ಏರ್ಪಡಿಸಿದ್ದ ಜಾನಪದ ಶೈಲಿಯ ಶಿಲ್ಪ ಶಿಬಿರದಲ್ಲಿ ಭಾಗವಹಿಸಿದ್ದರು.


೭. **ಶಿಲ್ಪಿ ಅವಣ್ಣೆಪ್ಪ ವತ್ತಾರ ಕೊಡೇಕಲ್**, ಗುಲ್ಬಬರ್ಗಾ : ಚಿನ್ನ ಬೆಳ್ಳಿಗಳ ಕೆಲಸದಿಂದ ಪ್ರಾರಂಭ ಮಾಡಿ ಅವ್ವಣ್ಣೆಪ್ಪ ಮುಂದೆ ಅವರು ದೊಡ್ಡ ಕಲಾವಿದರಾದರು. ಮನೆತನದ

ವೃತ್ತಿಯಾದ 'ಅಕ್ಕಸಾಲಿಗ' ವೃತ್ತಿಯಲ್ಲಿ ಚಿಕ್ಕಂದಿನಿಂದಲೇ ಕುಶಲತೆಯನ್ನು ತೋರಿಸಿ ಜನಗಳ ಮೆಚ್ಚುಗೆ ಪಡೆದರು. ಕ್ರಮೇಣ ಎರಕದ ಕಲೆಗೆ ಮಾರು ಹೋದ ಇವರು ದೊಡ್ಡ ದೊಡ್ಡ ಪ್ರಮಾಣದ ವಿಗ್ರಹಗಳನ್ನು ಮಾಡಿ, ಎರಕ ಮಾಡಲು ಪ್ರಾರಂಭಿಸಿ, ಅದರಲ್ಲೂ ಪರಿಣಿತರಾದರು. ತಮ್ಮ ಊರಿನ ಬಳಿಯಿರುವ ಕೊಡೇಕಲ್‌ಗೆ ಬಸವಣ್ಣನ ಮೂರ್ತಿಯನ್ನು ಗುಡಿಗೆ ಬಾಗಿಲು ಹಾಗೂ ಛತ್ರಿ ಮಾಡಿಸಿದ್ದಾರೆ. ಇವರಿಗೆ ಶಿಲ್ಪಕಲಾ ಅಕಾಡಮಿ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದಾರೆ. ಇವರು ಮಾಡಿರುವ ಬೆಳ್ಳಿಯ ಛತ್ರಿ, ಕೊಡೇಕಲ್‌ಗೆ ಮಾಡಿದ ರಾಜಗೊಂಡೆ, ಪಂಚಕಳಸ, ಇವರಿಗೆ ಅಪಾರ ಕೀರ್ತಿಯನ್ನು ತಂದಿವೆ. ಇದೇ ರೀತಿ ಚಿತ್ತಾಪುರ ಮಹದೇವಪ್ಪ ಎಂಬ ಶಿಲ್ಪ ಗಟ್ಟಿ ಮತ್ತು ಟೊಳ್ಳು ಎರಕದ ಕಲೆಯಲ್ಲಿ ಪರಿಣಿತರೆಂದು ತಿಳಿಯಿತಾದರೂ, ಅವರ ಬಗ್ಗೆ ಯಾವ ಹೆಚ್ಚಿನ ವಿಷಯಗಳೂ ದೊರೆಯಲಿಲ್ಲ.

೮. **ದೇವನಹಳ್ಳಿಯ ಶಿಲ್ಪಿಗಳು,** ದೇವನಹಳ್ಳಿ : ದೇವನಹಳ್ಳಿಯೆಂದರೆ ಶ್ರೀ ಹನುಮಂತಾಚಾರ್ಯರೇ ಕಣ್ಮುಂದೆ ಬರುವುದು. ಅವರ ಪತ್ನಿ ಶಿಲ್ಪಿ ಸರೋಜಾದೇವಿ ಈ ಶಿಲ್ಪಿ ದಂಪತಿಗಳ ಕಲಾವಿದ ಪುತ್ರರು, ಶ್ರೀ ಮುರಳಿದರ, ಶ್ರೀ ಜಗನ್ನಾಥ್ ಮತ್ತು ಶ್ರೀ ಮಧುಸೂದನ್. ತಂದೆಯವರಿಂದ ದೀಕ್ಷೆ ಪಡೆದು, ಅವರ ಶಿಷ್ಯರೇ ಆಗಿ ಶಿಲ್ಪಕಲಾ ಪ್ರಪಂಚಕ್ಕೆ ಕಾಲಿಟ್ಟವರು. ಕಣ್ಣುಬಿಡುತ್ತಿದ್ದಂತೆ ಶಿಲ್ಪಗಳೇ ಕಾಣಿಸಿದವು. ಆಟದ ಜಾಗ ಕೆಲಸ ಮಾಡುವ ಶಿಲ್ಪಶಾಲೆ, ತಂದೆ, ತಾಯಿ ಶಿಲ್ಪಿಗಳು, ಅದೇ ಅವರ ಮುಂದಿನ ಪ್ರಪಂಚವೂ ಆಗಿರುವುದರಲ್ಲಿ ಆಶ್ಚರ್ಯವೇ ಇಲ್ಲ ಜೊತೆಗೆ ಸೋದರಿ ಗಾಯತ್ರಿ ಕೂಡ ತಂದೆಯವರ ಶಿಷ್ಯಳೇ, ಆಕೆಯ ಪತಿ ಶ್ರೀ ಶಂಕರನಾರಾಯಣ.

ಎಲ್ಲರೂ ಒಂದೇ ಸೂರಿನಡಿ ಕಲಿತು, ಹಿರಿಯರು ಪ್ರಾರಂಭಿಸಿದ ಶಾಲೆಯನ್ನು ಮುಂದುವರೆಸಿಕೊಂಡು ಹೋಗುತ್ತ, ಬೇಡಿಕೆಗಳನ್ನು ಪೂರೈಸುತ್ತ ಇರುವುದನ್ನು ನೋಡಿದಾಗ ಯಾವ ಜನ್ಮದ ಪುಣ್ಯ ಇದು ಎನ್ನಿಸುತ್ತದೆ. ಒಂದು ಕಲೆ ಕಲಿಯಬೇಕಾದರೆ ಗುರುಬೇಕು, ಅವರಿರುವ ಕಡೆ ಹೋಗಿ ಕಲಿಯಬೇಕು, ಕಲೆಯ ಅಭ್ಯಾಸ ಮಾಡಬೇಕಾದರೆ, ವಿಶೇಷವಾಗಿ ಶಿಲ್ಪಕಲೆಗೆ ಬೇಕಾದ ಪರಿಸರ ಇರಬೇಕು. ಇವೆಲ್ಲವೂ ಬೇಡದೆ ಬಂದ ಸೌಭಾಗ್ಯ ಈ ಎಲ್ಲ ಶಿಲ್ಪಿಗಳಿಗೆ, ಹಾಗಾಗಿ ಇಲ್ಲಿ ಯಾವಾಗಲೂ 'ಶಿಲ್ಪ ಶಿಬಿರ' ನಡೆಯುತ್ತಲೇ ಇರುತ್ತದೆ. ಈಗಿನ ನಿರ್ದೇಶಕರೆಂದರೆ ಶ್ರೀಮತಿ ಸರೋಜಾದೇವಿ ಆಚಾರ್ಯ ಅವರು ಸುತ್ತಮುತ್ತ ಪ್ರದೇಶಗಳ, ದೂರದ ದೇಶವಿದೇಶಗಳ ಬೇಡಿಕೆಗಳನ್ನು ಪೂರೈಸಿತ್ತಿರುವುದು ಈ ಶಿಲ್ಪಿಗಳ ಸಮೂಹ.

೮. **ಸರೋಜದೇವಿ ಆಚಾರ್ಯ,** ದೇವನಹಳ್ಳಿ : ಶ್ರೀಮತಿ ಸರೋಜಾದೇವಿ ಶಿಲ್ಪ ಚಿತ್ರಕಲೆ ಎರಡರಲ್ಲೂ ಅನುಭವ ಪಡೆದಿದ್ದಾರೆ. ಪತಿ ಶ್ರೀ ಆಚಾರ್ಯರಿಂದಲೇ ಶಿಲ್ಪ ಕಲೆಯ ಅಧ್ಯಯನ ಮಾಡಿದರು. ಹಲವಾರು ಕೃತಿಗಳನ್ನು ಶಿಲ್ಪ ಮತ್ತು ಚಿತ್ರಗಳಲ್ಲಿ ರಚಿಸಿದ್ದಾರೆ. ಇವರ ಒಂದು ವರ್ಣ ಚಿತ್ರ "Life" ಹಾಲೆಂಡ್‌ನಿಂದ ಬಂದಿದ್ದ ಕೆಲವು ಕಲಾಪ್ರೇಮಿಗಳು, ನೋಡಿ ಮೆಚ್ಚಿ, ತೆಗೆದುಕೊಂಡು







ದೇವನಹಳ್ಳಿ ಹಿರಿಯ ಶಿಲ್ಪಿಗಳ ರಚನೆ

ಹೋಗಿದ್ದಾರೆ. 'ಇಂದ್ರಾಕ್ಷಿ' ಜಲವರ್ಣ ಚಿತ್ರ ಕರ್ನಾಟಕ ಟೂರಿಸಂ ಡಿಪಾರ್ಟ್‌ಮೆಂಟ್ ಹಾಗೂ 'ವೆಂಕಟೇಶ್ವರ' ತಿರುಪತಿಯ ಒಂದು ಅತಿಥಿಗೃಹದಲ್ಲಿದೆ. ಮಹಾತ್ಮ ಗಾಂಧಿಯವರ ಎದೆ ಮಟ್ಟದ ಪ್ರತಿಮೆ ಬೆಂಗಳೂರಿನ ಖಾದಿ ಭಂಡಾರದಲ್ಲಿದ್ದು ರೂಪಶಿಲ್ಪದಲ್ಲೂ ಇವರಿಗಿರುವ ಅನುಭವವನ್ನೂ ಹೇಳುತ್ತದೆ. ಬಹಳ ಸರಳ ವ್ಯಕ್ತಿತ್ವ, ಬಂದವರನ್ನು ಯಾರೇ ಇರಲಿ, ಆದರಿಂದ ನೋಡಿಕೊಳ್ಳುವ ಸ್ವಭಾವ. ಯಾವಾಗಲೂ ಏನಾದರೂ ಕೆಲಸ ಮಾಡುತ್ತ, ಶಿಲ್ಪರಚನೆಯ ಕೆಲಸಗಳಿಗೆ ಸಾಕಷ್ಟು ಸಮಯ ಮಾಡಿಕೊಂಡು ಕೃತಿಗಲ ರಚನೆ ಹಾಗೂ ಆಸಕ್ತಿ ಸ್ತ್ರೀಯರಿಗೂ ಕಲಿಸುವ ಇವರ ಗುಣವನ್ನು ಮೆಚ್ಚಲೇ ಬೇಕು. ಈಗಂತೂ ಆಚಾರ್ಯರ ಪ್ರಾರಂಭಿಸಿದ್ದ ಕಲಾಶಾಲೆಯ ಮೇಲ್ವಿಚಾರಣೆ, ೩ ಗಂಡು ಮಕ್ಕಳು, ಮಗಳು, ಅಳಿಯ ಎಲ್ಲರೂ ಶಿಲ್ಪಿಗಳೇ ಅವರ ಕೆಲಸಗಳ ಮೇಲ್ವಿಚಾರಣೆ, ಸುತ್ತ ಮುತ್ತಲಿನ ಧಾರ್ಮಿಕ ಅವಶ್ಯಕತೆಗಲನ್ನೂ ಪೂರೈಸುವುದು, ಹೀಗೆ ದಿನವೆಲ್ಲ ಬಿಡುವಿಲ್ಲದೆ ಕೆಲಸ ಮಾಡುತ್ತಿರುವ ಮಹಿಳಾ ಶಿಲ್ಪಿ, ಇವರನ್ನೂ ನೋಡಿ ಮಾತನಾಡಿಸುವುದೇ ಒಂದು ಆನಂದ.

೧೯. **ಶ್ರೀ ಶಂಕರ ನಾರಾಯಣ ಮತ್ತು ಅವರ ಪತ್ನಿ ಶ್ರೀಮತಿ ಗಾಯತ್ರೀ ದೇವಿ, ದೇವನಹಳ್ಳಿ** : ಶಿಲ್ಪಕಲಾಕ್ಷೇತ್ರದಲ್ಲಿ ದೇವನಹಳ್ಳಿಯ ಶ್ರೀ ಎ.ಸಿ.ಹೆಚ್. ಆಚಾರ್ಯರದು ಪರಿಚಿತವಾದ ಹೆಸರು. ತಮ್ಮ ಜೀವನವನ್ನೇ ಶಿಲ್ಪಕಲೆಗೆ ಮುಡುಪಾಗಿಟ್ಟ ಆಚಾರ್ಯರು, ತಮ್ಮ ಕುಟುಂಬದವರನ್ನು, ಸುತ್ತಮುತ್ತಲಿನವರನ್ನೂ ಆಸಕ್ತರೂ ಎಲ್ಲರನ್ನೂ ಆಕರ್ಷಿಸಿ. ವಿದ್ಯಾದಾನ ಮಾಡಿದ ಕೀರ್ತಿಯೂ ಇವರಿಗಿದೆ. ಇವರ ಪುತ್ರಿ ಭಾರತೀದೇವಿ, ಅಳಿಯ ಶ್ರೀ ಶಂಕರನಾರಾಯಣ ಇಬ್ಬರೂ ಆಚಾರ್ಯರ ಶಿಷ್ಯರೇ. ಇಬ್ಬರೂ ಶಿಲ್ಪಕಲೆಯನ್ನು ಕಲಿತು ಪ್ರಾಚೀನ ಶಿಲ್ಪಿಗಳ ಅಧ್ಯಯನ ಸಂಶೋಧನೆಯನ್ನು ಮಾಡುತ್ತ ಆಚಾರ್ಯರ ಶಿಲ್ಪಕಲಾ ಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ೧೯೯೦ರಿಂದ ೨೦೦೦ದವರೆಗೆ ಹಿಂದೂಪುರದಲ್ಲಿ ಆಚಾರ್ಯ ಶಿಲ್ಪಕಲಾ ಶಾಲೆಯನ್ನು ಅಂದಿನ ಆಂಧ್ರದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಟಿ. ರಾಮರಾವ್ ಅವರ ಆದೇಶದ ಮೇರೆಗೆ ನಡೆಸಿದ್ದರು. ಇವರ ಈ ಕಾರ್ಯದಲ್ಲಿ ಭಾರತೀದೇವಿಯವರ ಸಹಕಾರವೂ ಇತ್ತು. ಅಲ್ಲಿಂದ ಮರಳಿ ಬಂದು ದೇವನಹಳ್ಳಿಯಲ್ಲೇ ನೆಲೆಸಿದ್ದಾರೆ. ಆಚಾರ್ಯರ ಶಿಲ್ಪಶಾಲೆಯ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದಾರೆ. ಶ್ರೀ ಶಂಕರನಾರಾಯಣ ಅವರು ಹಲವಾರು ಶಿಲ್ಪಶಿಬಿರಗಳಲ್ಲಿ ಪಾಲ್ಗೊಂಡಿದ್ದಾರೆ. ಕಲಾಮೇಳ ಮುಂತಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾ ದೇಶಾದ್ಯಂತ ಸಂಚರಿಸಿ ತಮ್ಮ ಅನುಭವವನ್ನು ಹೆಚ್ಚಿಸಿಕೊಂಡಿದ್ದಾರೆ.

ಇವರು ರಚಿಸಿರುವ ದೇವತಾಮೂರ್ತಿಗಳ ದೇಶವಿದೇಶದ ಸಂಗ್ರಹಗಳಲ್ಲಿವೆ. ಸಂಪ್ರದಾಯ ಶಿಲ್ಪದಂತೆ ತದ್ರೂಪಿಶಿಲ್ಪದಲ್ಲೂ ಅನುಭವವಿರುವ ಇವರು ಆಳೆತ್ತರದ ಎನ್.ಟಿ. ರಾಮರಾವ್ ಪ್ರತಿಮೆ, ಮಹಾತ್ಮಾ ಗಾಂಧಿಯವರ ಎದೆಮಟ್ಟದ ಪ್ರತಿಮೆಗಳನ್ನು ಮಾಡಿ ಅಪಾರ ಜನಪ್ರಿಯತೆ ಗಳಿಸಿದ್ದಾರೆ. ಜನರ ಮೆಚ್ಚುಗೆಯೇ ಇವರಿಗೆ ದೊರೆತಿರುವ ಪ್ರಶಸ್ತಿಯೆನ್ನುತ್ತಾ ಅವರ



ಬೇಡಿಕೆಗಳನ್ನು ಪೂರೈಸುವುದರಲ್ಲೇ ತೊಡಗಿರುತ್ತಾರೆ.

೩) **ಶ್ರೀ ಮಧುಸೂದನ :** ಒಂದೆರಡು ಶಿಬಿರಗಳಲ್ಲಿ ಮಧುಸೂದನ ಅವರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ಒಳ್ಳೆಯ ಸ್ನೇಹಿತನ ಹಾಗೆ, ತಾಯಿಯನ್ನು ನೋಡಿಕೊಂಡಂತೆ, ಎಚ್ಚರಿಕೆಯಿಂದೆ ಸದಾಕಾಲ ಜೊತೆಯಲ್ಲಿರುತ್ತಾ, ಶಿಬಿರದ ಸಮಯ ಮುಗಿದ ಮೇಲೂ ಮಾತನಾಡುತ್ತಾ ಅನುಭವವನ್ನು ಹಂಚಿಕೊಳ್ಳುತ್ತಾ ಇದ್ದರು. ಅವರು ಮಾಡುತ್ತಿದ್ದ ಕೆಲಸಗಳಲ್ಲಿ ಬದಲಾವಣೆಗಳನ್ನೂ ಸೂಚಿಸಿದರೆ ಬಹಳ ವಿನಯದಿಂದ ಒಪ್ಪಿಕೊಳ್ಳುವ ಸ್ವಭಾವ ಅವರದು.

ಮಧುಸೂದನ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿ ಕೆನ್‌ಸ್ಕೂಲ್‌ನಲ್ಲಿ ಆರ್ಟ್ ಮಾಸ್ಟರ್ ಟ್ರೈನಿಂಗ್ ಮಾಡಿಕೊಂಡಿದ್ದಾರೆ. ತಿರುಪತಿಯಲ್ಲಿ ಕಲ್ಲಿನ ಕೆತ್ತನೆ, ಬಿಡದಿಯಲ್ಲಿ ಹೆಚ್ಚಿನ ತರಬೇತಿ ಪಡೆದಿದ್ದಾರೆ. ಕರಕುಶಲ ಮಂಡಲಿಯ ಕಡೆಯಿಂದ ಕಂಚಿನ ಎರಕದ ಕೆಲಸವನ್ನು ಕಲಿತಿದ್ದಾರೆ. ಇವೆಲ್ಲ ಕಲಿಕೆಗಳ ಜೊತೆ ಹತ್ತಾರು ಶಿಬಿರಗಳಲ್ಲಿ ಪಾಲ್ಗೊಂಡ ಅನುಭವ, ಇದರಿಂದ ಇವರು ರಚಿಸಿರುವ ಹಲವಾರು ಶಿಲ್ಪಗಳು ದೇಶವಿದೇಶಗಳಲ್ಲಿವೆ.



ಇವರಿಗೆ ತಮ್ಮ ತಂದೆ ತಾಯಿಯವರು ಪ್ರಾರಂಭಿಸಿದ ಶಿಲ್ಪಕಲಾ ಶಾಲೆಯನ್ನು ದೊಡ್ಡದಾಗಿ ಬೆಳೆಸಿ, ನೂರಾರು ಆಸಕ್ತರಿಗೆ ಕಲಿಯುವ ಅವಕಾಶ ಕಲ್ಪಿಸಿಕೊಡಬೇಕೆಂಬ ಆಸೆ. ಅದಕ್ಕಾಗಿ ಹಲವಾರು ಪ್ರಯತ್ನಗಳನ್ನು, ಯೋಜನೆಗಳನ್ನು ನಿರೂಪಿಸುತ್ತಿದ್ದಾರೆ.





೯. **ಶ್ರೀ ಶಿಲ್ಪ ಸೋಮಾಚಾರ್ಯ ಮತ್ತು ಶ್ರೀ ರವಿ ಶಂಕರ್,** ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಬಿಳಿಕೆರೆಯಲ್ಲಿರುವ ಶ್ರೀ ಸೋಮಾಚಾರ್ಯರು ನನ್ನ ನಿವೇದನಾ ಪತ್ರ ತಲುಪಿದೊಡನೆ ದೂರವಾಣಿಯ ಮುಖಾಂತರ ಸಂಪರ್ಕಿಸಿ ಮುಖತಃ ಭೇಟಿ ಮಾಡಲೇ ಬೇಕೆಂದು ಅಪೇಕ್ಷಿಸಿದರು ಮತ್ತು ಒಂದು ವಾರದೊಳಗೆ ಬೆಂಗಳೂರಿಗೆ ಕೆಲಸದ ನಿಮಿತ್ತ ಬಂದಾಗ, ಫೋನ್ ಮಾಡಿ, ಸಂಜೆ ಮನೆಗೇ ಬಂದರು, ಜೊತೆಯಲ್ಲಿ ಅವರ

ರವಿಶಂಕರ ಕೃತಿ





ಶಿಲ್ಪಿ ಸೋಮಾಚಾರ್ಯರ ಕೃತಿ

ತಮ್ಮ ಶ್ರೀ ರವಿಶಂಕರ್ ಕೂಡ ಬಂದಿದ್ದರು. ಬಹಳ ಉತ್ಸಾಹತೋರಿಸಿ, ಮನೆಗೂ ಬಂದ ಅವರನ್ನು ನೋಡಿ ಬಹಳ ಸಂತೋಷವಾಯಿತು.

ವಂಶಪಾರಂಪರ್ಯವಾಗಿ ಬಂದ ಶಿಲ್ಪ ಕಲೆಯೇ ಇವರ ವೃತ್ತಿ. ಚಿನ್ನ, ಬೆಳ್ಳಿ, ಲೋಹ, ಶಿಲಾಶಿಲ್ಪ ಎಲ್ಲದರಲ್ಲೂ ಪರಿಣತೆ ಪಡೆದಿದ್ದ ಇಬ್ಬರೂ ಬಹಳ ಆರಾಮವಾಗಿ ಮಾತನಾಡುತ್ತ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಂಡರು. ತಮ್ಮ ವೃತ್ತಿಯ ಬಗ್ಗೆ, ತಮ್ಮ ಕೆಲಸಗಳ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಿಕೊಂಡರು. ಜೊತೆಯಲ್ಲಿ ಸುಮಾರು ಒಂದು ಅಡಿ ಎತ್ತರದ ಶ್ರೀ ವೆಂಕಟೇಶ್ವರ, ಶ್ರೀದೇವಿ, ಭೂದೇವಿಯ ಬೆಳ್ಳಿಯ ವಿಗ್ರಹವನ್ನು ತೋರಿಸಿದರು. ಸುಂದರವಾದ ಪೀಠ, ಪೀಠದಲ್ಲಿದ್ದ ಗರುಡ, ಅದಕ್ಕೆ ಹೊಂದಿಕೊಂಡಂತೆ ಇದ್ದ ಪ್ರಭಾವಳಿ, ಬಹಳ ಅಚ್ಚುಕಟ್ಟಾದ ಕೆಲಸ. ಇಲ್ಲೆಲ್ಲಾ ಬೆಳ್ಳಿ ಅಂಗಡಿಗಳಲ್ಲಿ ವಿಗ್ರಹಗಳನ್ನು ನೋಡುತ್ತೇವೆ. ಅವು 'ಬೆಳ್ಳಿ' ಎನ್ನುವ ಒಂದೇ ಕಾರಣದಿಂದ ಕೊಳ್ಳಿ ಬೇಕೇ ಹೊರತು ಅಲ್ಲಿ ಯಾವ ಸೌಂದರ್ಯವೂ ಇರುವುದಿಲ್ಲ. ಆದರೆ ಇವರು ತಂದಿದ್ದ ವಿಗ್ರಹ ಬಹಳ ಚೆನ್ನಾಗಿತ್ತು. ತಮ್ಮ ಅನುಭವ, ಅಭಿರುಚಿಗಳಲ್ಲನ್ನೆಲ್ಲಾ ಎರಕಮಾಡಿದ್ದರೇನೋ ಅನ್ನಿಸುತ್ತವಂತಿತ್ತು. ಅಂತಹ ಕೆಲಸ ಮಾಡಿದ ಸಂತೃಪ್ತಿ ಕೂಡ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಹಾಗೆಯೇ ಮಾತನಾಡುತ್ತಾ ವಿಗ್ರಹ ರಚನೆಗೆ ಮುಂಚೆ ಅವರು ಮಾಡಿಕೊಳ್ಳುವ ರೇಖಾ ಚಿತ್ರವನ್ನೂ ತೋರಿಸಿದರೂ. ನೋಡಿ ಬಹಳ ಆಶ್ಚರ್ಯವಾಯಿತು. ರೇಖಾಚಿತ್ರದಲ್ಲೇ ಪೂರ್ಣ ಶಿಲ್ಪದ ವಿವರಗಲನ್ನೆಲ್ಲಾ ಬಿಡಿಸಿದ್ದರು. ಈ ಕಾಲದಲ್ಲೂ ಇಷ್ಟು ಚೆನ್ನಾಗಿ ಬೆಳ್ಳಿ ಕೆಲಸ ಮಾಡುವವರು ಇದ್ದಾರೆಯೇ ಎನ್ನಿಸಿತು. ಅವರ ತಮ್ಮ ರವಿ ಶಂಕರ್ ಕೂಡ ತಮ್ಮ ಜೊತೆಯಲ್ಲೇ ಕೆಲಸ ಮಾಡುತ್ತಿರುವುದಾಗಿ ತಿಳಿಸಿದರು.

ವಿಶೇಷವೆಂದರೆ ೩ ಅಡಿಯ ಬಂಗಾರದ ತೊಟ್ಟಿಲನ್ನು ಉಡುಪಿಯ ದೇವಾಲಯಕ್ಕೆ ಮಾಡಿಕೊಟ್ಟಿದ್ದಾರೆ, ಹಾಗೆಯೇ ತಿರುಚ್ಚಂದೂರ್ ಸುಬ್ರಹ್ಮಣ್ಯ ದೇವಾಲಯಕ್ಕೆ ವಜ್ರದ ಕಿರೀಟ ಮಾಡಿಕೊಟ್ಟಿದ್ದಾರೆ. ಇವರು ಆಂಧ್ರ ತಮಿಳು ನಾಡುಗಳಲ್ಲೂ ಚಿನ್ನ ಬೆಳ್ಳಿ ಕೆಲಸಗಳಲ್ಲಿ ಪ್ರಸಿದ್ಧ ಪಡೆದು, ಅಲ್ಲಿಗೆಲ್ಲಾ ಕೆಲಸಗಳನ್ನು ಮಾಡಿಕೊಡುತ್ತಿರುತ್ತಾರೆ, ಇಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದರೂ, ತಮ್ಮ ಕೆಲಸಗಳನ್ನು ಮೆಚ್ಚಿ ಯಾವ ಪ್ರಶಸ್ತಿಗಳೂ ಬಂದಿಲ್ಲವಲ್ಲ ಎಂಬುದೇ ಇವರ ಕೊರಗು ಶ್ರೀ ಸೋಮಾಚಾರ್ಯರಿಗೆ ಕರ್ನಾಟಕ ರಾಜ್ಯ ಪ್ರಶಸ್ತಿ, ಶಿಲ್ಪ ಕಲಾ ಅಕಾಡಮಿಯ ಪ್ರಶಸ್ತಿ ದೊರೆತಿದೆಯೆಂಬುದೇ ಅವರ ಸಮಾಧಾನ. ಒಳ್ಳೊಳ್ಳೆ ಶಿಲ್ಪಗಳನ್ನು ಮಾಡುವ ಅವಕಾಶಗಳು ಸಿಗುತ್ತಾ, ಬೇರೆ ಯಾವ ಸಮಸ್ಯೆಗಳೂ ಇಲ್ಲದೆ, ಸಂತೃಪ್ತಿಯಿಂದ ಅಣ್ಣ ತಮ್ಮ ಇಬ್ಬರೂ ತಮ್ಮ ವಂಶ ವೃತ್ತಿಯನ್ನು ತಮ್ಮ ಮಕ್ಕಳಿಗೂ ಕಲಿಸುವ ಆಶಯ ಹೊಂದಿದ್ದು, ಅದನ್ನು ಮುಂದುವರೆಸಿಕೊಂಡು ಹೋಗುತ್ತಿರುವುದರ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಿದರು ನಾನು ನೋಡಿ ಮಾತನಾಡಿಸಿದ ಹೆಚ್ಚಿನ ಶಿಲ್ಪಿಗಳು ಹೀಗೆ ತಮ್ಮ ಕೆಲಸಗಳ ಬಗ್ಗೆ ತೃಪ್ತಿ ಹೊಂದಿದ್ದು ಸ್ವಾವಲಂಬಿ ಜೀವನ ನಡೆಸುತ್ತಿರುವ ಬಗ್ಗೆ ಹೆಮ್ಮೆ ಪಟ್ಟು ಕೊಂಡಿದ್ದಾರೆ.

೧೦. **ಶಿಲ್ಪಿ ಎ.ಪಿ. ಶ್ರೀಕಂಠಾಚಾರ್ಯ, ಗೊಪ್ಪೇನಹಳ್ಳಿ :** ಹೆಸರಾಂತ ಶಿಲ್ಪಿ ಜಕಣಾಚಾರಿ ಪ್ರಶಸ್ತಿ ವಿಜೇತರಾಗಿದ್ದ ಶ್ರೀ ಎಂ. ಪರಮೇಶ್ವರಾರ್ಯರ ವಂಶದ ವಿದ್ಯೆಯಾದ ಶಿಲ್ಪ ಕಲೆಯನ್ನು ತಂದೆಯವರಿಂದಲೇ ಕಲಿತವರು ಶ್ರೀ ಶ್ರೀಕಂಠಾಚಾರ್ಯ ಅವರು ೮ ಅಡಿಯಿಂದ ೭೦ ಅಡಿಗಳ ವರೆಗಿನ ೧೫ ರಥಶಿಲ್ಪಗಳನ್ನು ರಚಿಸಿರುವ ಹೆಗ್ಗಳಿಗೆ ಇವರದು. ತಂದೆಯವರಂತೆಯೇ ರಥಶಿಲ್ಪ, ಶಿಲಾಶಿಲ್ಪ, ಮತ್ತು ಪಂಚಲೋಹದ ಮೂರ್ತಿಗಳನ್ನು ರಚಿಸುವುದರಲ್ಲಿ, ತಂದೆಯವರು ಪ್ರಾರಂಭ ಮಾಡಿ, ನಡೆಸುತ್ತಿದ್ದ ಶಿಲ್ಪ ಕಲಾ ಶಾಲೆಯನ್ನು ನೋಡಿಕೊಂಡು ಕಿರಿಯರಿಗೂ ಮಾರ್ಗದರ್ಶನ ಮಾಡುತ್ತ ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಇವರು ಸೂಚಿಸಿರುವುದು ಕೂಡ ಒಟ್ಟಿಗೆ ಸೇರಿ ಕೆಲಸ ಮಾಡುವುದರಲ್ಲಿ ಹೆಚ್ಚಿನ ಅನುಕೂಲವಿದೆಯನ್ನುವ ಅಭಿಪ್ರಾಯ. ಹಳ್ಳಿ ಹಳ್ಳಿಗಳಲ್ಲಿ ಜಾತ್ರೆಗಳು ನಡೆಯುವಾಗ ಜನಪದ ಕಲೆಗಳಾದ ಡೊಳ್ಳು ಕುಣಿತ, ವೀರಗಾಸೆ, ನಂದಿಕೋಲ ಕುಣಿತ ಇವುಗಳೆಲ್ಲ ನಡೆಯ ಬೇಕು, ನಾಡಿನ ಸಂಸ್ಕೃತಿಯ ಈ ಕಲೆಗಳನ್ನು ಜೀವಂತವಾಗಿಸಲು ಪ್ರದರ್ಶನಗಳನ್ನೂ ಮಾಡಬೇಕೆನ್ನುವ ಕಳಕಳಿ ಇವರದು. ಶಿಲ್ಪಿಗಳು ಒಟ್ಟಿಗೆ ಸೇರಿ ಕೆಲಸ ಮಾಡ ಬೇಕೆನ್ನುವ ಕನಸು, ಇದರಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗುವುದಲ್ಲದೆ, ಅಧ್ಯಯನ, ಕಿರಿಯರಿಗೆ ಮಾರ್ಗದರ್ಶನ ಎಲ್ಲದರಲ್ಲೂ ಬಹಳ ಪ್ರಯೋಜನ ಪಡೆಯಬಹುದು ಎಂದು ಯೋಚಿಸುವ ಇವರು "ಸಂಘಶಕ್ತಿ"ಯಲ್ಲಿ ನಂಬಿಕೆಯಿಟ್ಟವರು. ಇಂತಹ ಸಂಘಟನೆಗಳಿಗೆ, ಸರ್ಕಾರದಿಂದ ಸಹಯೋಗ ನಿರೀಕ್ಷಿಸುವುದು ಎಷ್ಟರ ಮಟ್ಟಿಗೆ ಸಫಲವಾಗಬಹುದು ?

ನಾವೆಲ್ಲರೂ ಶ್ರೀಕಂಠಾಚಾರ್ಯರಂತೆಯೇ ಸಂಘಶಕ್ತಿಗೆ ಬಯಸೋಣ, ಬಯಸೋಣ, ಕನಸುಕಾಣೋಣ, ಒಂದು ಉತ್ಸಾಹಿ ಸಮುದಾಯದಿಂದ ಸುಂದರ ದೇಗುಲಗಳ ನಿರ್ಮಾಣವಾಗಿ ನಾಡಿನ ಸಂಪತ್ತು ಬೆಳೆಯಲೀ ಎಂದು ಆಶಿಸೋಣ.

೧೧. **ಶ್ರೀಮತಿ ಕನಕಾಮೂರ್ತಿ,** ಬೆಂಗಳೂರು :



ಟಿ. ನರಸೀಪುರದ ಸಂಪ್ರದಾಯ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಕನಕಾ ಮೂರ್ತಿಯವರಿಗೆ ಮೊದಲಿನಿಂದಲೂ ಸಂಗೀತ ಸಾಹಿತ್ಯಗಳಲ್ಲಿ ಆಸಕ್ತಿ ತಂದೆ ತಾಯಿಯರ ನಿರೀಕ್ಷೆಯಂತೆ ಬಿ.ಎಸ್.ಸಿ. ಪದವಿಯನ್ನು ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಪಡೆದರು. ಅಲ್ಲಿಯವರೆಗೂ ಶಿಲ್ಪಕಲೆಯ ಬಗ್ಗೆ ಕೇವಲ ಪುಸ್ತಕಗಳಲ್ಲಿ ಓದಿದ್ದೇ ವಿನಃ ಅವುಗಳನ್ನು ಮಾಡುವವರೂ ಇದ್ದಾರೆ, ಅದನ್ನು ಯಾರು ಬೇಕಾದರೂ ಕಲಿಯಬಹುದು ಎಂಬ ಕಲ್ಪನೆಯೂ ಇರಲಿಲ್ಲ. ಓದು ಮುಗಿದ ಮೇಲೆ, ಮುಂದೆ ಓದಲು ಅವಕಾಶವಿಲ್ಲದೆ, ಕೆಲಸಕ್ಕಂತೂ ಸೇರುವ ಮಾತೇ ಇಲ್ಲ, ಅಂತಹ ಪರಿಸ್ಥಿತಿಯಲ್ಲಿ ಮನೆಯಲ್ಲೇ ಕುಳಿತಿರಬೇಕಾದ ಸಮಯದಲ್ಲಿ ಇವರ ಅಣ್ಣ ಶ್ರೀ ಶ್ರೀನಿವಾಸ ಮೂರ್ತಿ, ಇವರನ್ನೂ ಬಸವನಗುಡಿಯ ಕಲಾಮಂದಿರದಲ್ಲಿ ಚಿತ್ರಕಲೆ ಕಲಿಯಲು ಶ್ರೀ ಎ.ಎನ್. ಸುಬ್ಬರಾಯರ ಬಳಿ ಸೇರಿಸಿದರು. ಇವರಿಗೆ ಬಣ್ಣಗಳ ಆಕರ್ಷಣೆಗಿಂತ ರೇಖಾಚಿತ್ರಗಳಲ್ಲೇ ಹೆಚ್ಚಿನ ಆಸಕ್ತಿಯಿತ್ತು. ಮೂರು ವರ್ಷಗಳ ಕಲಿಕೆಯ ಸಮಯದಲ್ಲೇ ಖ್ಯಾತ ಶಿಲ್ಪಿ ವಾದಿರಾಜರ ಪರಿಚಯ, ಇವರ ಸಂಗೀತ ಗುರುಗಳಾಗಿದ್ದ ಗಾನಸುಧಾಕರ ಶ್ರೀ ಎ. ಸುಬ್ಬರಾಯ ಮನೆಯಲ್ಲಾಯಿತು. ಅಲ್ಲಿಂದ ಮುಂದೆ ತಂದೆ ತಾಯಿಯರ ಅಪ್ಪಣೆ ಪಡೆದು ವಾದಿರಾಜರಲ್ಲಿ ಮಣ್ಣಿನಲ್ಲಿ ಪ್ರತಿಮೆಗಳನ್ನು ಮಾಡಲು ಸೇರಿದರು. ಹವ್ಯಾಸಕ್ಕೆಂದು ಕಲಿಯಲು ಬಂದ ಕನಕ, ವಾದಿರಾಜರ ಕೆಲಸಗಳನ್ನು ನೋಡುತ್ತ, ನೋಡುತ್ತ ಕಲಿಯುವುದು ಎಷ್ಟೊಂದಿದೆ ಎಂಬುದನ್ನು ಮನಗಂಡು, ಕಲಿತರೆ ಇಂತಹ ವಿದ್ಯೆಯನ್ನೇ ಕಲಿಯಬೇಕು ಎಂದು ತೀರ್ಮಾನಿಸಿಕೊಂಡರು. ಅದರಂತೆ ತಾನೇ ತಾನಾಗಿ ಅವಕಾಶಗಳೂ ಒದಗಿಬಂದಿತ್ತು, ಬೇರೆ ಹವ್ಯಾಸಗಳನ್ನೆಲ್ಲ ಬಿಟ್ಟು ಸತತ ಪ್ರಯತ್ನ ಮತ್ತು ಶ್ರಮಗಳಿಂದ ಹವ್ಯಾಸವಾಗಿದ್ದ ಕಲೆಯನ್ನು ವೃತ್ತಿಯನ್ನಾಗಿಸಿಕೊಂಡರು. ಸುದೈವದಿಂದ ಪ್ರೋತ್ಸಾಹಿಸುವ ಪತಿ ಮತ್ತು ಕಲಿಯಲು ಅನುಕೂಲವಾಗುವಂತೆ, ವಾದಿರಾಜರು ವಾಸಿಸುತ್ತಿದ್ದ





ಮನೆಯ ಒಂದು ಭಾಗದಲ್ಲಿ ವಾಸಿಸಲು ಇವರ ಸಂಸಾರಕ್ಕೂ ಅವಕಾಶ ಸಿಕ್ಕಿದ್ದು ಇವರ ಅಧ್ಯಯನ ನಿರಂತರವಾಗಿ ನಡೆಯುವಂತಾಯಿತು.

ವಾದಿರಾಜರಲ್ಲೇ ಕಲಿತು ಅವರ ಎಲ್ಲ ಕೆಲಸಗಳಲ್ಲೂ ನೆರವಾಗುತ್ತ ಗುರು-ಶಿಷ್ಯ ಪರಂಪರೆಯ ರೀತಿಯಲ್ಲಿ ಇವರ ಅಧ್ಯಯನ ನಡೆಯಿತು. ಗುರುವನ್ನು ಅನುಕರಣ ಮಾಡುವುದನ್ನೇ ಧ್ಯಯವನ್ನಾಗಿಸಿಕೊಂಡ ಇವರು ಅವರ ಅಧ್ಯಯನ ಶಿಬಿರಗಳಲ್ಲೂ ಬಾಗಿಯಾಗುತ್ತ, ಸಂಪ್ರದಾಯ ಶೈಲಿಗಳ ಅಧ್ಯಯನ, ಅವುಗಳ ಬಗ್ಗೆ ಓದಿ ತಿಳಿದುಕೊಳ್ಳುವುದು, ರೇಖಾ ಚಿತ್ರದ ಅಭ್ಯಾಸಗಳನ್ನು ಕಲಿತು ಶಿಲ್ಪಕಲಾ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಳ್ಳಬಹುದಾದಂತಹ ಮಟ್ಟವನ್ನು ತಲುಪಿದರು. ಗುರುಗಳ ಮರಣದ ನಂತರ ಅವರ ಅಪೂರ್ಣ ಕೃತಿಗಳನ್ನು ಮುಗಿಸಿಕೊಟ್ಟ ಮೇಲೆ ಕನಕಾ ಶಿಲ್ಪಕಲೆಯ ವೃತ್ತಿಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಂಡರು.

ವಿಧವಿಧವಾದ ಕಲ್ಲುಗಳು, ವಿವಿಧ ಮಾಧ್ಯಮಗಳಲ್ಲಿ, ವಿವಿಧ ಶೈಲಿಗಳಲ್ಲಿ, ವಿವಿಧ ಅಳತೆಗಳಲ್ಲಿ ಬಂದ ಬೇಡಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲೂ ಮಹಿಳೆಯರು ಕಲ್ಲನ್ನು ಕೆತ್ತಿ ಶಿಲ್ಪ ಮಾಡುವುದು ಅಪರೂಪ. ಹಾಗಾಗಿ ವಾದಿರಾಜರನ್ನು ಕಾಣಲು ಬೆಂಗಳೂರಿಗೆ ಬಂದ ಲಂಡನ್ನಿನ ಹೆಸರಾಂತ ಶಿಲ್ಪಿ ನೇರ್ಥ ಡೇವಿಡ್ ಎಂಬುವರು ಇವರನ್ನು Art. in Action ಉತ್ಸವಕ್ಕೆ ಆಹ್ವಾನಿಸಿದ ಮೇರೆಗೆ ವಿದೇಶದಲ್ಲೂ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಿ ಬಂದರು. ವಾದಿರಾಜರ ಜೀವತ ಕಾಲದಲ್ಲಿ ೨ ಬಾರಿ, ಅನಂತರ ಸಹಸ್ರಮಾನದ ವಿಶೇಷ ಸಂದರ್ಭದಲ್ಲಿ ೩ನೇ ಭಾರಿ Art in Actionಗೆ ಹೋಗಿ ಬಂದರು. ೨೦೦೬ರಲ್ಲಿ New Castle ನ 'ಕಲಾಪ್ರೇಮಿ' ಎಂಬ ಸಂಸ್ಥೆಯ ಆಹ್ವಾನದ ಮೇರೆಗೆ ಹೋಗಿ ಮಣ್ಣಿನ ಕೆಲಸದಲ್ಲಿ ಒಂದು ಕಾರ್ಯಾಗಾರ ನಡೆಸಿ, ಆದೇಶದ ಹೈಸ್ಕೂಲು ಮಕ್ಕಳಿಗೆ ಭಾರತೀಯ ಕಲೆಯನ್ನು ಪರಿಚಯಿಸಿ ಬಂದರು.

ಸಂಪ್ರದಾಯ ಶಿಲ್ಪಗಳಲ್ಲಿ ಬರೀ ಅನುಕರಣೆ ಮಾಡುವುದು ಮಾತ್ರವಲ್ಲ (ಧಾರ್ಮಿಕ ಬೇಡಿಕೆಗಳಿಗೆ) ಸ್ವಂತರಚನೆಗಳನ್ನೂ ಮಾಡಬಹುದೆಂದು ತೋರಿಸಿದ್ದಾರೆ. ಸಪ್ತಋಷಿಗಳ ಉಬ್ಬು ಶಿಲ್ಪವನ್ನು ಋಷಿಗಳ ಜೀವನದ ಮುಖ್ಯ ಪ್ರಸಂಗಗಳ ಆಧಾರದ ಮೇಲೆ ರೇಖಾ ಚಿತ್ರ ಮಾಡಿರುವ ಶಿಲ್ಪಗಳು ಬೆಂಗಳೂರಿನ ಚಿಕ್ಕ ಗುಬ್ಬಿಯ ಬಳಿಯಿರುವ 'ತಪೋವನ' ಎಂಬ ಮಾನಸ ಫೌಂಡೇಶನ್‌ನಲ್ಲಿದೆ. ಇನ್ನೊಂದು ಅದೇರೀತಿಯ ಶಿಲ್ಪಗಳು ಮತ್ತೂರಿನ ದೇವಾಲಯವೊಂದರಲ್ಲಿ ಸ್ಥಾಪಿಸಿದ್ದಾರೆ, ಬೆಂಗಳೂರಿನ ಭಾರತೀಯ ವಿದ್ಯಾಭವನದ ಮುಂಬಗದಲ್ಲಿರುವ ಸರಸ್ವತೀ ಗಣೇಶ ವಿಗ್ರಹಗಳು ಕೂಡ ಇವರ ಸ್ವಂತ ರಚನೆಗಳು. ಶಾಸ್ತ್ರ ರೀತಿ ಮಾಡಿರುವ ೨$^{೧}/_{೨}$ ಅಡಿಯ ಗಣೇಶನ ಕಲ್ಲಿನ ವಿಗ್ರಹ, ಮಲ್ಲೇಶ್ವರದ ೧೩ನೇ ಕ್ರಾಸಿನಲ್ಲಿರುವ ನಂದಿ ತೀರ್ಥ ಶಿವ ದೇವಾಲಯದಲ್ಲಿ ಪ್ರತಿಷ್ಠಾನಗೊಂಡು ನಿತ್ಯಪೂಜೆಗೊಳ್ಳುತ್ತಿದೆ, ಶಾಸ್ತ್ರಾಧ್ಯಯನ ಮಾಡದ ಇವರು, ಹಿಂದಿನ ಶಿಲ್ಪಿಗಳನ್ನೇ ಅನುಸರಿಸಿ ಮಾಡುತ್ತಾರೆ.

ರೂಪಶಿಲ್ಪ ಕನಕಾ ಮೂರ್ತಿಯವರಿಗೆ ಬಹಳ ಇಷ್ಟ, ಬೆಂಗಳೂರಿನ ಲಾಲ್ ಪಶ್ಚಿಮ ದ್ವಾರದಲ್ಲಿರುವ ಇವರ ಕುವೆಂಪು, ಮೈಸೂರಿನ ಸರ್ ಎಂ. ವಿಶ್ವೇಶ್ವರಯ್ಯ, N.I.E. ಇಂಜಿನಿಯರಿಂಗ್ ಕಾಲೇಜಿನ ಸಂಸ್ಥಾಪಕರ ಕಂಚಿನ ಶಿಲ್ಪಗಳು, ಇವರ ರೂಪ ಶಿಲ್ಪಗಳು. ಅಲ್ಲದೆ ತಮ್ಮ ನೆಚ್ಚಿನ ಸಾಹಿತಿ ಮತ್ತು ಗಾಯಕರ ಭಾವ ಶಿಲ್ಪಗಳನ್ನು ಮಾಡಿ, ಏಕವ್ಯಕ್ತಿ ಪ್ರದರ್ಶನ ಮಾಡಿದ್ದಾರೆ. ಸದಾ ಪ್ರಯೋಗ, ಅಧ್ಯಯನಗಳಲ್ಲಿ ತೊಡಗಿಕೊಂಡಿರುವ ಇವರಿಗೆ ಬರವಣಿಗೆಯ ಹವ್ಯಾಸವೂ ಇದೆ. ಶಿಲ್ಪಗಳಿಗೆ ಸಂಬಂಧಿಸಿದಂತಹ ಲೇಖನಗಳನ್ನು, ತಮ್ಮ ಗುರುಗಳ ಸಾಧನೆಯ ಬಗ್ಗೆ ಬರೆದ "ಉತ್ತುಂಗ ಕುಶಲ ಶಿಲ್ಪಿ ವಾದಿರಾಜ್" ಎಂಬ ಪುಸ್ತಕವನ್ನೂ ಕರ್ನಾಟಕ ಶಿಲ್ಪ ಕಲಾ ಅಕಾಡಮಿಯವರು ಪ್ರಕಟಿಸಿದ್ದಾರೆ. ಮಹಿಳೆಯರು ಸಹ ಕಲ್ಲಿನಲ್ಲಿ ಕೆಲಸ ಮಾಡಬಹುದೆಂದು ತೋರಿಸಿದ್ದಾರೆ. ಇವರ ಪ್ರತಿಭೆಗೆ ಮೆಚ್ಚಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ, ಹಾಗೂ ಶಿಲ್ಪಕಲಾ ಅಕಾಡಮಿಯ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

೧೨. **ಶ್ರೀ ಜಿ.ಎಲ್. ಭಟ್**, ಬಿಡದಿ :



ಶ್ರೀ ಗಣೇಶ ಲಕ್ಷ್ಮಿನಾರಾಯಣ ಭಟ್ ಇಡುಗುಂಜಿಯ ಅರ್ಚಕ ಮನೆತನದಲ್ಲಿ ಜನಿಸಿದವರು. ಪೂಜಿಸುವುದನ್ನು ಬಿಟ್ಟು ದೇವರನ್ನು ಮಾಡುವ ಕಾಯಕಕ್ಕೆ ಮನಸೋತವರು. "ಗುರುವಿನಂತೆ ಶಿಷ್ಯ" ಎಂಬ ಮಾತು ಇವರಿಗೆ ಸೂಕ್ತವಾಗಿದೆ.

ಜಿ.ಎಲ್. ಭಟ್ ನನಗಿಂತ ಬಹಳ ಕಿರಿಯರು ಮತ್ತು ನನ್ನ ಗುರುಬಂಧು. ವಾದಿರಾಜರಲ್ಲಿ ಕಲಿಯಲು ಬದಾಗ



ಜಿ.ಎಲ್. ಭಟ್‌ರವರ - ಹೊಯ್ಸಳ ಶೈಲಿಯ ಸೂರ್ಯ

ಇವರಿಗೆ ಇನ್ನೂ ೨೦ ವರ್ಷಗಳು ಕೂಡ ಆಗಿರಲಿಲ್ಲ. ಆ ವೇಳೆಗಾಗಲೆ ಚಿತ್ರಕಲೆಯನ್ನು ಕಲಿತು, ಕೆತ್ತನೆಯಲ್ಲಿ ಆಸಕ್ತಿ ತೋರಿಸಿದ್ದರಿಂದ ಸಾಗರದ ಶ್ರೀಶಾಂತಪ್ಪ ಎಂಬುವರಲ್ಲಿ ಕೆತ್ತನೆ ಕಲಿಯಲು ಇವರ ಮಾವ ಸೇರಿಸಿದರು. ಇವರಿಗೆ ಶ್ರೀ ಗಂಧದ ಕೆತ್ತನೆ ಬರುತ್ತಿತ್ತು. ಅಂದರೆ ಸೂಕ್ಷ್ಮ ಕೆತ್ತನೆಗಳ ಪರಿಚಯಿತ್ತು. ಜೊತೆಗೆ ಹಿಂದೂಸ್ಥಾನೀ ಸಂಗೀತದಲ್ಲಿ ಆಸಕ್ತಿಯಿದ್ದು ಸ್ವತಃ ತಬಲಾ ವಾದನ ಕಲಿಯುತ್ತಿದ್ದುದರಿಂದಲೂ ಬಹಳ ಹಾಸ್ಯ ಪ್ರವೃತ್ತಿಯವರಾದ್ದರಿಂದಲೂ ನಮಗೆಲ್ಲಿ ಬಹಳ ಬೇಗ ಆತ್ಮೀಯರಾದರು.

ಕಲಿಯುವುದರಲ್ಲಿ ಬಹಳ ಆಸಕ್ತಿಯಿದ್ದ ಜಿ.ಎಲ್. ಭಟ್, ವಾದಿರಾಜರ ಮನೆಯಲ್ಲಿ ಇದ್ದ ೧೦ ವರ್ಷಗಳಲ್ಲಿ ಹಲವಾರು ಸಂಪ್ರದಾಯ ಶಿಬಿರಗಳಲ್ಲಿ ಭಾಗವಹಿಸಿ, ಸಾಕಷ್ಟು ಅಧ್ಯಯನ ಮಾಡಿದ್ದಾರೆ, ರೇಖಾಚಿತ್ರ ಬಿಡಿಸುವುದು ಇವರ ಪ್ರಿಯವಾದ ಹವ್ಯಾಸ. ಪ್ರತಿಶೈಲಿಯ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿ, ರೇಖಾ ಚಿತ್ರದಲ್ಲೇ ಶೈಲಿಯ ರೂಪು ರೇಷೆಗಳನ್ನು ತರಬಲ್ಲ ಕುಶಲತೆ ಗಳಿಸಿಕೊಂಡಿದ್ದಾರೆ, ಕೆನರಾ ಬ್ಯಾಂಕಿನ "ಕೌಶಲ್ಯ" ಯೋಜನೆಯಡಿಯಲ್ಲಿ ಪಾಲ್ಗೊಂಡು, ಮುಂದೆ ಅದು ಜೋಗರ ದೊಡ್ಡಿಯಲ್ಲಿ ಕೆ.ಪಿ.ಜೆ. ಪ್ರಭು ಕುಶಲಕಲಾತರಭೇತಿ ಕೇಂದ್ರವಾದಾಗ, ಅಲ್ಲಿ ಕಲಿಸುವ ಕಾಯಕದಲ್ಲಿ ಯಶಸ್ವಿಯಾಗಿ ಮುಂದುವರೆದರು. ವಾದಿರಾಜರು ಕಲಿಸಿದ ರೀತಿಯಲ್ಲೇ ಕಲಿಸುತ್ತ, ರೇಖಾ ಚಿತ್ರದಿಂದ ಹಿಡಿದು, ಶೈಲಿಗಳ ವಿಶೇಷತೆಯನ್ನು ಗಮನಿಸಿ ಶಿಲ್ಪರಚಿಸುವ ರೀತಿಯನ್ನು ಕಿರಿಯರಿಗೂ ಕಲಿಸುತ್ತಾ ಗುರುಗಳ ಪರಂಪರೆಯನ್ನೂ ಮುಂದುವರಿಸುತ್ತಿರುವ ಹೆಗ್ಗಳಿಕೆ ಇವರದು.

ಈಗಾಗಲೇ ೫೦೦ಕ್ಕೂ ಹೆಚ್ಚು ಮಂದಿ ಕಿರಿಯ ಶಿಲ್ಪಗಳಿಗೆ ಕಲಿಸಿದ್ದಾರೆ ನಮ್ಮ ನಾಡಿನಲ್ಲಿ ಮಾತ್ರವಲ್ಲ ಇಂಗ್ಲೇಂಡಿನ ಬಳಿ "Shut Farm" ಬಳಿ "Sommerset" ಎಂಬಲ್ಲಿ ಸಹ ಆಸಕ್ತರಿಗೆ ಭಾರತೀಯ ಶಿಲ್ಪ ಕಲೆಯನ್ನು ಕಲಿಸಿದ್ದಾರೆ, ನಾಲ್ಕು ವರ್ಷದ ಅವಧಿಯಲ್ಲಿ ವರ್ಷಕ್ಕೆ ಎರಡು ಮರು ತಿಂಗಳು ಹೋಗಿ ಕಲಿಸುವುದೆಂದರೆ ಸುಲಭದ ಕೆಲಸವಲ್ಲ. ಜೊತೆಗೆ ಇಂಗ್ಲೇಂಡಿನ ಪ್ರವಾಸದ ಸಮಯದಲ್ಲಿ ನೆಹ್ರೂ ಸೆಂಟರಿನಲ್ಲಿ ನಮ್ಮ ಶಿಲ್ಪ ಕಲೆಯ ಬಗ್ಗೆ slide show ಗಳ ಮೂಲಕ, ಹಾಗೂ ತಾವು ರಚಿಸಿದ ಶಿಲ್ಪಗಳ ಮೂಲಕ ಯಶಸ್ವಿಯಾಗಿ ಭಾಷಣಗಳನ್ನೂ ಮಾಡಿದ್ದಾರೆ. ಹೆಚ್ಚಿನ ವಿದ್ಯಾಭಾಸ ಮಾಡದಿದ್ದರೂ, ಭಾಷೆ ಇವರಿಗೆ ಎಂದೂ ತೊಡಕಾಗಲಿಲ್ಲ. "ಕಲೆಗೆ ತನ್ನದೇ ಆದ ಭಾಷೆಯಿದೆ" ಎನ್ನುವ ಮಾತು ಇವರಿಗೆ ಸರಿಯಾಗಿ ಅನ್ವಯಿಸುತ್ತದೆ. ಇಂಗ್ಲೇಂಡಿನಲ್ಲಿ ಅಲ್ಲಿಯ ಶಿಷ್ಯರೊಡಗೂಡಿ, ೪ ವರ್ಷಗಳ ಹಿಂದೆ, ಒಂದು 'ಕಾಮಧೇನು'ವನ್ನು ರಚಿಸಿ, ಆ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗದಲ್ಲಿ ಮಡಿದ ಹಸುಗಳಿಗೆ ಸ್ಮಾರಕ ನಿರ್ಮಿಸಿದರು.

ಬಿಡದಿಯಲ್ಲಿ ಭಾರತದ ಎಲ್ಲ ಭಾಗಗಳಿಂದಲೂ ಕಲಿಯುವ ಆಸಕ್ತರು ಬರುತ್ತಾರೆ. ಅವರಲ್ಲಿ ಒಬ್ಬರಾದ ನಾಗಾಲಾಂಡಿನ ಯುವಕ ನನ್ನನ್ನು ಕಾಣಲು ಬಂದಾಗ, ಜಿ.ಎಲ್. ಭಟ್‌ರವರ ಬೋಧನಾಕ್ರಮವನ್ನು ಮೆಚ್ಚಿ ಮಾತನಾಡಿದರು. ಇವರಿಗೂ ಭಾಷೆಯ ಪರಿಚಯವಿಲ್ಲ, ಭಟ್ ಕನ್ನಡ ಬಿಟ್ಟರೆ ಬೇರೆ ಭಾಷೆಗಳ ಪರಿಚಯ ಅಷ್ಟಾಗಿರಲಿಲ್ಲ. ಆದರೂ ಮನಮುಟ್ಟುವಂತೆ ಮಾರ್ಗದರ್ಶನ ನೀಡಿದರು ಎಂದು ಹೇಳಿದರು.


ಆಗಾಗ ತರಬೇತಿಯಲ್ಲಿರುವ ಶಿಷ್ಯರೊಡನೆ ಶಿಲ್ಪ ಕ್ಷೇತ್ರಗಲಿಗೆ ಭೇಟಿ ನೀಡುವುದು, ಅಲ್ಲಿಯೇ ಕುಳಿತು ರೇಖಾ ಚಿತ್ರದ ರಚನೆ ಮಾಡಿ, ಶಿಲ್ಪರಚಿಸುವುದು, ಸಾಧ್ಯವಾದಷ್ಟು ಶಾಸ್ತ್ರ ಗಂಧಗಳ ಪರಿಚಯ ಮಾಡಿಕೊಳ್ಳುವುದು, ಹೀಗೆ ಹತ್ತು ಹಲವು ರೀತಿ ಸ್ವತಃ ಅಧ್ಯಯನ ಮಾಡಿದ್ದಾರೆ. ೭೦೦ಕ್ಕೂ ಹೆಚ್ಚು ಶಿಲ್ಪಗಳನ್ನು ಹೊರ ದೇಶದಲ್ಲಿ ಮಾಡಿದ್ದಾರೆಂದು ಹೇಳಲು ಹೆಮ್ಮೆಯಾಗುತ್ತಿದೆ.

ಬೇರೆ ಬೇರೆ ದೇಶಗಳಲ್ಲಿರುವ 'ಗಣೇಶ' ವಿಗ್ರಹಗಳ ಪ್ರತಿಕೃತಿ ಮಾಡಿ, ಪ್ರದರ್ಶನ ಮ ಾಡಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಶಿಲ್ಪಕ್ಕಾಗಿ ಬೇಕಾಗುವ ಮಾಧ್ಯಮಗಳ ತೊಂದರೆಯ ಬಗ್ಗೆ ಇವರಿಗೆ ತಿಳಿದಿದೆ, ಅದನ್ನು ಪರಿಹರಿಸುವ ಮಾರ್ಗಕಂಡುಕೊಳ್ಳಬೇಕೆಂಬ ತವಕ ಕೂಡ ಇವರಿಗಿದೆ. ಮತ್ತೊಂದು ಮಹತ್ತರ ಸಲಹೆ ಇವರು ಕೊಟ್ಟಿರುವುದೆಂದರೆ, ಪ್ರೌಢ ಶಿಕ್ಷಣ ಪದ್ಧತಿಯಲ್ಲಿ ಶಾಸ್ತ್ರೀಯ ಸಂಗೀತವನ್ನು ಐಚ್ಛಿಕವಾಗಿ ಕಲಿಯುವ ಅವಕಾಶವಿರುವಂತೆ, ಶಿಲ್ಪಕಲೆಯನ್ನೂ ಕಲಿಸುವ ಪ್ರಯತ್ನ ಮಾಡಬೇಕು. ಇದರಿಂದ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಸಂಪ್ರದಾಯ ಶಿಲ್ಪಗಳ ಬಗ್ಗೆ ತಿಳುವಳಿಕೆ ಮೂಡಿ, ಆಸಕ್ತಿ ಬೆಳೆದು, ಮುಂದೆ ವಿಶ್ವವಿದ್ಯಾಲಯಗಳಿಗೂ ಮುಂದೆ ಇದನ್ನು ಉದ್ಯೋಗವನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಇವರು ಮಾಡಿರುವ ಹೊಯ್ಸಳ ಶೈಲಿಯ "ಸೂರ್ಯ"

ಶಿಲ್ಪದ್ದು ಒಂದು ವಿಶೇಷ ಅಧ್ಯಯನ. ಹೊಯ್ಸಳರ ಕಾಲದಲ್ಲಿ ರಚಿತವಾದ 'ಸೂರ್ಯ' ಈಗ ಲಂಡನ್ನಿನ ಬ್ರಿಟೀಷ್ ಸಂಗ್ರಹಾಯದಲ್ಲಿದೆ. ಭಟ್‌ರವರು ಅಲ್ಲಿಹೋದಾಗ ಅವರ ಛಾಯಾಚಿತ್ರ ತೆಗೆದುಕೊಂಡು ಬಂದು ಭಾರತಕ್ಕೆ ಬಂದ ಮೇಲೆ ಅದರ ಪ್ರತಿಕೃತಿ ಮಾಡಿದರು. ಇದನ್ನು Fabrican Exhibition System ನವರಾದ ಶ್ರೀ ಮಂಜುನಾಥ್ ಎಂಬುವರ ಸಂಗ್ರಹದಲ್ಲಿ, ಬೆಂಗಳೂರಿನಲ್ಲೇ ಇದೆ. ದೇಶದಿಂದ ಹೊರಗೆ ಹೋದ ಕೃತಿಯ ಪ್ರತಿಕೃತಿ ಮಾಡಿ ದೇಶದಲ್ಲೇ ಉಳಿಸಿದ ಧನ್ಯತಾ ಭಾವ ಅವರಿಗಿದೆ.

೧೩. **ಸೂರಾಲ್ ವೆಂಕಟರಮಣಭಟ್ ಮತ್ತು ಶ್ರೀಮತಿ ರತ್ನಾ ಭಟ್**, ಬೆಂಗಳೂರು : ಶಿಲ್ಪ ದಂಪತಿಗಳೆಂದೇ ಕರೆಯುವ ಇವರಿಬ್ಬರ ಸಾಧನೆಯನ್ನು ಒಟ್ಟಿಗೆ





ಹೇಳುವುದೇ ಸೂಕ್ತವೆನಿಸಿತು. ಶಿಲ್ಪ ಕಲಿಯುವಾಗಿನಿಂದ, ಪರಸ್ಪರ ಪರಿಚಯವಿದ್ದು, ಪ್ರೇಮಿಸಿ, ಮದುವೆಯಾಗಿ, ಶಿಲ್ಪಕಲೆಗೇ ತಮ್ಮ ಅರ್ಪಿಸಿಕೊಂಡ ಇವರು ಎಲ್ಲ ಕೆಲಸಗಳೂ ಒಟ್ಟಿಗೆ ಮಾಡುತ್ತಾರೆ.

ಉಡುಪಿ ಜಿಲ್ಲೆಯ ಸೂರಾಲ್‌ನಲ್ಲಿ ಜನಿಸಿದ ವೆಂಕಟರಮಣಭಟ್, ವೇದಾಧ್ಯಯನ ಮಾಡಿ, ಸಂಸ್ಕೃತ ಪಂಡಿತರಾಗಬೇಕಿದ್ದ ವೆಂಕಟರಮಣಭಟ್, ಆ ವೃತ್ತಿಯನ್ನು ಮಾಡಲು ಇಷ್ಟವಿಲ್ಲದೆ, ಮೈಸೂರಿಗೆ ಬಂದು ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಶಿಲ್ಪಕಲೆಯ ತರಬೇತಿಯನ್ನು ೩ ವರ್ಷಪಡೆದು, ಮದ್ರಾಸಿಗೆ ಉನ್ನತ ಶಿಕ್ಷಣಕ್ಕಾಗಿ ತೆರಳಿ ಕೆಲಕಾಲ ಕಲಿತರು. ಮುಂದೆ ೧೯೮೩ರಲ್ಲಿ ಶ್ರೀ ವಾದಿರಾಜರು ಕೇಂದ್ರ ಕರಕುಶ ಮಂಡಲಿಯಿಂದ ಪಡೆದ ೩ ವರ್ಷ ತರಬೇತಿ ಯೋಜನೆ ಸೇರಿದರು. ಅನಂತರ ಕೆನರಾ ಬ್ಯಾಂಕಿನ 'ಕೌಶಲ್ಯ' ಸೇರಿ, ಮರದ ಕೆತ್ತನೆ ವಿಭಾಗಕ್ಕೆ ಸೇರಿದ ಶ್ರೀಮತಿ ರತ್ನ ಅವರ ಪರಿಚಯವಾಗಿ ಅವರನ್ನೇ ಮದುವೆಯಾದರು.

ಅಲ್ಲಿಂದಾಚೆಗೆ ಶಿಲ್ಪ ದಂಪತಿಗಳ ಕಾಯಕ ಪ್ರಾರಂಭವಾಯಿತು. 'ಕದಂಬ ಶಿಲ್ಪ ಶಾಲೆ' ಪ್ರಾರಂಭಿಸಿ, ಕಲಿಸುವುದಕ್ಕಿಂತ, ಸ್ವಲ್ಪ ಕಲಿತ ಯುವ ಶಿಲ್ಪಿಗಳನ್ನು ಸೇರಿಸಿಕೊಂಡು ಹಲವಾರ ಶಿಲ್ಪಗಳನನು ರಚಿಸುತ್ತಾ "ಕಲಿಕೆ-ಗಳಿಕೆ" ಎರಡನ್ನೂ ಸಾಧಿಸಿದರು. ೧೯೯೮ರಿಂದ ಅವರು ಮಾಡಿದ ಪ್ರಮುಖ ಶಿಲ್ಪಗಳು ಅಮೆರಿಕದ ಕನೆಕ್ಟಿಕಟ್, ಲಾಸ್‌ವೇಗಾಸ್, ಮಿಲ್ವಾಕಿ, ಲೆಬೆನಾನ್ ರಾಜ್ಯಗಳಲ್ಲಿ ದೇವಾಲಯಗಳಲ್ಲಿ ಪ್ರತಿಷ್ಠಾಪನೆಗೊಂಡಿದೆ. ೧೮ ಅಡಿ, ೧೩ ಅಡಿಯಿಂದ ಹಿಡಿದು ೩ ಅಡಿಯವರೆಗೆ ದೇವಾಲಯಕ್ಕೆ ಬೇಕಾದ ಸತ್ಯ ನಾರಾಯಣ, ದೇವಿ, ಗಣೇಶ, ನವಗ್ರಹ ಇತ್ಯಾದಿಗಳನ್ನು ಮಾಡಿ ರಫ್ತು ಮಾಡಿದರು. ಇಷ್ಟೆಲ್ಲಾ ದೊಡ್ಡ ಕೆಲಸಗಳನ್ನು ಮಾಡುವ ವೆಂಕಟರಣ ಭಟ್ ಹಿಂದೆ ಒಂದು ಶಿಲ್ಪಗಳ ದಂಡೇ ಇದೆ ಯೆನ್ನಬೇಕು. ಇತ್ತೀಚೆಗೆ ತಮ್ಮ ಶಿಲ್ಪಿಗಳ ಸಮೂಹದಿಂದ ಕನಕಪುರ ರಸ್ತೆಯ 'ಅಗರ' ಎಂಬುವಲ್ಲಿ ಒಂದು ಹೊಯ್ಸಳ ಶೈಲಿಯ ಏಕಕೂಟ ದೇವಾಲಯವನ್ನು ನಿರ್ಮಾಣ ಮಾಡಿದ್ದಾರೆ.

ಶ್ರೀಮತಿ ರತ್ನ ತಿಪಟೂರಿನ ಅಣಪನ ಹಳ್ಳಿಯಲ್ಲಿ ಪಿ.ಯು.ಸಿ.ವರೆಗೆ ಓದಿ ತಿಪಟೂರಿನಲ್ಲಿ ಪದವಿ ಪಡೆದು, ಕೆಲಸ, ಅರಸಿಕೊಂಡು ಬೆಂಗಳೂರಿಗೆ ಬಂದಾಗ, ಅವರಿಗೆ ಸಿಕ್ಕ ಅವಕಾಶ ಕೌಶಲ್ಯದ ಮರದ ಕೆತ್ತನೆ ವಿಭಾಗದಲ್ಲಿ ಕಲಿಯುವ ಅಪರೂಪದ ಅವಕಾಶ. ಶ್ರೀಯುತ ಶ್ಯಾಮಾಚಾರ್ಯರಿಂದ ೨ ವರ್ಷ ತರಬೇತಿ ಪಡೆದು, ಅಲ್ಲಿಯೇ ಮುಂದು ವರೆಯುತ್ತಿದ್ದಾಗಲೆ ವೆಂಕಟರಮಣ ಭಟ್‌ರನ್ನು ವಿವಾಹವಾಗಿದ್ದು.

ಹೀಗೆ ಶಿಲ್ಪ ಮೂಲಕ ಒಂದಾದ ಈ ದಂಪತಿಗಳು ಶಿಲ್ಪವೆ 'ತಮ್ಮ ಕಾಯಕ', ಗುರಿ ಎಂದು ನಂಬಿ, ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾ ಕದಂಬ ಶಾಲೆಯನ್ನು ನೆಡೆಸಿಕೊಂಡು ಬರುತ್ತಿದ್ದಾರೆ. ಇವರ ಸಾಧನಗೆ ಗರಿ ಮೂಡಿದಂತೆ ಇತ್ತೀಚೆಗೆ ಇವರು ಕಟ್ಟಿದ ಹೊಯ್ಸಳ ಶೈಲಿಯ ದೇವಾಲಯ ಸಾಕ್ಷಿಯಾಗಿದೆ.

ಕರ್ನಾಟಕದ ತುಂಬ ನಿರ್ಮಾಣವಾಗುತ್ತಿರುವ ಚೋಳ ಶೈಲಿ ದೇವಾಲಯಗಳು ತಮಿಳುನಾಡಿನ ಶಿಲ್ಪಗಳಿಂದ ರಚಿತವಾಗುತ್ತಿದೆ. ಇದಕ್ಕೆ ಕಾರಣ ಕನ್ನಡ ನಾಡಿನಲ್ಲಿ ವಾಸ್ತು ಶಿಲ್ಪವನ್ನು ಬೆಳೆಸುವ ಯಾವ ಪ್ರಯತ್ನವನ್ನೂ ಮಾಡದಿರುವದು. ಈ ಪರಿಸ್ಥಿತಿಯನ್ನು ಗಮನಿಸಿದ ಈ ದಂಪತಿಗಳ ಮನದಲ್ಲಿ ಕನ್ನಡ ನಾಡಿನದೇ ಶೈಲಿಯಾದ ಹೊಯ್ಸಳ ದೇವಾಲಯ ಏಕೆ ಮಾಡ ಬಾರದು ಎಂದು ಯೋಚಿಸಿ ಅದಕ್ಕಾಗಿ ಅಧ್ಯಯನ ಪ್ರಾರಂಭಿಸಿದರು. ಸತ್ ಸಂಕಲ್ಪಗಳಿಗೆ ದೈವ ಸಹಾಯ ಇದ್ದೇ ಇರುತ್ತದೆ ಎಂಬುದಕ್ಕೆ ಆ ದೇವಾಲಯ ರಚಿಸುವ ಅವಕಾಶವೂ ಸಿಕ್ಕಿತು. ಸಿಕ್ಕ



ಶ್ರೀ ವೆಂಕಟರಮಣಭಟ್ ಮತ್ತು ಶ್ರೀಮತಿ ರತ್ನಾಭಟ್ ನಿರ್ಮಿಸಿದ ಹೊಯ್ಸಳ ದೇವಾಲಯ, ಅಗರ, ಬೆಂಗಳೂರು


ಅವಕಾಶವನ್ನು ಬಳಸಿಕೊಂಡು ಹೊಯ್ಸಳ ದೇವಾಲಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಸಾಹಸದ ಕೆಲಸ ಮಾಡಿ, ಎಷ್ಟೋ ವರ್ಷಗಳ ಮೇಲೆ ಕರ್ನಾಟಕದ್ದೇ ಶೈಲಿಯ ದೇವಾಲಯ ನಿರ್ಮಿಸಿ ವಾಸ್ತು ಶಿಲ್ಪಿಗಳಾದರು. ಈ ಹೊಯ್ಸಳ ದೇವಾಲಯ ನಿರ್ಮಾಣ, ಈ ದಂಪತಿಗಳ ನಿರ್ದೇಶನದಲ್ಲಿ ಬಿಡದಿಯಿಂದ ತರಬೇತಿ ಪಡೆದ ಶಿಲ್ಪಿಗಳಿಂದ ನಡೆಯಿತು. ಅವರುಗಳು ಮಾಡಿರುವ ಕೆಲಸ ಮೆಚ್ಚತಕ್ಕಂತಹುದು. ಅವರು, ೧. ಪ್ರದೀಪ್ ಕುಮಾರ್, ೨. ಶಾಂತಗೌಡ, ೩. ನರೇಶ್ ಕುಮಾರ್, ೪. ಸದಾನಂದ, ೫. ಎಂ. ಜಿನಾದಂತ. ೬. ಎಂ.ಎಸ್. ನಾಗರಾಜ್, ೮. ಸಂತೋಷ್ ಆಚಾರ್ಯ, ೯. ಸಿ.ಸಿ. ವಿನೋದ ಕುಮಾರ್ ಮತ್ತು ೧೦ ವಾಸುದೇವ ಆಚಾರ್ಯ.

೩೦ ವರ್ಷ ವಯಸ್ಸಿಗಿಂತ ಕಿರಿಯರಾದ ಈ ತರುಣ ಶಿಲ್ಪಿಗಳು ಉತ್ಸಾಹಿಗಳು, ಅಧ್ಯಯನಾಸ್ತಕರು. ಶಿಲ್ಪಕಲೆಯನ್ನೇ ಆರಾಧಿಸುತ್ತ ಅದರಲ್ಲಿ ಪರಿಣತೆ ಪಡೆದು ಖ್ಯಾತಿಗಳಿಸ ಬೇಕೆಂಬ ಹೆಬ್ಬಯಕೆ ಹೊತ್ತವರು.

೧೪. **ಅಶೋಕ ಗುಡಿಗಾರ್**, ಬಿಡದಿ :



ಪ್ರಸಿದ್ಧ ಸೊರಬಸಾಗರದ ಗುಡಿಗಾರರ ಮನೆತನದಲ್ಲಿ ಜನಿಸಿದ ಅಶೋಕ್ ಸ್ಲೇಟು ಬಳಪ ಹಿಡಿಯುವುದಕ್ಕೆ ಮೊದಲೇ ಚೀರ್ಣ ಕೊಡತಿಗಳನ್ನು ಹಿಡಿದಿರಬಹುದು. ಸುಮಾರು ೧೩ ವರ್ಷದ ಬಾಲಕ ವಾದಿರಾಜರಲ್ಲಿ ಕಲಿಯಲು ಬಂದಾಗ, ೧ ಇಂಚು ಎತ್ತರ ಚಿಕ್ಕ ಗಣೇಶಗಳನ್ನು ಗಂಧದ ಮರದಲ್ಲಿ ಮಾಡುತ್ತ, ಅದರಿಂದಲೇ ಹಣವನ್ನೂ ಗಳಿಸುತ್ತಿದ್ದರು. ಎಷ್ಟು ಸೂಕ್ಷ್ಮ ಕೆತ್ತನೆಯನಾದರೂ ಮಾಡುವ ಆಸಕ್ತಿ. ಕೆಲಸ ಮಾಡಲು ಪ್ರಾರಂಭಿಸಿದರೆ ಹಗಲು ರಾತ್ರಿಗಳ ಪರಿವೆಯೇ ಇಲ್ಲದೆ ಕೆಲಸ ಮಾಡಿ ಮುಗಿಸುತ್ತಿದ್ದರು. ವಾದಿರಾಜರಲ್ಲಿ ಬಂದಮೇಲೆ ಸಂಪ್ರದಾಯ ಶೈಲಿಗಳ ಅಧ್ಯಯನದಲ್ಲಿ ಆಸಕ್ತಿ ಬೆಳೆಸಿಕೊಂಡು ಚಿಕ್ಕವಯಸ್ಸಿಗೆ ಅಪಾರ ಅನುಭವವನ್ನು ಪಡೆದರು. ಸಾಮಾನ್ಯವಾಗಿ ಅಭ್ಯರ್ಥಿಗಳನ್ನು ಆರಿಸಿ ಪ್ರಶಸ್ತಿಕ ಕೊಡುವುದು ವಾಡಿಕೆ.ಆದರೆ ಒಬ್ಬ ಕಲಾವಿದನಿಗಾಗಿಯೇ ಪ್ರಶಸ್ತಿಯನ್ನು ಪ್ರಾರಂಭಿಸುವುದೆಂದರೆ, ವ್ಯಕ್ತಿಯ ವಿಶೇಷತೆಯೇ ಕಾರಣವಾಗುತ್ತದೆ. ಅಂತಹ ವಿಶೇಷ ಶಿಲ್ಪಿ



ಅಶೋಕ್ ಗುಡಿಗಾರರ 'ಅಮರಾವತಿ ಸ್ತೂಪದ ಪ್ರತಿಕೃತಿ'
ಬುದ್ಧನ ಹಲ್ಲನ್ನು ಇಡಲು ಮಾಡಿಸಿರುವುದು, ಗುಂಟೂರಿನಲ್ಲಿದೆ.

ಅಶೋಕ್. ಕ್ರಾಫ್ಟ್ಸ್ ಕೌನ್ಸಿಲ್ ಆಫ್ ಕರ್ನಾಟಕದವರು 'ಶ್ರೀಮತಿ ಕಮಲಾದೇವಿ ಛಟ್ಟೋಪಾಧ್ಯಾಯ ವಿಶ್ವ ಕರ್ಮ' ಪ್ರಶಸ್ತಿಯನ್ನು ೨೫ ವರ್ಷದೊಳಗಿನ ಕಿರಿಯ ಪ್ರತಿಭಾವಂತ ಶಿಲ್ಪಿಗಳಿಗೆಂದು ಆಯೋಜಿಸಿ, ಮೊದಲ ಪ್ರಶಸ್ತಿಯನ್ನು ಅಶೋಕ್ ಗುಡಿಗಾರ್‌ಗೆ ಕೊಟ್ಟು ದೊಡ್ಡ ಸಮಾರಂಭಮಾಡಿ, ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀರಾಮಕೃಷ್ಣ ಹೆಗ್ಗಡೆಯವರಿಂದ ಕೂಡಿಸಿದರು. ಆಗ ಅಶೋಕ್‌ಗೆ ಇನ್ನೂ ೨೧ ವರ್ಷ.

ಅಧ್ಯಯನದಲ್ಲೇ ಹೆಚ್ಚು ಆಸಕ್ತಿ ಹೊಂದಿದ ಅಶೋಕ ಅವರಿಗೆ ಅವಕಾಶಗಳೂ ದೊರೆತದ್ದರಲ್ಲಿ ಆಶ್ಚರ್ಯವಿಲ್ಲ. ಸಮುಮಾರು ೧೦ ವರ್ಷಗಳ ಕಾಲ ವಾದಿರಾಜರಲ್ಲಿ ಕಲಿತ ಮೇಲೆ, ಭಾರತ ಸರ್ಕಾರವು ಕಲಿಯುವರಿಗಾಗಿಯೇ ನೀಡುವ ಕಿರಿಯ ಮತ್ತು ಹಿರಿಯ ಫೆಲೋಶಿಪ್‌ಗಳನ್ನು ಪಡೆದು ಚಾಲುಕ್ಯ - ಹೊಯ್ಸಳ ಶೈಲಿಗಳ ಅಧ್ಯಯನ ಮಾಡಿದ್ದಲ್ಲದೆ, ಬೇಡಿಕೆಗಳನ್ನೂ ಸಂಪ್ರದಾಯ ಶೈಲಿಗಳಲ್ಲೇ ರಚಿಸುತ್ತಾ, ವಿಶಿಷ್ಟ ಶಿಲ್ಪಿ ಕಲಾವಿದರಾಗಿ ಹೊರಹೊಮ್ಮಿದ್ದಾರೆ. ಕೆನರಾ ಬ್ಯಾಂಕಿನ ಕೆ.ಪಿಜೆ. ಪ್ರಭು ತರಬೇತಿ ಕೇಂದ್ರದಲ್ಲಿ ಕೆಲಕಾಲ ಶಿಕ್ಷಕರಾಗಿದ್ದು ಈಗ ಸ್ವತಂತ್ರವಾಗಿ ಶಿಲ್ಪ ರಚನೆಯಲ್ಲಿ ತೊಡಗಿದ್ದಾರೆ. ಇಂದು ಅಶೋಕ ೨೩ ಅಡಿ ಎತ್ತರದ ಕಲ್ಲಿನ ಗಣೇಶ, ೩೫ ಅಡಿ ಎತ್ತರದ ಆಂಜನೇಯ, ಮತ್ತು ಹಲವಾರು ಬೃಹತ್ ಶಿಲ್ಪಗಳ ರಚನೆಯಲ್ಲಿ ತೊಡಗಿದ್ದಾರೆ. ಅವರು ಗಳಿಸಿರುವ ಅನುಭವವೂ ಅಪಾರ, ರಚಿಸಿರುವ ಶಿಲ್ಪಗಳಸಂಖ್ಯೆಯೂ ಅಪಾರ. ರಾಷ್ಟ್ರಪ್ರಶಸ್ತಿ, ಭಾರತ ಸರ್ಕಾರದ ಫೆಲೋಶಿಪ್‌ಪದವಿಗಳು ಅಶೋಕ್ ಅವರಿಗೆ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ವಹಿಸಲು ಅನುಕೂಲವಾಗಿದೆ. ಬಹಳ ಚಿಕ್ಕ ವಯಸ್ಸಿನಲ್ಲೇ ಇಷ್ಟೊಂದು ಅಧ್ಯಯನಮಾಡಿ, ದೊಡ್ಡ ದೊಡ್ಡ ಶಿಲ್ಪಗಳನ್ನು ಮಾಡುತ್ತ ಅಪಾರ ಸಂಖ್ಯೆಯ ಕಿರಿಯ ಶಿಲ್ಪಿಗಳಿಗೂ ಮಾರ್ಗದರ್ಶನ ಮಾಡುತ್ತ, ಇರುವ ಇವರಿಗೆ ಉಜ್ವಲ ಭವಿಷ್ಯವಿದೆ. ಇಂಗ್ಲೆಂಡ್, ಅಮೆರಿಕ ಪ್ರವಾಸಗಳನ್ನು ಮಾಡಿ, ಶಿಲ್ಪಗಳ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಗಳನ್ನು ಕೊಟ್ಟು ಬಂದಿರುವ ಹೆಗ್ಗಳಿಕೆ ಇವರದು.



ಅಮರಾವತಿ ಸ್ತೂಪದ ಪ್ರತಿಕೃತಿಯ ನಿಕಟ ಚಿತ್ರ

ಇತ್ತೀಚೆಗೆಷ್ಟೆ ಶಿಲ್ಪಕಲಾ ಅಕಾಡಮಿಯ ನೆರವಿನಿಂದ ಕದಂಬ ಶಿಲ್ಪ ಶಿಬಿರವನ್ನೂ ಮಾಡಿ, ಅಧ್ಯಯನ ಮಾಡಿದ್ದಾರೆ.


೧೫. **ಶ್ಯಾಮ ಸುಂದರ ಭಟ್**, ಮೈಸೂರು : ನನ್ನ ಮನವಿಗೆ ಬಂದ ಅತ್ಯುತ್ತಮ ಪ್ರತಿಕ್ರಿಯೆ ಶ್ರೀ ಶ್ಯಾಮ ಸುಂದರ ಭಟ್



ಅವರದು. ಶಿಲ್ಪ ರಚಿಸುವುದರಿಂದ ಹಿಡಿದು, ಸಂಪ್ರದಾಯ ಶಿಲ್ಪಿಗಳ ಮಹತ್ವ, ಕೊನೆಗೆ ಶಿಲ್ಪಗಳಿಗೆ ಬೇಕಾದ ಕಲ್ಲುಗಳು ದೊರೆಯದಿರುವುದರ ಬಗ್ಗೆ ಬಹಳ ಸ್ಪಷ್ಟವಾಗಿ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಇದಕ್ಕೆ ಕಾರಣ ಇವರು ತಮ್ಮ ೬ನೇ ವಯಸ್ಸಿನಿಂದಲೇ ಸ್ವತಃ ಗುರುವಾಗಿ,



ಯೋಗನರಸಿಂಹ ಶಿಲ್ಪದ ನಿಕಟ ಚಿತ್ರಗಳು



ಜೇಡಿ ಮಣ್ಣಿನಲ್ಲಿ ಏನಾದರೂ ರಚಿಸುವುದು, ಚಿತ್ರ ಬಿಡಿಸುವುದು, ಇಂತಹ ಹವ್ಯಾಸಗಳಲ್ಲಿಯೇ ತೊಡಗಿ, ಜೀವನಕ್ಕಾಗಿಯೇ ಕಲೆಗಳ ಆಧಾರಪಡೆದು, ಒಂದೇ ಮನಸ್ಸಿನಿಂದ ಅಧ್ಯಯನ ಮಾಡಿದ್ದಾರೆ, ಮನೆಯಲ್ಲಿಯೇ ಕುಳಿತು ವೃತ್ತಿಗೆ ಬೇಕಾದಷ್ಟು ಓದು ಬರಹ ಕಲಿತಿದ್ದಾರೆ. ಅಂಗವೈಕಲ್ಯ ಅವರ ಕಲಿಯುವಿಕೆಗೆ, ಉತ್ಸಾಹ, ಆಸಕ್ತಿಗಳಿಗೆ ಎಂದೂ ತೊಡರಾಗಲಿಲ್ಲ.

ಕೆನ್ ಕಲಾಶಾಲೆಯಿಂದ ಚಿತ್ರಕಲೆಯ ಅಭ್ಯಾಸ ಮಾಡಿ, ಶ್ರೀ ವಾದಿರಾಜ್ ಮತ್ತು ಶ್ರೀ ಎಸ್.ಕೆ. ರಾಮಚಂದ್ರರಾಯರ ಪ್ರೋತ್ಸಾಹ ಮಾರ್ಗದರ್ಶನದಿಂದ ಶಿಲ್ಪಕಲೆಯನ್ನು ವೃತ್ತಿಯಾಗಿ ಮಾಡಿಕೊಂಡು, ಹಲವಾರು ಶೈಲಿಗಳಲ್ಲಿ ಶಿಲ್ಪಗಳನ್ನು ರಚಿಸುತ್ತಾ ಯಶಸ್ಸುಗಳಿಸಿದ್ದಾರೆ. ಧ್ಯಾನ ಶ್ಲೋಕದ ಆಧಾರದ ಮೇಲೆ ಕೃತಿ ರಚಿಸಿ, ಹೊಸ ಹೊಸ ಶಿಲ್ಪಗಳನ್ನು ಮಾಡುವುದೇ ಇವರ ವೈಶಿಷ್ಯ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಅಪರೂಪದ ಶಿಲ್ಪಗಳನ್ನು ಶಾಸ್ತ್ರ ಬದ್ಧವಾಗಿ, ಪ್ರಮಾಣ ಬದ್ಧವಾಗಿ ಮಾಡುವ ಅವಕಾಶ ಸಿಕ್ಕಿದೆ. ಇದು ಇವರ ಕಲ್ಪನಾ ಶಕ್ತಿಗೆ ಸಿಕ್ಕ ಪ್ರೋತ್ಸಾಹ. ಮೈಸೂರಿನಲ್ಲಿಯೇ ನೆಲೆಸಿರುವ ಇವರು, ಶಿಲ್ಪ ಕಲೆಯ ಭವಿಷ್ಯದ ಬಗ್ಗೆ ಬರೆದಿರುವ ಪತ್ರದ ಒಂದು ಭಾಗ.


"ಇಂತಹ ಸಂಪ್ರದಾಯ ಶಿಲ್ಪವನ್ನು ಮಾಡಲು ಅಗತ್ಯವಾಗಿ ಬೇಕಾಗಿರುವುದು ಉತ್ತಮವಾದ ಕಲ್ಲುಗಳು"

ಕಲ್ಲಿನ ಮಾಧ್ಯಮದಲ್ಲಿ ಮಾಡುತ್ತಿರುವ ಶಿಲ್ಪಿಗಳಿಗೆ ಆಗುತ್ತಿರುವ ಘೋರ ಅನ್ಯಾಯವೆಂದರೆ-ಕಲ್ಲಿನ ಗಣಿಗಳಿಂದ ಉತ್ತಮವಾಗಿರುವ, ಶಿಲ್ಪಗಳನ್ನು ಮಾಡಲು ಯೋಗ್ಯವಾಗಿರುವ ಕಲ್ಲುಗಳನ್ನು ಹಲಗೆಗಳನ್ನಾಗಿ ಮಾಡಿ ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಅವರಿಗೆ ಬೇಡವಾದ ಅಳಿದುಳಿದ ಕಲ್ಲುಗಳನ್ನು ಪಡೆಯಬೇಕಾಗಿದ್ದು, ಅದೂ ಕೂಡ ಬಹಳಷ್ಟು ಅಲೆದಾಡಿ ಸಿಗುತ್ತಿರುವುದು. ಈ ದುರಂತಕ್ಕೆ ಕಾರಣ ನಮ್ಮ ಸರ್ಕಾರ, ಶಿಲ್ಪಕಲಾವಿದರೊಂದಿಗೆ ಸ್ಪಂದಿಸದಿರುವುದು. ಅವರು ಉತ್ತಮ ಶಿಲ್ಪಗಳನ್ನು ಮಾಡಲು ಏನೇನು ಸಲಕರಣೆಗಳು ಬೇಕೆಂಬುದನ್ನು ಚಿಂತಿಸದಿರುವುದು, ಅಗತ್ಯವನ್ನು ಅರಿಯದಿರುವುದಾಗಿದೆ. ಹೀಗಾಗಿ ಕಲ್ಲುಗಳು ಬರಿದಾಗಿ ಶಿಲ್ಪಿಗಳು ಅಳಿವಿನತ್ತ ಸಾಗುತ್ತಿದ್ದಾರೆ. ಈ ರೀತಿ ಹಲಿಗೆಗಳಾಗಿ ಕತ್ತರಿಸಿ ವಿದೇಶಕ್ಕೆ ರಫ್ತಾಗುವುದನ್ನು ತಡೆಯದಿದ್ದಲ್ಲಿ "ಕಲ್ಲಿನ ಮೂರ್ತಿ ಶಿಲ್ಪ"ವೆಂಬುದು ಮುಂದೆ 'ಇತಿಹಾಸ' ಎಂದಷ್ಟೇ ಉಳಿಯಬಹುದು.

ಈ ಎಲ್ಲಾ ಕಾರಣಗಳಿಂದ ಶಿಲ್ಪಿ ತನ್ನ ಮುಂದಿನ ಕನಸುಗಳನ್ನು ಕಲ್ಪಿಸಿಕೊಳ್ಳುವುದು ಅತ್ಯಂತ ಕಷ್ಟಕರವಾಗಿದೆ. ಶಿಲ್ಪಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಕನ್ನಡಿ ಈ ಪತ್ರ.

೧೬. **ಶ್ರೀ ಶಿಲ್ಪಿ ಜ್ಞಾನೇಂದ್ರ**, ನಾಗಮಂಗಲ : ಕಂಚಿನ ಶಿಲ್ಪಕ್ಕೆ ಹೆಸರಾಗಿದ್ದ ಕಲಾಗ್ರಾಮ ನಾಗಮಂಗಲ. ಅದನ್ನು ನೋಡಿಬರಲು ಕಳೆದ ತಿಂಗಳಷ್ಟೇ ಹೋಗಿ ಬಂದಿದ್ದೆ. ಜೊತೆಗೆ ಜಿ.ಎಲ್. ಭಟ್‌ಕೂಡ ಇದ್ದರು. ಜ್ಞಾನೇಂದ್ರ ಅವರ ವಿಳಾಸ ಅಕಾಡಮಿಯಲ್ಲಿ ಸಿಕ್ಕಿದ್ದರಿಂದ ಅವರಲ್ಲಿಗೆ ಹೋದೆವು, ಮೂರು ನಾಲ್ಕು ಜನ ಹಿತ್ತಾಳೆ ತಗಡಿನಲ್ಲಿ ಯಾವುದೋ ದೇವಾಲಯಕ್ಕೆ ಕವಚ ಮಾಡುತ್ತಿದ್ದರು. ನಾಗಮಂಗಲದಲ್ಲಿ ಕೆಲವೇ ಕುಟುಂಬಗಳಿವೆಯೆಂದೂ, ದೇವಾಲಯಕ್ಕೆ ಬೇಕಾದ ಕೆಲಸಗಳನ್ನೇನೋ ಮಾಡುತ್ತೇವೆ. ಆದರೆ ಆದಾಯ ಅಷ್ಟೇನೂ ಹೇಳಿಕೊಳ್ಳುವಂತಿಲ್ಲ. ಆದರೂ ಜೀವನಕ್ಕೆ ತೊಂದರೆಯಿಲ್ಲದೆ ಒಂದು ರೀತಿ ತೃಪ್ತಿಯಿಂದಲೇ ಇದ್ದೇವೆನ್ನಬೇಕು ಎಂದು ಹೇಳಿದರು. ಅವರ ಅಂಗಡಿಯೆದುರಿಗೆ ಅಕಾಡಮಿಯ ಪ್ರಶಸ್ತಿ ಪಡೆದ ಶ್ರೀವರದಾಚಾರ್‌ಕೂಡ ಕೆಲಸ ಮಾಡುತ್ತಾ ಕುಳಿತಿದ್ದರು. ಹಿಂದಿನ ನಾಗಮಂಗಲ, ಕಂಚು ಪ್ರತಿಮೆಗಳನ್ನು ತುಂಬಾ ಚೆನ್ನಾಗಿ ಮಾಡುತ್ತಿದ್ದ ಸ್ಥಳ ಎಂಬ ಚಿತ್ರ ಮನಸ್ಸಿನಲ್ಲಿಟ್ಟುಕೊಂಡು ಹೋದರೆ ನಿರಾಸೆಯಾಗುವುದು ಖಂಡಿತ. ಹಲವಾರು ಕಾರಣಗಳಿಂದ ಹಿರಿಯ ಶಿಲ್ಪಿಗಳು ಬೆಂಗಳೂರು ಮೈಸೂರುಗಳಿಗೆ ಹೋಗಿ ನೆಲೆಸಿದ್ದರಿಂದ ಇಲ್ಲಿ ಊರು ಬಿಡಲಾಗದ ಕುಟುಂಬಗಳ ಮಾತ್ರ ಇಲ್ಲಿವೆ, ಎಂದು ನೊಂದು ನುಡಿದರು ಜ್ಞಾನೇಂದ್ರ. ಸರಕಾರದ ಗಮನ ನಮ್ಮೂರಿನ ಮೇಲ್ಲ, ಕೆಲವು ಹಿರಿಯ ಶಿಲ್ಪಿಗಳಿದ್ದಾರೆ ಅವರಿಗೆ ಮಾಸಾಶನವಾದರೂ ಸಿಕ್ಕಿದ್ದರೆ ಚೆನ್ನಾಗಿತ್ತು ಎಂದು ಹೇಳಿದರು.

೧೭. **ಶ್ರೀ ಎಂ. ರಾಮಮೂರ್ತಿ**, ಬೆಂಗಳೂರು : ಬೆಂಗಳೂರಿನ ಕನ್ನಡ ಭವನಕ್ಕೆ ಕಾಲಿಡುತ್ತಿದ್ದಂತೆ ಎದುರಿನ ಗೋಡೆಯ ಮೇಲೆ ಅನೇಕ ಸಂಪ್ರದಾಯ ಶಿಲ್ಪಗಲನ್ನು ಜೋಡಿಸಿ ಮಾಡಿರುವ ಒಂದು ಶಿಲ್ಪ ಸಮೂಹ ಕಾಣುತ್ತದೆ. ಆ ಶಿಲ್ಪಗಳನ್ನು ಮಾಡಿ ಈ ರೀತಿ ಜೋಡಿಸಿ ಗೋಡೆಯನ್ನಲಂ ಕರಿಸಿದ ಕಲಾವಿದ ಶ್ರೀ ರಾಮ ಮೂರ್ತಿಯವರು. ಸಂಪ್ರದಾಯ ಶಿಲ್ಪಗಳಿಂದ ಹೊಸ ಜೋಡಣೆ ಮಾಡಿ ಆಧುನಿಕ ಅವಶ್ಯಕತೆಗಳಿಗೆ ಬಳಸಬಹುದಾದ ರೀತಿಯನ್ನು ತೋರಿಸಿಕೊಟ್ಟಿದ್ದಾರೆ. ಸಂಪ್ರದಾಯ ಶಿಲ್ಪಿಗಳು ಈಗಿನ



ಸಂದರ್ಭಗಳಿಗೆ ಒಗ್ಗುವುದಿಲ್ಲ ಎಂಬ ಅಪವಾದಕ್ಕೆ ಸವಾಲಾಗಿ ನಿಂತಿರುವವರು ರಾಮಮೂರ್ತಿ.

ವಂಶದ ಕಲೆಯಾಗಿ ಬಂದ ಮರದ ಕೆತ್ತನೆಯನ್ನೂ ಸಂಪ್ರದಾಯ ಶೈಲಿಗಳನ್ನೇ ಅಭ್ಯಾಸಮಾಡಿ, ಅದರ ಹಿರಿಮೆಯನ್ನು ಅರಿತುಕೊಂಡ ರಾಮಮೂರ್ತಿಯವರಿಗೆ ತಂದೆಯೇ ಮೊದಲ ಗುರು. ಅಖಿಲ ಭಾರತ ಕರಕುಶಲ ಮಂಡಲಿಯವರು ನೀಡುವ ಮರದ ಕೆತ್ತನೆಯ ತರಬೇತಿ ಪಡೆದು ಅಲ್ಲಿಯೇ ೨೧ ವರ್ಷಗಳ ಕಾಲ ಕೆಲಸ ಮಾಡಿ ಸ್ವಇಚ್ಛೆಯಿಂದ ನಿವೃತ್ತಿ ಪಡೆದು, ಸ್ವತಂತ್ರವಾಗಿ ಶಿಲ್ಪಕಲೆಯನ್ನೇ ವೃತ್ತಿಯಾಗಿಸಿಕೊಂಡರು. ಡಿಸೈನ್ ಸೆಂಟರಿನಲ್ಲಿದ್ದ ಸಮಯದಲ್ಲಿ ಬೇರೆ ಬೇರೆ ಪಟ್ಟಣಗಳಿಗೆ ಭೇಟಿ ನೀಡಿ, ಕಲಿಯುವ ಆಸಕ್ತರಿಗೆ ಕಲಿಸಿ, ಕಲಿತವರಿಗೆ ಹೇಗೆ ಅಧಿಕ ಉತ್ಪನ್ನ ಮಾಡಿ, ಸರ್ಕಾರ ನೀಡುವ ಸೌಲಭ್ಯಗಳನ್ನು ಹೇಗೆ ಬಳಸಿಕೊಳ್ಳುವುದೆಂದು ತಿಳಿಸುತ್ತ, ಸಂಪ್ರದಾಯ ಶೈಲಿಗಳ ಮಹತ್ವ, ಗುರು-ಶಿಷ್ಯ ಪರಂಪರೆಗೆ ಇರುವ ಉಜ್ವಲ ಭವಿಷ್ಯ ಇದೆಲ್ಲವನ್ನೂ ತಿಳಿಸುತ್ತ, ಸ್ವತಃ ಅನುಭವ ಪಡೆಯುತ್ತ, ಶಿಲ್ಪಕಲೆಯಲ್ಲೇ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಂಪ್ರದಾಯ ಕಲೆಗಳನ್ನು ಬೆಳೆಸುವ ದೃಷ್ಟಿಯಿಂದ ಕಿರಿಯರಿಗೆ ಕಲಿಸಲು ಪರಿಪೂರ್ಣವಾದ ಅನುಭವ ನೀಡಬಹುದಾದಂತಹ ಶಾಲೆಯನ್ನು ತೆರೆಯಬೇಕೆನ್ನುವುದು ಇವರ ಆಸೆ. ಅದಕ್ಕಾಗಿ ಪ್ರಯತ್ನವನ್ನೂ ಪಡುತ್ತಿದ್ದಾರೆ. ಕಲಾವಿದರಾಗಿ ಇಂತಹ ಕೆಲಸಗಳನ್ನು ಮಾಡಿ ಸಮಾಜದಲ್ಲಿ ಒಂದು ಹೆಮ್ಮೆಯ ಸ್ಥಾನ ಪಡೆಯಬೇಕೆಂಬ ಕನಸಿದೆ. ತಮ್ಮ ಒಬ್ಬನೇ ಮಗನನ್ನು ಶಿಲ್ಪಕಲೆಗಾಗಿಯೇ ಬೆಳೆಸುತ್ತಿದ್ದಾರೆ.

ಸಂಪ್ರದಾಯ ಶೈಲಿಗಳ ಶಿಲ್ಪಗಳು ಎಂದೆಂದೂ ಯಾವ ಸಮಾಜಕ್ಕಾದರೂ ಪ್ರಸ್ತುತವೆನಿಸುವ ಕಲೆ ಅದು ಜೀವಂತಕಲೆ, ಅದನ್ನು ಎಲ್ಲರೂ ಸುಲಭವಾಗಿ ತಿಳಿದುಕೊಂಡು ಸಂತೋಷಪಡುವ ಕಲೆ ಎನ್ನುತ್ತಾರೆ. ಸಮಕಾಲೀನ ದೃಷ್ಟಿಯಿಂದಲೂ ಶಿಲ್ಪಕಲೆಯನ್ನು ಅಭ್ಯಾಸಮಾಡಿ, ಸಂಪ್ರದಾಯ ಮತ್ತು ಆಧುನಿಕತೆಯ ಮೇಳವೇ ಶ್ರೀ ರಾಮಮೂರ್ತಿಯವರೆಂದರೆ ತಪ್ಪಾಗಲಾರದು.

೧೮. **ಶ್ರೀ ಮಾನಯ್ಯ ಬಡಿಗೇರ :** ಗುಲ್ಬರ್ಗಾದ ನಾಡೋಜ ನಾಗಣ್ಣ ಶಿಲ್ಪಿಯವರ ಪುತ್ರ ಮಾನಯ್ಯ ಬಡಿಗೇರ. ತಂದೆಯಿಂದ ಮರದ ಶಿಲ್ಪ ಕಲಿಯುವುದರ ಜೊತೆಗೆ ಚಿತ್ರಕಲೆಯಲ್ಲಿ ಆರ್ಟ್ ಮಾಸ್ಟರ್ (ಎ.ಎಚ್) ಹಾಗೂ ಬಿ.ಎಫ್.ಎ ಪದವಿಪಡೆದು ಶರಣ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಗುಲ್ಬರ್ಗಾ ವಿಭಾಗದಲ್ಲಿ ನಡೆಯುವ ಪ್ರದರ್ಶನ, ಶಿಲ್ಪಶಿಬಿರಗಳಿಗೆಲ್ಲಾ ಸಂಚಾಲಕರಾಗಿ, ಸಾಕಷ್ಟು ಅನುಭವವನ್ನೂ ಪಡೆಯುತ್ತಿದ್ದಾರೆ. ತಮ್ಮ ವಂಶದ ಕಲೆಯಲ್ಲಿದ ಕಂಚು ಶಿಲ್ಪದ ಕಲೆಯನ್ನು ತಮ್ಮ ಮಿತ್ರ ಅಂತರಾಷ್ಟ್ರೀಯ ಖ್ಯಾತಿ ಸಂಪ್ರದಾಯ ಚಿತ್ರಕಲಾವಿದರಾದ ಶ್ರೀ ವಿಜಯಹಾಗರ ಗುಂಡಿಗಿಯವರಿಂದ ಕಲಿತೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇವರು ರಚಿಸಿರುವ ಕಂಚಿನ "ವೀರಭದ್ರ, ದಾಕ್ಷಾಯಣಿ ದಕ್ಷ ಬ್ರಹ್ಮ" ಶಿಲ್ಪ ಇವರ ಪ್ರತಿಭೆಗೆ ಸಾಕ್ಷಿಯಾಗಿದೆ.

ಉತ್ಸಾಹೀ ತರುಣರಾದ ಮಾನಯ್ಯ ಬಡಿಗೇರರು ರಂಗಸಜ್ಜಿಕೆ ಮುಂತಾದ ನಾಟಕಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು ಗುಲ್ಬರ್ಗಾದ ಸಾಂಸ್ಕೃತಿಕ ಕ್ಷೇತ್ರದಲ್ಲೂ ಸೇವೆಸಲ್ಲಿಸುತ್ತಿದ್ದಾರೆ. ಅವರ ಸುತ್ತಮುತ್ತಲಿನ ಗ್ರಾಮಗಳು, ತೋಟಗಾರಿಕೆ ಕೇಂದ್ರ, ಹೀಗೆ ಹತ್ತು ಹಲವು ಸಂಸ್ಥೆಗಳಿಗೆ ಬೇಕಾದ ಕಲಾಕೃತಿಗಳನ್ನು ರಚಿಸಿಕೊಟ್ಟು, ಅವರೆಲ್ಲರಿಂದ ಮೆಚ್ಚುಗೆ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ.

ಕಂಚು ಪ್ರತಿಮೆಗಳನ್ನು ಮಾಡುವಾಗ ಟೊಳ್ಳು ಪ್ರತಿಮೆಗಳನ್ನು ಮಾಡುವ ವಿಧಾನವೂ ಇವರಿಗೆ ತಿಳಿದಿದೆ. ಎರಕ ಮಾಡಿದ ಮೇಲೆ ನಕಾಶೆ ಬಿಡಿಸುವ ಕೆಲಸವನ್ನು ಮಾಡುವುದಿಲ್ಲ. ಎರಕ ಹೊಯ್ಯುವ ಜಾಣ್ಮೆಯನ್ನರಿತ ಮೇಣದಲ್ಲಿ ಮಾಡಿದ ಮೂಲಕೃತಿಗೆ ಸ್ವಲ್ಪವೂ ಕುಂದು ಬಾರದಂತೆ ಇರುವುದೇ ಇವರು ಸಿದ್ಧಿಸಿಕೊಂಡಿರುವ ವಿದ್ಯೆ.





ಮಾನಯ್ಯ ಬಡಿಗೇರರ ಕಂಚಿನ ಶಿಲ್ಪಗಳು

ಪ್ರತಿಭಾವಂತ ಕಿರಿಯರು

೧. **ಶ್ರೀ ಪಂಕಜಾಕ್ಷ :** ಬಿಡದಿಯ ಜೋಗರದೊಡ್ಡಿಯಲ್ಲಿ ತರಬೇತಿ ಪಡೆದ ಪ್ರತಿಭಾವಂತ ಶಿಲ್ಪಿ ಪಂಕಜಾಕ್ಷ. ಸಂಪ್ರದಾಯ ಶೈಲಿಗಳನ್ನೆಲ್ಲ ಕರಗತ ಮಾಡಿಕೊಂಡು 'ಶಿಲ್ಪ ಸೌಂದರ್ಯ' ಎಂದು ಪುಸ್ತಕವನ್ನು ಬರೆದಿದ್ದಾರೆ. ರ್‍ಯಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಪ್ರಶಸ್ತಿ ಪಡೆದವರಲ್ಲಿ ಮೊದಲಿಗರು.



ಪಂಕಜಾಕ್ಷ ರವರ ದಾರುಶಿಲ್ಪ ದಾನಶೂರ ಕರ್ಣ


೨. **ಶ್ರೀ ಗಣೇಶ್ ಮರೂರ್, ಬೆಳಗಾಂ :** ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಶೈಲೆಯಲ್ಲಿ ಗಂಧದ ಕೆತ್ತನೆಯ ವಿಭಾಗಕ್ಕೆ ಸೇರಿಸಿದಾಗ ನನಗೆ ಗುರುಗಳಾಗಿದ್ದವರು ಶ್ರೀ ವೆಂಕಪ್ಪ ಮತ್ತು ಗಣಪತಪ್ಪ ಎಂದು



ವಾದಿರಾಜರು ಯಾವಾಗಲೂ ತಮ್ಮ ಗುರುಗಳನ್ನು ನೆನೆಯುತ್ತಿದ್ದರು. ಇಬ್ಬರೂ ಶ್ರೀಗಂಧದ ಕೆತ್ತನೆಯಲ್ಲಿ ನಿಸ್ಸೀಮರು. ಬಹಳ ಸೂಕ್ಷ್ಮ ಹಾಗೂ ಸುಂದರ ಕೆತ್ತನೆಗಳನ್ನು ಮಾಡಿ, ಅರಮನೆಗೆ, ದೇಶ ವಿದೇಶಗಳಿಗೂ ಕಳುಹಿಸುತ್ತಿದ್ದರು. ಸೊರಬಾ ಸಾಗರದ ಗುಡಿಗಾರರಾದ ಇವರ ಕುಶಲತೆ, ನೈಪುಣ್ಯತೆ ಎಷ್ಟು ಹೆಚ್ಚಿನದಾಗಿತ್ತೆಂದರೆ ಅರಮನೆಯ ಅಲಂಕರಣಗಳಲ್ಲಿ ಇವರು ಮಾಡಿರುವ ಸೂಕ್ಷ್ಮ ಕೆಲಸಗಳನ್ನು ಇಂದಿಗೂ ಕಾಣಬಹುದು. ಅರಮನೆಗೆ ಕೆಲಸ ಮಾಡಿದ್ದರೆಂಬುದೇ ಒಂದು ಅಮೂಲ್ಯವಾದ ಪ್ರಶಸ್ತಿ. ಶ್ರೀ ಗಣಪತಪ್ಪ ಅವರು ರಾಮಚಂದ್ರಪುರ ಮಠದ ದಂತದ ಸಿಂಹಾಸನದಲ್ಲಿ ಕೆಲಸ ಮಾಡಿದವರಲ್ಲಿ ಒಬ್ಬರು. ಆ ಸಿಂಹಾಸನವನ್ನು ಎಷ್ಟೋ ವರ್ಷಗಳಿಗೊಮ್ಮೆ ಸಾರ್ವಜನಿಕರ ವೀಕ್ಷಣೆ ಪ್ರದರ್ಶಿಸುತ್ತಾರೆ. ಸಿಂಹಾಸನದ ಪೂರ್ತಿ ದಂತ,



ಗಣೇಶ್ ಮರೂರುರವರ ಮೀನಾಕ್ಷಿ ಕಲ್ಯಾಣ ಮರದ ಶಿಲ್ಪ



ಅರ್ಧನಾರೀಶ್ವರ - ಶ್ರೀಗಂಧ ಮತ್ತು ಬೀಟೆ ಮರದಲ್ಲಿ

ಶ್ರೀಗಂಧಗಳ ಸೂಕ್ಷ್ಮ ಸುಂದರ ಕೆತ್ತನೆಗಳಿಂದ ಲೋಕಪ್ರಸಿದ್ಧವಾಗಿದೆ. ಅಂತಹ ಪ್ರದರ್ಶನಕ್ಕೆ ಜನತಂಡೋಪತಂಡವಾಗಿ ಬಂದು ನೋಡಿಕೊಂಡು ಹೋಗುತ್ತಾರೆ. ಹದಿನೈದು ವರ್ಷಗಳ ಹಿಂದೆ ಪ್ರದರ್ಶಿಸಿದ್ದ ಸಿಂಹಾಸನವನ್ನು ನೋಡಲು ವಾದಿರಾಜರು ತಮ್ಮ ಶಿಷ್ಯರನೆಲ್ಲಾ ಕರೆದುಕೊಂಡು ಹೋಗಿದ್ದರು. ಎಷ್ಟು ಸುಂದರವಾದ ಸಿಂಹಾಸನ ! ಎಷ್ಟೊಂದು ಸೂಕ್ಷ್ಮ ಕೆತ್ತನೆ. ನೋಡಿದಷ್ಟು ನೋಡಬೇಕೆನ್ನಿಸುವ ಕಲೆ. ಅದನ್ನು ಮಾಡಿದ ಕಲಾವಿದರು, ದಂತ ಮತ್ತು ಗಂಧಗಳು ಅತಿಸೂಕ್ಷ್ಮ ಕೆತ್ತನೆಗೆ ಹೇಳಿ ಮಾಡಿಸಿದಂತಹ ಗುಣವಿರುವುದುನ್ನು ಗಮನಿಸಿ, ಅದನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಆ ಸಿಂಹಾಸನದಲ್ಲಿ ಕೆಲಸ ಮಾಡಿರುವ ಕೀರ್ತಿ ಶ್ರೀ ಗಣಪತಪ್ಪ ಅವರಿಗೂ ಸಲ್ಲುತ್ತದೆ.

ಅಷ್ಟೊಂದು ಸೂಕ್ಷ್ಮ ಸುಂದರ ಕೆತ್ತನೆಗೆ ಹೆಸರಾದ ಮನೆತನದಲ್ಲಿ ಹುಟ್ಟಿರುವ ಭಾಗ್ಯ ಶ್ರೀ ಗಣೇಶ್ ಮರೂರ್‌ರವದು. ವಂಶದ ಎಲ್ಲ ಗುಣಗಳನ್ನು ಪಡೆದು ಬಂದಿದ್ದಾರೆ. ಅವರ ಬಾಲ್ಯದ ಅಭ್ಯಾಸ ತಂದೆ, ದೊಡಪ್ಪ ಶ್ರೀ ಎಂ.ಜಿ. ಶಾಂತಪ್ಪ ಅವರಲ್ಲಿ. ಗಣೇಶ್‌ಮರೂರ್‌ರವರ ಪತ್ರ ಓದುತ್ತಿದ್ದಾಗ ನನಗೆ ತಿಳಿಯಿತು ಅವರು ಗಣತಪ್ಪನವರ ಮೊಮ್ಮಗ ಎಂದು, ಒಂದು ರೀತಿ ಸಂತೋಷವೂ ಆಯಿತು. ವಾದಿರಾಜರ ಬಿಡದಿ ಯೋಜನೆಯಲ್ಲಿ ಜಿ.ಎಲ್.ಭಟ್ ಶಿಷ್ಯರಾದವರು ಈ ಗಣೇಶ. ಗಣತಪ್ಪ ಅವರ ಶಿಷ್ಯರು ವಾದಿರಾಜರು, ಅವರ ಶಿಷ್ಯರು ಜಿ.ಎಲ್. ಭಟ್, ಅವರ ಶಿಷ್ಯರು ಗಣೇಶ, ಹೀಗೆ ಒಂದು ಸರಪಣಿ ಪೂರ್ತಿಯಾಯಿತು.

ಗಣೇಶ್ ಒಂದು ಅಪೂರ್ವ ಪ್ರಯೋಗ ಮಾಡಿದ್ದಾರೆ. ಶಿವನಿಮರ ಮತ್ತು ಬೀಟೆ ಮರಗಳನ್ನು (Rose wood) ಬಳಸಿ "ಅರ್ಧನಾರೀಶ್ವರ ಶಿಲ್ಪ" ಮಾಡಿದ್ದಾರೆ. ಶಿವನ ಭಾಗ ರೋಜ್ ಮರ, ಶಿವೆಯ ಭಾಗ ಶಿವನಿಮರ, ಮೊದಲೇ ಎರಡು ಮರಗಳನ್ನು ಜೋಡಿಸಿ, ಮಾಡಿರುವ ಈ ಶಿಲ್ಪ ಬಹಳ ಸುಂದರವಾಗಿದೆ. ಚೋಳ ಶೈಲಿಯ ಈ ಶಿಲ್ಪದಲ್ಲಿ ಸೂಕ್ಷ್ಮ ಕೆತ್ತನೆ, ಸ್ಫುಟವಾದ ಸುಂದರ ಮೈಕಟ್ಟು ಹಸ್ತ, ಬೆರಳು ಎಲ್ಲವನ್ನೂ ಬಹಳ ಗಮನಕೊಟ್ಟು ಬಿಡಿಸಿದ್ದಾರೆ. ಚೋಳ ಶಿಲ್ಪ ಶೈಲಿಯೇ ಹಾಗೆ, ಎಲ್ಲಿಯೂ ಸ್ವಲ್ಪ ದಪ್ಪವಿರುವುದಿಲ್ಲ. ಅದರ ಜೊತೆಗೆ ವಾದಿರಾಜರು ರಚಿಸಿದ್ದ ಅಪೂರ್ಣ ರೇಖಾಚಿತ್ರ "ಮೀನಾಕ್ಷಿ ಕಲ್ಯಾಣ"ದ ರೇಖಾಚಿತ್ರದಷ್ಟೇ ಪ್ರಭಾವಶಾಲಿಯಾಗಿ ಬಂದಿರುವ ಈ ಶಿಲ್ಪ ಮನೆಸೆಳೆಯುವಂತಿದೆ. ಇನ್ನೊಂದು ರಥದ ಶಿಲ್ಪ. ತೇಗ ಮತ್ತು ಶಿವನಿ ಮರಗಳನ್ನು ಬಳಸಿ ಮಾಡಿರುವುದರಲ್ಲಿ ಜೋಣೆಯ ಜಾಣ್ಮೆ, ಕೆತ್ತನೆ ಮುಂತಾದವು ಮಾಡಿದವರ ಜಾಣ್ಮೆಯನ್ನು ತೋರಿಸುತ್ತದೆ. ಇಂತಹ ಶಿಲ್ಪಿಗಳ ಸಂತತಿ ಸಾವಿರವಾಗಲಿ ಎಂದು ಹರಸೋಣ.

೩. **ಶ್ರೀ ರಾಜೇಶ್ ಪತ್ತಾರ :** ಕೃಷಿ ಹಾಗೂ ಮರದ ಕೆತ್ತನೆ ಮಾಡುವ ಮನೆತನದಲ್ಲಿ ಹುಟ್ಟಿದ ರಾಜೇಶ್‌ರವರಿಗೆ ಬಾಲ್ಯದಿಂದಲೂ ಮರದ ಕೆತ್ತನೆ ಪ್ರಿಯವಾದ ಹವ್ಯಾಸ. ಸೋದರ ಮಾವನವರಾದ ಅಂತರರಾಷ್ಟ್ರೀಯ ತಬಲಾವಾದನಪಟು ಶ್ರೀ ರವೀಂದ್ರಯಾವಗಲ್ ಅವರು





ರಾಜೇಶ್‌ನನ್ನು ಶ್ರೀ ಅಶೋಕ ಗುಡಿಗಾರ್ ಹಾಗೂ ಜಿ.ಎಲ್. ಭಟ್ ಅವರ ಬಳಿ ಕಲಿಯಲು ಪ್ರೋತ್ಸಾಹಿಸಿದರು ಮುಂದೆ ಕೆ.ಪಿ.ಜೆ. ಪ್ರಭು ತರಬೇತಿ ಕೇಂದ್ರದಲ್ಲಿ ಅಧ್ಯಯನ ಮಾಡಿ, ಹೆಚ್ಚಿನ ತರಬೇತಿ ಪಡೆಯಲು ಬಿಡದಿಯ ಪ್ರೊಡಕ್ಷ್ ಸೆಂಟರಿನಲ್ಲೂ ಕೆಲಸ ಮಾಡಿದ್ದಾರೆ.

ಅನಂತರದ ೬ ವರ್ಷಗಳಲ್ಲಿ ಅಶೋಕಗುಡಿಗಾರರಲ್ಲಿ ಕೆಲಸ ಮಾಡುತ್ತ ತಮ್ಮ ಅನುಭವವನ್ನು ಹೆಚ್ಚಿಸಿಕೊಂಡು ಮುಂದೆ ಸ್ವತಂತ್ರವಾಗಿ ಕೆಲಸ ಮಾಡುವ ಉದ್ದೇಶದಿಂದ ಸ್ವಂತ ಕಾರ್ಯಾಗಾರವನ್ನು ಮಾಡಿಕೊಂಡು ಬೇಡಿಕೆಗಳಿಗೆ ಸ್ಪಂದಿಸುತ್ತಿದ್ದಾರೆ. ಅನೇಕ ಮಾಧ್ಯಮಗಳಲ್ಲಿ ಕೆಲಸ ಮಾಡುವ ಇವರಿಗೆ ಕ್ರಿಯಾತ್ಮಕಗಳನ್ನು ಮಾಡುವ ಅವಕಾಶಗಳೂ ಅರಸಿಕೊಂಡು ಬರುತ್ತಿವೆ. ಹಳೆಯ ಶಿಲ್ಪಗಳ ರಚನೆ, ಹೊಸ ಮಾದರಿಯ ಕಟ್ಟಡಗಳ ಅಲಂಕಾರಕ್ಕೆ ಸಂಪ್ರದಾಯ ಶಿಲ್ಪಗಳನ್ನು ಅಳವಡಿಸುವ ಜಾಣ್ಮೆ ಇವರಲ್ಲಿದೆ. ಬೃಂದಾವನದ ಕಲ್ಲುರಚನೆ ಮಾಡಿ, ಅದರಲ್ಲಿ ಕೆತ್ತನೆಯನ್ನು ಮಾಡಿದ್ದಾರೆ. ಮನೆಯ ಮುಂದೆ ಹೆಸರು ಬರೆಸುವ ಕಲ್ಲಿನಲ್ಲಿ ಸಂಪ್ರದಾಯ ಶೈಲಿಯಲ್ಲಿ ವಿನ್ಯಾಸ ಮಾಡಿಕೊಟ್ಟಿದ್ದಾರೆ. ಸಂಪ್ರದಾಯ ಶೈಲಿಯ (ಹೊಯ್ಸಳ) ದೇವಾಲಯವನ್ನು ಕಟ್ಟುವ ಅವಕಾಶವೂ ತಮಗೆ ದೊರೆತಿದ್ದು ಅವರ ರಚನಾಕಾರ್ಯದಲ್ಲಿ ತೊಡಗಿದ್ದೇನೆಂದು ತಿಳಿಸಿದ ರಾಜೇಶ್ ತಮ್ಮ ಎಲ್ಲ ಸಾಧನೆಗೆ ಕಾರಣರಾದ ತಮ್ಮ ಸೋದರ ಮಾವ ಮತ್ತು ತಮ್ಮ ತಂದೆತಾಯಿಯರೆಂದು ಭಕ್ತಿಯಿಂದ ಸ್ಮರಿಸುತ್ತಾರೆ.

ಹಲವಾರು ಶಿಲ್ಪಶಿಬಿರಗಳಲ್ಲಿ ಯಶಸ್ವಿಯಾಗಿ ಭಾಗವಹಿಸಿ, ಮೆಚ್ಚುಗೆಯನ್ನೂ ಪಡೆದಿದ್ದಾರೆ. ೧೯೯೯ರ ವಾದಿರಾಜ ಸ್ಮೃತಿ ವಿದ್ಯಾರ್ಥಿವೇತನ, ರಾಜ್ಯಮಟ್ಟದ ಬೆಳಗಾಂ ಕಲಾಮೇಳದ ಪ್ರಶಸ್ತಿ, ೨೦೦೫ರಲ್ಲಿ ಕಮಲಾದೇವಿ ಛಟ್ಟೋಪಾಧ್ಯಾಯ ವಿಶ್ವಕರ್ಮ ಪ್ರಶಸ್ತಿ ದೊರೆತಿದೆ. ಕಲೆಯನ್ನು ಭಕ್ತಿಯಿಂದ ಆರಾಧಿಸುವ ಈ ಶಿಲ್ಪಿಗೆ ಉತ್ತಮ ಭವಿಷ್ಯವಿದೆ.

೪. **ಶ್ರೀ ಸಿ.ಎಸ್. ನಾಗೇಂದ್ರ :** ಬಿಡದಿಯ ಕೆ.ಪಿ.ಜೆ. ಪ್ರಭು ತರಬೇತಿ ಕೇಂದ್ರದಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಅಧ್ಯಯನಕ್ಕೂ ಮುಂಚೆ ಮೂರು ವರ್ಷ ರೀಜನಲ್ ಡಿಸೈನ್ ಸೆಂಟರಿನಲ್ಲಿ ಮರ ಮತ್ತು ಕಲ್ಲಿನ ಕೆತ್ತನೆಯ ತರಬೇತಿ



ಪಡೆದಿದ್ದರು. ಹಲವಾರು ಶಿಬಿರಗಳಲ್ಲಿ ಭಾಗವಹಿಸುತ್ತಾ, ತಮ್ಮ ಅಧ್ಯಯನ, ಅನುಭವಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆ ಪ್ರತಿವರ್ಷ ನೀಡುವ 'ಕೆಂಪೇಗೌಡ ಪ್ರಶಸ್ತಿ'ಗೆ ಕೊಡುವ ಕೆಂಪೇಗೌಡ ಪ್ರತಿಮೆಯನ್ನು ರಚಿಸಿ, ಅದನ್ನು ಪ್ರತಿವರ್ಷವೂ ಮಾಡಿಕೊಡುತ್ತಾ ಬಂದಿದ್ದಾರೆ.

ಕಲ್ಲು, ಮರ, ಫೈಬರ್‌ಗ್ಲಾಸ್ ಮಾಧ್ಯಮಗಳನ್ನರಿತ ಇವರು ಸಂಪ್ರದಾಯ ಶೈಲಿಗಳ ಪ್ರತಿಮೆಗಳನ್ನು ಬಹುಸಂಖ್ಯೆಯಲ್ಲಿ ಪ್ರತಿಕೃತಿ ಮಾಡಿ, ಅದನ್ನೇ ಉದ್ಯಮವನ್ನಾಗಿಸಿ ಕೊಂಡಿದ್ದಾರೆ.

ಬೆಂಗಳೂರಿನ ಪುರಭವನದ ಪಕ್ಕದಲ್ಲಿರುವ ಚೆನ್ನಮ್ಮರಾಣಿ ಪ್ರತಿಮೆಯ ಸುತ್ತ, ಆಕೆಯ ಜೀವನಕ್ಕೆ ಸಂಬಂಧಿಸಿದ ಕಟ್ಟೆಕೆಗಳಲ್ಲಿ ಕೆಲಸ ಮಾಡಿದ್ದಾರೆ. ಕನಕಾಮೂರ್ತಿಯವರು ಸತ್ಯಸಾಯಿ ಆಸ್ಪತ್ರೆಗೆ ಮಾಡಿಕೊಟ್ಟ ಚಾಲುಕ್ಯ ಶೈಲಿಯ ಒಂಬತ್ತು ಅಡಿ ಗಣೇಶನ ವಿಗ್ರಹ ಮಾಡುವಾಗ ಸಹಾಯಕವಾಗಿ ಕೆಲಸ ಮಾಡಿದ್ದಾರೆ. ರಾಜೇಶ್ ಪತ್ತರ್ ಮತ್ತು ಇತರ ಹಲವು ಶಿಲ್ಪಿಗಳ ಜೊತೆಸೇರಿ ಜಕ್ಕೂರಿನ ಬಳಿ ಒಂದು ಹೊಯ್ಸಳ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ.

೫. **ಶ್ರೀ ರಮೇಶ್. ಎನ್. ರೆಬಿನಾಳ್ :** ವ್ಯಾಪಾರಸ್ಥ ಮನೆತನದಲ್ಲಿ ಹುಟ್ಟಿದ ರಮೇಶ್ ಕಲೆಗೆ ಮಾರುಹೋಗಿ, ಅದನ್ನು ಕಲಿಯಲು ಬಹಳ ಶ್ರಮ ಪಡಬೇಕಾಯಿತು. ಮನೆಯವರ ಆಸೆಗೆ ವಿರುದ್ಧವಾಗಿ ಎಸ್.ಎಸ್.ಎಲ್.ಸಿ. ಮುಗಿದ ಮೇಲೆ ಡಿ.ಎಂ.ಸಿ. (ಡ್ರಾಯಿಂಗ್ ಮಾಸ್ಟರ್ಸ್ ಕೋರ್ಸ್) ಮಾಡಿ ಮತ್ತೆ ಬಿ.ಎಫ್.ಎ ಮಾಡಿ, ಅನಂತರ ಜೋಗರದೊಡ್ಡಿಯಲ್ಲಿ ಕೆಪಿಜೆ ಪ್ರಭು ತರಬೇತಿಯನ್ನು ಮುಗಿಸಿ, ಅಲ್ಲಿಯ ಪ್ರೊಡಕ್ಷನ್ ಸೆಂಟರ್‌ನಲ್ಲೂ ಕೆಲಕಾಲ ಕೆಲಸ ಮಾಡಿದರು. ನನ್ನ ಒಂಬತ್ತು ಅಡಿಯ ಗಣೇಶ ಮಾಡುವಲ್ಲಿ, ಸಂದರ್ಭದಲ್ಲಿ ಅವರು ಒಳ್ಳೆಯ ಛಾಯಾಗ್ರಾಹಕರೆಂದೂ ತಿಳಿಯಿತು. ಶಿಲ್ಪದ ಎಲ್ಲಾ ಮಾಧ್ಯಮಗಳಲ್ಲೂ ಅನುಭವಪಡೆದ ಇವರು, ಚಿತ್ರಕಲೆ, ಸಂಗೀತಗಳಲ್ಲೂ ಆಸಕ್ತಿ ಹೊಂದಿದ್ದಾರೆ. ಇಷ್ಟೆಲ್ಲಾ ಕಲೆಗಳ ಬಗ್ಗೆ ಆಸಕ್ತಿ ಹೊಂದಿರುವಾಗ ವಾಪಾರದಲ್ಲಿ ಮನಸುಬುರುವುದರೂ ಹೇಗೆ ? ಸಹಜವಾಗಿ ಮನೆಯವರ ಕೋಪಕ್ಕೆ ಪಾತ್ರರಾಗಿ, ದೂರವೇ ಉಳಿಯುತ್ತಾ, ಈಗ ಸಿಂಧಗಿಯಲ್ಲಿ ಶಿಲ್ಪಕಲೆಯನ್ನೇ ಬೋಧಿಸುತ್ತ, ಬೇಡಿಕೆಗಳು ಬಂದರೆ ಅದನ್ನು ಮಾಡುತ್ತಿರುತ್ತಾರೆ. ಬಸವೇಶ್ವರನ ದೇವಸ್ಥಾನದ ಮುಖಮಂಟಪದ ಕೆಲಸ ಮಾಡಿದ್ದಾರೆ. ಕಲೆಯ ಉಪಾಸನೆಯೇ ಇವರಿಗೆ ಪ್ರಿಯವಾದ ಹವ್ಯಾಸ, ಅಧ್ಯಯನ ಹಾಗೂ ವೃತ್ತಿ.

೬. **ಶ್ರೀ ಅನಿಲ್ ಗುರುದತ್ತ :** ಮೈಸೂರಿನ ಹೆಸರಾಂತ ಶಿಲ್ಪಿ ಶ್ರೀ ಸಿದ್ಧಲಿಂಗಸ್ವಾಮಿಗಳ ಮನೆತನದಲ್ಲಿ ಜನಿಸಿದ ಶ್ರೀ ಅನಿಲ್ ಗುರುದತ್ತ ವಂಶಪಾರಂಪರ ವಿದ್ಯೆಯನ್ನು ತಂದೆಯವರಲ್ಲಿ ಕಲಿತರು. ಮುಂದೆ ಚಿತ್ರಕಲೆಯಲ್ಲೂ ಡಿ.ಎಂ.ಸಿ. ಮತ್ತು ಎಂ.ಎಂ. ಕೋರ್ಸುಗಳನ್ನು ಮಾಡಿ,





ಜ್ವಾಲಾಮಾಲಿನಿ - ಅನಿಲ್ ಗುರುದತ್ತ ರಚನೆ

ಶಿಲ್ಪಕಲೆಯ ಹೆಚ್ಚಿನ ಅನುಭವಕ್ಕಾಗಿ ಬಿಡದಿಯ ತರಬೇತಿ ಕೇಂದ್ರದಲ್ಲಿ ಶ್ರೀ ಜಿ.ಎಲ್. ಭಟ್‌ರವರ ನಿರ್ದೇಶನದಲ್ಲಿ ಸಂಪ್ರದಾಯ ಶಿಲ್ಪಶೈಲಿಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅನಂತರ ತಮ್ಮ ತಂದೆಯವರು ಸ್ಥಾಪಿಸಿದ ಶಿಲ್ಪಕಲಾ ನಿಲಯದಲ್ಲೇ, ಅವರ ಜತೆಯಲ್ಲೇ ವೃತ್ತಿ ನಿರತರಾಗಿದ್ದಾರೆ. ಇವರಿಗೆ ವಾದಿರಾಜ್ ಸ್ಮೃತಿಯ ಸ್ಕಾಲರ್‌ಶಿಪ್, ದಸರಾ ವಸ್ತು ಪ್ರದರ್ಶನದಲ್ಲಿ ಬಹುಮಾನ, ಮೈಸೂರು ರೋಟರಿ ಕ್ಲಬ್‌ನವರಿಂದ ವೃತ್ತಿ ಸೇವಾ ಪ್ರಶಸ್ತಿ ದೊರೆತಿದೆ. ಶಿಲ್ಪಕಲೆಯ ಮಳಿಗೆಯೊಂದನ್ನು ಸ್ಥಾಪಿಸಿ ಶಿಲ್ಪಿಗಳಿಗೂ ನೆರವಾಗುವ ಆಸೆ. ಶಿಲ್ಪಕಲೆಯನ್ನು ತ್ವರಿತಗತಿಯಲ್ಲಿ ಮಾಡಬಹುದಾದ ಯಾಂತ್ರಿಕತೆಯ ಬಗ್ಗೆಯೂ ಚಿಂತಿಸುತ್ತಿದ್ದಾರೆ. ಇದರಿಂದ ಕಲಾಕೃತಿಗಳ ನಿರ್ಮಾಣಕಾರ್ಯ ಬೇಗಾಗಬಹುದೆಂಬ ಆಶಯ.



೭. **ಶ್ರೀ ಶ್ರೀಶೈಲ ಬಡಿಗೇರ :** ಗುಲ್ಬರ್ಗಾದಲ್ಲಿ ಪ್ರಚಲಿತವಾಗಿರುವ ಎರಕದ ಕಲೆ ಬಹಳ ಉತ್ತಮವಾದುದ್ದು. ಅಂತಹ ಕಲೆಯನ್ನು ಬಹಳ ಚಿಕ್ಕ ವಯಸ್ಸಿನಲ್ಲೇ (೨೩) ಕರಗತ ಮಾಡಿಕೊಂಡಿರುವ ಕಂಚು ಶಿಲ್ಪಿ ಶ್ರೀ ಶ್ರೀಶೈಲ ಬಡಿಗೇರ. ಶ್ರೀ ಶರಣಬಸಪ್ಪ ಅಪ್ಪ ಅವರ ಶಾಲೆಯ ಆವರಣದಲ್ಲಿ ಚಾಲುಕ್ಯಶೈಲಿಯ ಶಿಲ್ಪ ಕಲಾ ಶಿಬಿರವನ್ನು ಶಿಲ್ಪಕಲಾ ಅಕಾಡೆಮಿಯ ಸಂಯುಕ್ತ



ಮೇಣದ ಶಿಲ್ಪ - ಕಾಳಿಕಾದೇವಿ

ಆಶ್ರಯದಲ್ಲಿ ನಡೆಸಿದ ಸಂದರ್ಭದಲ್ಲಿ, ಸುಮಾರು ೩ ವರ್ಷಗಳ ಹಿಂದೆ ಶಿಬಿರದ ನಿರ್ದೇಶನದ ಜೊತೆಗೆ ಶಿಲ್ಪಿಗಳಿಗೆ ಬೇಕಾಗುವ ಎಲ್ಲ ರೇಖಾಚಿತ್ರಗಳನ್ನೂ ಮಾಡುವ ಕೆಲಸ ನನ್ನದಾಗಿತ್ತು. ಆ ಸಂದರ್ಭದಲ್ಲಿ ಶ್ರೀಶೈಲ ನನ್ನ ಜೊತೆಯಲ್ಲೇ ಇದ್ದು, ನನಗೆ ಸಹಾಯಕರಾಗಿ ಬಂದಿದ್ದರು. ಚಿತ್ರ ಬಿಡಿಸುವಾಗ ಟ್ರೇಸಿಂಗ್ ಪೇಪರ್ ಹಚ್ಚುವುದರಿಂದ ಹಿಡಿದು, ನಾನು ರೂಪ ಶಿಲ್ಪ ಮಾಡಬೇಕಾದ ಜೇಡಿ ಮಣ್ಣು ಹದವಾಗಿ ಕಲೆಸಿ, ಮಾಡುತ್ತಾ ಇದ್ದಾಗ ಮಣ್ಣು ಎತ್ತು ಕೊಡುವುದು, ಪ್ರತಿಯೊಂದು ಕೆಲಸವನ್ನೂ ಶ್ರದ್ಧೆಯಿಂದ ಮಾಡುತ್ತಾ ಇದ್ದುದು, ಅವನ ಸರಳ ನಡವಳಿಕೆ ತುಂಬಾ ಇಷ್ಟವಾಗುತ್ತಿತ್ತು. ಆಕಾರದಲ್ಲೂ ಬಹಳ ಚಿಕ್ಕವನಂತೆ ಕಾಣುತ್ತಿದ್ದ. ಹೈಸ್ಕೂಲು ಓದುವ ಹುಡುಗನಿರಬಹುದೆಂದು ಎಣಿಸಿದ್ದೆ.

ನಾಡೋಜ ನಾಗಣ್ಣ ಬಡಿಗೇರ ಮನೆಗೆ ಹೋಗಿದ್ದಾಗ ಶ್ರೀಶೈಲ ತನ್ನ ಕೃತಿಯನ್ನು ತೋರಿಸಿದ ಎರಕಕ್ಕಾಗಿ ಮಾಡಿಕೊಂಡಿದ್ದ ಕಾಳಿದೇವಿಯ ಪ್ರತಿಮೆ. ನೋಡಿದರೆ ಯಾವುದೋ ಘಟ್ಟಿ ಮಾಧ್ಯಮದಲ್ಲೇ ಮಾಡಿದಂತಿತ್ತು. ಮೇಣದಲ್ಲೇ ಪೂರ್ತಿ ಶಿಲ್ಪದ ಕೆಲಸವನ್ನು ಮಾಡಿ ಮುಗಿಸಿದ್ದ. ದೇವಿಯ ರೂಪ, ಅದರ ಮೇಲೆ ಮಾಡಿದ ಕುಸರಿ ಕೆಲಸ, ಅದರ ಹಿಂದೆ ಅದ್ದಕೊಪ್ಪುವಂತೆ ರಚಿಸಿದ್ದ ಪ್ರಭಾವಳಿ, ಎಲ್ಲವೂ ಒಂದಕ್ಕೊಂದು ಹೊಂದಿಕೊಂಡು ಬಹಳ ಆಕರ್ಷಕವಾಗಿ ಕಾಣುತ್ತಿತ್ತು. “ಚಿಕ್ಕವನೇನೇ ಇವನು” ಎಂದು ಹಾಡಿದೆ. ಅವನು ನಾಚುತ್ತಾ ನಿಂತಿದ್ದ (ಇಷ್ಟು ಚಿಕ್ಕವಯಸ್ಸಿನಲ್ಲೇ ಇಷ್ಟು ಶುದ್ಧ ಶಾಸ್ತ್ರೀಯವಾಗಿ ಕೆಲಸ ಮಾಡಿದ ಮತ್ತೊಬ್ಬ ಕಲಾವಿದ ಶ್ರೀ ಡಾಂಭೀಕೇಶ್ವರ, ಕಂಚುಶಿಲ್ಪ)

ಕಾಳಿದೇವಿಯ ಜೊತೆ ಒಂದು ಗಿಳಿಯ ಶಿಲ್ಪವನ್ನು ತೋರಿಸಿದ. ಮರದ ಕೆತ್ತನೆಯ ಬಾಗಿಲಿಗೆ ಅಳವಡಿಸಬಹುದಾದ ಗಿಳಿ. ಇದೂ ಅವನ ಪ್ರತಿಭೆಗೆ ಕೈಗನ್ನಡಿಯಾಗಿತ್ತು. ಬಹಳವರ್ಷ ಅನುಭವವಿರುವ ಕಲಾವಿದ ಮಾಡಿದಂತಿತ್ತು ಅವನು ಮಾಡಿದ ಎರಡೂ ಕೃತಿಗಳು.

ಇವನಿಗೆ ಅಣ್ಣ ಮಾನಯ್ಯಬಡಿಗೇರ ಅವರಿಂದಲೇ ಮಾರ್ಗದರ್ಶನ. ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಸ್ಪರ್ಧೆಯಲ್ಲಿ ಪ್ರಶಸ್ತಿ, ಶರಣಬಸವೇಶ್ವರ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯುದ ವಾರ್ಷಿಕ ಚಿತ್ರಕಲಾ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಲಭಿಸಿದೆ.

ಹಲವಾರು ಶಿಬಿರ ಮತ್ತು ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಾ ತಮ್ಮ ಅನುಭವವನ್ನೂ ಹೆಚ್ಚಿಸಿಕೊಳ್ಳುತ್ತಿರುವ ಶ್ರೀಶೈಲ ಬಹಳ ಆಸಕ್ತಿಯಿಂದ ಬೇರೆಯುವರು ಮಾಡುವ ಕೆಲಸಗಳನ್ನೂ ಗಮನಿಸುವ ವಿನಯಶಾಲಿ ಹುಡುಗ. ನಿರಂತರ ಅಭ್ಯಾಸದಲ್ಲಿ ತೊಡಗಿರುವ ಇವನಿಗೆ ಉತ್ತಮ ಭವಿಷ್ಯವಿದೆ.


೮. **ಶ್ರೀ ಮಲ್ಲಿಕಾರ್ಜುನ ಚಿಕನಳ್ಳಿ :** ಗುಲ್ಬರ್ಗಾದ ಮತ್ತೊಬ್ಬ ಕಲಾವಿದ ಶ್ರೀ ಮಲ್ಲಿಕಾರ್ಜುನ ಚಿಕನಳ್ಳಿಯವರು. ಹಿರಿಯ ಶಿಲ್ಪಿ ನಾಡೋಜ ನಾಗಣ್ಣನವರಿಂದ ಮರದ ಕೆತ್ತನೆ ಮತ್ತು ಮಾನಯ್ಯ ಅವರಿಂದ ಎರಕದ ಕೆಲಸ ಹಾಗೂ ಚಿತ್ರಕಲೆ ಕಲಿಯುತ್ತಿರುವ ಅವರ ವಂಶದ ಮತ್ತೊಂದು ಕುಡಿ. ಹಾಗೆಂದ ಮೇಲೆ ಅವರ ಪ್ರತಿಭೆಯ ಬಗ್ಗೆ ಹೇಳಲೇ ಬೇಕಾಗಿಲ್ಲ. ಹಲವಾರು ಶಿಬಿರಗಳಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುತ್ತಿರುವ ಇವರ ಕೃತಿಗಳು ಹಲವಾರು ದೇವಾಲಯಗಳಲ್ಲಿ ಮತ್ತು ಆಸಕ್ತ ಶ್ರೀಮಂತರ ಮನೆಗಳಲ್ಲಿ ಸಂಗ್ರಹವಾಗಿವೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ



ವಾರ್ಷಿಕ ಬಹುಮಾನದ ಜೊತೆ ಇವರು ಮಾಡಿಕೊಟ್ಟಿರುವ ಶಿಲ್ಪಗಳಿಂದ ಸಂತೋಷಗೊಂಡ ಗುಲ್ಬರ್ಗಾದ ಮೌನೇಶ್ವರ ದೇವಾಲಯ, ಬೆಳಗಾಂ ಜಿಲ್ಲೆ ಇವರನ್ನು ಸನ್ಮಾನಿಸಿದ್ದಾರೆ. ಆಸಕ್ತಿಯಿಂದ ಕಲಿಯುತ್ತಿರುವ ಇವರಿಗು ಉತ್ತಮ ಭವಿಷ್ಯವಿದೆ.

ಹಿರಿಯ ಶಿಲ್ಪಿ ನಾಗಣ್ಣನವರ ಮನೆಯಲ್ಲೇ ಬೆಳೆಯುತ್ತಿರುವ ಹಳೆಯ ಬೇರಿನ ಹೊಸ ಚಿಗುರುಗಳು ಮಾನಯ್ಯ, ಶ್ರೀಶೈಲ, ಮಲ್ಲಿಕಾರ್ಜುನ ಮತ್ತೆ ಇನ್ನೂ ಕೆಲವು ಕಿರಿಯರು ಇವರ ಮನೆಯೊಂದು ವಿಶಾಲವೃಕ್ಷ, ನಿತ್ಯ ಶಿಲ್ಪ ಶಿಬಿರ.

೯. **ಶ್ರೀ ಸಿ.ಪಿ. ವಿಶ್ವನಾಥ,** ಚಿಕ್ಕನಾಯಕನಹಳ್ಳಿ ತುಮಕೂರು : ಶ್ರೀಮಂತ ಕುಟುಂಬದಲ್ಲಿ ಹುಟ್ಟಿದರೂ, ಕೌಟುಂಬಿಕ ಕಾರಣಗಳಿಂದ ಕಷ್ಟಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಕಲಿಕೆಯೊಂದೇ ಇವರ ಆಶಾಕಿರಣವಾಗಿತ್ತು. ಚಿಕ್ಕಂದಿನಿಂದಲೂ ಚಿತ್ರಕಲೆ ಇವರನ್ನು ಸೆಳೆದಿತ್ತು. ಈ ಎಲ್ಲ ವಿಷಯಗಳನ್ನು ತಮ್ಮ ಸುದೀರ್ಘ ಕಾಗದದಲ್ಲಿ ಹೇಳಿಕೊಂಡಿದ್ದಾರೆ. ಕಲಾವಿದರೆಲ್ಲರಿಗೂ ಒಂದಲ್ಲ ಒಂದು ತೊಂದರೆ ಮತ್ತು ಹಣವಿದ್ದರೂ ಬಡತನದ ಜೀವನ, ಕಲಿಯುವುದಂತೂ ಹೂವಿನ ಹಾಸಿಗೆಯಾಗಿರುವುದಿಲ್ಲ. ಕೆಲಕಾಲ ಚಿತ್ರಕಲೆಯಿಂದಲೇ ಗಳಿಸುವ ಪ್ರಯತ್ನ ಮಾಡಿ, ಅದರಿಂದ ಫಲಕಾಣದೆ ರಿಕ್ಷಾ ಓಡಿಸುವ ವೃತ್ತಿ ಕೈಗೊಂಡರು. ಅದರಿಂದ ನೆಮ್ಮದಿ ದೊರೆಯದಿದ್ದಾಗ ಅಣ್ಣಂದಿರ ಸಹಾಯದಿಂದ ಬಿಡದಿಯ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ಪಡೆದರು. ಅನಂತರ ಸ್ವತಂತ್ರವಾಗಿ ಶಿಲ್ಪರಚನಾಕಾರ್ಯ ಪ್ರಾರಂಭಿಸಿ, ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರ ಅಭಿರುಚಿಗೆ ತಕ್ಕಂತೆ ಒಳ್ಳೊಳ್ಳೆಯ ಬೇಡಿಕೆಗಳೂ ಬರಲು ಪ್ರಾರಂಭವಾಯಿತು. ಬಿಡದಿಯ ಅಧ್ಯಯನ ಸಂದರ್ಭದಲ್ಲಿ ಸಂಪ್ರದಾಯ ಶೈಲಿಗಳ ಬಗ್ಗೆ, ಇತಿಹಾಸದ ಬಗ್ಗೆ ಆಸಕ್ತಿಯಿಂದ ತಿಳಿದುಕೊಂಡಿರುವುದಕ್ಕೆ, ಅವರು ಹೆಸರಿಸಿರುವ ಚಾಲುಕ್ಯ-ಹೊಯ್ಸಳರ ಕಾಲದ ಶಿಲ್ಪಿಗಳು, ಅವರು ರಚಿಸಿದ ಶಿಲ್ಪಗಳು, ಇದನ್ನೆಲ್ಲ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. ಬರೀ ಶಿಲ್ಪಗಳ ಮಾರಾಟದ ಬಗ್ಗೆ ಯೋಚಿಸದೆ, ಅಧ್ಯಯನದ ಕಡೆಗೆ, ವಿಷಯ ಸಂಗ್ರಹಣೆಯ ಕಡೆಗೂ ಆಸಕ್ತಿ ಬೆಳೆಸಿಕೊಂಡಿರುವುದು ಕೂಡ ಅವರ ಬೆಳವಣಿಗೆಯ ಸೂಚನೆ. ಯಾವ ಶೈಲಿಯಲ್ಲಿ ಕೆಲಸ ಮಾಡಲೀ, ಅದನ್ನು ಅಧ್ಯಯನದ ದೃಷ್ಟಿಯಿಂದಲೇ ಮಾಡುವ ಇವರಿಗೆ ಸಮಯದ ಪರಿವೆಯೇ ಇರುವುದಿಲ್ಲವೆನಿಸುತ್ತದೆ, ಅದು ನಿಜವಾಗಿ ಶಿಲ್ಪಿಗೆ ಬೇಕಾದ ಗುಣ ಮಾಡುವ ಶಿಲ್ಪ ಚೆನ್ನಾಗಿ ಬರುವುದರ ಕಡೆಗೆ ಮಾತ್ರ ಗಮನವಿರಬೇಕು. ಇಂತಹ ಅಪರೂಪದ ಶಿಲ್ಪಿಗೆ, ಇವರ ಕುಶಲತೆ ಮೆಚ್ಚಿ 'ವಾದಿರಾಜ್ ಸ್ಮೃತಿ'ಯ ಪ್ರಶಸ್ತಿ ಕೊಟ್ಟಿದ್ದಾರೆ. ಅವರೂರಿನ ಜನತೆ ಶ್ರೀ ಚಂದ್ರಶೇಖರ ಸ್ವಾಮೀಜಿಯವರ ಮೂಲಕ "ಶಿಲ್ಪಕಲಾ ಪ್ರವೀಣ" ಎಂಬ ಬಿರುದನ್ನಿತ್ತು ಸನ್ಮಾನಿಸಿದ್ದಾರೆ.



ಆಂಜನೇಯ ಶಿಲ್ಪದ ರಚನೆಯಲ್ಲಿ ಸಿ.ಪಿ. ವಿಶ್ವನಾಥ್


'ಶಿಲ್ಪಕಲೆ'ಯು ಮುಂಚಿನ ಭವ್ಯತೆ ಪಡೆಯಬೇಕಾದರೆ ಅಧ್ಯಯನ ಬಹಳ ಮುಖ್ಯ, ಅದರಿಂದ ರಾಜ್ಯದ ಬೆಳವಣಿಗೆ ಕೂಡ ಸಾಧ್ಯವೆಂಬುದು ಇವರ ನಂಬಿಕೆ. ಅದಕ್ಕಾಗಿ ಹಲವಾರು ಸೂಚನೆ, ಅಭಿಪ್ರಾಯಗಳನ್ನೂ ತಿಳಿಸಿದ್ದಾರೆ. ಇಂತಹ ಕಳಕಳಿಯ ಮನಸ್ಸಿನ ಶಿಲ್ಪಿಗಳು ಹೆಚ್ಚು ಹೆಚ್ಚು ಮುಂದೆ ಬಂದಾಗ ರಾಜ್ಯದ ಶಿಲ್ಪಕಲೆಯ ವಾತಾವರಣ ಬದಲಾಗಿ, ಹಿಂದಿನ ಭವ್ಯತೆಯ ಕಡೆಗೆ ಹೆಜ್ಜೆ ಹಾಕಬಹುದು.

೧೦. **ಶ್ರೀ ರಾಘವೇಂದ್ರ ಚಿತ್ರಗಾರ್ :**



ಚಿತ್ರಗಾರ್ ಹೆಸರೇ ಸೂಚಿಸುವಂತೆ ಚಿತ್ರಗಾರರ ಮನೆತನದಲ್ಲಿ ಜನಿಸಿದ ಶ್ರೀ ರಾಘವೇಂದ್ರ ಅವರು ತಮ್ಮ ಪ್ರಾರಂಭಿಕ ಶಿಕ್ಷಣವನ್ನು ತಮ್ಮ ತಾಯಿ ಹಾಗೂ ಅವರ ತಂಗಿಯರಿಂದ ಸ್ಫೂರ್ತಿ ಪಡೆದು ಕಲಿತೆ ಎಂದು ಹೇಳಿಕೊಂಡಿದ್ದಾರೆ. "ತಾಯಿಯಿಂದ" ಕಲಿತು, ಆಕೆಗೆ ಗೌರವ ನೀಡುತ್ತಿರುವ ಅಪರೂಪದ ಕಲಾವಿದ ಇವರು. ತಾಯಿ ಮತ್ತು ಚಿಕ್ಕಮ್ಮಂದಿರು ಜೇಡಿಮಣ್ಣಿನಿಂದ ಗಣೇಶ ವಿಗ್ರಹಗಳನ್ನು ಮಾಡಿ, ಅದನ್ನು ಅಲಂಕರಿಸಿ





ರಾಘವೇಂದ್ರ ಚಿತ್ತಗಾರ್‌ರವರ ಶಿಲ್ಪ ಮತ್ತು ರೇಖಾಚಿತ್ರ

ಮಾರುವ ವೃತ್ತಿಯಲ್ಲಿದ್ದಾರೆ. ಅವರ ಕೆಲಸ ತುಂಬಾ ಚೆನ್ನಾಗಿದೆ, ಆಕರ್ಷಕವಾಗಿದೆ ಎಂದು ಅವರ ನೈಪುಣ್ಯವನ್ನೂ ಮೆಚ್ಚಿ ಹೊಗಳಿದ್ದಾರೆ. ತಾಯಿಯಿಂದ ಪ್ರಭಾವಗೊಂಡು ಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡು, ಧಾರವಾಡದ ಶ್ರೀ ಹಾಲಭಾವಿಕಲಾ ಶಾಲೆಯಲ್ಲಿ, ಚಿತ್ರಕಲೆಯ ಅಭ್ಯಾಸ ಮಾಡಲು ಪ್ರಾರಂಭಿಸಿದರು. ಅಲ್ಲಿ ಅನೇಕ ಹೆಸರಾಂತ ಪ್ರತಿಭಾವಂತ ಕಲಾವಿದರಲ್ಲಿ ಅಧ್ಯಯನ ಮಾಡುವ ಅವಕಾಶ ಸಿಕ್ಕುತ್ತ, ಅಲ್ಲೂ ಇವರು ಹೇಳಿಕೊಂಡಿರುವುದು ಗಾಯತ್ರಿ ಮತ್ತು ರೇಣುಕಾ ಮಾರ್ಕಂಡೇಯ ಅವರ ಹೆಸರನ್ನು ಚಿತ್ರಕಲೆಯಲ್ಲೂ ಸಂಪ್ರದಾಯ ಶೈಲಿಗಳಿಗೆ ಹೆಚ್ಚು ಮನಕೊಟ್ಟಿದ್ದಾರೆ, ಶಿಲ್ಪದ ಆಕರ್ಷಣೆಯನ್ನು ತಪ್ಪಿಸಿಕೊಳ್ಳಲಾಗಿದೆ. ಬಿಡದಿಯ ತರಬೇತಿ ಕೇಂದ್ರದಲ್ಲಿ ಅಧ್ಯಯನ, ಅಲ್ಲಿಯ ಉತ್ಪಾದನ ಕೇಂದ್ರದಲ್ಲೂ ಕೆಲಸ ಮಾಡಿ, ಮುಂದೆ ತಮ್ಮ ಗುರು ಬಂಧು ಶ್ರೀ ಕೆ. ಅಪ್ಪಣ್ಣ ಆಚಾರ್ಯ ಕೆಲಸ ಮಾಡುತ್ತ ತಮ್ಮ ಅನುಭವವನ್ನು ಹೆಚ್ಚಿಸಿಕೊಂಡಿದ್ದಾರೆ.

ಅವರು ಶಿಬಿರಗಳಲ್ಲಿ, ಪ್ರದರ್ಶನಗಳಲ್ಲಿ ಭಾಗವಹಿಸಿ, ಪಾರಿತೋಷಕಗಳನ್ನು ಪಡೆದ ಇವರಿಗೆ ೨೦೦೬ನೇ ಸಾಲಿನ ವಾದಿರಾಜ್ ಸ್ಮೃತಿಯ ವೇತನ ದೊರೆತಿರುವುದು ಸಂತೋಷ ತಂದಿದೆ.

೧೧. **ಶ್ರೀ ವಿಜಯ ಆಚಾರ್ಯ :** ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ, ವಿಜಯ್ ವಯಸ್ಸಿನಲ್ಲಿ, ಆಕಾರದಲ್ಲಿ ಮಾತ್ರ ಚಿಕ್ಕವನು, ಆದರೆ ಬೆಳೆದು ನಿಂತಿರುವ ಪಡೆದಿರುವ ಕೀರ್ತಿ ದೊಡ್ಡದು. ಕುಂದಾಪುರದ ಬಸರೂರಿನಲ್ಲಿರುವ ಇವರ ಮನೆತನದಲ್ಲಿ ಸಂಗೀತ,



ಯಕ್ಷಗಾನಗಳ ಪ್ರಭಾವದ ಜೊತೆಗೆ ತಂದೆ ಬೆಳ್ಳಿ ಬಂಗಾರಗಳನ್ನು ಕೆಲಸ ಮಾಡುವ ಕಲಾವಿದರು. ಅದೇ ಅಭಿರುಚಿ ಹೊತ್ತ ಅಣ್ಣಂದಿರುವ ಸಹಜವಾಗಿ ಶಿಲ್ಪಕಲೆಗೆ ಮನಸೋತ ಇವರು ಸಾಗರದ ಶ್ರೀಗಂಧದ ಕರಕುಶಲ ಕೇಂದ್ರದ ತರಬೇತಿ ಯೋಜನೆಯಲ್ಲಿ ತಮ್ಮ ಅಧ್ಯಯನ ಪ್ರಾರಂಭಿಸಿದರು. ಸಾಗರದ ಶ್ರೀ ಜಗದೀಶ್ ಗುಡಿಗಾರರಲ್ಲಿ ಕಾಷ್ಠ ಶಿಲ್ಪದ ಅಭ್ಯಾಸವೂ ಆಯಿತು. ಆ ಮೇಲೆ ಬೆಂಗಳೂರಿಗೆ ಬಂದು ಬಿಡದಿಯ ತರಬೇತಿ ಯೋಜನೆಯಲ್ಲಿ ಅಭ್ಯಾಸ ಮಾಡಿದರು. ಇಷ್ಟೆಲ್ಲಾ ಅಭ್ಯಾಸ ಮಾಡಿ ಬಂದ ಮಗನ ಬಗ್ಗೆ ಹೆಚ್ಚು ನಂಬಿಕೆತಾಳಲಾರದ ಹಿರಿಯರೊಡನೆ ಸ್ವಲ್ಪ ಕೊಸರಾಡಬೇಕಾಯಿತು. ಆದರೆ ಅವರೂರಿನ ಶ್ರೀ ಮಹಾಲಸೌನಾರಾಯಣಿ ದೇವಾಲಯಕ್ಕೆ ಹೊಯ್ಸಳ ಶೈಲಿಯ ದ್ವಾರಪಾಲಕನ್ನು ಮಾಡುವ ಅವಕಾಶ ಸಿಕ್ಕಿದ ನಂತರ ಇವರ ಅದೃಷ್ಟದ ಬಾಗಿಲು ತೆರೆಯಿತೆಂದು ಹೇಳುವ ವಿಜಯ್ ಅವರ ಕಣ್ಣಲ್ಲಿ ವಿಜಯೋತ್ಸವ ಹೊಳಪು ಕಾಣುತ್ತಿತ್ತು. ಸ್ವಂತ ಕಾರ್ಯಾಲಯವನ್ನು ಸ್ಥಾಪಿಸಲು ಮನೆಯವರೆಲ್ಲ ಪ್ರೋತ್ಸಾಹ ನೀಡಿದ್ದನ್ನು ಹಾಗೂ 'ವಾದಿರಾಜ್ ಸ್ಮೃತಿ'ಯ ವಿದ್ಯಾರ್ಥಿ ವೇತನ ಪಡೆದ ಸಂದರ್ಭವನ್ನು ಹೇಳಿಕೊಂಡರು. ಅಲ್ಲದೆ ನಾನು ಒಂಬತ್ತು ಅಡಿ ಗಣೇಶ ಮಾಡುತ್ತಿದ್ದ ಸಂದರ್ಭದಲ್ಲಿ ನನಗೆ ಸಹಾಯಕರಾಗಿ ಬಂದ ಒಂಬತ್ತು ಜನರಲ್ಲಿ ವಿಜಯ್ ಕೂಡ ಒಬ್ಬರು. ವಿಜಯ್ ಗಣೇಶನ ಪ್ರಭಾವಳಿಗೆ ಚಾಲುಕ್ಯ ಶೈಲಿಯ ರೇಖಾಚಿತ್ರವನ್ನು ಮಾಡಿತೋರಿಸಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಮತ್ತೇ ಪ್ರಭಾವಳಿಯ ಪೂರ್ತಿ ಕೆಲಸ ವಹಿಸಿದಾಗ ಬಹಳ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸಿದರು. ಆ ಗಣೇಶ ಮಾಡುವ ಸಮಯದಲ್ಲಿ ನನಗೆ ಸಹಾಯಕ್ಕೆ ಬಂದ ಎಲ್ಲ ಯುವ ಶಿಲ್ಪಿಗಳು ಪ್ರತಿಭಾವಂತರೇ, ಅವರೊಡನೆ ಕೆಲಸ ಮಾಡುತ್ತ, ಅವರನ್ನು ಹತ್ತಿರದಿಂದ ಪರಿಚಯ ಮಾಡಿಕೊಳ್ಳುವ ಅವಕಾಶ, ಕಲಿಯುವುದರಲ್ಲಿ ಅವರು ತೋರಿಸುತ್ತಿದ್ದ ಆಸಕ್ತಿ, ಹಿರಿಯರ ಕಲಾವಿದರು ಕೆಲಸ ಮಾಡುವಾಗ ಜೊತೆಯಲ್ಲಿ ಮಾಡಿದರೆ ಬಹಳ ಅನುಭವ ದೊರೆಯುವುದರ ಬಗ್ಗೆ ಅವರಿಗಿದ್ದ ಶ್ರದ್ಧ, ಎಲ್ಲವನ್ನೂ ಗಮನಿಸುತ್ತಿದ್ದ ನನಗೆ ಬಹಳ ಸಂತೋಷವಾಗುತ್ತಿತ್ತು. ಇಂತಹ ಅಧ್ಯಯನ ಶೀಲರಾದ ಕಿರಿಯರು ಬೆಳೆದು ಪ್ರತಿಭಾವಂತರಾಗುವುದಲ್ಲಿ ಸಂದೇಹವೇ ಇಲ್ಲ. ವಿಜಯ್ ಸಾಧನೆಗಳನ್ನು ಗುರುತಿಸಿ, ಅವರೂರಿನ ಸಂಘ ಸಂಸ್ಥೆಗಳು ಅವರಿಗೆ ತಮ್ಮ ಗೌರವಾದರಗಳನ್ನು ಸೂಚಿಸಿ ಉದಯೋನ್ಮುಖ ಶಿಲ್ಪಿ ಎಂದು ಕೊಂಡಾಡಿದ್ದಾರೆ.

ಅನೇಕ ದೇವಾಲಯಗಳನ್ನು ನೋಡಿ ಬಂದಿರುವ ವಿಜಯ್ ಅವರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ತಿಳಿಸುತ್ತಾ ಅದಕ್ಕಾಗಿ ವಿಶೇಷ ಅನುಮತಿ ಪಡೆಯಬೇಕಾಗಿರುವುದೇ ಮುಖ್ಯ ಕಾರಣ. ಆದರೆ ಮೂಲ ವಿಗ್ರಹಗಳು ರೂಪಕಾಣದಂತೆ ಹೂವು ವಸ್ತ್ರಗಳಿಂದ ಮುಚ್ಚಿ, ಕೆಲವೊಮ್ಮೆ ಮುಖಕ್ಕೂ ಬೆಳ್ಳಿ ಮುಖವಾಡ ಹಾಕಿರುತ್ತಾರೆ. ಇಷ್ಟೊಂದು ಹೆಸರು ಪಡೆದಿರುವ ಶಿಲ್ಪಕಲೆಯನ್ನು ಜನರಿಗೆ ತೋರಿಸಬೇಕೆಂಬ ಪ್ರಜ್ಞೆ ಬೇಡವೆ ? ಬರೀ ಭಕ್ತಿಯಿದ್ದರೆ ಮಾತ್ರ ಸಾಕೆ ? ಭಕ್ತಿಯನ್ನು ಪ್ರಚೋದಿಸಬೇಕಾದ ದೇವರು 'ನಿಜರೂಪ ದರ್ಶನ' ಬೇಡವೆ ? ಹೋಗಲಿ ಅದಕ್ಕಾಗಿ ಪ್ರಾಚ್ಯ ವಸ್ತು ಸಂಶೋಧನಾ ವಿಭಾಗದವರೇ ಅಲ್ಲಿನ ದೇವಾಲಯಗಳ ಶಿಲ್ಪಕಲೆಯನ್ನು ಎತ್ತಿ ಹಿಡಿಯುವ ಫೋಟೋಗಳು ಸಿಡಿಗಳು ಲಭ್ಯವಾಗುವಂತೆ ಮಾಡಿದರೆ ದೇವಾಲಯುಗಳಿಗೆ ಹೋಗುವ ಶಿಲ್ಪಿಗಳಿಗೆ ಅನುಕೂಲವಾಗುವುದೆಂದು ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸಿದ್ದಾರೆ.

೧೨. **ಶ್ರೀ ಸೋರೈಕ್ಸಿಂಗ್ (Sorei krishing) :** ಆಸಕ್ತರಿಗೆ ಮುಕ್ತ ಪ್ರವೇಶ ಬಿಡದಿಯ ತರಬೇತಿ ಕೇಂದ್ರದ ಉದ್ದೇಶಗಳಲ್ಲಿ ಒಂದು, ವಂಶದ ಹಿನ್ನೆಲೆಗಿಂತ



ಅಭ್ಯರ್ಥಿಯ ಆಸಕ್ತಿ, ತೋರುವ ಕುಶಲತೆ (ರೇಖಾಚಿತ್ರದ ಮೂಲಕ ಪರೀಕ್ಷೆ) ಇವುಗಳೇ ಮುಖ್ಯ. ಈ ರೀತಿ ತರಬೇತಿಗೆ ದೇಶದ ನಾನಾ ಭಾಗಗಳಿಂದಲೂ ಆಸಕ್ತರು ಬರುತ್ತಿದ್ದಾರೆ. ನಾಗಾಲ್ಯಾಂಡ್, ಮಣಿಪುರ, ಉತ್ತರಪ್ರದೇಶ, ಒರಿಸ್ಸಾ, ಭುವನೇಶ್ವರ್, ಆಂಧ್ರ, ತಮಿಳುನಾಡು, ಕೇರಳ ಮುಂತಾದ ಪ್ರದೇಶಗಳಿಂದ ಅನೇಕ ಕಿರಿಯರು ಬಂದು ಕಲಿತಿದ್ದಾರೆ. ಕಲಿಯುತ್ತಲೂ ಇದ್ದಾರೆ. ಭಾಷೆಯ ತೊಡಕು ಇವರ್ಯಾರಿಗೂ ಇಲ್ಲ.

ಶ್ರೀ ಸೋರೈಸಿಂಗ್ ಅವರು ಹೇಳಿದ ಮಾತೇ ಕಲೆಗೆ ತನ್ನದೆ ಆದ ಭಾಷೆ ಇದೆ ಎಂದು. ನಾಗಾಲಾಂಡ್‌ನಿಂದ ಬಂದ ಯುವಕ, ಪಿಯುಸಿವರೆಗೆ ಓದಿದ್ದು, ತಮ್ಮ ಜೀವನದ ದಾರಿ ಹುಡುಕುತ್ತಾ ಇದ್ದಾಗ, ಕಲೆಯ ಬಗ್ಗೆ ಅವರಿಗಿದ್ದ ಆಸಕ್ತಿ ಅವರನ್ನು ಕರ್ನಾಟಕದ ಬಿಡದಿಗೆ ಕರೆತಂದಿತು. ಇಲ್ಲಿಯ ತರಬೇತಿಯ ಬಗ್ಗೆ ಬಹಳ ಕೇಳಿದ್ದರಂತೆ. ಬಂದು ನೋಡಿದಾಗ ತಮಗೂ ಈ ರೀತಿ ಕೆಲಸ ಮಾಡಲು ಸಾಧ್ಯವೆ ? ಎಂದು ಯೋಜಿಸುವಂತಾಯಿತಂತೆ. ಅಲ್ಲಿಯ ಕಲಿಕೆ, ಸಂಪ್ರದಾಯ ಶೈಲಿಗಳ ಕೆತ್ತನೆ, ಎಷ್ಟು ಪ್ರಭಾವ ಬೀರಿತೆಂದರೆ ತಾವು ಹುಡುಕುತ್ತಿದ್ದ ತಮ್ಮ ಜೀವನದ ದಾರಿ ಇದೇ ಎಂಬ ಆತ್ಮವಿಶ್ವಾಸ ಮೂಡಿತಂತೆ. ಕೆಲವು ವರ್ಷಗಳ ಹಿಂದೆ ರಬ್ಬರ್ ಕಾಸ್ಟಿಂಗ್ ಕಲಿಯಲು ಬಂದಿದ್ದರು ಮತ್ತು ನಾನಿರುವ ಬಡಾವಣೆಯಲ್ಲೇ ಇರುವುದರಿಂದ, ಅವರ ಗೆಳೆಯರು ನನ್ನಲ್ಲಿ ಕೆಲಸ ಮಾಡುತ್ತಿರುವುದರಿಂದ ಆಗಾಗ ಬರುತ್ತಿರುತ್ತಾರೆ. ಅವರ ಸಾಧನೆಯನ್ನು ಗುರುತಿಸಿ ವಾದಿರಾಜ್ ಸ್ಮೃತಿ ವಿದ್ಯಾರ್ಥಿ ವೇತನ ನೀಡಲಾಯಿತು.

“ಇಲ್ಲಿಗೆ ಬಂದಾಗ ನಾನು ಇಷ್ಟೆಲ್ಲ ಮಾಡಬಹುದೇ ಎಂದಿದ್ದ ನನಗೆ ತರಬೇತಿ ಮುಗಿಯುವ ವೇಳೆಗೆ, ಹೊಯ್ಸಳ, ಚಾಲುಕ್ಯ ಹಾಗಹೂ ಚೋಳ ಶೈಲಿಗಳ ಪರಿಚಯವಾಗಿ, ಆ ಶೈಲಿಗಳಲ್ಲಿಕೆಲಸ ಮಾಡುವ ಪರಿಣತೆ ಬಂದಿತ್ತೆಂದರೆ ನನಗೇ ಆಶ್ಚರ್ಯವಾಗುತ್ತದೆ. ಈಗೀಗ ಕನ್ನಡವನ್ನೂ ಮಾತನಾಡುತ್ತೇನೆ” ಎಂದರು. ಕೆನ್‌ಸ್ಕೂಲ್‌ನಲ್ಲೂ ಕೆಲಕಾಲ ಚಿತ್ರಕಲೆಯ ಅಭ್ಯಾಸ ಮಾಡಿ, ಪ್ರಸ್ತುತ YWAM (Youth with a mission) ಎಂಬ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಇವರ ಮಹತ್ವಾಕಾಂಕ್ಷೆಯೆಂದರೆ ಬೈಬಲ್‌ನಲ್ಲಿ ಬರುವ ಕಥೆಗಳನ್ನು ಚಿತ್ರ, ಶಿಲ್ಪಗಳ ಮೂಲಕ ನಿರೂಪಿಸುವುದು. ಇನ್ನು ಸ್ವಲ್ಪ ವರ್ಷಗಳ ಅನುಭವ ಪಡದು, ತಾಯ್ನಾಡಿಗೆ ಹೋಗಿ ಅಲ್ಲಿ ಈ ಸಂಪ್ರದಾಯ ಶೈಲಿಗಳ ಪರಿಚಯ ಮಾಡಿಸುವುದು, ಅದಕ್ಕಾಗಿ ಒಂದು ಶಾಲೆ ತೆರೆದು, ಬಡಕುಟುಂಬದವರಿಗೆ ಉದ್ಯೋಗವಕ್ಕಾಗಿ ಮಾಡಿಕೊಳ್ಳಲು ಪ್ರೇರೇಪಿಸುವುದು. ಒಂದು ಕಲೆಯ ಅಧ್ಯಯನ ಇಷ್ಟು ಆತ್ಮವಿಶ್ವಾಸ ನೀಡಬಲ್ಲದೆ ? ಇವರಂತೆ ಇನ್ನೂ ಕೆಲವರು ಬೇರೆ ಬೇರೆ ನಾಡಿನಿಂದ ಬಂದು, ಕಲಿತು, ಪ್ರತಿಭಾಶಾಲಿಗಳು ಮಾತ್ರವಲ್ಲ ಕನ್ನಡಿಗರ ಶಿಲ್ಪಕಲೆಗೆ ಮನಸೋತು ಇಲ್ಲಿಯೇ ನೆಲೆಸಿ ಕನ್ನಡಿಗರೇ ಆಗಿದ್ದಾರೆ. ಅವರಲ್ಲಿ ಮುಖ್ಯವಾಗಿ ಹೇಳುವುದಾದರೆ ವಿಪಿನ್‌ಸಿಂಗ್, ಸೋಮಯ ಮುಂತಾದವರು.

೧೩. **ಶ್ರೀ ರುಕ್ಕಪ್ಪ ಜಕ್ಕೆಪಲ್ಲಿ, ಬಿಡದಿ** : ಹೆಸರಿಗೆ ಜೋಗರದೊಡ್ಡಿಯಾದರೂ ಅಲ್ಲಿ ಜೋಗಿಗಳಿಲ್ಲ, ಇರುವವರೆಲ್ಲರೂ ಶಿಲ್ಪ ಕಲಾವಿದರು. ಅರಳುತ್ತಿರುವ ಪ್ರತಿಭಾಶಾಲಿಗಳು. ಅಂತಹ ಅರಳಿದ ಕುಸುಮ ಶ್ರೀ ರುಕ್ಕಪ್ಪ ವಂಶ ಪರಂಪರೆಯ ಹಿನ್ನಲೆ, ಬಿಡದಿಯ ತರಬೇತಿಯಿಂದ



ರುಕ್ಮಪ್ಪ ಜಕ್ಕೆಪಲ್ಲಿಯವರ ತ್ರಿಮೂರ್ತಿ ಫೈಬರ್ ಮಾಧ್ಯಮ

ಸ್ವತಂತ್ರವಾಗಿ ಬೇಡಿಕೆಗಳಿಗೆ ಸ್ಪಂದಿಸುತತಿರುವ ರುಕ್ಮಪ್ಪ ಅವರು ಅನೇಕ ಕಲಾಕೃತಿಗಳನ್ನು ಮಾಡಿಕೊಟ್ಟಿದ್ದಾರೆ. ಮೈಸೂರಿನಲ್ಲಿರುವ ಇಂದಿರಾಗಾಂಧಿ ಮ್ಯೂಸಿಯಂಗೂ ಶಿಲಾಶಿಲ್ಪಗಳನ್ನು ಮಾಡಿಕೊಟ್ಟಿದ್ದಾರೆ. ಶಿಬಿರಗಳಲ್ಲೂ ಭಾಗವಹಿಸುತ್ತ, ಶಿಲ್ಪಕಲೆಯಿಂದಲೇ ಬದುಕು ಸಾಗಿಸುತ್ತಿರುವ, ಸ್ವಯಂ ಉದ್ಯೋಗದಲ್ಲಿರುವ ಮತ್ತೊಬ್ಬ ಶಿಲ್ಪಿ.

ಶಿಲ್ಪಕಲೆ ಇಂದು

ನಮ್ಮ ನಾಡಿನಲ್ಲಿ ಶಿಲ್ಪಕಲೆ ಮತ್ತೆ ಜೀವಂತಿಕೆ ಪಡೆಯುತ್ತಿದೆ. ಇದಕ್ಕೆ ಸಾಕ್ಷಿ ಇಷ್ಟೊಂದು ಮಂದಿ ಶಿಲ್ಪಿಗಳ ಬಗ್ಗೆ, ಅವರ ಸಾಧನೆಗಳ ಬಗ್ಗೆ, ಎಲ್ಲಕ್ಕಿಂತ ಹೆಚ್ಚಾಗಿ ಅವರು ಆಸಕ್ತಿಯಿಂದ ಶಿಲ್ಪಕಲೆಯನ್ನು ಮಾಡುತ್ತಿರುವುದು. ಇನ್ನು ಎಷ್ಟು ಶಿಲ್ಪಿಗಳಿದ್ದಾರೋ, ಅವರನ್ನು ಸಂಪರ್ಕಿಸಲೂ ಆಗಿಲ್ಲ. ಬಿಡದಿಯಲ್ಲೇ ಐನೂರಕ್ಕೂ ಹೆಚ್ಚಿನ ಮಂದಿ ಕಲಿತಿರುವವರಿದ್ದಾರೆಂದ ಮೇಲೆ ಮತ್ತೊಂದು ಪುಸ್ತಕವನ್ನೇ ಬರೆಯಬೇಕಾದೀತು. ಶಿಲ್ಪಕಲಾ ಅಕಾಡೆಮಿಯ ಸ್ಥಾಪನೆಯಾದ ಮೇಲೆ, ಶಿಲ್ಪಿಗಳಲ್ಲೂ ಉತ್ಸಾಹ ಹೆಚ್ಚುತ್ತಿದೆ. ಸಂಪ್ರದಾಯ ಶೈಲಿಗಳ ಹೆಚ್ಚಿನ ಅಧ್ಯಯನ ಮಾಡಬೇಕೆಂಬ ಅಗತ್ಯದ ಬಗ್ಗೆ ತಿಳುವಳಿಕೆ ಮೂಡಿದೆ.

ಈ ರೀತಿಯ ಬದಲಾವಣೆ ಬರುತ್ತಿರುವುದು ಉತ್ತಮ ಬೆಳವಣಿಗೆಯ ಸೂಚನೆಯಾಗಿದೆ. ಯಾವ ಮಾಧ್ಯಮದಲ್ಲಿ ಕೆಲಸ ಮಾಡುವ ಶಿಲ್ಪಿಗಳಾಗಲಿ ಶಿಲ್ಪಕಲಾ ಅಕಾಡೆಮಿ ಹಲವಾರು ರೀತಿ ಪ್ರೋತ್ಸಾಹ ನೀಡುತ್ತಿದೆ. ಶಿಬಿರಗಳು ಬಹಳಷ್ಟು ನಡೆಯುತ್ತಿವೆ.



ಸುರೇಂದ್ರ ವಿಶ್ವಕರ್ಮರವರ ಶಿಲ್ಪ

ಮುಖ್ಯವಾಗಿ ಹಳೆಯ ಶೈಲಿಗಳನ್ನೇ ಅನುಸರಿಸಿ ಶಿಲ್ಪಿಗಳಿಗೆ ಕಲ್ಪನೆ ಮತ್ತು ಕ್ರಿಯಾಶೀಲತೆಗೆ ಒತ್ತು ಕೊಟ್ಟು ಶಿಲ್ಪ ರಚಿಸುವ ರೀತಿಯಲ್ಲಿ ಸ್ವಲ್ಪ ನಿರ್ದೇಶನ ನೀಡಿದರೆ ಕಳೆದು ಹೋಗುತ್ತಿರುವ ಸಂಪ್ರದಾಯ ಶೈಲಿಗಳ ಅಸ್ತಿತ್ವವನ್ನು ಉಳಿಸಲೂಬಹುದು, ಬೆಳೆಸಲೂ ಬಹುದು.

ತಮ್ಮ ಅನುಭವಗಳ ಬಗ್ಗೆ, ಆಶಯಗಳ ಬಗ್ಗೆ, ನಿರೀಕ್ಷೆಗಳ ಬಗ್ಗೆ, ಬರೆದು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ನಮ್ಮ ಶಿಲ್ಪಿಗಳು ಇದು ಒಬ್ಬಿಬ್ಬರ ಅಭಿಪ್ರಾಯಗಳಾಗಿ ಬಂದಿದ್ದರೂ ಕೆಲವು ಮಹತ್ವದ ಸಲಹೆಗಳನ್ನು ಈಗ ಮಾಡುತ್ತಾರೆ. ಇಡೀ ಸಮುದಾಯಕ್ಕೇ ಬೇಕಾಗಿರುವಂತಹುದು. ನಾನೆಂದು ಕೊಂಡಂತೆ ಇದು ಶಿಲ್ಪ ಕಲಾವಿದರ ದನಿಯಾಗಿದೆ. ಈ ದನಿಯನ್ನು ನಮ್ಮ ಪ್ರತಿನಿಧಿಯಾದ ಅಕಾಡೆಮಿ ಸಂಬಂಧಪಟ್ಟ ಸರ್ಕಾರೀ ಇಲಾಖೆಗಳಿಗೆ ತಿಳಿಸಿ, ಸೂಕ್ತ ಪರಿಹಾರ ದೊರಕಿಸಿಕೊಡುವಲ್ಲಿ ಯಶಸ್ವಿಯಾಗುವುದೆಂಬ ನಂಬಿಕೆ.



ಬಿಪಿನ್ ಬದೋರಿಯಾರವರ ಮರದ ಶಿಲ್ಪ - ದುರ್ಗಿ

೧. ಕಲಾವಿದರು ಗುಣಮಟ್ಟ ಕಾಪಾಡಿಕೊಂಡು ಬರಲು ಆಗದಿರುವುದಕ್ಕೆ ಮುಖ್ಯಕಾರಣ ಅವರ ಆರ್ಥಿಕ ಪರಿಸ್ಥಿತಿ. ಸ್ಪರ್ಧಾತ್ಮಕವಾದ ಈಗಿನ ಪರಿಸ್ಥಿತಿಯಲ್ಲಿ ಸರಿಯಾದ ಪ್ರತಿಫಲ ಸಿಗದೇ ಇರುವುದರಿಂದ ಅನೇಕ ವೇಳೆ ಕಲಾವಿದರು ತಾವು ಮಾಡಿದ ಕೆಲಸಕ್ಕಿಂತ ವಿಧಿಯಿಲ್ಲದೆ ಕಡಿಮೆ ಬೆಲೆಗೆ ಕೊಡಬೇಕಾಗುತ್ತದೆ. ಈ ದಿಸೆಯಲ್ಲಿ ಸೂಕ್ತ ಬೆಲೆ ನಿಗದಿ ಮಾಡಲು ಯಾವುದಾದರೂ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಅದರ ಬಗ್ಗೆ ಕಲಾವಿದರೊಡನೆ ಚರ್ಚೆನಡೆಸಿ, ಈ ದಿಕ್ಕಿನಲ್ಲಿ ಏನಾದರೂ ಮಾಡಬಹುದೇ, ಮುಂದೆ ಯಾವುದಾದರೂ ಸೂಕ್ತ ಮಾರ್ಗ ಕಂಡುಕೊಳ್ಳಬೇಕು.

೨. ಕಾರ್ಯಾಗಾರ, ಯಂತ್ರೋಪಕರಣಗಳು ಅಥವಾ ಮತ್ತಿನ್ನೇನಾದರೂ ಅಗತ್ಯಗಳಿಗೆ, ರಿಯಾಯಿತಿ ದರದಲ್ಲಿ ಸಿಗುವಂತೆ ಮಾಡಬೇಕು. ಆಶ್ರಯ ಮನೆಯ ಯೋಜನೆಯಡಿಯಲ್ಲಿ ತುಂಬಾ ಬಡತನದಲ್ಲಿರುವ ಶಿಲ್ಪಿಗಳಿಗೆಂದೇ ಕೆಲವು ಮೀಸಲು ಮನೆಗಳನ್ನು ಇಡಬೇಕು.

೩. ಶಿಲ್ಪಕಲಾ ಅಕಾಡೆಮಿಯ ಇತ್ತೀಚಿನ ಕಾರ್ಯಚಟುವಟಿಕೆಗಳ ಬಗ್ಗೆ ಸಂತೋಷಗೊಂಡು ಅಕಾಡೆಮಿಯನ್ನು ಅಭಿನಂದಿಸಿದ್ದಾರೆ, ಅತಿ ಸಾಮಾನ್ಯ ದರ್ಜೆಯ ಕೆಲಸಗಾರರಿಗೂ ಇಂತಹ ಶಿಬಿರಗಳಲ್ಲಿ ಪಾಲ್ಗೊಳ್ಳಲು, ತಿಳುವಳಿಕೆ ಬರಲು ಅವಕಾಶ ಮಾಡಿಕೊಡಬೇಕು.

೪. ಶಿಲ್ಪಕಲೆಗೆ ಸಂಬಂಧಪಟ್ಟ ಸಂವಾದ, ಚರ್ಚೆ, ಉಪನ್ಯಾಸ, ಪ್ರಾತ್ಯಕ್ಷಿಕೆಗಳನ್ನು ಮೈಸೂರು-ಬೆಂಗಳೂರುಗಳಿಗೆ ಮಾತ್ರ ಸೀಮಿತಗೊಳಿಸದೆ ಎಲ್ಲ ಹಳ್ಳಿಗಳಲ್ಲೂ ನಡೆಯುವಂತೆ ಮಾಡಬೇಕು.

೫. ಈಗ ಪ್ರತಿಯೊಂದು ದೇವಾಲಯಗಳಲ್ಲೂ ಫೋಟೋ ತೆಗೆಯುವ ಅನುಮತಿ ಇರುವುದಿಲ್ಲ. ಕಲಾವಿದರಾಗಿ ಹಳೆಯ ಇತಿಹಾಸ ಪ್ರಸಿದ್ಧ ದೇವಾಲಯಗಳಲ್ಲೇ ಅಲ್ಲಿಯ ಮೂಲವಿಗ್ರಹ ಮತ್ತು ಇತರ ಕಲಾಪೂರ್ಣ ಶಿಲ್ಪಗಳ ಫೋಟೋಗಳನ್ನು ಮೂಲ ರೂಪದಲ್ಲಿ (ಶಿಲ್ಪಿ ಮಾಡುವಾಗ ಅತಿಸೂಕ್ಷ್ಮವಾಗಿ ವಸ್ತ್ರವಿನ್ಯಾಸ ಮಾಡಿಯೆ ಇರುತ್ತಾನೆ) ಅಂದರೆ ವಸ್ತ್ರ ಉಡಿಸಿ, ಹೂವು ಕವಚಗಳಿಂದ ಅಲಂಕಾರ ಮಾಡಿರುತ್ತಾರೆ, ಅದು ಬಿಟ್ಟು ಅಲಂಕಾರ ವಸ್ತ್ರ ಕವಚಗಳಿಲ್ಲದ ಫೋಟೋಗಳು ಸಿಡಿಗಳು ದೇವಾಲಯಗಳಲ್ಲಿ ಸಿಗುವ ವ್ಯವಸ್ಥೆ ಮಾಡಬೇಕು.

೬. ಈಗಿನ ದಿನಗಳಲ್ಲಿ ಯಾವ ದೇವಾಯಕ್ಕೆ ಹೋದರು, ಭಕ್ತರು ಕೊಡುತ್ತಾರೆ ಎಂದು ಬೆಳ್ಳಿ ಬಂಗಾರಗಳ ಕವಚ ತೊಡಿಸಿ, ಸೀರೆ ಪಂಚೆಗಳನ್ನು ಉಡಿಸಿ, ಅದರ ಮೇಲೂ ಹೂವಿನ ರಾಶಿಯಿಂದಲೇ ಅಲಂಕರಿಸಿ, ಆಕರ್ಷಕ ಮಾಡಲು ಪ್ರಯತ್ನಿಸುತ್ತಾರೆ. ಇದರ ಅಗತ್ಯವಿದೆಯೇ ? ಅದರಲ್ಲೂ ಬೇಲೂರು ಚೆನ್ನಕೇಶವನಿಗೂ ಈ ವಸ್ತ್ರಗಳಿಂದ ಬಿಡುಗಡೆಯಿಲ್ಲ. ಹೀಗಿರುವಾಗ ದೇಶವಿದೇಶಗಳಿಂದ ಬರುವ ಕಲಾಸಕ್ತರು ನಮ್ಮ ನಾಡಿನ ಶಿಲ್ಪಕಲಾ ವೈಭವವನ್ನು ಕಣ್ಣಾರೆ ಕಂಡು ಆನಂದಿಸಬೇಕೆಂದು ಬರುವವರಿಗೆ ಆಗುವ ನಿರಾಸೆ ಅಷ್ಟಿಷ್ಟಲ್ಲ. ದೇಶದಲ್ಲಿ ಪ್ರವಾಸೋದ್ಯಮ ಬೆಳೆಸುವಲ್ಲಿ ಅನೇಕ ಉತ್ತಮ ಯೋಜನೆಗಳನ್ನೇನೋ ಹಾಕಿಕೊಂಡಿದೆ. ಆದರೆ ಮುಖ್ಯವಾಗಿ ನೋಡಬೇಕಾದ ಶಿಲ್ಪ ಸಂಪತ್ತಿಗೆ ಈ ರೀತಿ ಆದರೆ, ಅಂತಹ ಯೋಜನೆಗಳಿಂದ ಖರ್ಚು ಮಾಡುವ ಹಣ ಅಪವ್ಯಯವಾಗುವುದಿಲ್ಲವೇ ? ಭಕ್ತಿ ಬೇಕು, ಅದರಿಂದಲೇ ಶಿಲ್ಪಕಲೆ ಬೆಳೆಯಬೇಕು, ಆದರೆ ಈ ಆಡಂಬರದ ಭಕ್ತಿ ಪ್ರದರ್ಶನದಿಂದ ಏನು ನಷ್ಟವಾಗುತ್ತಿದೆ ಎಂಬ ಕಲ್ಪನೆ ಸಹ ನಮ್ಮ ಸಮಾಜ ಇದ್ದಂತಿಲ್ಲ. ಇಷ್ಟೊಂದು ಬೆಲೆಯ ಈ ಕವಚಗಳನ್ನು ತೊಡಿಸುವ ಅಗತ್ಯವಿದೆಯೇ, ಅದರಿಂದ ಮೂಲ ವಿಗ್ರಹ ಭಿನ್ನವಾಗುವುದಿಲ್ಲವೆ?

೭. ಹಾಗೆ ಭಕ್ತಿ ಪ್ರದರ್ಶನಕ್ಕೆಂದು ಮಾಡುವ ಈ ಕವಚ ಇತ್ಯಾದಿಗಳಿಗೆ ಮಾಡುವ ಖರ್ಚು ದೇವಾಲಯದ ಬೇರೆ ಕಡೆಯ ಅಲಂಕಾರಕ್ಕೆ ಬಳಸಬಹುದಲ್ಲವೆ ? ಭಕ್ತರು ದೇವಾಲಯಕ್ಕೆ ಕಾಣಿಕೆಯಾಗಿ ಅರ್ಪಿಸಬೇಕೆಂದಿದ್ದರೆ, ಮೂಲವಿಗ್ರಹದ ಪ್ರದರ್ಶನಕ್ಕೆ ಯಾವ ಕುಂದೂ ಬರದಂತಹ ಬೇರೆ ವಿಧಾನಗಳನ್ನು ಏಕೆ ಯೋಚಿಸಬಾರದು. ಇದರ ಬಗ್ಗೆ ತಿಳುವಳಿಕೆ ಕೊಡುವ ಫಲಕಗಳನ್ನು ಎಲ್ಲ ದೇವಾಲಯಗಳಲ್ಲೂ ಹಾಕಿ, ಜನರನ್ನು ಈ ವಿಷಯದಲ್ಲಿ ಜಾಗ್ರತಗೊಳಿಸಬೇಕು.

೮. ಈ ಎಲ್ಲ ಶಿಲ್ಪಗಳೂ ನಮ್ಮ ದೇಶದ ಆಸ್ತಿ. ಬರೀ ದೇವಾಲಯಗಳನ್ನೇ ಗಮನಿಸುವ ಪ್ರಾಚ್ಯ ಸಂಗ್ರಹಾಲಯದ ಇಲಾಖೆಯದವರು ಮೂಲ ವಿಗ್ರಹವನ್ನು ಮುಟ್ಟಿ, ಅಭಿಷೇಕ ಮಾಡಿ, (ಅಭಿಷೇಕ ವಿಗ್ರಹದ ತಾಳಿಕೆಗೆ ಬೇಕೆನ್ನುತ್ತಾರೆ) ಹೆಚ್ಚಿನ ಅಲಂಕಾರಗಳನ್ನು ಮಾಡದಿರಲು ನಿರ್ದೇಶನ ಕೊಡಲು ಸಾಧ್ಯವಿಲ್ಲವೆ ? ಬಹುಶಃ ಸಾಧ್ಯವಿಲ್ಲವೇನೋ ?

೯. ಮೂಲವಿಗ್ರಹದ ಬದಲು, ಅದರಂತೆಯೇ ಚಿಕ್ಕಪ್ರಮಾಣದಲ್ಲಿ ಶಿಲ್ಪಗಳನ್ನು ಮಾಡಿಸಿ ಭಕ್ತಿಯ ಎಲ್ಲ ಕೈಂಕರ್ಯಗಳನ್ನು ಚಿಕ್ಕ ಶಿಲ್ಪಕ್ಕೆ ಮಾಡಿಸಿ, ಮೂಲವಿಗ್ರಹದ ಪಾದದ ಬಳಿಗೆ ಒಂದೇ ಒಂದು ಹೂವು ಇಟ್ಟರೆ ನೋಡುವವರಿಗೆ ಎಷ್ಟು ಆನಂದವಾಗುತ್ತದೆ ? ಈ ಯೋಜನೆಯಿಂದ ಶಿಲ್ಪಿಗಳಿಗೂ ಆರ್ಥಿಕವಾಗಿ ಚೆನ್ನಾಗಿ ಬದುಕಲು ಒಂದು ಅವಕಾಶ ಸಿಗುತ್ತದೆ, ಕೆಲಸ ಸಿಗುತ್ತದೆ.

೧೦. ಹೊಸದಾಗಿ ಕಟ್ಟುವ ದೇವಾಲಯಗಳಲ್ಲಿ ದಾನಿಗಳ, ಪೂಜಾ ಕಾರ್ಯಗಳ ವಿವರ ಬರೆದಂತೆ, ಅಲ್ಲಿಯ ವಿಗ್ರಹವನ್ನು ಮಾಡಿದ ಶಿಲ್ಪಿ, ವಾಸ್ತು ಶಿಲ್ಪಿ ಇವರುಗಳ ವಿವರ, ಮತ್ತು ಯಾವ ಶಿಲೆಯಲ್ಲಿ ಯಾವಾಗ ಮಾಡಿದ್ದಾರೆ ಎಂದು ಫಲಕಗಳನ್ನು ಹಾಕಬೇಕು. ಇದರಿಂದ ಕಲಾರಂಗದ ಬಗ್ಗೆ ಸಾಮಾನ್ಯ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡಲು ಸಾಧ್ಯ.

೧೧. ಪತ್ರಿಕೆಗಳಿಗೆ ಒಂದು ಮನವಿ ಕಳುಹಿಸಬೇಕು. ಎಲ್ಲಿ ಯಾವ ಪ್ರತಿಮೆಯ ಪ್ರತಿಷ್ಠೆ ಅಥವಾ ಅನಾವರಣವಾದರೂ, ಮುಖ್ಯವಾಗಿ ಶಿಲ್ಪಿಯ ಬಗ್ಗೆ ಪ್ರಚಾರ ಸಿಗುವಂತೆ ಮಾಡಬೇಕು. ಮತ್ತು ಅಂತಹ ಸಮಾರಂಭಗಳ ಆಹ್ವಾನ ಪತ್ರಿಕೆಗಳಲ್ಲೂ ಶಿಲ್ಪಿಯ ಹೆಸರು ವಿಳಾಸಗಳನ್ನು ಕಡ್ಡಾಯವಾಗಿ ನಮೂದಿಸಬೇಕು. ಇದನ್ನು ಶಿಲ್ಪಿಗಳು ಸ್ವಂತ ಶಕ್ತಿಯಿಂದಾಗಿ ಮಾಡಲು ಕಷ್ಟ, ಆದ್ದರಿಂದ ಅಕಾಡೆಮಿ, ಸರ್ಕಾರ ಇಂತಹ ಪ್ರಕಟಣೆಗಳ ಮೂಲಕ ನೆರವಾಗಬೇಕು.

೧೨. ಈಗಾಗಲೇ ಸಾಕಷ್ಟು ಉತ್ತಮಕಾರ್ಯಗಳನ್ನು ಮಾಡುತ್ತಿರುವ ಅಕಾಡೆಮಿ, ಇಂತಹಹ ಸಮಸ್ಯೆಗಳಿಗೂ ಸ್ಪಂದಿಸಲಿ ಶಿಲ್ಪಿ ಕಲಾವಿದರಿಗಾಗಿಯೇ ಒಂದು ಹೊಸ ಸುಂದರ ವಾತಾವರಣ ನಿರ್ಮಿತವಾದಾಗ ಹಿಂದಿನ ಭವ್ಯ ಪರಂಪರೆ ಮತ್ತೆ ಬರುವಂತಾಗಲೀ ಎಂದು ಆಶಿಸೋಣ.

ಜಕಣಾಚಾರಿ ಪ್ರಶಸ್ತಿ ಪುರಸ್ಕೃತರು

೧.	ಶ್ರೀ ಸಿ. ಪರಮೇಶ್ವರಚಾರ್	-	೧೯೯೬
೨.	ಶ್ರೀ ಜೆ.ಡಿ. ಮಾಯಾಚಾರ್	-	೧೯೯೭
೩.	ಶ್ರೀ ವಿ. ರಾಮಚಂದ್ರ ಶೆಟ್ಟಿ ಗುಡಿಗಾರ್	-	೧೯೯೮
೪.	ಶ್ರೀ ಕೆ. ಶ್ಯಾಮರಾಯ ಆಚಾರ್ಯ	-	೧೯೯೯
೫.	ಶ್ರೀ ಎಂ. ಪರಮೇಶ್ವರಚಾರ್ಯ	-	೨೦೦೦
೬.	ಶ್ರೀ ಧನಂಜಯ ಶಿಲ್ಪಿ	-	೨೦೦೧
೭.	ಶ್ರೀ ಎನ್.ಕೆ. ಮೃತ್ಯುಂಜಯಚಾರ್ಯ	-	೨೦೦೨
೮.	ಶ್ರೀ ರು. ಕಾಳಾಚಾರ್	-	೨೦೦೩
೯.	ಶ್ರೀ ಕೆ. ಕಾಶಿನಾಥ್	-	೨೦೦೪
೧೦.	ಶ್ರೀ ಸಿದ್ಧಲಿಂಗಯ್ಯ	-	೨೦೦೫
೧೧.	ಶ್ರೀ ಬಿ.ಎನ್. ಚನ್ನಪ್ಪಚಾರ್	-	೨೦೦೬

☆☆☆

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು

೧.	ಶ್ರೀ ಆರ್.ಎಸ್. ನಾಯ್ಡು	- ೧೯೭೩
೨.	ಶ್ರೀ ಕೆ. ಶ್ಯಾಮರಾಯ ಆಚಾರ್ಯ	- ೧೯೮೧
೩.	ಶ್ರೀ ಸಾಬಣ್ಣನವರ್	- ೧೯೮೪
೪.	ಶ್ರೀ ರಂಜಾಳ ಗೋಪಾಲಕೃಷ್ಣ ಶೆಣೈ	- ೧೯೮೫
೫.	ಶ್ರೀ ಡಿ. ವಾದಿರಾಜ	- ೧೯೮೬
೬.	ಶ್ರೀಮತಿ ಪುಷ್ಪಮಾಲ	- ೧೯೮೬
೭.	ಶ್ರೀ ಎನ್. ನರಸಿಂಹಾಚಾರ್	- ೧೯೮೬
೮.	ಶ್ರೀ ಎಲ್.ಪಿ. ಅಂಚನ್	- ೧೯೮೮
೯.	ಶ್ರೀ ಹೆಚ್.ಜಿ. ಬಸವಣ್ಣಚಾರ್	- ೧೯೯೦
೧೦.	ಶ್ರೀ ಮಾಯಾಚಾರ್ಯ	- ೧೯೯೧
೧೧.	ಶ್ರೀ ಷಣ್ಮುಖಪ್ಪ ಕಾಳಪ್ಪ ಯರಕದ	- ೧೯೯೧
೧೨.	ಶ್ರೀ ಮಲ್ಲೇಶಪ್ಪ ರುದ್ರಪ್ಪ ಆಚಾರ್ಯ	- ೧೯೯೨
೧೩.	ಶ್ರೀ ಜೆ. ಮಂಜುನಾಥ	- ೧೯೯೨
೧೪.	ಶ್ರೀ ಡಿ.ಪಿ. ನಾರಾಯಣ ಭಟ್	- ೧೯೯೩
೧೫.	ಶ್ರೀ ಸಿ. ಪರಮೇಶ್ವರಚಾರ್	- ೧೯೯೪
೧೬.	ಶ್ರೀ ರು. ಕಾಳಾಚಾರ್	- ೧೯೯೫
೧೭.	ಶ್ರೀ ಧನಂಜನ ಶಿಲ್ಪಿ	- ೧೯೯೬
೧೮.	ಶ್ರೀಮತಿ ಕನಕಾಮೂರ್ತಿ	- ೧೯೯೬
೧೯.	ಶ್ರೀ ಎ.ವಿ. ಚಂದ್ರಮೂರ್ತಿ	- ೧೯೯೬
೨೦.	ಶ್ರೀ ವೆಂಕಟಾಚಲಪತಿ	- ೧೯೯೭
೨೧.	ಶ್ರೀ ಭೂದಿರಾಮ ಭಟ್	- ೧೯೯೭
೨೨.	ಶ್ರೀ ಸಿ.ಸಿದ್ಧಲಿಂಗಯ್ಯ	- ೧೯೯೮

೨೩. ಶ್ರೀ ಡಿ.ಎಂ. ಶಂಭು - ೧೯೯೯

೨೪. ಶ್ರೀ ಶುಭಾಷಿಣಿ ದೇವಿ - ೨೦೦೦

೨೫. ಶ್ರೀ ವೀರಬ್ರಹ್ಮಾಚಾರ್ - ೨೦೦೧

೨೬. ಶ್ರೀ ಎನ್.ಸಿ. ವೆಂಕಟಾಚಾರ್ - ೨೦೦೨

೨೭. ಶ್ರೀ ಹೆಚ್.ಎನ್. ಕೃಷ್ಣಮೂರ್ತಿ - ೨೦೦೩

೨೮. ಶ್ರೀ ವೀರಭದ್ರಚಾರ್ - ೨೦೦೪

೨೯. ಶ್ರೀ ದೇವಿದಾಸ್ ಶೇಟ್ ಗುಡಿಗಾರ್ - ೨೦೦೫

೩೦. ಶ್ರೀ ಪಂಪಣ್ಣಾಚಾರ್ - ೨೦೦೫


೩೧. ಶ್ರೀ ಎಸ್. ಶಂಕರಾಚಾರ್ - ೨೦೦೫

೩೨. ಶ್ರೀ ವೆಂಕಣ್ಣಚಾರ್ - ೨೦೦೫

೩೩. ಶ್ರೀ ಮಲ್ಲೋಜ ಮಾಯಾಚಾರ್ಯ - ೨೦೦೬

೩೪. ಶ್ರೀ ಶಂಕರನಾರಾಯಣಾಚಾರ್ಯ - ೨೦೦೭

☆☆☆



ಹೊಯ್ಸಳ ಶೈಲಿಯ ರೇಖಾಚಿತ್ರ

ಶಿಲ್ಪಗುರು ಪ್ರಶಸ್ತಿ

೧. ಶ್ರೀ ಸಿ. ಪರಮೇಶ್ವರಚಾರ್

೨. ಶ್ರೀ ಎನ್.ಜಿ. ನೀಲಕಂಠಾಚಾರ್

೩. ಶ್ರೀ ಲಕ್ಷ್ಮೀನಾರಾಯಣಚಾರ್ಯ

೪. ಶ್ರೀ ಕೆ. ಶ್ಯಾಮರಾಯ ಆಚಾರ್ಯ

ವಾದಿರಾಜ್ ಸ್ಮೃತಿ ವಿದ್ಯಾರ್ಥಿ ವೇತನ ಪುರಸ್ಕೃತರು

೧. ಶ್ರೀ ಬಿಳಿಗಿ ರಾಘವೇಂದ್ರ ಗುಡಿಗಾರ್

೨. ಶ್ರೀ ರಾಮುನಾಯಕ್

೩. ಶ್ರೀ ರಾಜೇಶ್ ಪತ್ತಾರ್

೪. ಶ್ರೀ ವಿಜಯ ಆಚಾರ್ಯ

೫. ಶ್ರೀ ವಿಪಿನ್‌ಸಿಂಗ್ ಬದೋರಿಯ

೬. ಶ್ರೀ ನಾಗೇಶ್ ಆಚಾರ್ಯ

೭. ಶ್ರೀ ಬಿಳಿಗಿ ಮಂಜುನಾಥ ಗುಡಿಗಾರ

೮. ಶ್ರೀ ಅಣ್ಣಪ್ಪ ಆಚಾರಿ

೯. ಶ್ರೀ ಕೃಷ್ಣಾನಾಯಕ್

೧೦. ಶ್ರೀ ಸಿ.ಪಿ. ವಿಶ್ವನಾಥ್

೧೧. ಶ್ರೀ ಎಚ್.ಡಿ. ತಲವಾರ್

೧೨. ಶ್ರೀ ಲೋಕಣ್ಣ. ವಿ. ಬಡಿಗೇರ್

೧೩. ಶ್ರೀ ಗಿರೀಶ್ ಗುಡಿಗಾರ್

೧೪. ಶ್ರೀ ಎಸ್. ಅನಿಲ್ ಗುರುದತ್ತ

೧೫. ಶ್ರೀ ರಾಘವೇಂದ್ರ ಚಿತ್ರಗಾರ್

೧೬. ಶ್ರೀ ನರೇಂದ್ರ ಕುಮಾರ್

೧೭. ಶ್ರೀ ಎಸ್.ಎಸ್. ನರೇಶ

೧೮. ಶ್ರೀ ದೊಡ್ಡಾಚಾರಿ.



ಕರ್ನಾಟಕದಲ್ಲಿ ಶಿಲ್ಪಕ್ಷೇತ್ರದಲ್ಲಿ ತೊಡಗಿಸಿಕೊಂಡ ಕೆಲವೇ ಮಹಿಳಾ ಶಿಲ್ಪಿಗಳಲ್ಲಿ ಶ್ರೀಮತಿ ಕನಕಾಮೂರ್ತಿಯವರು ಅತ್ಯಂತ ಶ್ರೇಷ್ಠ ಸಾಂಪ್ರದಾಯ ಶಿಲ್ಪಿಗಳಲ್ಲಿ ಒಬ್ಬರು. ಇವರು ತಿರಮಕೂಡಲು ನರಸೀಪುರದಲ್ಲಿ ಜನನ 1942. ಮೂಲತಃ ವಿಜ್ಞಾನ ಪದವೀಧರೆ, ಸುಸಂಸ್ಕೃತ ಮನೆತನದ ಹಿನ್ನೆಲೆಯಲ್ಲಿ ಬೆಳೆದ ಕನಕಾಮೂರ್ತಿಯವರಿಗೆ ಕಲೆ, ಸಂಗೀತ, ಸಾಹಿತ್ಯ ಮೊದಲಾದ ವಿಷಯಗಳಲ್ಲಿನ ಆಸಕ್ತಿಯಿಂದ ಕಲಾಮಂದಿರದಲ್ಲಿ ಚಿತ್ರಕಲೆಯನ್ನು, ನಂತರ ಮಾಡಲಿಂಗ್‌ನಲ್ಲಿ ಡಿಪ್ಲೊಮೋ ಪಡೆದರು. ಖ್ಯಾತ ಶಿಲ್ಪಿಗಳಾದ ಶ್ರೀ ಡಿ. ವಾದಿರಾಜರಲ್ಲಿ ಸಾಂಪ್ರದಾಯ ಶಿಲ್ಪಕಲೆಯನ್ನು ಕಲಿತು, ಶಿಲೆ-ದಾರು, ಫೈಬರ್ ಮಾಧ್ಯಮಗಳಲ್ಲಿ ಉತ್ತಮ ಶಿಲ್ಪಗಳನ್ನು ರಚಿಸುತ್ತಿದ್ದು, ಚಾಲುಕ್ಯ ಹೊಯ್ಸಳ ಶೈಲಿಯ ಶಿಲ್ಪರಚನೆಗಳನ್ನು ಹಲವಾರು ಮಾಧ್ಯಮದಲ್ಲಿ ರಚಿಸುತ್ತಿದ್ದಾರೆ. ಶಿಲಾ ಮಾಧ್ಯಮದಲ್ಲಿ ಅವರ ಸ್ವಂತ ಸಂಯೋಜನೆಗಳಾದ ರಾಗ-ರಾಗಿಣಿ, ಈ ಚಿತ್ರ ಮಾಲಿಕೆಯನ್ನು ಶಿಲ್ಪದಲ್ಲಿ ಅಳವಡಿಸಿ ಹೊಸ ಸೃಷ್ಟಿಗಳನ್ನು ಮಾಡಿದ್ದಾರೆ. ಇವುಗಳಲ್ಲಿ ತೋಡಿ, ಮೇಘಮಲ್ಲಾರ, ಕೇದಾರ, ಭೈರವ ರಾಗಗಳ ಶಿಲ್ಪಗಳು ಮುಖ್ಯವಾದವು. ಇದಲ್ಲದೆ ಶಿಲ್ಪಕಲೆಯ ಬಗ್ಗೆ ಲೇಖನಗಳನ್ನು ಸಹ ಬರೆದು ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರು ಬೆಂಗಳೂರು, ತಂಜಾವೂರು, ನಾಗಪುರ ಹಾಗೂ ಇತರೆ ಕಡೆಗಳಲ್ಲಿ ತಮ್ಮ ಪ್ರದರ್ಶನಗಳಲ್ಲದೆ, ಅನೇಕ ಶಿಲ್ಪಶಿಬಿರಗಳಲ್ಲಿ ಭಾಗವಹಿಸಿದ್ದಾರೆ, ಅನೇಕ ಶಿಬಿರ ಮತ್ತು ಕಮ್ಮಟದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. "ಆರ್ಟ್ ಇನ್ ಆಕ್ಷನ್" - ಲಂಡನ್‌ನ ಕಲಾ ಉತ್ಸವದಲ್ಲಿ ಪಾಲ್ಗೊಂಡು ಕರ್ನಾಟಕಕ್ಕೆ-ಭಾರತಕ್ಕೆ ಕೀರ್ತಿ ತಂದಿದ್ದಾರೆ. ಇವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಅಲ್ಲದೆ 2007ರ ಸುವರ್ಣ ಕರ್ನಾಟಕ ವರ್ಷಾಚರಣೆಯ ಗೌರವ ಸನ್ಮಾನ ಸಿಕ್ಕಿದೆ. ಪ್ರಸ್ತುತ ಶಿಲ್ಪಕಲಾ ಅಕಾಡೆಮಿಯು ಪ್ರಕಟಿಸುವ "ನಮ್ಮ ದನಿ" ಸಾಂಪ್ರದಾಯ ಶಿಲ್ಪಿಗಳ ಇಂದಿನ ಸ್ಥಿತಿಯ ಬಗ್ಗೆ ಉತ್ತಮ ಕೃತಿ ಇದಾಗಿದೆ.

ವೆಂಕಟಾಚಲಪತಿ